
ಪುಸ್ತಕ ಪ್ರಪಂಚ

ಮೇ ೧೯೮೯



ರಾಷ್ಟ್ರಕವಿ ಕುವೆಂಪು: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ: ೪೩ ಸಂಚಿಕೆ ೧೦

ಪ್ರಧಾನ ಸಂಪಾದಕರು
ಪ್ರೊ|| ದೇ. ಜವರೇಗೌಡ
ಸಂಪಾದಕ
ಆರ್. ಬೋರಯ್ಯ
ಸದಸ್ಯರು
ಸಿ. ಕೆ. ನೀಲಕಂಠರಾಜ್
ಅಧ್ಯಕ್ಷರು
ಕೆ. ಎನ್. ವೆಂಕಟಕ್ರಿಷ್ಣಯ್ಯ
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ಡಾ. ಎಚ್. ಸಂಜೀವಯ್ಯ
ರಾ. ವೆಂ. ಶ್ರೀನಿವಾಸಮೂರ್ತಿ
ಸುಧಾಕರ
ಕ್ಯಾತನಹಳ್ಳಿ ರಾಮಣ್ಣ
ಪರಮಶಿವ ನಡುಬೆಟ್ಟ
ಮಲೆಯೂರು ಗುರುಸ್ವಾಮಿ
ಲಿಂಗದೇವರು ಹಳೇಮನೆ

ಪರಿವಿಡಿ

ಪುಸ್ತಕ ವಿಭಾಗ

ಫೋಟೊ ಕೃಪೆ: ಅರ್ಕೇಶ್, ಮೈಸೂರು.

PUSTAKA PRAPANCHA : Monthly

Published and printed by Karnataka State Adult Education Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು 570 004

ಪಂಪ ಪ್ರಶಸ್ತಿಯ ಕುವೆಂಪು

ದೇಜಗೌ

'ಕನ್ನಡ ಸಾರಸ್ವತ ಲೋಕದ ಸಾರ್ವಭೌಮ, ಮಹಾಕವಿ, ರಾಷ್ಟ್ರಕವಿ, ದಾರ್ಶನಿಕ ಕ್ರಾಂತಿಕಾರ ಶ್ರೀ ಕುವೆಂಪು ಅವರಿಗೆ ಕನ್ನಡ ಸಾಹಿತ್ಯದ ಅತ್ಯುಚ್ಚ ಗೌರವವಾದ ಪಂಪ ಪ್ರಶಸ್ತಿಯನ್ನು ಪ್ರಪ್ರಥಮಬಾರಿಗೆ ನೀಡುವ ಭಾಗ್ಯ ಲಭಿಸಿದ್ದಕ್ಕಾಗಿ ನಾನು ಧನ್ಯ ; ಇಂಥ ಧನ್ಯತೆ ದೊರಕಿದ ದಿನವೇ ಸುದಿನ ; ನನ್ನ ಜೀವನದಲ್ಲಿಯೇ ಇದೊಂದು ಮಹಾ ಸುದಿನ. ಎಂ. ಎನ್. ರಾಯ್ ಅವರ ನವಮಾನವತಾವಾದ ಕುವೆಂಪು ಕೃತಿಗಳಲ್ಲಿ ರೂಪುಗೊಂಡಿದೆ. ಎಲ್ಲ ಶೋಷಣೆಗಳಿಂದ ಮುಕ್ತಗೊಳಿಸುವುದೇ ಸ್ವಾತಂತ್ರ್ಯದ ಗುರಿ; ಅದು ಬದುಕಿನ ಗುರಿಯೂ ಅಹುದು. ಸರ್ವರಿಗು ಸಮಪಾಲು, ಸರ್ವರಿಗು ಸಮಬಾಳು ದೊರೆಯಬೇಕು. ಇದು ಕುವೆಂಪು ಅವರ ವಿಶ್ವಮಾನವ ಸಂದೇಶದ ಸಾರ.

'ಇಂದು ಎಲ್ಲ ಕಡೆ ಜಾತಿ ಭಾಷೆ ವರ್ಗಗಳ ಹೆಸರಿನಲ್ಲಿ ಕಚ್ಚಾಟ ನಡೆಯುತ್ತಿದೆ. ದುಷ್ಟಶಕ್ತಿಗಳು ಸಮಾಜವನ್ನು ಅಂಧಕಾರಕ್ಕೆ ನೂಕುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಎಲ್ಲ ಜಾತಿ, ಮತ, ಬಣ್ಣ, ಲಿಂಗ, ದೇಶ, ಭಾಷೆಗಳಿಗೆ ಅತೀತವಾದ ಮಾನವೀಯತೆ ಬೆಳೆಯ ಬೇಕೆಂಬುದು ವಿಶ್ವದರ್ಶನವನ್ನು ಸಾರಿದ ಕುವೆಂಪು ಅವರ ಅಭಿಲಾಷೆ. ವಿಚಾರಕ್ರಾಂತಿಯಿಲ್ಲದೆ ಪ್ರಗತಿ ಸಾಧ್ಯವಿಲ್ಲವೆಂದು ಸಾಹಿತ್ಯದ ಮೂಲಕ ಇಡೀ ಸಮಾಜಕ್ಕೆ ಚೈತನ್ಯ ನೀಡಿದವರು ಕುವೆಂಪು' ಎಂಬುದಾಗಿ ಕುವೆಂಪು ಅವರಿಗೆ ಪಂಪ ಪ್ರಶಸ್ತಿಯನ್ನು ನೀಡುವ ಸಮಯದಲ್ಲಿ ಮುಕ್ತಕಂಠದಿಂದ ಘೋಷಿಸಿದವರು ರಾಜ್ಯದ ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಬೊಮ್ಮಾಯಿ ಯವರು.

ಭಾರತದ ಸ್ವಾತಂತ್ರ್ಯ ಪ್ರಾಪ್ತಿಯ ಈ ನಲವತ್ತು ವರ್ಷಗಳಲ್ಲಿ ಕನ್ನಡದಲ್ಲಿ ಪ್ರಕಟಗೊಂಡಿರುವ ಅತ್ಯುತ್ತಮ ಸೃಜನಶೀಲ ಕೃತಿ ಎಂಬ ಕಾರಣಕ್ಕಾಗಿ ೧೯೮೮ನೆಯ ಸಾಲಿನ ಪ್ರಶಸ್ತಿಗೆ

ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಆಯ್ಕೆಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರಿನ ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ೨೫–೩–೧೯೬೮ರಂದು ಸಂಜೆ ನೆರವೇರಿಸಿತು. ಸಮಾರಂಭದ ಅದ್ವಿತೀಯ, ಅಪೂರ್ವ, ಆಕರ್ಷಕ ವ್ಯವಸ್ಥೆ ದೇವತೆಗಳಿಗೂ ದರ್ಶನೀಯವಾಗಿತ್ತು. ಆವರಣದ ದ್ವಾರದಲ್ಲಿ ವರ್ಣರಂಜಿತ ವೇಷ ಭೂಷಣಗಳಿಂದಲಂಕೃತರಾಗಿದ್ದ ನಾಲ್ವರು ಅಶ್ವಾರೋಹಿಗಳು ದರ್ಶನ ಕುತೂಹಲಿಗಳಾಗಿ ಬರುತ್ತಿದ್ದವರಿಗೆ ಗೌರವ ಸಲ್ಲಿಸುವ ರೀತಿಯಲ್ಲಿ ನೆಲೆಗೊಂಡಿದ್ದರು. ಮಂದಿರದ ಪ್ರವೇಶದ್ವಾರದಲ್ಲಿ ಸರ್ವಾಲಂಕಾರ ಭೂಷಿತವಾಗಿದ್ದ ಎರಡು ಗಜರಾಜಗಳು ಕವಿಗಳ ಸ್ವಾಗತಕ್ಕಾಗಿ ನಿಂತಿದ್ದುವು. ರಾಷ್ಟ್ರಕವಿಯ ವಿವಿಧ ಭಾವಚಿತ್ರಗಳು ವಿದ್ಯುದ್ದೀಪಗಳ ಕಾಂತಿಯಲ್ಲಿ ರಾರಾಜಿಸುತ್ತಿದ್ದುವು. ಆಸನ ವ್ಯವಸ್ಥೆಯಲ್ಲಿಯೂ ವಿಶೇಷತೆ ಎದ್ದು ಕಾಣುತ್ತಿತ್ತು. 'ಪರಮ ಜಿನೇಂದ್ರವಾಣಿಯೆ ಸರಸ್ವತಿ' ಮತ್ತು 'ಜಯ್ ಭಾರತ ಜನನಿಯ ತನುಜಾತೆ' ಎಂಬ ಪ್ರಾರ್ಥನೆಯೊಡನೆ ಕಾರ್ಯಕ್ರಮಗಳು ಆರಂಭವಾದುವು.

ಸ್ವಾಗತಾನಂತರ ಪ್ರಶಸ್ತಿ ವರಣ ಸಮಿತಿಯ ಅಧ್ಯಕ್ಷರಾದ ಪ್ರೊ. ವಿ. ಕೃ. ಗೋಕಾಕ ಅವರು 'ಪೂಜ್ಯ ಶ್ರೀ ಕುವೆಂಪು ಅವರೆ' ಎಂದು ಸಂಬೋಧಿಸಿ, ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಪ್ರಥಮ ಪ್ರಶಸ್ತಿಗೆ ಆಯ್ದುದರ ಔಚಿತ್ಯವನ್ನು, ಆ ಕಾವ್ಯದ ಹಿರಿಮೆಯನ್ನು ವಿಶದಪಡಿಸಿದರು. 'ಕುವೆಂಪು ನವೋದಯ ಕಾಲದ ಆದಿಕವಿ, ಉಚ್ಚಕವಿ ಎಂಬುದರಲ್ಲಿ ಸಂಶಯವಿಲ್ಲ. "ಸೂರ್ಯೋದಯ ಚಂದ್ರೋದಯ ದೇವರ ದಯೆ ಕಾಣೊ" ಎಂಬ ಕವಿತೆಯಿಂದ ಕಾವ್ಯಕೃಷಿಯನ್ನು ಆರಂಭಿಸಿದ ಕವಿ ಕುವೆಂಪು ಅವರು "ಓ ನನ್ನ ಚೇತನ ಆಗು ನೀ ಅನಿಕೇತನ" ಎಂಬುದಾಗಿ ಭಾರತೀಯ ದರ್ಶನ ದೃಷ್ಟಿಯನ್ನು ತಮ್ಮ ಕೃತಿಗಳ ಮೂಲಕ ಹರಡಿದ್ದಾರೆ' ಎಂದು ನುಡಿದು, ವಿಶ್ವ ಮಾನವ ಸಂದೇಶದ ಸ್ವರೂಪವನ್ನು ವಿವರಿಸಿದರು.

ಅಭಿನಂದನ ಭಾಷಣಮಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಬಿ. ಕೆ. ಭಟ್ಟಾಚಾರ್ಯ ಅವರು ಕಲೆ, ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಗೆ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಪ್ರೋತ್ಸಾಹ ಅತ್ಯಗತ್ಯವೆಂದು ಪ್ರತಿಪಾದಿಸಿದರು. 'ಸೃಜನಶೀಲತೆಯ ಭವ್ಯತೆಗೆ ಕುವೆಂಪು ಸಂಕೇತವಾಗಿದ್ದಾರೆ. ಸರ್ವೋದಯ, ಸಮನ್ವಯ ಪೂರ್ಣದೃಷ್ಟಿ ತತ್ತ್ವಗಳು ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯದಲ್ಲಿ ಹಾಸು ಹೊಕ್ಕಾಗಿ ಹರಿದಿವೆ. ಭಯೋತ್ಪಾದಕತೆ, ಕ್ಷೋಭೆ, ಮಾಲಿನ್ಯ ಸರ್ವತ್ರ ತಾನೇ ತಾನಾಗಿ ಹರಡುತ್ತಿರುವ ಈ ಸಮಯದಲ್ಲಿ ಕುವೆಂಪು ಅವರ ವಿಶ್ವಮಾನವ ಸಂದೇಶ ಅರ್ಥಪೂರ್ಣವಾಗಿದೆ. ಕುವೆಂಪು ಎಲ್ಲ ದೃಷ್ಟಿಯಿಂದಲೂ ನೊಬೆಲ್ ಪ್ರಶಸ್ತಿಗೆ ಅರ್ಹರಾಗಿದ್ದಾರೆ' ಎಂದವರು ನುಡಿದರು.

'ಕುವೆಂಪು ಅವರು ಸಮಕಾಲೀನ ಕನ್ನಡ ಸಾಹಿತ್ಯದ ಕೆಲವೇ ಕೆಲವು ಶಿಖರ ಸಾಹಿತಿಗಳಲ್ಲಿ ಅತ್ಯಂತ ಪ್ರಮುಖರಾದವರು. ತುಂಗಾತೀರದ ಸಹ್ಯಾದ್ರಿ ಗಿರಿಶ್ರೇಣಿಗಳ ದಟ್ಟವಾದ ಅರಣ್ಯ ಪರಿಸರದಿಂದ ಮೂಡಿ ಬಂದ ಈ ಕಾಡಿನ ಕವಿ ನಮ್ಮ ನಾಡಿನ ಪ್ರೀತಿಯ ಕವಿಯಾಗಿ, ಇಡೀ ರಾಷ್ಟ್ರದ ಕವಿಯಾಗಿ, ವಿಶ್ವಮಾನವ ಪ್ರಜ್ಞೆಯನ್ನು ಜೀವಂತವಾಗಿ ಮೈಗೂಡಿಸಿಕೊಂಡ ಮಹಾವ್ಯಕ್ತಿಯಾಗಿ ನಮ್ಮ ನಡುವೆ ಇರುವುದು

ನಮಗೆಲ್ಲ ಒಂದು ಹೆಮ್ಮೆಯ ಹಾಗೂ ಧನ್ಯತೆಯ ಸಂಗತಿಯಾಗಿದೆ. ಕುವೆಂಪು ಅವರ ಬಹುಮುಖ ಪ್ರತಿಭೆಯು, ಸೃಜನಶೀಲ ವ್ಯಕ್ತಿತ್ವ ಪ್ರಾಚ್ಯ ಪಾಶ್ಚಾತ್ಯ ಸಾಹಿತ್ಯ ಹಾಗೂ ವಿವಿಧ ಜ್ಞಾನ ಶಾಖೆಗಳ ಪರಂಪರೆಯಿಂದ ಸತ್ವ ಸಂಪನ್ನವಾಗಿ, ಕನ್ನಡ ಸಾಹಿತ್ಯದ ಸಮಸ್ತ ಪ್ರಕಾರಗಳಲ್ಲಿಯೂ ನಿಶ್ಚಿತವಾದ ಎತ್ತರದ ಕೃತಿಗಳನ್ನು ನಿರ್ಮಿಸಿ, ಕನ್ನಡ ಸಾಹಿತ್ಯಕ್ಕೆ ಜಾಗತಿಕ ಸಾಹಿತ್ಯದಲ್ಲಿ ಸುಭದ್ರವಾದ ಸ್ಥಾನವನ್ನು ಗಳಿಸಿಕೊಟ್ಟಿದೆ.

'ಭಾರತೀಯ ರಾಷ್ಟ್ರೀಯ ಆಂದೋಲನದ ಸಮಯದಲ್ಲಿ ಒಂದು ನಿರ್ಭಯ ಪ್ರತಿಭಟನೆಯ ಪ್ರಮುಖ ವಾಣಿಯಾಗಿ ಅಂದಿನ ಹೋರಾಟಕ್ಕೆ ಸ್ಫೂರ್ತಿಯನ್ನು ನೀಡಿದ ಕುವೆಂಪು ಅವರ ಸಾಹಿತ್ಯ ನಿರ್ಮಿತಿ ಈ ರಾಷ್ಟ್ರದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ಆಶೋತ್ತರಗಳನ್ನೂ ಸ್ಥಿತ್ಯಂತರಗಳನ್ನೂ ಪ್ರತಿಬಿಂಬಿಸಿದ ಹಾಗೂ ವಿಮರ್ಶೆಗೆ ಗುರಿಪಡಿಸಿದ ಮಹತ್ವದ ಸಾಂಸ್ಕೃತಿಕ ದಾಖಲೆಯೂ ಹೌದು. ಅಧ್ಯಾತ್ಮ ವೈಚಾರಿಕತೆ ಹಾಗೂ ಅದಮ್ಯವಾದ ನಿಸರ್ಗ ಪ್ರೀತಿಯನ್ನು ಮೂಲದ್ರವ್ಯವನ್ನಾಗಿ ಮಾಡಿಕೊಂಡ ಅವರ ಸಾಹಿತ್ಯವು ಶ್ರೀ ಸಾಮಾನ್ಯರ ಬದುಕನ್ನು ನಿಯಂತ್ರಿಸುವ ಹಾಗೂ ಶೋಷಿಸುವ ಸಂಪ್ರದಾಯವನ್ನು ಉಗ್ರವಾದ ಚಿಕಿತ್ಸೆಗೆ ಗುರಿಪಡಿಸಿ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಯ ನೆಲೆಯಲ್ಲಿ ಮನುಷ್ಯನ ವ್ಯಕ್ತಿತ್ವವು ನಿರಂಕುಶವಾಗಿ ಹಾಗೂ ಅನಿಕೇತನವಾಗಿ ವಿಕಾಸಗೊಳ್ಳುವ ಕಳಕಳಿಯನ್ನು ಅನನ್ಯವಾಗಿ ಪ್ರತಿಪಾದಿಸುವ ಸ್ವರೂಪದ್ದಾಗಿದೆ.

'ಭಾರತದ ಮಾತ್ರವಲ್ಲ, ಜಾಗತಿಕ ಮಹಾಕಾವ್ಯ ಪರಂಪರೆಯ ಸತ್ವವನ್ನು ಮೈಗೂಡಿಸಿಕೊಂಡು, ಸಮಕಾಲೀನ ಕನ್ನಡ ಸಂದರ್ಭದಲ್ಲಿ' ಆವಿರ್ಭವಿಸಿರುವ ಶ್ರೀ ರಾಮಾಯಣ ದರ್ಶನಂ ಮೇರುಕೃತಿ ವಿಶ್ವವಾಣಿಯ ಮುಡಿಯ ಮಣಿಯಾಗಿದೆ. ಪಂಪನಿಂದ ಕುವೆಂಪುವರೆಗೆ ಎಂಬ ನುಡಿಗಟ್ಟು ಪಂಪನಿಗೂ ಕುವೆಂಪುವಿಗೂ ಇರುವ ಸಾದೃಶ್ಯವನ್ನು ಸೂಚಿಸುವುದರ ಜತೆಗೆ, ಕನ್ನಡ ಸಾಹಿತ್ಯದ ಸೀಮಾರೇಖೆಗಳನ್ನೂ ಸೂಚಿಸುತ್ತದೆ. ವಾಸ್ತವವಾಗಿ ಪಂಪ-ಕುವೆಂಪು ಇಬ್ಬರೂ ಕನ್ನಡ ಸಾಹಿತ್ಯದ ಸೀಮಾಪುರುಷರು.'

—ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ನಿರ್ದೇಶಕರಾದ ಶ್ರೀ ವಿಠಲಮೂರ್ತಿಯವರು ಸರ್ಕಾರದ ಪರವಾಗಿ ಮಾಡಿದ ಪ್ರಶಸ್ತಿ ಘೋಷಣೆಯ ಸಾರಾಂಶವಿದು.

ಸಚಿವ ಶ್ರೀ ಎಂ. ಪಿ. ಪ್ರಕಾಶ್ ಅವರು ಪಂಪ ಮತ್ತು ಕುವೆಂಪು ಅವರ ನಡುವಣ ಸಾದೃಶ್ಯಗಳನ್ನು ವಿವರಿಸಿ, ಅವರ ಆಂತರಂಗಿಕ ಸಂಬಂಧವನ್ನು ವಿವರಿಸಿ, ಕುವೆಂಪು ಅವರ ಕೃತಿಗಳು 'ಅಪೌರುಷೇಯ' ಸದೃಶವಾದುವೆಂದು ತಿಳಿಸಿದರು. ತಮ್ಮ 'ಪೂಜ್ಯ ಗುರು' ಶ್ರೀ ಕುವೆಂಪು ಅವರು 'ತಮ್ಮ ಕೃತಿಗಳ ಮೂಲಕ ವರ್ಣಾಶ್ರಮ ಧರ್ಮದ ಕೊಳಕನ್ನೆತ್ತಿ ತೋರಿಸಿ, ದಲಿತರಲ್ಲಿ ನವಚೈತನ್ಯವನ್ನು ಮೂಡಿಸಿದ್ದಾರೆ' ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅರಣ್ಯ ಮಂತ್ರಿ ಶ್ರೀ ಬಿ. ರಾಚಯ್ಯನವರು ನುಡಿದರು.

ಕೊನೆಯಲ್ಲಿ ಶ್ರೀ ಕುವೆಂಪು ಅವರು 'ಪಂಪ ಪ್ರಶಸ್ತಿ ತಮ್ಮ ಕಾವ್ಯ ಸಮಸ್ತದಲ್ಲಿಯೂ ಪ್ರವಹಿಸುವ ವಿಶ್ವಮಾನವ ಸಂದೇಶಕ್ಕೆ ಸಂದ ಗೌರವ' ಎಂದು ತಮ್ಮ ವಂದನಾ ಭಾಷಣದಲ್ಲಿ ತಿಳಿಸಿದರು. 'ಸರ್ವ ಭಾಷಾಮಯಿ ಸರಸ್ವತಿಗೆ ನಮಸ್ಕಾರ'

ಎಂಬ ಸಂಬೋಧನೆಯೊಡನೆ ಅವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. 'ನನ್ನ ಬಗ್ಗೆ ಮಾತಾಡಿದ ಶ್ರೀ ಬೀರೇಂದ್ರ ಕುಮಾರ ಭಟ್ಟಾಚಾರ್ಯರೂ, ಡಾ. ವಿ. ಕೃ. ಗೋಕಾಕರೂ "ಕವಿಗೆ ಕವಿ ಮುನಿವಂ" ಎಂಬುದನ್ನು ಸುಳ್ಳುಮಾಡಿ "ಕವಿಗೆ ಕವಿ ನಮಿಪಂ" ಎಂಬ ಹೊಸ ಸೂಕ್ತಿಯ ಉದಯಕ್ಕೆ ಕಾರಣರಾಗಿದ್ದಾರೆ. ಕರ್ನಾಟಕ ಸರ್ಕಾರ ಮೊದಲಿನಿಂದಲೂ ನನ್ನ ವಿಷಯದಲ್ಲಿ ತುಂಬ ಅಭಿಮಾನವನ್ನು ತೋರಿಸುತ್ತ ಬಂದಿದೆ. ಅರುವತ್ತು ವರ್ಷಗಳಿಂದ ಲಕ್ಷಾಂತರ ಕನ್ನಡಿಗರು ಪ್ರೀತಿ ಅಭಿಮಾನಗಳನ್ನು ಧಾರೆಯೆರೆದು ನನಗೆ ಧನ್ಯತೆಯ ಭಾವವನ್ನು ನೀಡಿದ್ದಾರೆ. ಪಂಪ ಪ್ರಶಸ್ತಿ ನನಗೆ ದೊರೆತಿರುವುದು ಹೊರನೋಟಕ್ಕೆ ಕೇವಲ ಆಕಸ್ಮಿಕವೆಂದು ತೋರಬಹುದು. ಆದರೆ ಕನ್ನಡದ ಆದಿಕವಿ ಪಂಪನಿಗೂ ನನಗೂ ಇರುವ ಅಂತರಂಗ ಸಂಬಂಧವನ್ನು ನೆನೆದರೆ ಈ ಪ್ರಶಸ್ತಿಲಾಭ ಎಷ್ಟು ಅರ್ಥಪೂರ್ಣ ಎಂಬುದು ಸ್ಪಷ್ಟವಾಗುತ್ತದೆ. ಈ ಪ್ರಶಸ್ತಿಯನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿ, ಎಂದಿನಂತೆ ಸರ್ವಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರ ಅಡಿದಾವರೆಗಳಿಗೆ ಅರ್ಪಿಸುತ್ತೇನೆ' ಎಂದು ನುಡಿದು, ಹೊರಗೊಳಗೆ ಕಿಕ್ಕಿರಿದಿದ್ದ ಶ್ರೋತೃಗಳ ಕರತಾಡನ ಮೊಳಗುತ್ತಿರುವಾಗ ವಿಶ್ವಮಾನವ ಕುವೆಂಪು ಅವರು ತಮ್ಮ ಭಾಷಣವನ್ನು ಮುಗಿಸಿದರು.

'ಯುಗದ ಕವಿ, ಜಗದ ಕವಿ'ಯೆಂದು ಎಂದೋ ವರಕವಿ ಬೇಂದ್ರೆಯವರಿಂದ ಹೊಗಳಿಸಿಕೊಂಡ ಕುವೆಂಪು ಭರತ ಖಂಡದ ಅತ್ಯುಚ್ಚ ಗೌರವ ಪ್ರಶಸ್ತಿಗಳನ್ನು ಪಡೆದುಕೊಂಡ ಮೊದಲಿಗರಾಗಿದ್ದಾರೆ. ಅವು ಅವರ ಅರ್ಹತೆಗೆ ಸಂದ, ಸಾಧನೆ ಸಿದ್ಧಿಗಳಿಗೆ ಲಭಿಸಿದ ಪುರಸ್ಕಾರಗಳೆ ಹೊರತು, ಲೌಕಿಕಾಧಿಕಾರಕ್ಕೆ ದಾಕ್ಷಿಣ್ಯಕ್ಕೆ ಬಲಾತ್ಕಾರಕ್ಕೆ ಪ್ರತ್ಯುಪಕಾರ ನಿರೀಕ್ಷೆಗೆ ಲಬ್ಧವಾದ ಮುಯ್ಯಿ ಕಾಣಿಕೆಗಳಲ್ಲ. ದೋಲನ ಅವರು ಹೇಳುವಂತೆ ಕುವೆಂಪು ದೇವರ ಮನುಷ್ಯ, ದೇವಮಾನವರೆಂಬುದು ನಿಜ. ಅವರು ದೇವಮಾನವರಾದದ್ದು ಕೇವಲ ಹೊಗಳಿಕೆಯಿಂದಲ್ಲ, ಕಟ್ಟುಕತೆಗಳಿಂದಲ್ಲ, ಪುರಾಣಗಳ ನೇಯ್ಗೆಯಿಂದಲ್ಲ, ಏಳುಬೀಳುಗಳ, ತೊಡರೆಡರುಗಳ, ನಿಂದಾಪಹಾಸ್ಯಗಳ, ದ್ವೇಷಾಸೂಯೆಗಳ ಬೆಂಕಿಯುರಿಯಲ್ಲಿ ಬೆಂದು, ಶತಶತ ವಿಘ್ನಗಳ ಜಂಝೆಯಲ್ಲಿ ತತ್ತರಿಸಿ, ನಿರಂತರ ತಪಶ್ಚರ್ಯೆಯ, ಶ್ರದ್ಧಾಪೂರ್ಣ ಸಾಧನೆಯ ಶಿಖರವನ್ನೇರಿದನಂತರ. ಶ್ರೀರಾಮಕೃಷ್ಣ ಪರಮಹಂಸರ ಗೋತ್ರದಲ್ಲಿ, ಶ್ರೀ ವಿವೇಕಾನಂದರ ಮಾನಸ ಪುತ್ರರಾಗಿ, ಶ್ರೀ ಮಹಾಪುರುಷರ ಶಿಷ್ಯರಾಗಿ, ಪ್ರಕೃತಿಯಾರಾಧಕರಾಗಿ, ಪ್ರಾಚ್ಯ ಪಾಶ್ಚಾತ್ಯ ಜ್ಞಾನ ಧೇನುವಿನ ಕೆಚ್ಚಲುಂಡು ಪರಿಪುಷ್ಟರಾಗಿ, ವಿಜ್ಞಾನ ವೈಚಾರಿಕ ಹಾಗೂ ಸ್ವಾತಂತ್ರ್ಯಾಂದೋಲನ ಯುಗಗಳ ಮಂಥನ ಲಬ್ಧ ವಿಚಾರಾಮೃತಪಾನದಿಂದ ಸಚೇತನರಾಗಿ, ದಿನದಿನವೂ ಅನಿಕೇತನರಾಗಿ, ಅನಂತವಾಗಿ, ನಿರ್ದಿಗಂತವಾಗಿ ಬೆಳೆದ ವಿಶ್ವಮಾನವರವರು.

ಜಗತ್ತಿನಲ್ಲಿ ಮಹಾಕವಿಗಳೇ ವಿರಳ; ಯುಗಕ್ಕೊಬ್ಬ; ಮಹಾಪುರುಷರೂ ಅಷ್ಟೇ. ಮಹಾಪುರುಷ ಮಹಾಕವಿಯಾದದ್ದಿಲ್ಲ. ಮಹಾಕವಿ ಮಹಾಪುರುಷರು ಒಮ್ಮೆಯ್ಯಾಗಿರುವುದಂತು ದುರ್ಲಭ; ಆ ದುರ್ಲಭತೆ ಕುವೆಂಪು ಅವರಲ್ಲಿ ಸಾಧ್ಯವಾಗಿರುವುದು ಕನ್ನಡಕ್ಕೆ, ಕನ್ನಡನಾಡಿಗೆ, ಇಡೀ ಭಾರತಕ್ಕೆ ಸಂದ ಗೌರವವೆಂದು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯಬೇಕಾಗಿದೆ.

ಕುವೆಂಪು ಸಾಹಿತ್ಯದಲ್ಲಿ ಸರ್ವೋದಯ

ಡಾ. ಸಿ. ಪಿ. ಕೆ.

ಸರ್ವೋದಯ ಎನ್ನುವುದು ಕುವೆಂಪು ಅವರ ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿರುವ ಪ್ರಕ್ರಿಯೆ. ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ತಮ್ಮ ಸಾಹಿತ್ಯದ ಮೂರು ಕಣ್ಣುಗಳೆಂದು ಕುವೆಂಪು ಅವರೇ ಹೇಳಿಕೊಂಡಿದ್ದಾರೆ. ಈ ಮೂರೂ ಒಂದರ್ಥ ದಲ್ಲಿ ಅಭಿನ್ನ ಅಥವಾ ಕಡೆಯಪಕ್ಷ ಪರಸ್ಪರ ಪೂರಕ. ಕಣ್ಣು ಎರಡಾದರೂ ಮೂರಾದರೂ ದೃಷ್ಟಿ ಒಂದೇ ತಾನೆ.

ಕುವೆಂಪು ಅವರದು ಕೇವಲ ಕಲೆಯಲ್ಲ; ಅದನ್ನು ಮೀರಿ ನಿಂತ ಶಕ್ತಿ. ಅವರ ದೃಷ್ಟಿಯಲ್ಲಿ ಕಲೆಗಾಗಿ ಕಲೆಯಲ್ಲ; ಅದೊಂದು ಸಾಮಾಜಿಕ ಅಸ್ತ್ರ. ಕುವೆಂಪು ಅವರ ಧೋರಣೆ ಸಾಮಾಜಿಕ ವಾದುದು, ಮಾನವೀಯವಾದುದು. ಅವರ ಸಾಹಿತ್ಯದಲ್ಲಿ ಜೀವಪರವೂ ಜೀವನಪರವೂ ಆದ ನಿಲುವುಗಳು ಸರ್ವತ್ರ ವ್ಯಕ್ತ ವಾಗುತ್ತವೆ. ಜೀವನಕ್ಕಾಗಿ, ಅವರ ಉತ್ಕರ್ಷಕ್ಕಾಗಿ ಕಲೆ ಎಂದು ನಂಬುವ ಕುವೆಂಪು ಒಂದು ಕಡೆ ಮಾನವೀಯ ಮೌಲ್ಯಗಳ ಆರಾಧಕರು; ಇನ್ನೊಂದು ಕಡೆ ಮತಿಯ ಅಪ್ರತಿಮ ಪ್ರತಿ ಪಾದಕರು. ಮತಿ ಮತ್ತು ಮನುಷ್ಯತ್ವ ಬೇರೆ ಬೇರೆಯಲ್ಲ.

ಸರ್ವೋದಯ, "ಸರ್ವರಿಂ ಸರ್ವರಾ ಉದ್ಧಾರ" ಇಂದಿನ ಯುಗಧರ್ಮ; ಅದಕ್ಕೆ ಸಂಪೂರ್ಣವಾಗಿ ಸ್ಪಂದಿಸಿದವರು, ಅದನ್ನು ತಮ್ಮ ವಾಙ್ಮಯದಲ್ಲಿ ಅದ್ಭುತವಾಗಿ ಗ್ರಹಿಸಿದವರು ಕುವೆಂಪು; ಲೋಕಸಂಗ್ರಹ ಅವರ ಲೇಖನಿಯ ಗುರಿ. ಪ್ರಜಾ ಪ್ರಭುತ್ವ, ಸ್ವಾತಂತ್ರ್ಯ, ಸಮಾನತೆಗಳಲ್ಲಿ ಕುವೆಂಪು ಅವರಿಗೆ ಅನನ್ಯ ನಿಷ್ಠೆ; ಸಮಾಜವಾದ, ಸಮತಾವಾದಗಳನ್ನು ಅವರಂತೆ ಪುರಸ್ಕರಿಸಿದ ಲೇಖಕರು ನಮ್ಮಲ್ಲಿ ವಿರಳ. ಯುಗನಿರ್ಮಾಪಕ ರಾದ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ಪ್ರಭಾವ ಪರಿವೇಷದಲ್ಲಿ ಅವರ ವ್ಯಕ್ತಿತ್ವ, ಸಾಹಿತ್ಯಗಳು ವಿಕಾಸ

ಗೊಂಡುವೆಂಬುದು ಗಮನಾರ್ಹ; ಮಹಾತ್ಮ ಗಾಂಧಿಯೂ ಕುವೆಂಪು ಅವರಿಗೆ ಪೂಜ್ಯರು. 'Unto this Last' ಅವರ ಆದರ್ಶ.

ತಮ್ಮ 'ಹೊಸ ಬಾಳಿನ ಗೀತೆ' ಕವನದಲ್ಲಿ ಕುವೆಂಪು 'ನವಯುಗವಾಣಿ'ಯನ್ನು ಗುರುತಿಸಿ, "ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!" ಎಂದು ಘೋಷಿಸುತ್ತಾರೆ; 'ಯುಗಚಕ್ರ ಪರಿವರ್ತನೆ'ಗೆ ಎಲ್ಲರೂ ಸಂಕಲ್ಪಿಸಿ ದುಡಿಯಬೇಕೆಂದು ಕರೆ ಕೊಡುತ್ತಾರೆ. ಈ ಯುಗಪ್ರಜ್ಞೆ ಅವರನ್ನು ಮಹಾಕವಿಯನ್ನಾಗಿಸಿದೆ.

'ಶ್ರೀಸಾಮಾನ್ಯರ ದೀಕ್ಷಾಗೀತೆ' ಇಂದಿಗೆ ಭಗವದ್ಗೀತೆ, ಬೈಬಲ್, ಕೊರಾನ್ ಎಲ್ಲವೂ ಆಗಬಲ್ಲ ಮಹತ್ತ್ವದ ಕವನ; ಯುಗಧರ್ಮ ಅದರಲ್ಲಿ ಘನೀಭವಿಸಿದೆ:

ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ!" "ಸರ್ವೋದಯ!"
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!

ಜನಸಾಮಾನ್ಯರ ಏಳಿಗೆಗೆ ಕುವೆಂಪು ಪ್ರಾಧಾನ್ಯ ಕೊಡುತ್ತಾರೆ; 'ಸಾಮಾನ್ಯತಾ ಶ್ರೀ' ಅವರ ಸಾಹಿತ್ಯದಲ್ಲಿ ಸ್ಥಾಯಿಯಾಗಿ ಕಂಡುಬರುವಂಥದು. ಸರ್ವೋದಯ ಮಂತ್ರದ ಅಂಗವಾಗಿ ಸಾಮಾನ್ಯತಾ ಮಂತ್ರವನ್ನೂ ಅವರು ಉಚ್ಚಸ್ವರದಿಂದ ಉಚ್ಚರಿಸುತ್ತಾರೆ:

'ಶ್ರೀ ಸಾಮಾನ್ಯ'ವೆ ಭಗವನ್ ಮಾನ್ಯಂ,
'ಶ್ರೀ ಸಾಮಾನ್ಯ'ನೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ!

'ಸಾಮಾನ್ಯರ ಪೂಜೆಗೆ ಶ್ರೀದೀಕ್ಷೆಯ ಕೊಳ್ಳಿಂ" ಎಂದೂ ಆಮಂತ್ರಿಸುತ್ತಾರೆ, ಕವಿ. 'ಶ್ಮಶಾನ ಕುರುಕ್ಷೇತ್ರ' ನಾಟಕದ ಕಡೆಯಲ್ಲಿ "ಸಾಮಾನ್ಯ ಮಾನವ ಸಂಸಾರ" ಭವಿಷ್ಯದ್ದರ್ಶನದ ಅಂಗವಾಗಿ ಬಂದಿರುವುದನ್ನು ನೆನೆಯಬಹುದು. 'ಕಿಂಕಿಣಿ'ಯಲ್ಲೊಂದು ಕಡೆ "ಅಜ್ಞಾತ ಮಹಾತ್ಮನೆ, ನಿನಗಿದೋ ನಮಸ್ಕಾರ! ಸಾಷ್ಟಾಂಗ ನಮಸ್ಕಾರ! ಉದ್ದಂಡ ನಮಸ್ಕಾರ!" ಎಂಬ ಉದ್ಗಾರವಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆದಿಯಲ್ಲಿ "ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ!" ಎಂಬ ಸೂಚನೆಯಿದೆ. ಹುಲಿಯ ಎಂಬ ನಾಯಿ ಕಾದಂಬರಿಯಲ್ಲಿ ಪಡೆದುಕೊಂಡಿರುವ ಪ್ರಾಶಸ್ತ್ಯ ವಿಶೇಷವಾದದ್ದು. 'ಕರಿಸಿದ್ದ' ಕಥನ ಕವನದಲ್ಲಿ, ಹಳ್ಳಿಯ ಬಡ ಹುಡುಗನೊಬ್ಬನ ಸಾವನ್ನು ಚಿತ್ರಗುಪ್ತ ಜಗತ್ತಿನ ಮಹದ್ ಘಟನೆಗಳ ಸಾಲಿನಲ್ಲಿ ದಾಖಲು ಮಾಡಿಕೊಳ್ಳುವ ಸಂಗತಿಯಿದೆ.

ವಾಸ್ತವವಾಗಿ, ಸಾಮಾನ್ಯ-ಅಸಾಮಾನ್ಯ, ಅಲ್ಪ-ಕಲ್ಪ ಎಂಬ ಭೇದ ಪೂರ್ಣ ದೃಷ್ಟಿಗೆ ಅರ್ಥಹೀನವಾದುದು; ಅದರ ಪಾಲಿಗೆ ಅಲ್ಪವೂ ಭೂಮವೇ. 'ಶ್ರೀರಾಮಾಯಣ ದರ್ಶನ'ದ ಈ ಸಾಲುಗಳು ಕುವೆಂಪು ಅವರ ತಾರತಮ್ಯ ದೂರವಾದ ಪೂರ್ಣದೃಷ್ಟಿಗೆ ದ್ಯೋತಕ:

ರಣದ ಸಾಹಸಕಥೆಯು ಬಣ್ಣನೆಗೆ ಬಡತನವೆ, ಹೇಳ್?
ಹೇರಳಂ! ದಿನದಿನದ ಸಾಧಾರಣದ ಶಾಂತ
ಸರಳ ಜೀವಿತದ ವರ್ಣನೆಯೆ ವಿರಳಂ ನಾನದನೆ
ಕೈಕೊಂಡೆಸಗಲೆಳಸುವೆಂ

*　　　　*　　　　*

ರಾಮನ ಕಿರೀಟದಾ
ರನ್ನಮಣಿಯೋಲೆರಮ್ಯಂ, ಪಂಚವಟಿಯೊಳ್
ದಿನೇಶೋದಯದ ಶಾದ್ವಲದ ಪಸುರ್ಗರುಕೆಯೊಳ್
ತೃಣಸುಂದರಿಯ ಮೂಗುತಿಯ ಮುತ್ತಿನಂತೆ
ಮಿರುಮಿರುಗಿ ಮೆರೆವ ಹಿಮ ಬಿಂದುವುಂ

ಈ ದೃಷ್ಟಿ "ಮೊದಲನೆ ದೇವರು ಈ ಹಣ್ಮುದುಕಿ, ನೀಡಜ್ಜಿಗೆ ಭಿಕ್ಷೆ!" ಎಂದು ಮನಕರಗಿ, ಕರೆ ನೀಡುವುದರಲ್ಲಿ ಆಶ್ಚರ್ಯವಿಲ್ಲ. ಕುವೆಂಪು ದೇವರನ್ನು ನಿರಾಕರಿಸುವುದಿಲ್ಲ; ಅಂತೆಯೆ ಮಾನವಜೀವಿಗಳನ್ನು ಮರೆಯುವುದಿಲ್ಲ.

ಸರ್ವೋದಯ ಸಿದ್ಧಿಸಬೇಕಾದರೆ, ಜನಸಾಮಾನ್ಯರು ಎಲ್ಲ ಬಗೆಯ ಶೋಷಣೆಯಿಂದ ಮುಕ್ತರಾಗಬೇಕು; ಅದಕ್ಕೆ ಅತ್ಯಗತ್ಯವಾದುದು ವೈಚಾರಿಕ ಜಾಗ್ರತಿ, ವೈಜ್ಞಾನಿಕ ಉನ್ಮೀಲನ. ಈ ದಿಶೆಯಲ್ಲಿ ಕುವೆಂಪು, 'ನಿರಂಕುಶಮತಿ'ಗಳಾಗುವಂತೆ ಜನತೆಯನ್ನು ಸದಾ ಅವಿಶ್ರಾಂತವಾಗಿ ಪ್ರೇರಿಸುತ್ತಾರೆ; ದಾರಿದ್ರ್ಯದ ಉತ್ಪಾಟನವನ್ನು ಮತ್ತು ಮತ ಮುಂತಾದ ಮೌಢ್ಯಗಳ ನಿರಸನವನ್ನು ಉಜ್ವಲವಾಗಿ ಬೋಧಿಸುತ್ತಾರೆ:

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿಹೋಗಲಿ: ಬರಲಿ ವಿಜ್ಞಾನಬುದ್ಧಿ

*　　　　*　　　　*

ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ!

ಸಾಮಾನ್ಯ ಜನತೆಯ ಹಿತಕ್ಕೆ ಮಾರಕವಾದ ಶಕ್ತಿಗಳು ಎರಡು: ಒಂದು ರಾಜಶಾಹಿ, ಇನ್ನೊಂದು ಪುರೋಹಿತಶಾಹಿ. ಇಂದು ರಾಜಶಾಹಿ ಉಳಿದಿಲ್ಲ; ಆದರೆ ಪುರೋಹಿತಶಾಹಿಯ ಅನಿಷ್ಟಮುಷ್ಟಿ ಸರ್ವೋದಯಕ್ಕೆ ರಾಹುವಾಗಿ ಕಾಡುತ್ತಿದೆ.

ಅದನ್ನು ತೊಲಗಿಸಬೇಕೆಂಬುದು ಕುವೆಂಪು ಅವರ ಸಾತ್ತ್ವಿಕ ಆಗ್ರಹ. ಅವರು ಬೆಲೆ ಕೊಡುವುದು ಮನುಧರ್ಮಶಾಸ್ತ್ರಕ್ಕಲ್ಲ, ಮಾನವ ಧರ್ಮಕ್ಕೆ, ಅಂತಸ್ಸಾಕ್ಷಿಗೆ:

ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯೆ ದನಿಯೆ ಋಷಿ! ಮನು ನಿನಗೆ ನೀನು!

* * *

ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!

ದೇವರ ಹೆಸರಿನಲ್ಲಿ ಶತಶತಮಾನಗಳಿಂದ ಸಾಗಿ ಬಂದಿರುವ ಸುಲಿಗೆ, ಅನ್ಯಾಯಗಳಿಗೆ ಪೂರ್ಣವಿರಾಮ ಹಾಕುವಂತೆ ಮಾನವೀಯ ಕಳಕಳಿಯಿಂದ ಬೋಧಿಸುತ್ತಾರೆ, ಕುವೆಂಪು: "ದೇವರ ನ್ಯಾಯವನು ಮಾನವರೆ ತಿದ್ದಿ!"

ಎಲ್ಲರೂ 'ಮನುಜಮತ, ವಿಶ್ವಪಥ'ವನ್ನು ಹಿಡಿಯಬೇಕೆಂಬುದು ಕುವೆಂಪು ಅವರ ಆಶಯ; ಮತ ಅಳಿದು ಅಧ್ಯಾತ್ಮ ಉಳಿಯಬೇಕೆಂದು ಅವರು ಹಾರೈಸುತ್ತಾರೆ. ಜಾತಿ ಜಾಡ್ಯ ಕೊನೆಗೊಳ್ಳಬೇಕು, "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಅರಿವು ಮೂಡಬೇಕು, ಸರ್ವರೂ 'ಅನಿಕೇತನ'ರಾಗಿ ವಿಶ್ವಮಾನವ ಪದವಿಯಲ್ಲಿ ಪ್ರತಿಷ್ಠಿತರಾಗಬೇಕು ಎಂಬುದು ಕುವೆಂಪು ಅವರ ಬದುಕು, ಸಾಹಿತ್ಯಗಳ ಸಂದೇಶ.

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಸರ್ವೋದಯ ಅಪೂರ್ವ ರೀತಿಯಲ್ಲಿ ಪ್ರತಿಮಿತವಾಗಿದೆ; "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್" ಎಂಬುದು ಕೃತಿಯ ಆಣ್ಕೆ. ಪಾಪಿಗಳಿಗಷ್ಟೆ ಅಲ್ಲ, ದೀನದಲಿತರಿಗೂ ಉದ್ಧಾರವುಂಟು. ರಾವಣನ ಉದ್ಧಾರದಲ್ಲಿ ಸರ್ವೋದಯದ ಆಧ್ಯಾತ್ಮಿಕ ಸ್ತರವಿದ್ದರೆ, ದಸ್ಯು ಸ್ತ್ರೀ ಮಂಥರೆಯ ಉದ್ಧಾರದಲ್ಲಿ ಅದರ ಲೌಕಿಕ ಸ್ತರವಿದೆ. ರಾಮ ರಾವಣರು ಒಂದೇ ಎಂಬ ಅದ್ವೈತ ದರ್ಶನ ಲೌಕಿಕ ನೆಲೆಯಲ್ಲಿ ಸಮಾನತಾತತ್ತ್ವವಾಗುತ್ತದೆ. ದ್ವೈತಸಿದ್ಧಾಂತ ಪ್ರಜಾಪ್ರಭುತ್ವಕ್ಕೆ ಅನುಗುಣವಾದುದಲ್ಲ; ಎಂತಲೇ ಕುವೆಂಪು ದ್ವೈತವನ್ನು ಮನ್ನಿಸುವುದಿಲ್ಲ ಎಂಬುದು ಗಮನಾರ್ಹ.

ಮತ ಮತ್ತು ಪುರೋಹಿತಷಾಹಿಯ ಉಗ್ರಖಂಡನೆ ಹಾಗೂ ಶುದ್ಧ ಅಧ್ಯಾತ್ಮದ ಪ್ರತಿಪಾದನೆ ಕುವೆಂಪು ಅವರ ಎರಡೂ ಕಾದಂಬರಿಗಳ ವೈಚಾರಿಕತೆಯ ತಿರುಳಾಗಿದೆ 'ಕಾನೂರು ಹೆಗ್ಗಡತಿ'ಯನ್ನು ತೆಗೆದುಕೊಂಡರೆ, ಜನತೆಯ ಅಜ್ಞಾನ ಮತ್ತು ಪುರೋಹಿತಶಾಹಿಯ ಕುತಂತ್ರದಿಂದಾಗುವ ಅನರ್ಥಕ್ಕೆ ಇಡೀ ಕಾದಂಬರಿ ಪ್ರತಿಮೆಯಾಗಿದೆ. ಅಗ್ರಹಾರದ ಜೋಯಿಸ ವೆಂಕಪ್ಪಯ್ಯ ಪುರೋಹಿತಶಾಹಿಯ ಪ್ರತಿನಿಧಿ; ಹೂವಯ್ಯ ವೈಚಾರಿಕ ದೃಷ್ಟಿಯ ಪ್ರತಿನಿಧಿ. ಎರಡರ ಸಂಘರ್ಷ, ಅಂತಿಮವಾಗಿ ವೈಚಾರಿಕ ಧೋರಣೆಯ ಗೆಲುವು ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಒಮ್ಮೆ ಭೂತಾರಾಧನೆಯಲ್ಲಿ ಬಲಿಯಾಗಬೇಕಿದ್ದ ಹೋತವೊಂದನ್ನು ಹೂವಯ್ಯ ರಕ್ಷಿಸುವ ಕ್ರಿಯೆ ಸಾಂಕೇತಿಕವಾಗಿದೆ: ಮುಂದೆ ಅವನು ಸಮಾಜವನ್ನು ಹೊಸ ದಿಕ್ಕಿನತ್ತ ಮುಂದೊಯ್ಯುತ್ತಾನೆ.

ಕಾದಂಬರಿಯ ಅಂತ್ಯ, ಮಹಾವಿಚಾರವಾದಿ ಬುದ್ಧನ ಕೃಪಾಮಹಿಮೆಯನ್ನು ಹೇಳುತ್ತದೆ. 'ಹತ್ತು ವರ್ಷಗಳಾದ ಮೇಲೆ' ಎಂಬ ಕತೆಯ ಅಧ್ಯಾಯದ ಆರಂಭ ಹೀಗಿದೆ:

> "ಮಲೆನಾಡಿಗೆ ನವಜೀವನ ಕಾಲಿಟ್ಟಿತ್ತು. ಅದಕ್ಕೆ ಮುಖ್ಯ ಕಾರಣ ಕಾಲಮಹಿಮೆಯಾಗಿದ್ದರೂ ಕೂಡ, ಕಾನೂರು, ಮುತ್ತಳ್ಳಿ, ಸೀತೆಮನೆ ಮತ್ತು ಸುತ್ತಣ ಹಳ್ಳಿಗಳಲ್ಲಿ ಹೂವಯ್ಯನ ಪ್ರಭಾವವೂ ಗಣ್ಯವಾಗಿತ್ತು."

> "ಕಾನೂರು ಮುತ್ತಳ್ಳಿಗಳಿಗೆ ಮಧ್ಯೆ, ರಸ್ತೆಗೆ ಸಮೀಪವಾಗಿ, ಕಾಡಿನ ನಡುವೆ ಇದ್ದ ಕಳ್ಳಂಗಡಿ ಕುಸಿದುಬಿದ್ದು, ಒರಲೆ ಹಿಡಿದು ಪಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತೆ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಮೂಡಿ ವರ್ಧಿಸುತ್ತಿದ್ದುವು."

ಹಳೆಯ ಕೆಟ್ಟ ವ್ಯವಸ್ಥೆ ಕುಸಿದುಬಿದ್ದು, ನವೋದಯಕ್ಕೆ ಅವಕಾಶ ಮಾಡಿ ಕೊಟ್ಟದ್ದರ ಸ್ಪಷ್ಟ ಚಿತ್ರಣ ಇಲ್ಲಿ ಕಂಡುಬರುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಆರ್ಥಿಕ ಶೋಷಣೆಯ ನಿರೂಪಣೆ ಯಿದೆ. 'ಕಾನೂರು ಹೆಗ್ಗಡತಿ'ಯಲ್ಲಿ ಬುದ್ಧನ ಆದರ್ಶಗಳ ಪ್ರಸ್ತಾಪವಿದ್ದರೆ, ಈ ಕಾದಂಬರಿಯಲ್ಲಿ ಕ್ರಿಸ್ತನ ಆದರ್ಶಗಳ ಉಲ್ಲೇಖವಿದೆ.

'ಕಾನೂರು ಹೆಗ್ಗಡತಿ'ಯ ಅಂತ್ಯದ ಈ ಪದ್ಯಪಂಕ್ತಿಗಳು ಕುವೆಂಪು ಅವರ ಸಾಹಿತ್ಯ ಸಮಸ್ತದ ವೈಚಾರಿಕ ಸೂತ್ರವಾಗಿವೆ:

ಉದಯಿಸುತಿದೆ ನೂತನಯುಗ ದೇವತೆ
    ಮಿಥ್ಯೆಯ ಮೌಢ್ಯತೆಯನು ಸೀಳಿ;
ಜ್ಞಾನದ ವಿಜ್ಞಾನದ ಮತಿಖಡ್ಗದಿ
    ಮೈದೋರುವಳೈ ನವಕಾಳಿ!
ಕೆಚ್ಚಿನ ನೆಚ್ಚಿನ ತನುಮನಪಟುತೆಯ
    ಸಂಪಾದಿಸಿ ಓ ಮೇಲೇಳಿ.
ಕಣ್ದೆರೆಯಿರಿ ನವಕಾಂತಿಗೆ, ಶಾಂತಿಗೆ
    ಓ ಕ್ರಾಂತಿಯ ಪುತ್ರರೆ, ಬಾಳಿ!

ಕನ್ನಡ ಮಾಧ್ಯಮದ ಮೇಲೆ ಕುವೆಂಪು ಅವರು ಹಾಕುವ ಅವಧಾರಣೆಯೂ ಸರ್ವೋದಯ ದೃಷ್ಟಿಯಿಂದ ಪ್ರೇರಿತವಾದುದೇ. ಎಲ್ಲಿಯತನಕ ಮಾತೃಭಾಷೆ ಶಿಕ್ಷಣ ಹಾಗೂ ಆಡಳಿತ ಮಾಧ್ಯಮವಾಗುವುದಿಲ್ಲವೋ ಅಲ್ಲಿಯತನಕ ಸರ್ವೋದಯ ಕನಸಾಗಿಯೆ ಉಳಿಯುತ್ತದೆ; ಜನಸಾಮಾನ್ಯರ ಉದ್ಧಾರ ಗಗನಕುಸುಮವಾಗಿಯೆ ಉಳಿಯುತ್ತದೆ.

ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಸರ್ವೋದಯ ಮಂತ್ರವನ್ನು ಕೊಟ್ಟಿರುವುದು ಮಾತ್ರವಲ್ಲದೆ, ಅದರ ಸ್ವರೂಪವನ್ನೂ ವಿಶದಪಡಿಸಿದ್ದಾರೆ; ಅಷ್ಟೆ ಅಲ್ಲ, ಅದರ ಸಾಕ್ಷಾತ್ಕಾರ ಹೇಗೆ ಎಂಬುದರ ಬಗೆಗೆ ಬೆಳಕು ಚೆಲ್ಲಿದ್ದಾರೆ. ಈ ಕೆಲಸ ಕಲೆಯಾಗಿ ನಡೆದಿರುವುದೂ ಉಂಟು, ವಾಚ್ಯರ ನೆಲೆಯಲ್ಲಿ ನಡೆದಿರುವುದೂ ಉಂಟು. ಎಂತಾದರಿರಲಿ, ಕುವೆಂಪು ಸಾಹಿತ್ಯದಲ್ಲಿ ಪ್ರಗತಿಪರ ನವ ಸಮಾಜ ನಿರ್ಮಾಣಕ್ಕೆ ಬೇಕಾದ ಬೀಜಗಳಿವೆ ಎಂಬುದು ನಿಸ್ಸಂದೇಹ. ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗಬೇಕಾದರೆ ಎಂತಹ ಮಾನಸಿಕ ಸಿದ್ಧತೆ ಅವಶ್ಯವೆಂಬುದನ್ನು ತಿಳಿಯುವಲ್ಲಿ ಕುವೆಂಪು ಸಾಹಿತ್ಯದ ಅನುಶೀಲನ ಅತ್ಯಂತ ಲಾಭದಾಯಕವಾದುದು. ರಸಾನುಭವದ ತುಷ್ಟಿ, ವೈಚಾರಿಕ ಪುಷ್ಟಿ ಎರಡನ್ನೂ ನೀಡುವ ವೈಶಿಷ್ಟ್ಯ ಅದರ ಪಾಲಿಗುಂಟು; ವ್ಯಷ್ಟಿ ಮತ್ತು ಸಮಷ್ಟಿಯ ಶ್ರೇಯದೊಡನೆ ಅದಕ್ಕೆ ಬಿಡಿಸಲಾಗದ ನಂಟು.

ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

ಗಾಂಧೀಜಿ

ಮಹಿಳೆಯರ ಪಾತ್ರ-ಕುವೆಂಪು ಧೋರಣೆ

ಡಾ. ಕಮಲಾ ಹಂಪನಾ

'ಬೊಮ್ಮನಹಳ್ಳಿ ಕಿಂದರಜೋಗಿ' ಕಥನ ಕವನದ ಮೂಲಕ ಮಾಧ್ಯಮಿಕ ಶಾಲೆಯಲ್ಲಿಯೇ ನನ್ನಲ್ಲಿ ಸಾಹಿತ್ಯಾಸಕ್ತಿಯನ್ನು ಮೂಡಿಸಿದ ಕುವೆಂಪು ಅವರ ಸಾಹಿತ್ಯ, ತನ್ನೆಲ್ಲ ಬಣ್ಣ ಬಣ್ಣದ ಬೆರಗಿನಲ್ಲಿ, ಕಲ್ಪನೆಯ ವಿಹಾರದಲ್ಲಿ, ಪ್ರತಿಭೆಯ ಸೌಂದರ್ಯದಲ್ಲಿ, ಪಾಂಡಿತ್ಯದ ಗಾಂಭೀರ್ಯದಲ್ಲಿ, ರಸಋಷಿಯ ಔನ್ನತ್ಯದಲ್ಲಿ, ವೈಚಾರಿಕತೆಯ ನಿಕಷದಲ್ಲಿ, ನನ್ನಲ್ಲಿದ್ದ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸಿದೆ. ನಾನೂ ಒಬ್ಬ ಲೇಖಕಿಯಾಗಿ, ಮಹಿಳೆಯರ ಸಮಸ್ಯೆಗಳ ಬಗೆಗೆ ಪ್ರತಿಕ್ರಿಯಿಸುವವಳಾಗಿ, ಸಹಜವಾಗಿಯೇ ಮಹಿಳೆಯರ ಪಾತ್ರಗಳ ಬಗೆಗೆ ಹೆಚ್ಚಿನ ಕಾಳಜಿಯಿಂದ ಗಮನ ಹರಿಸಿದ್ದೇನೆ. ಕುವೆಂಪು ಸಾಹಿತ್ಯವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನಾನು ಅಭ್ಯಾಸ ಮಾಡಿರುವಂತೆ ಅವರು ಚಿತ್ರಿಸಿರುವ ಮಹಿಳಾ ಪಾತ್ರಗಳ ಬಗೆಗೂ ತಕ್ಕಮಟ್ಟಿಗೆ ಅಭ್ಯಾಸ ಮಾಡಿದ್ದೇನೆ.

ಈ ಒಂದು ಕಿರು ಲೇಖನದಲ್ಲಿ ಕುವೆಂಪು ಸಾಹಿತ್ಯದಲ್ಲಿನ ಎಲ್ಲ ಮಹಿಳಾ ಪಾತ್ರಗಳನ್ನು ವಿವೇಚಿಸುವುದು ಸಾಧುವೂ ಅಲ್ಲ, ಸಾಧ್ಯವೂ ಇಲ್ಲ. ಈ ಪಾತ್ರಗಳ ಬಗೆಗೆ ಕುವೆಂಪು ಅವರ ಧೋರಣೆಯನ್ನು ಸ್ಥೂಲವಾಗಿ ಗುರುತಿಸುವ ಪ್ರಯತ್ನವನ್ನು ಇಲ್ಲಿ ನಾನು ಮಾಡಿದ್ದೇನೆ.

ಸಮಾಜದಲ್ಲಿ ಸಂಸಾರ ಒಂದು ಪ್ರಮುಖ ಘಟಕ. ಒಂದು ಸುಂದರ ಸಂಸಾರ ಚಿತ್ರದ ಕಲ್ಪನೆ ಬಂದಾಗ ಅದರಲ್ಲಿನ ಗಂಡು-ಹೆಣ್ಣು ಇಬ್ಬರೂ ಮುಖ್ಯರಾಗುತ್ತಾರೆ. ಆದರೆ ಸಮಾಜದಲ್ಲಿ ಗಂಡು ಹೆಣ್ಣನ್ನು ಗುರುತಿಸುವ ರೀತಿಯೆ ಸಾಮಾನ್ಯವಾಗಿ ಬೇರೆಯಾಗಿರುತ್ತದೆ. ಆಕೆ ಎಂದೆಂದಿಗೂ ಪುರುಷನ ದಾಸಿ, ಅವನ ಭೋಗದ ವಸ್ತು. ಹೆಣ್ಣನ್ನು ಗುರುತಿಸುವ ಪುರುಷ ವರ್ಗವನ್ನು ಮೂರು ರೀತಿಯಲ್ಲಿ ಗುರುತಿಸಬಹುದು. ಒಂದು; ತೀರಾ ಸಾಮಾನ್ಯಸ್ತರದ ಪುರುಷರ ಗುಂಪು, ಇವರ ಸಂಖ್ಯೆಯೇ ಸಮಾಜ

ದಲ್ಲಿ ಅತಿ ಹೆಚ್ಚಿನದು. ಎರಡು ; ಸ್ವಲ್ಪ ವಿವೇಚನೆ ಇರುವ ಪುರುಷ ಸಮೂಹ. ಮೂರು ; ಸಂಸ್ಕಾರಗೊಂಡ ಪುರುಷವರ್ಗ. ಇದರಲ್ಲಿ ಒಂದನೆಯ ವರ್ಗಕ್ಕೆ ಸೇರಿದವನು, ಹೆಣ್ಣನ್ನು ಯಾವಾಗಲೂ ತನಗಿಂತಾ ಕೀಳು ಎಂದು ಭಾವಿಸುತ್ತಾನೆ. ಎರಡನೆ ವರ್ಗದ ಪುರುಷ, ಸ್ವಲ್ಪ ವಿವೇಕವುಳ್ಳವನು, ಹೆಣ್ಣು ತನಗೆ ಸರಿಸಮಾನಳು ಎಂದು ಭಾವಿಸುತ್ತಾನೆ. ಮೂರನೆ ವರ್ಗದ ಸಂಸ್ಕಾರಗೊಂಡ ಮನಸ್ಸಿನ ಗಂಡು, ಹೆಣ್ಣನ್ನು ಉದಾತ್ತತೆಯಿಂದ ಗೌರವಿಸುತ್ತಾನೆ. ಕುವೆಂಪು ಕಂಡಿರುವ ಸ್ತ್ರೀಪಾತ್ರಗಳು ಬಹುವಾಗಿ ಈ ಮೂರನೆ ವರ್ಗಕ್ಕೆ ಸೇರಿದವುಗಳಾಗಿವೆ. ಹೀಗೆಂದ ಒಡನೆಯೇ ಇತರ ಸ್ತರಗಳ ಸ್ತ್ರೀಪಾತ್ರಗಳು ಇಲ್ಲವೆಂದು ಅರ್ಥವಲ್ಲ. ಆದ್ದರಿಂದಲೇ ಬಹುವಾಗಿ ಎನ್ನುವ ಪದವನ್ನು ಹೆಚ್ಚು ಒತ್ತುಗೊಟ್ಟು ಬಳಸಿದ್ದೇನೆ.

ಕುವೆಂಪು ಅವರ ಒಟ್ಟು ಸಾಹಿತ್ಯ ಸಮುದಾಯದಲ್ಲಿ ಕಾಣುವ ಬಹುತೇಕ ಸ್ತ್ರೀಪಾತ್ರಗಳು ಸಹಾನುಭೂತಿಪರವಾಗಿರುತ್ತವೆ. ಅವು ಉನ್ನತವಾಗಿರಲಿ ; ಸಾಮಾನ್ಯ ಪಾತ್ರವಾಗಿರಲಿ, ಮುಖ್ಯವೋ ಅಮುಖ್ಯವೊ—ಈ ಎಲ್ಲ ಪಾತ್ರಗಳು ಸಾಮಾನ್ಯವಾಗಿ ಅನುಕಂಪೆಯನ್ನು ಬಯಸುತ್ತವೆ. ಕೆಲವು ಪಾತ್ರಗಳಂತೂ ಉದಾತ್ತತೆಯ ಹಂತಕ್ಕೆ ಏರುತ್ತವೆ.

ಈ ಹಿನ್ನೆಲೆಯನ್ನು ಆಧಾರವಾಗಿ ಇಟ್ಟುಕೊಂಡೇ ಕುವೆಂಪು ಸಾಹಿತ್ಯದಲ್ಲಿನ ಸ್ತ್ರೀ ಪಾತ್ರಗಳನ್ನು ಮೂರು ರೀತಿಯಿಂದ ಸಮೀಕ್ಷಿಸಬಹುದು. ಒಂದು ; ಕಾವ್ಯ, ಮಹಾಕಾವ್ಯ ಹಾಗೂ ಇತಿಹಾಸಗಳ ಆಧಾರದಿಂದ ರಚಿತವಾದ ಸಾಹಿತ್ಯದಲ್ಲಿನ ಸ್ತ್ರೀ ಪಾತ್ರಗಳು. ಎರಡು ; ಕುವೆಂಪು ಅವರ ಸೃಜನಶೀಲ ರಚನೆಗಳಾದ ಭಾವಗೀತೆಗಳಲ್ಲಿನ ಸ್ತ್ರೀ ಪಾತ್ರಗಳು. ಮೂರು ; ಅವರ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳು. ಈ ಎಲ್ಲ ಪಾತ್ರಗಳ ಬಗೆಗೆ ಕುವೆಂಪು ಅವರು ತೋರಿಸುವ ಸ್ಥಾಯೀ ಭಾವಗಳೆಂದರೆ, ಅನುಕಂಪೆ, ಗೌರವ ಹಾಗೂ ಪೂಜ್ಯಭಾವನೆಗಳು. ಆದರೆ ಸಂಚಾರೀ ಭಾವಗಳೂ ಪ್ರಬಲವಾಗಿದ್ದು ಪಾತ್ರಗಳು ಹೆಚ್ಚಿನ ವೈವಿಧ್ಯತೆ ಪಡೆಯುವಲ್ಲಿ ಸಮರ್ಥವಾಗಿವೆ ಮತ್ತು ಸಫಲವಾಗಿವೆ.

ಮೂಲ ಮಹಾಭಾರತ, ಮೂಲ ರಾಮಾಯಣ ಹಾಗೂ ಮೂಲ ಇತರ ಕಾವ್ಯಗಳಲ್ಲಿನ ದುಷ್ಟಪಾತ್ರಗಳನ್ನು, ಗರ್ವಿಷ್ಠ ಪಾತ್ರಗಳನ್ನು ಉದಾತ್ತೀಕರಿಸಿ, ಮಾನವ, ಮಹಾಮಾನವನನ್ನಾಗಿ ಚಿತ್ರಿಸುವ ಒಂದು ಪರಂಪರೆ, ಜೈನ ಕವಿಗಳಾದ ಪಂಪ, ರನ್ನ, ನಾಗಚಂದ್ರ, ರತ್ನಾಕರವರ್ಣಿ ಮೊದಲಾದವರಿಂದ ಬೆಳೆದು ಬಂದುದಾದರೂ ಹಾಗೆ ಉದಾತ್ತೀಕರಿಸುವುದನ್ನು ಸ್ತ್ರೀ ಪಾತ್ರಗಳಿಗೂ ವಿಸ್ತರಿಸಿ ಹೆಚ್ಚು ಅರ್ಥಪೂರ್ಣಗೊಳಿಸುವಲ್ಲಿ ಕುವೆಂಪು ಯಶಸ್ವಿಯಾಗಿದ್ದಾರೆ.

ಕಾವ್ಯ, ಮಹಾಕಾವ್ಯ ಇತಿಹಾಸಗಳ ಆಧಾರದಿಂದ ರಚನೆಗೊಂಡಿರುವ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಾಗಲೀ, ಬೆರಳ್‌ಗೆ ಕೊರಳ್, ಬಿರುಗಾಳಿ, ರಕ್ತಾಕ್ಷಿ, ಚಂದ್ರಹಾಸ ಮುಂತಾದ ನಾಟಕಗಳಲ್ಲಾಗಲೀ, ದ್ರೌಪದಿಯ ಶ್ರೀಮುಡಿ, ಮಹಾಶ್ವೇತೆಯ ತಪಸ್ಸು, ಸೀತಾ ಪರಿತ್ಯಾಗ ಮೊದಲಾದ ವಿಮರ್ಶೆಯ ಪ್ರಬಂಧಗಳಲ್ಲಾಗಲೀ ಕವಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲ ಎನ್ನುವ ಅಂಶ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಆದರೂ ಸ್ತ್ರೀ ಸಹಾನುಭೂತಿಪರವಾದ ತನ್ನ ಧೋರಣೆಗಳನ್ನು

ಕುವೆಂಪು ತನ್ನ ಪ್ರತಿಭೆಯ ಸಾಮರ್ಥ್ಯದಿಂದ, ಕಲ್ಪನೆಯ ಕುಂಚದಿಂದ ಮೂಲ ಕಾವ್ಯದ ಪಾತ್ರಗಳಿಗೆ ಕುಂದು ಬರದಂತೆ, ಪರಿವರ್ತಿಸುವುದನ್ನು ಉದಾತ್ತೀಕರಿಸಿರುವುದನ್ನು ಗುರುತಿಸಬಹುದು. ಕಾವ್ಯದ ಯಾವುದೋ ಒಂದು ಕ್ವಚಿತ್ ರೇಖೆಯಂತೆ ಮಿಂಚಿಮಾಯವಾಗುವ ನೆರಳಿನಂತೆ ಕಂಡು ಸರಿದುಹೋಗುವ ಪಾತ್ರಗಳಿಗೆ ಮಾಂಸ, ಮಜ್ಜೆ ತುಂಬಿ ಆಕಾರಕೊಟ್ಟು, ಜೀವತುಂಬಿ ಭಾವನೆಗಳಿಂದ ಸ್ಪಂದಿಸಿ–ಪ್ರತಿಸ್ಪಂದಿಸುವ ಚೇತನಗಳಾಗಿ ಅಚ್ಚಳಿಯದ ಜೀವಂತ ಪಾತ್ರಗಳಾಗಿ ರೂಪಗೊಂಡಿವೆ. ಒಂದು ಸಣ್ಣ ಉದಾಹರಣೆ ಎಂದರೆ, ರಾಮಾಯಣ ಎಲ್ಲ ಅನರ್ಥಗಳಿಗೆ ಪಾತ್ರಳಾದ ಚಂದ್ರನಖಿ ಸಂಪೂರ್ಣ ಪರಿವರ್ತಿತಳಾಗಿ ಕಡೆಗೆ ತನ್ನ ಅಣ್ಣ ರಾವಣನ ಬಳಿಗೆ ಬಂದು ಪಶ್ಚಾತ್ತಾಪದಿಂದ ನುಡಿಯುತ್ತಾಳೆ 'ಅಣ್ಣಾ, ನನ್ನ ಆಸೆ, ಅಹಂಕಾರಗಳೇ ಈ ಎಲ್ಲ ಅನಾಹುತಗಳಿಗೆ ಕಾರಣಗಳಾದುವು ಇನ್ನು ಸೀತೆಯನ್ನು ರಾಮುನಿಗೊಪ್ಪಿಸಿಬಿಡು.' ಪ್ರಾರಂಭದಲ್ಲಿ ಕಂಡ ಈ ರಕ್ಕಸಿಯ ಕೋಪ, ಕ್ರೋಧ, ಆಕ್ರೋಶ ಮಾತ್ಸರ್ಯಗಳೆಲ್ಲಿ? ಕಾವ್ಯದ ಕಡೆಯಲ್ಲಿ ಪಶ್ಚಾತ್ತಾಪದ ಮುದ್ದೆಯಾಗಿ ರಾವಣನ ಬಳಿ ಬಂದು ಬೇಡುವ ಚಂದ್ರನಖಿ ಎಲ್ಲಿ?

ಕಾವ್ಯ, ಮಹಾಕಾವ್ಯ, ನಾಟಕಗಳಲ್ಲಿನ ಸ್ತ್ರೀ ಪಾತ್ರಗಳ ಧೋರಣೆ ಈ ರೀತಿಯದಾದರೆ ಭಾವಗೀತೆಗಳಲ್ಲಿ ಕವಿಪ್ರತಿಭೆ ಕಂಡುಕೊಂಡ ಸ್ತ್ರೀ ಚಿತ್ರಗಳು ಇದಕ್ಕಿಂತಲೂ ವಿಭಿನ್ನವಾಗಿ ಔನ್ನತ್ಯದ ಶಿಖರದಲ್ಲಿ ಮೆರೆಯುತ್ತವೆ. ಇವೆಲ್ಲಾ ಕವಿ ಹೆಣ್ಣನ್ನು ದೇವತೆಯಾಗಿ, ಜನ್ಮದಾತೆ ತಾಯಿಯಾಗಿ, ಪ್ರೇಮದ ಪತ್ನಿಯಾಗಿ, ಪ್ರೀತಿಯ ಪ್ರಣಯುನಿಯಾಗಿ, ಶಕ್ತಿಪ್ರದಾಯಿಯಾಗಿ ಕಂಡಿದ್ದಾರೆ.

ಮಲೆನಾಡಿನ ಮಹಾಭಾರತವೆಂದು ಪ್ರಸಿದ್ಧಿ ಪಡೆದಿರುವ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮಧುಮಗಳು'–ಕಾದಂಬರಿಗಳಲ್ಲಿ ಕಾಣುವ ಸ್ತ್ರೀ ಪಾತ್ರಗಳ ಚಿತ್ರ ವಿಭಿನ್ನ ರೀತಿಯಿಂದ ಹೆಚ್ಚು ನೈಜವಾಗಿ, ನಿಷ್ಠುರವಾಗಿ ಕಾಣುತ್ತವೆ. ಈ ಎರಡು ಕಾದಂಬರಿಗಳೂ ಕನ್ನಡದ ಎರಡು ಮಹತ್ ಕಾದಂಬರಿಗಳೂ ಹೌದು. ಇವುಗಳ ಶೀರ್ಷಿಕೆ ಕುವೆಂಪು ಅವರನ್ನು 'ಸ್ತ್ರೀ ಪಕ್ಷಪಾತಿಗಳು' ಎನ್ನುವ ಗುಮಾನಿಗೆ ಈಡು ಮಾಡುತ್ತವೆ.

ಮಲೆನಾಡಿನ ವಿಸ್ತೃತ, ವೈವಿಧ್ಯಮಯ ಬದುಕನ್ನು ಚಿತ್ರಿಸುವ ಈ ಕಾದಂಬರಿಗಳಲ್ಲಿ ಹೆಣ್ಣುಗಳೇ ಕೇಂದ್ರ ಪಾತ್ರಗಳೂ ಅಹುದು. ಕಾನೂರು ಸುಬ್ಬಮ್ಮ ಹೆಗ್ಗಡತಿ ಅತ್ಯಂತ ಕುಸಂಸ್ಕೃತಿಯ ಹೆಣ್ಣಾಗಿ ಅನೇಕರ ಬದುಕಿಗೆ ವಿಷಬೀಜವಾಗುತ್ತಾಳೆ. ಕೆಟ್ಟ ಸ್ವಭಾವದ ಹೆಣ್ಣಿನಲ್ಲಿರಬಹುದಾದ ಎಲ್ಲ ದುರ್ಗುಣಗಳಿಗೂ ಅವಳು ಆಕರವಾಗಿದ್ದಾಳೆ. ಈ ಎರಡು ಕಾದಂಬರಿಗಳಲ್ಲಿಯೂ ಗಂಡು–ಹೆಣ್ಣಿನ ಲೈಂಗಿಕ ವ್ಯವಹಾರ, ಸಾಮಾಜಿಕ ಕಟ್ಟು–ಕಟ್ಟಳೆ, ರೀತಿ–ನೀತಿ ಸಂಪ್ರದಾಯ, ಮೂಢನಂಬಿಕೆಗಳು ತುಂಬಿವೆ. ಅವು ನೈಜತೆಗೆ ತೀರಾ ಹತ್ತಿರವಾಗಿವೆ. ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಯ ಜನಜೀವನ ಅಸಂಸ್ಕೃತವೇನೋ ಎಂದು ಭಾವಿಸಬಹುದಾದರೂ ಅದಕ್ಕಿಂತಲೂ ಹಿಂದಿನದೆನ್ನಬಹುದಾದ ಇನ್ನೂ ಭೀಕರ, ರೋಚಕ ಜನಜೀವನದ ಪರಿಚಯ 'ಮಲೆಗಳಲ್ಲಿ ಮಧುಮಗಳು' ಕಾದಂಬರಿಯಲ್ಲಿ ಕಾಣಬಹುದಾಗಿದೆ. ಲೇಖಕರೇ ಹೇಳುವಂತೆ 'ಅದು ನಾಗರಿಕತೆಯ ಐತಿಹಾಸಿಕ ಪ್ರವಾಹಕ್ಕೆ ದೂರವಾದ ಆರಣ್ಯಕ ಪ್ರಪಂಚದ ಕ್ಷುದ್ರ ಅಲ್ಪ

ಜಟಿಲರಾಗ–ದ್ವೇಷಮಯ ಜೀವನ ಜಾಲ'ವಾಗಿದೆ. ಇಲ್ಲಿ ನಡೆಯುವ ಬದುಕಿನ ಬಹು ಭಾಗ ಬಲದಿಂದಲೋ, ಕುಯುಕ್ತಿಯಿಂದಲೊ ಹೆಣ್ಣನ್ನು ಹಾರಿಸಿಕೊಂಡು ಹೋಗಿ ಕಾಮಕೇಳಿಯಲ್ಲಿ ಪ್ರವೃತ್ತವಾಗುವುದೇ ಆಗಿದೆ. ಇದು ಬದುಕಿನ ತೀರಾ ಸಹಜ ಕ್ರಿಯೆ ಎನ್ನುವಂತೆ ಕಾದಂಬರಿಯ ಉದ್ದಕ್ಕೂ ನಡೆಯುತ್ತದೆ. ಕುಡಿತ, ಕೋಳಿ ಅಂಕ, ಜೂಜು, ಹಾದರ, ಅತ್ಯಾಚಾರ—ಇತ್ಯಾದಿಗಳೆಲ್ಲಾ ಕುಪ್ರಸಿದ್ಧವಾದ ಆಗರದ ಚಿತ್ರ ಈ ಕಾದಂಬರಿಯಲ್ಲಿ ಬರುತ್ತದೆ.

ಈ ಎರಡು ಕಾದಂಬರಿಗಳ ಹೆಚ್ಚಿನ ಘಟನೆಗಳಿಗೆ ಸ್ತ್ರೀಯರೇ ಕಾರಣ. ಸ್ತ್ರೀಯೇ ಕೇಂದ್ರ ಬಿಂದು. ಇಲ್ಲಿ ವಿಭಿನ್ನ ಸ್ವಭಾವದ ವಿಭಿನ್ನ ವೈಪರೀತ್ಯದ ಹೆಣ್ಣುಗಳನ್ನು ಕಾಣಬಹುದು. ಅವರ ಸ್ವಚ್ಛಂದ ಕ್ರಿಯೆಗಳು ಯಾವ ಮುಚ್ಚುಮರೆಯೂ ಇಲ್ಲದೆ ತೆರೆದುಕೊಂಡಿವೆ. ಸಮಾಜ ವ್ಯವಸ್ಥೆಗೆ ಸಿಲುಕಿ ನಲುಗಿದ ಅನೇಕ ಸ್ತ್ರೀ ಪಾತ್ರಗಳೂ ಕಾನೂರಿನ ಸುಬ್ಬಮ್ಮ ಸಹ ಕಡೆಗೆ ಓದುಗರ ಅನುಕಂಪೆಗೆ ಪಾತ್ರವಾಗುವುದನ್ನು ಕಾಣುತ್ತೇವೆ.

ಲೇಖನದ ಪರಿಮಿತಿಯ ದೃಷ್ಟಿಯಿಂದ ಕುವೆಂಪು ಸ್ತ್ರೀ ಪಾತ್ರಗಳನ್ನು ಸ್ಥೂಲವಾಗಿ ಇಲ್ಲಿ ವಿವೇಚಿಸಲಾಗಿದೆ.

ಹಿಂದೂ ಧರ್ಮ ಗಂಗೆಯಂತೆ ಮೂಲದಲ್ಲಿ ಅದು ಪರಿಶುದ್ಧ ಮತ್ತು ಅಕಳಂಕಿತ. ಆದರೆ ಮುನ್ನಡೆಯುವಾಗ ತನ್ನ ದಾರಿಯಲ್ಲಿನ ಅಶುದ್ಧವನ್ನೆಲ್ಲಾ ತನ್ನೊಳಕ್ಕೆ ಎಳೆದುಕೊಳ್ಳುತ್ತದೆ. ಆದರೆ ಒಟ್ಟು ಪರಿಣಾಮದಲ್ಲಿ ಅದು ಗಂಗೆಯಂತೆಯೇ ಉಪಕಾರಿ.


ಗಾಂಧೀಜಿ



ರಾಷ್ಟ್ರಕವಿ ಕುವೆಂಪು ಸಮಾರಂಭಕ್ಕೆ ಆಗಮಿಸುತ್ತಿರುವುದು




ಪಂಪ ಪ್ರಶಸ್ತಿ ಆಲ ಪ್ರದಾನ ಸಮಾರಂಭದ ವೇದಿಕೆಯಲ್ಲಿ ರಾಷ್ಟ್ರಕವಿ ಕುವೆಂಪು, ಮಾಜಿ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿ, ಮಾಜಿ ಮಂತ್ರಿ ಬಿ. ರಾಚಯ್ಯ, ಪ್ರಶಸ್ತಿವರಣ ಅಧ್ಯಕ್ಷ ಪ್ರೊ॥ ವಿ. ಕೃ. ಗೋಕಾಕ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಭಟ್ಟಾಚಾರ್ಯ ಅವರುಗಳನ್ನು ಕಾಣಬಹುದು.



ಪ್ರಂಪ ಪ್ರಶಸ್ತಿ ಪತ್ರಗಳು



ಕುವೆಂಪು ಅವರಿಗೆ ಮಾಜಿ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿ ಅವರು ಶಾಲು ಹೊದಿಸುತ್ತಿರುವುದು



ರಾಷ್ಟ್ರಕವಿ ಕುವೆಂಪು



ಪಂಪ ಪ್ರಶಸ್ತಿ ೮೮ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿದ್ದ ವಿಶೇಷ ಆಹ್ವಾನಿತರು

"ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ ಆದೇಶ ಮತ್ತು ರೂಪಾಂತರ: ಒಂದು ಟಿಪ್ಪಣಿ

ಡಾ. ಸಿ. ಎನ್. ರಾಮಚಂದ್ರನ್

ಕನ್ನಡದ ಮೇರು ಕೃತಿಗಳಲ್ಲಿ ಒಂದಾದ ಕುವೆಂಪುಕೃತ "ಮಲೆಗಳಲ್ಲಿ ಮದುಮಗಳು" ಕಾದಂಬರಿಯು ಭೂತ—ಭವಿಷತ್ತುಗಳೆರಡನ್ನೂ ವರ್ತಮಾನದಲ್ಲಿ ಏಕತ್ರಿಸಿ ಇಂದಿನ ಹಾಗೂ ಸೀಮಿತ ಭೌಗೋಲಿಕ ಪರಿಧಿಯ ಬದುಕಿನಲ್ಲಿ ಕಾಲದೇಶಾತೀತವಾದ ಬದುಕಿನ ಅನವರತ ಗತಿಯನ್ನು ಗುರುತಿಸುತ್ತದೆ. ಅಂತಹ ಪ್ರಯತ್ನದಲ್ಲಿ ಕುವೆಂಪುರವರು ಅನೇಕ ತಂತ್ರಗಳನ್ನು ಭಾಷೆ, ನಿರೂಪಣೆ, ಪ್ರತೀಕಗಳು ಇವೇ ಮುಂತಾದ ವಿವಿಧ ನೆಲೆಗಳಲ್ಲಿ ಆಸ್ವಾದ್ಯಶವಾಗಿ ಬಳಸುತ್ತಾರೆ. ಅಂತಹ ತಂತ್ರಗಳಲ್ಲಿ ಒಂದಾದ 'ಆದೇಶ ಮತ್ತು ರೂಪಾಂತರ' (Substitution ಮತ್ತು transformation) ವನ್ನು ಕುರಿತಾದ ಕಿರು ಟಿಪ್ಪಣಿಯೊಂದು ಇಲ್ಲಿದೆ.

'ಆದೇಶ'ವನ್ನು 'ಬದಲಿಕೆ' ಅಥವಾ 'ಒಂದರ ಸ್ಥಳವನ್ನು ಮತ್ತೊಂದು ತೆಗೆದುಕೊಳ್ಳುವುದು' ಎಂದು ವಿವರಿಸಬಹುದು. ಕೃತಿಯ ಪ್ರಾರಂಭದಲ್ಲಿಯೇ ಗುತ್ತಿ "ಇದರ ಮನೆ ಹಾಳಾಗ್ಲೀ. ಈ ನರಿಯಿಂದ ಸುಖಾ ಇಲ್ಲ" ಎನ್ನುತ್ತಾನೆ. ಈ ಹೇಳಿಕೆಯನ್ನು ವ್ಯಾಖ್ಯಾನಿಸುತ್ತಾ 'ಹುಲಿ' ಎನ್ನುವುದನ್ನು ಬದಲಾಗಿ ಗುತ್ತಿ 'ನರಿ' ಎಂದನೆಂದು ಕೃತಿಕಾರರು ನಮಗೆ ತಿಳಿಸುತ್ತಾರೆ; ಮತ್ತು 'ಹಾವು ಕಚ್ಚಿದೆ' ಎನ್ನುವ ಬದಲು 'ಬಳ್ಳಿ ಮುಟ್ಟಿದೆ' ಎಂದು ಹೇಳುವ ರೂಢಿಯಿರುವುದನ್ನೂ ನಮಗೆ ನೆನಪಿಸುತ್ತಾರೆ. (ಪು. ೮) 'ಹುಲಿ—ಇಲಿ' 'ಹಾವು—ಬಳ್ಳಿ'—ಇಂತಹ ಆದೇಶ ಕೃತಿಯ ಮುಖ್ಯ ತಂತ್ರಗಳಲ್ಲೊಂದೆಂದು ನಮಗೆ ಹೀಗೆ ಪ್ರಾರಂಭದಲ್ಲಿಯೇ ಗೊತ್ತಾಗುತ್ತದೆ.

ಕೃತಿಯ ವಿವಿಧ ಸ್ತರಗಳಲ್ಲಿ ಆದೇಶ ಕ್ರಿಯಾಶೀಲವಾಗಿರುವುದು ನಮಗೆ ಕೃತಿಯನ್ನು ಓದುತ್ತಾ ಹೋದಂತೆ ಅರಿವಾಗುತ್ತದೆ.

ಶಾಬ್ದಿಕ ಸ್ತರದಲ್ಲಿ (Phonological level) ಕಣ್ಣಾಪಂಡಿತರು "ಏನೋ ಕುತ್ತಿ, ಮತುವೆಮುಕನ ಹಾಗೆ ಬಟ್ಟೆಯುಟ್ಟು ಹೊಸಬದ್ದೀಯಲ್ಲವೋ" ಎನ್ನುವಾಗ ಘೋಷ ವ್ಯಂಜನಗಳಾದ 'ಗ' ಹಾಗೂ 'ದ'ಗಳ ಬದಲು ಅಘೋಷ ವ್ಯಂಜನಗಳನ್ನು—'ಕ' ಹಾಗೂ 'ತ'—ಉಪಯೋಗಿಸುವುದು ಕಾಣುತ್ತದೆ (ಪು. ೩). ಹಾಗೆಯೇ ಪದಗಳ ಸ್ತರ ದಲ್ಲಿ (morphological level) ಕೃತಿಯುದ್ದಕ್ಕೂ ನಾವು ಆದೇಶದ ನಿದರ್ಶನ ಗಳನ್ನು ಕಾಣುತ್ತೇವೆ. ಮೊದಲೇ ಸೂಚಿಸಿದಂತೆ ಗುತ್ತಿ ಹುಲಿಯನ್ನು ಇಲಿಯೆಂದು ಕರೆಯುತ್ತಾನೆ. ಕೆಲವರು ಗುತ್ತಿಯ ನಾಯಿಯ ಬಣ್ಣವನ್ನು ನೋಡಿ 'ಕರಿಯ' ಎಂದು ಹೆಸರಿಡಲು ಸೂಚಿಸಿದರೂ ಗುತ್ತಿ ತನ್ನ ನಾಯಿಯನ್ನು 'ಹುಲಿಯ' ಎಂದೇ ಕರೆಯು ತ್ತಾನೆ (ಪು. ೧೧). ಲಕ್ಕುಂದದಲ್ಲಿದ್ದ ಹಳೆ ಪೈಕದವರು ತಮ್ಮ 'ಜೋಪಡಿ'ಗಳನ್ನು 'ಮನೆ' ಎಂದು ಕರೆಯುತ್ತಾರೆ (ಪು. ೧೪). "ಮೇಗರವಳ್ಳಿ ಗುತ್ತಿಯಂಥಾ ಹಳ್ಳಿಗರಿಗೆ 'ಪೇಟೆ' ಯಾಗಿದ್ದರೂ ನಿಜವಾಗಿಯೂ ಬರಿ 'ಕೊಂಪೆ'ಯಾಗಿತ್ತು" (ಪು. ೨೮). ಮಲೆ ಗಳಲ್ಲಿ ಬೆಳೆಯುವ ಮಕ್ಕಳಿಗೆ 'ಕಾಡು' 'ಆಕಾಶ'ಕ್ಕಿಂತಲೂ ವಿಸ್ತಾರವಾಗಿ ಕಾಣಿಸು ತ್ತದೆ (ಪು. ೧೪೦).

ಹುಲಿ–ಇಲಿ, ಕರಿಯ–ಹುಲಿಯ, ಜೋಪಡಿ–ಮನೆ, ಪೇಟೆ–ಕೊಂಪೆ ಇಂತಹ ವೈರುಧ್ಯವನ್ನು ಕೃತಿ ಪಾತ್ರಗಳ ಹಾಗೂ ಘಟನೆಗಳ ಸ್ತರದಲ್ಲಿಯೂ ಬೆಳೆಸಿಕೊಂಡು ಹೋಗುತ್ತದೆ. ಸುಬ್ಬಣ್ಣ ಹೆಗ್ಗಡೆಯವರ ಲೋಕದಲ್ಲಿ ಮಾನವರ ಸ್ಥಾನವನ್ನು ಪ್ರಾಣಿಗಳು ಆಕ್ರಮಿಸಿಕೊಂಡಿವೆ. ಅವರ "ಮೂಕ ಕುಟುಂಬದ" ಸದಸ್ಯರೆಂದರೆ ಕುರಿಗಳು, ಹಂದಿಗಳು ಮತ್ತು ಕೋಳಿಗಳು, 'ಆ ಪ್ರಾಣಿಗಳಿಗೂ ಈ ಪ್ರಾಣಿಯನ್ನು ಕಂಡರೆ ವಿಶ್ವಾಸವೋ ಏನೋ' (ಪು. ೪೩—೪೪). 'ಕುಂಟನ ಹುಣ್ಣಿನ ಹೂವಳ್ಳಿ ವೆಂಕಟಣ್ಣ'ನಾಗಿದ್ದವನು ದೆಯ್ಯದ ಹರಕೆಯ ದಿನ ವೇಷಭೂಷಣ ಧರಿಸಿ 'ಯಜ ಮಾನರು ವೆಂಕಪ್ಪನಾಯಕರು' ಆಗುತ್ತಾನೆ (ಪು. ೨೦೫). ನಾಗತ್ತೆ—ವೆಂಕಟಣ್ಣ ಇವರ ಕುಟಿಲೋಪಾಯವನ್ನರಿಯದ ನಾಗಕ್ಕ, ನಾಗತ್ತೆ ತನಗೆ ಕುಡಿಸಿದ ಕಳ್ಳು— ಹೆಂಡ—ಮದ್ದು ಇವುಗಳ ಮತ್ತಿನಲ್ಲಿ ತನ್ನ ಮೇಲೆ ಅತ್ಯಾಚಾರ ನಡೆಸುವ ವೆಂಕಣ್ಣ ನನ್ನು ತನ್ನ ದಿವಂಗತ ಪತಿ ನಾಗಣ್ಣನೆಂದೇ ಭಾವಿಸಿ ಆನಂದದಿಂದ ಅವನೊಡನೆ ರಮಿಸುತ್ತಾಳೆ (ಪು. ೨೫೭—೨೫೮). ಚೀಂಕ್ರ ಮತ್ತು ಇತರ ದುಷ್ಟರು ತನ್ನ ಮೇಲೆ ನಡೆಸಿದ ಅತ್ಯಾಚಾರದ ಅವಮಾನದಿಂದಾಗಿ ಕಾವೇರಿ ಆತ್ಮಹತ್ಯೆ ಮಾಡಿ ಕೊಂಡರೂ ಅವಳ ತಾಯಿ ಅಂತಕ್ಕ "ಮಗಳು ಕಿಟ್ಟಯ್ಯ ಸೆಟ್ಟಿಯನ್ನು ಮದುವೆ ಯಾಗಲು ಇಷ್ಟವಿಲ್ಲದೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳೆಂದೇ" ನಂಬುತ್ತಾಳೆ (ಪು. ೭೫೫).

ಈ ವಿಧದ ಆದೇಶದ ಅಸ್ತಿತ್ವವನ್ನು ಜನರ ಆಚಾರ–ವಿಚಾರಗಳ ಸ್ತರದಲ್ಲಿಯೂ ಕೃತಿಕಾರರು ದಾಖಲಿಸುತ್ತಾರೆ. ಹಳೆಪೈಕದವರು ಮದುವೆ ಮುಂತಾದ ಸಂಭ್ರಮ ಗಳಲ್ಲಿ ದಿಬ್ಬಣದಲ್ಲಿ ಮದುವೆಯ ಗಂಡು ಕುದುರೆಯ ಮೇಲೆ ಕುಳಿತು ಬರುವುದು ಇತ್ಯಾದಿ ಒಕ್ಕಲಿಗರ ಆಚರಣೆಯನ್ನು ತಾವೂ ಅನುಕರಿಸಬೇಕೆಂದು ಪ್ರಯತ್ನಿಸುತ್ತಾರೆ (ಪು. ೧೩–೧೪). ಒಕ್ಕಲಿಗರಾದ ಶಂಕರ ಹೆಗ್ಗಡೆ ಹಾರುವರಂತೆ ದಿನವೂ ಮೀಯುತ್ತಾ

ಶುಭ್ರವಾದ ಬಟ್ಟೆ ಹಾಕಿ, ಮನೆಗೆ ಹೆಂಚುಹಾಕಿಸಿ, "ಒಂದು ವಿಧವಾದ ಅನುಕರಣದ ಸಂಸ್ಕೃತಿಯನ್ನು ಪಡೆದಿರುತ್ತಾರೆ (ಪು. ೩೭–೩೮).

ಕೃತಿಯ ವಿವಿಧ ಸ್ತರಗಳಲ್ಲಿ ಹೀಗೆ ಕ್ರಿಯಾಶೀಲವಾಗಿರುವ 'ಆದೇಶ' ಅನೇಕ ನೆಲೆಗಳಲ್ಲಿ ಕೃತಿಯ ಅರ್ಥವಂತಿಕೆಯನ್ನು ಪುಷ್ಟಿಗೊಳಿಸುತ್ತದೆ. ಸ್ಥೂಲವಾಗಿ, ಪಾತ್ರಗಳ ವೈಶಿಷ್ಟ್ಯವನ್ನು ಖಚಿತಗೊಳಿಸುತ್ತದಲ್ಲದೆ ವಿವಿಧ ಪಾತ್ರಗಳ ಪ್ರಜ್ಞೆಯ ಸ್ತರವನ್ನು ಕುರಿತೂ ವ್ಯಾಖ್ಯಾನಿಸುತ್ತದೆ. ಆದರೆ ಮುಖ್ಯವಾಗಿ ಈ ತಂತ್ರವು ಕೃತಿಗೆ ವರ್ತಮಾನದಲ್ಲಿ ಖಚಿತ ಸ್ಥಾನವನ್ನು ಕಲ್ಪಿಸಿ ಬದುಕನ್ನು ಕುರಿತು—ಬದುಕಿನಲ್ಲಿ ಅನಿವಾರ್ಯವಾಗಿ ಬರುವ ಕಷ್ಟ, ದುಃಖ, ಸಂಕಟಗಳನ್ನು ಕುರಿತು—ತನ್ನದೇ ಆದ ವಿಶಿಷ್ಟ ಭಾಷ್ಯವನ್ನು ರಚಿಸುತ್ತದೆ. ಈ ಅರ್ಥಪೂರ್ಣ ಭಾಷ್ಯವೆಂದರೆ ನಮ್ಮ ಬದುಕಿನಲ್ಲಿ ನಾವು ಅನುಭವಿಸುವ ದುಃಖ–ಸಂತಾಪಗಳಿಗೆ ಮೂಲಕಾರಣ ನಮ್ಮ ಭ್ರಮೆ—ಹಾವನ್ನು 'ಬಳ್ಳಿ' ಎಂದರೆ, ಹುಲಿಯನ್ನು ಇಲಿ ಎಂದರೆ ನಮಗೆ ಬರಬಹುದಾದ ಅಪಾಯ ದೂರವಾಗುವುದೆಂಬ ಭ್ರಮೆ.

ನಾವು ಹುಲಿಯನ್ನು ಇಲಿಯೆಂದು ಏಕೆ ಕರೆಯುತ್ತೇವೆಂದರೆ ಹುಲಿಯನ್ನು ಹುಲಿಯಾಗಿಯೇ ಒಪ್ಪಿಕೊಳ್ಳಲು ಇರಬೇಕಾದ ನೈತಿಕ ಸ್ಥೈರ್ಯ ಮತ್ತು ಆತ್ಮಜ್ಞಾನ ನಮ್ಮಲ್ಲಿಲ್ಲದಿರುವುದು—ಎಂದರೆ ವಾಸ್ತವತೆಯನ್ನು ಒಂದಷ್ಟೂ ವಿರೂಪಗೊಳಿಸದೆ ಇರುವಂತೆಯೇ ಆದನ್ನು ಅರಿಯಲು, ಒಪ್ಪಿಕೊಳ್ಳಲು ನಾವು ಸಿದ್ಧರಾಗದೇ ಇರುವುದು. ಆದ್ದರಿಂದ, ನಾವು ಯಾವಾಗಲೂ ಸತ್ಯವನ್ನು ನಮ್ಮ ಭ್ರಮೆಯಿಂದ ಮುಚ್ಚಿ ಆ ಭ್ರಮಾಲೋಕದಲ್ಲೇ ಜೀವಿಸುತ್ತಿರುತ್ತೇವೆ.

ಹುಟ್ಟಿನಿಂದ ಸಾವಿನವರೆಗೂ ನಮ್ಮ ಬದುಕನ್ನು ಆವರಿಸಿ, ನಮ್ಮ ಪ್ರಜ್ಞೆಯನ್ನು ವಾಸ್ತವಿಕತೆಯಿಂದ ದೂರವಾಗಿಸುವ ಭ್ರಮೆ ಅಥವಾ ಮಿಥ್ಯೆಯ ಸ್ವರೂಪ ನಾನಾವಿಧ; ಮಿಥ್ಯೆ ವರ್ಣವನ್ನು ಕುರಿತದ್ದಾಗಿರಬಹುದು ; ಅಥವಾ ಜಾತಿ–ಧರ್ಮ—ಮತಾಚರಣೆಗಳನ್ನು ಕುರಿತದ್ದಾಗಿರಬಹುದು ; ಅಥವಾ ಒಡೆಯ—ಒಕ್ಕಲು ಸಂಬಂಧವನ್ನು ಕುರಿತದ್ದಾಗಿರಬಹುದು. ಗುತ್ತಿಯ ನಾಯಿಯನ್ನು ಕರಿಯನೆಂದು ಕರೆಯಲು ಅನೇಕರು ಸೂಚಿಸುತ್ತಾರೇಕೆಂದರೆ ಅದರ ಬಣ್ಣ ಕಪ್ಪಾದ ಕಾರಣ, ಮತ್ತು ಕಪ್ಪು—ಬಿಳಿ ವರ್ಣಗಳಲ್ಲಿ ಬಿಳಿಯನ್ನು ಶ್ರೇಷ್ಠವೆಂದು ಭಾವಿಸಿರುವ ಕಾರಣದಿಂದ. ರಂಗಪ್ಪಗೌಡರು ಆಳುಗಳ ಮೇಲೆ 'ಹೊಸಳ್ಳಿ ಹೊಡೆತ'ಕ್ಕೆ ಕೈಹಾಕುವುದು ಯಜಮಾನ–ಆಳು ಇಂತಹ ವ್ಯವಸ್ಥೆಯಲ್ಲಿ ಅವರಿಗಿರುವ ಭ್ರಮಾತ್ಮಕ ನಂಬಿಕೆಯಿಂದ. ಹಾಗೆಯೇ ಬ್ರಾಹ್ಮಣರ ಸಂಸ್ಕೃತಿ ಅಥವಾ ಕ್ರಿಶ್ಚಿಯನ್‌ರ ಸಂಸ್ಕೃತಿ ಶ್ರೇಷ್ಠವೆಂಬ ಭ್ರಮೆಯಿಂದ ಮತ್ತು ಅನುಕರಣದಿಂದ ಸಂಸ್ಕೃತಿ ಲಭ್ಯವಾಗುತ್ತದೆಂಬ ಭ್ರಮೆಯಿಂದ ಶಂಕರ ಹೆಗ್ಗಡೆಯವರು ಬ್ರಾಹ್ಮಣರನ್ನು ಅನುಕರಿಸಿದರೆ ಚಿನ್ನಪ್ಪಗೌಡರು ಕ್ರೈಸ್ತಧರ್ಮಕ್ಕೆ ಸೇರುತ್ತಾರೆ. ಮತ್ತು ದೇವಯ್ಯ ಆ ಧರ್ಮಕ್ಕೆ ಸೇರಲು ಪ್ರಯತ್ನಿಸುತ್ತಾನೆ. ತನ್ನ ಧರ್ಮವೇ ಶ್ರೇಷ್ಠವೆಂಬ ಭ್ರಮೆಯಿರುವುದರಿಂದ ಉಪದೇಶಿ ಜೀವರತ್ನಯ್ಯ ಹಿಂದೂಧರ್ಮದ ಪವಾಡಗಳನ್ನು ನಂಬುವುದಿಲ್ಲ—ಆದರೆ ಒಂದೇ ದೋಸೆಯನ್ನು ನೂರಾರು ಶಿಷ್ಯರಿಗೆ ಹಂಚಿದ ಕ್ರಿಸ್ತನ ಪವಾಡವನ್ನು ನಂಬುತ್ತಾನೆ.

ಈ ಸಂದರ್ಭದಲ್ಲಿ, ಕೃತಿಯ ನಿರ್ಣಾಯಕ ಘಟ್ಟಗಳಲ್ಲೆಲ್ಲಾ ಬರುವ ಹುಲಿ ಅಥವಾ ಹುಲಿಯ ಭೀಷಣ ಮೊರೆತ ಸಂಕೀರ್ಣ ಸಾಂಕೇತಿಕತೆಯನ್ನು ಪಡೆಯುತ್ತದೆ. ತಮ್ಮ ಬದುಕಿನ ನಿರ್ಧಾರಕ ಕಣಗಳಲ್ಲಿ ಕಾದಂಬರಿಯ ಧನಾತ್ಮಕ ಪಾತ್ರಗಳೆಲ್ಲರೂ (ಐತ—ಪೀಂಚಲು ಇವರನ್ನು ಬಿಟ್ಟು) ಹುಲಿಯನ್ನು ಎದುರಿಸುತ್ತಾರೆ. ದೊಡ್ಡಣ್ಣ ಹೆಗ್ಗಡೆ ಹೆಣ್ಣು ಹುಲಿಯನ್ನು ಎದುರಿಸಿ, ಅದರಿಂದ ಗಾಯಗೊಂಡರೂ ಕೊನೆಗೆ ಅದನ್ನು ಸೋಲಿಸಿ ಪಣದಂತೆ ರಂಗಮ್ಮನನ್ನು ಮದುವೆಯಾಗುತ್ತಾನೆ. ಗುತ್ತಿ ಮತ್ತು ಮುಕುಂದಯ್ಯ ಇವರಿಬ್ಬರೂ ತಮ್ಮ ಪ್ರೇಮಿಗಳೊಡನೆ ಓಡಿಹೋಗಿ ಹುಲಿಕಲ್ ನೆತ್ತಿಯ ಮೇಲಿರುವ ಪಾಳು ಮಂಟಪದಲ್ಲಿ ಹುಲಿಯ ಗರ್ಜನೆಯನ್ನು ಕೇಳುತ್ತಾ ರಾತ್ರಿಯನ್ನು ಕಳೆಯುತ್ತಾರೆ. ಎರಡು ಸಂದರ್ಭಗಳಲ್ಲಿಯೂ ಅಗಾಧ ಮಳೆಯಿಂದ ಕೂಡಿದ ಮತ್ತು ಹಿಂಸ್ರ ಪಶುಗಳ ವಿವಿಧ ರೀತಿಯ ಕೂಗುಗಳಿಂದ ತುಂಬಿದ ಭಯಂಕರ ವಾತಾವರಣವಿದೆ. ಮತ್ತು ಇವುಗಳ ಹಿನ್ನೆಲೆಯಲ್ಲಿ ಹಳೆಯ ಪಾಳುಮಂಟಪವಿದೆ. ಒಟ್ಟಾರೆ ಈ ವಿವರಗಳೆಲ್ಲವೂ ಈ ಸಂದರ್ಭಕ್ಕೆ ಒಂದು ವಿಧದ 'ಪರೀಕ್ಷೆ'ಯ ಮತ್ತು 'ದೀಕ್ಷಾ ವಿಧಿ'ಯ ಸಾಂಕೇತಿಕತೆಯನ್ನು ಕೊಡುತ್ತವೆ. ಗುತ್ತಿ—ತಿಮ್ಮ ಹಾಗೂ ಮುಕುಂದಯ್ಯ—ಚಿನ್ನಮ್ಮ ಇವರುಗಳು ಈ 'ಪರೀಕ್ಷೆ'ಯಲ್ಲಿ ತಮ್ಮ ಜೀವನವನ್ನೇ ಪಣವೊಡ್ಡಿ ಯಶಸ್ವಿಯಾಗುತ್ತಾರೆ ಮತ್ತು ಅವರಿಗೆ ಹುಲಿಯ—ವಾಸ್ತವಿಕ ಸತ್ಯದ—ಕಿಂಚಿತ್ತಾದರೂ ದರ್ಶನವಾಗುತ್ತದೆ. ಕೃತಿಯ ಸುಸಂಸ್ಕೃತ ಜೀವಿಗಳೆಲ್ಲಾ (ಗುತ್ತಿ—ತಿಮ್ಮ, ಐತ—ಪೀಂಚಲು, ಮುಕುಂದಯ್ಯ, ಚಿನ್ನಮ್ಮ) ಈ ಭಗ್ನ ಮಂದಿರದಲ್ಲಿ ಒಟ್ಟು ಸೇರುತ್ತಾರೆಂಬುದು ಇಲ್ಲಿ ಗಮನಿಸಬೇಕಾದ ವಿಷಯ.

ಎಂದರೆ "ಮಲೆಗಳಲ್ಲಿ ಮದುಮಗಳು" ಕೃತಿ ಮಾನವ ಚೇತನದ ದುರೂಹ್ಯ ಊರ್ಧ್ವಮುಖಿ ಗತಿಯನ್ನು ಅತ್ಯಂತ ಸಫಲವಾಗಿ ದಾಖಲಿಸುತ್ತದೆ. ಅಪರಿಪೂರ್ಣತ್ವದಿಂದ ಪೂರ್ಣತ್ವದೆಡೆಗೆ, ಭ್ರಮೆಯಿಂದ ವಾಸ್ತವತೆಯೆಡೆಗೆ, ಆಗುವ ಈ ಗತಿ ಎಷ್ಟು ನಿಧಾನ ಹಾಗೂ ಕಷ್ಟಸಾಧ್ಯವೆಂದರೆ ಈ ದಿಕ್ಕಿನಲ್ಲಿ ಒಂದು ಹೆಜ್ಜೆ ಮುಂದಿಡಲು ಮಾನವ ಚೇತನಕ್ಕೆ ಅನೇಕ ಜನ್ಮಗಳೇ ಬೇಕಾಗುತ್ತವೆ. ಕೃತಿಕಾರರೇ ಇದನ್ನು ಹೀಗೆ ವಿವರಿಸುತ್ತಾರೆ: "(ಮನುಷ್ಯನ) ಆತ್ಮಕೋಶವು ಬಹುಜನ್ಮಗಳ ಸಂಸ್ಕಾರಗಳಿಂದ ತುಂಬಿರುವಂತೆ ಆತನ ಅನ್ನಮಯ ಕೋಶವೂ ಪೃಥ್ವಿಯಲ್ಲಿ ಪ್ರಾಣೋತ್ಪತ್ತಿಯಾದಂದಿನಿಂದ ಮೊದಲುಗೊಂಡು ಇಂದಿನವರೆಗೆ ಜೀವವು ಕೈಗೊಂಡ ನಾನಾ ರೂಪದ ನಾನಾ ಪ್ರಯೋಗದ ನಾನಾ ಕಷ್ಟಸಂಕಷ್ಟಗಳ ನಾನಾ ಸುಖಸಂತೋಷಗಳ ಮಹಾ ಸಾಹಸಯಾತ್ರೆಯ ಸಮಗ್ರ ಪರಿಣಾಮ ಮುದ್ರೆಯನ್ನು 'ಅಸ್ಮೃತಿ' ರೂಪದಲ್ಲಿ ಪಡೆದಿರುತ್ತದೆ" (ಪು. ೫೧).

ಮೂಲತಃ ದಾರ್ಶನಿಕ ನೆಲೆಯಿಂದ ಹೊರಡುವ, ಹಿಂದೂ—ಜೈನ—ಬೌದ್ಧ ಧರ್ಮಗಳೆಲ್ಲವೂ ಮಾನ್ಯಮಾಡುವ, ಅನೇಕ ಜನ್ಮಾಂತರಗಳಲ್ಲಿ ಸಾಗುವ ಮಾನವ ಚೇತನದ 'ಮಹಾ ಸಾಹಸಯಾತ್ರೆ'ಯ ಪರಿಕಲ್ಪನೆ ಕಾದಂಬರಿಯಲ್ಲಿ ಮುಖ್ಯವಾಗಿ 'ರೂಪಾಂತರ'ದ ಮೂಲಕ ಮೂಡಿಬಂದಿದೆ. ಈ 'ರೂಪಾಂತರ' (transformation) ತಂತ್ರ ಕೃತಿಗೆ ಆಳವಾದ ದಾರ್ಶನಿಕ ನೆಲೆಯನ್ನು ಕೊಡುತ್ತದಲ್ಲದೆ ಕೃತಿಯ ಕಾಣ್ಕೆಯನ್ನು ಕಾಲಾದೇಶಾತೀತವನ್ನಾಗಿಸುತ್ತದೆ.

ರೂಪಾಂತರವನ್ನು ನಾವು ಮುಖ್ಯವಾಗಿ ಮುಕುಂದಯ್ಯ—ಚಿನ್ನಮ್ಮ ಇವರುಗಳ ಸಂಬಂಧದಲ್ಲಿ ಕಾಣುತ್ತೇವೆ. ಏಕೆಂದರೆ ಕಾದಂಬರಿಯ ದಾರ್ಶನಿಕ ಚೌಕಟ್ಟಿನಲ್ಲಿ ಇವರಿಬ್ಬರ ಚೇತನಗಳು ಉಳಿದವರ ಚೇತನಗಳಿಗಿಂತ ಹೆಚ್ಚು ಸಂಸ್ಕಾರ ಪಡೆದವುಗಳಾಗಿವೆ. ಈ ವಿಷಯವು ನಮಗೆ ಕಾದಂಬರಿಯ ಪ್ರಾರಂಭದಲ್ಲೇ ಗೊತ್ತಾಗುತ್ತದೆ. ಹತ್ತು ವರ್ಷದ ಹುಡುಗ ಮುಕುಂದಯ್ಯನನ್ನು ಚಿಕ್ಕ ಹುಡುಗಿ ಚಿನ್ನಮ್ಮನಿಗೆ ತೋರಿಸಿ "ಇಂವ ಯಾರು ? ಹೇಳು ನೋಡಾವ ?" ಎಂದು ಕೇಳಿದಾಗ ಆ ಹುಡುಗಿ ಗುರುತು ಹಿಡಿದವಳಂತೆ 'ಅವರು' ಎನ್ನುತ್ತಾಳೆ. "ಅಲ್ಲಿದ್ದವರ ಪ್ರಜ್ಞೆಗೆ ಅದು ಸಂಪೂರ್ಣವಾಗಿ ಅಗೋಚರವಾಗಿದ್ದರೂ (ಆ ಘಟನೆ) ಅದ್ಭುತದ ಭೂಮಿಕೆಗೆ ಸೇರಿದುದಾಗಿತ್ತು........ ಆ ಒಂದು ಕ್ಷಣ ದರ್ಶನದಲ್ಲಿ ಚಿನ್ನಮ್ಮ ತಾನೂ ಮುಕುಂದಯ್ಯನೂ ತಮ್ಮ ಹಿಂದಣ ಜನ್ಮದಲ್ಲಿ ದಂಪತಿಗಳಾಗಿದ್ದುದನ್ನು 'ಆಗ' 'ಅನುಭವಿಸಿ' 'ಕಂಡಿದ್ದಳು' (ಪು. ೮೦–೮೧). ಆ ಕಾರಣದಿಂದಲೇ ಒಂದು ದಿನವೂ ಆ ಮಾರ್ಗವಾಗಿ ಹೋಗದೇ ಇದ್ದರೂ ಚಿಕ್ಕ ಹುಡುಗಿಯಾದ ಚಿನ್ನಮ್ಮನಿಗೆ ಕೋಣೂರಿನ ಕಾಲುಹಾದಿ ಸುಪರಿಚಿತವಾಗಿದೆ. ಅಜ್ಜಿಗೇ ದಾರಿ ತೋರಿಸಬಲ್ಲವಳಾಗಿದ್ದಾಳೆ.

ಇದೇ ರೀತಿಯ ರೂಪಾಂತರವನ್ನು ಮುಕುಂದಯ್ಯ ಐತ—ಪೀಂಚಲು ಇವರಲ್ಲೂ ಕಾಣುತ್ತಾನೆ. ಕಾಡಿನ ಹಿನ್ನೆಲೆಯಲ್ಲಿ, ಏಕಾಂತದಲ್ಲಿ, ವಿರಳ ವನ್ಯಪಕ್ಷಿ ಕೂಜನದ ಸಮ್ಮೋಹಕತೆಯಲ್ಲಿ ಅವರಿಬ್ಬರು ಮುಕುಂದಯ್ಯನಿಗೆ ಬಿಲ್ಲವರ ಜಾತಿಯ ಬಡಕೂಲಿಯಾಳುಗಳಂತೆ ಕಾಣಿಸುವುದಿಲ್ಲ. "ಆ ತರುಣ ದಂಪತಿ ಪ್ರಪ್ರಾಚೀನ ಕಾಲದಲ್ಲಿ ಪೌರಾಣಿಕ ಯುಗದಲ್ಲಿ ದಂಡಕಾರಣ್ಯಕ್ಕೊ, ನೈಮಿಶಾರಣ್ಯಕ್ಕೊ ಕಾರ್ಯಾರ್ಥವಾಗಿ ಅವತರಿಸಿ ಅಲೆಯುತ್ತಿದ್ದಿರಬಹುದಾದ ಭಿಲ್ಲವೇಷದ ಶಿವ—ಶಿವಾಣಿಯರಂತೆ ತೋರಿದರು" (ಪು. ೧೫೨).

ವೈಯಕ್ತಿಕ ನೆಲೆಯಲ್ಲಿ ವ್ಯಕ್ತಿಚೇತನವು ಜನ್ಮದಿಂದ ಜನ್ಮಕ್ಕೆ ನವೀನ ರೂಪು ಪಡೆಯುವಂತೆ ಕೆಲವು ಆದಿಮ ಮಾನವ ಅನುಭವಗಳೂ (Primordial experiences) ಕಾಲಕಾಲಕ್ಕೆ ಹೊಸರೂಪು ಪಡೆದು ಪ್ರಕಟವಾಗುತ್ತಿರುತ್ತವೆ. ಇಂತಹ ಒಂದು ತೀವ್ರ ಅನುಭವದ ಒಂದು ರೂಪಿನ ಅರಿವು ತಿಮ್ಮಿಗೆ ಹುಲಿಕಲ್ಲು ಬೆಟ್ಟದ ನೆತ್ತಿಯಲ್ಲಿರುವ ಪಾಳು ಮಂಟಪದಲ್ಲಾಗುತ್ತದೆ. ತನಗೊಲ್ಲದ ಮದುವೆಯಿಂದ ತಪ್ಪಿಸಿಕೊಂಡು ಅಲ್ಲಿಗೆ ಬರುತ್ತಿರುವ ಚಿನ್ನಮ್ಮ ಮತ್ತು ಅವಳ ಜನ್ಮಜನ್ಮಾಂತರದ ಪತಿ ಮುಕುಂದಯ್ಯ ಇವರುಗಳನ್ನು ಪಾಳುಮಂಟಪದಲ್ಲಿ ರಾತ್ರಿ ಒಬ್ಬಳೇ ಕಾಯುತ್ತಿರುವ ತಿಮ್ಮಿ ಒಂದು ಅಪೂರ್ವ ದೃಶ್ಯವನ್ನು ನೋಡುತ್ತಾಳೆ. ಕಲ್ಲುಮಂಟಪದ ಇದಿರಿನಲ್ಲಿರುವ ಹಾಸುಬಂಡೆಯ ಮೇಲೆ ಕುದುರೆಯ ಮೇಲೊಬ್ಬ ಸೈನಿಕ ಕುಳಿತು ಯಾರನ್ನೋ ನಿರೀಕ್ಷಿಸುತ್ತಿರುತ್ತಾನೆ. ಸ್ವಲ್ಪಹೊತ್ತಿನಲ್ಲಿಯೇ ಬಾಸಿಂಗ ತೊಟ್ಟು ಮದುಮಗಳ ವೇಷದಲ್ಲಿರುವ ತರುಣಿಯೊಬ್ಬಳು ಅವನಲ್ಲಿಗೆ ಓಡಿಬರುತ್ತಾಳೆ. ಅವಳನ್ನು ಕುದುರೆಯ ಮೇಲೆ ಕೂರಿಸಿಕೊಂಡು ಕ್ಷಣಾರ್ಧದಲ್ಲಿ ಸೈನಿಕ ಕಣ್ಮರೆಯಾಗುತ್ತಾನೆ (ಪು. ೬೩೦). ಈ ಘಟನೆ ಹಿಂದೆ ಆ ಕಲ್ಲುಮಂಟಪವು ನಗರ ಸಂಸ್ಥಾನದ ಕಾವಲ್ದಾಣವಾಗಿದ್ದಾಗ ನಡೆದಿದ್ದ ಯಾವುದೋ ಘಟನೆಯ ಪುನಃ ಸ್ಮೃತಿಯಾಗಿರಬಹುದು. ಅಥವಾ ಚಿನ್ನಮ್ಮ—

ಮುಕುಂದಯ್ಯ ಇವರ ಜನ್ಮಾಂತರ ಸಂಬಂಧದ ಘಟನೆಯಾಗಿರಬಹುದು. ಅಥವಾ ತಿಮ್ಮಿಯ ಭ್ರಮೆಯೇ ಇರಬಹುದೆಂದು ಕೃತಿಕಾರರು ಈ ಘಟನೆಯನ್ನು ವ್ಯಾಖ್ಯಾನಿಸುತ್ತಾರೆ. ಕೃತಿಯಲ್ಲಿ ಇತರ ಭಾಗಗಳಲ್ಲಿ ಬಂದಿರುವ ವಿವರಗಳ—ಘಟನೆಗಳ ಆಧಾರದ ಮೇಲೆ ಊಹಿಸಬಹುದಾದರೆ ಇದು ತಿಮ್ಮಿಯ ಭ್ರಮೆಯೆಂಬಂತೆ ನಮಗೆ ತೋರುವುದಿಲ್ಲ. ಇಲ್ಲಿ ಕೃತಿಕಾರರು ಏನನ್ನು ಚಿತ್ರಿಸುತ್ತಿದ್ದಾರೆಂದರೆ ಆದಿ ದಂಪತಿಗಳಿಂದ ಹಿಡಿದು ಇಂದಿನ ತನಕವೂ ಮಾನವಲೋಕದಲ್ಲಿ ಹೇಗೆ, ಯಾವ ಯಾವ ರೂಪು ಪಡೆದು ವಿವಿಧ ಕಾಲಗಳಲ್ಲಿ "ಪ್ರಣಯ ಪರಿವೇಷದ ಮಹಿಮೆ" ಪ್ರಕಟವಾಗುತ್ತಿದೆಯೆಂಬುದನ್ನು. ಎಂದರೆ ಈ ಘಟನೆಯ ಮೂಲಕ ಕೃತಿಯು ಒಂದು ಸೀಮಿತ ಕಾಲದಲ್ಲಿ ಮತ್ತು ಸಂಕುಚಿತ ಸ್ಥಳದಲ್ಲಿ ಗುತ್ತಿ—ತಿಮ್ಮಿ ಹಾಗೂ ಮುಕುಂದಯ್ಯ—ಚಿನ್ನಮ್ಮ ಇವರುಗಳಿಗಾಗುವ ಇಂದಿನ ಅನುಭವದಲ್ಲಿ (ಪ್ರಣಯ—ಪ್ರಣಯ ರಕ್ಷಣೆಗಾಗಿ ನಡೆಸುವ ಹೋರಾಟ, ಇತ್ಯಾದಿಗಳಲ್ಲಿ) ಎಂದೆಂದೂ ಘಟಿಸತಕ್ಕಂತಹ ಕಾಲಾತೀತ ಮೌಲ್ಯವನ್ನು ಗುರುತಿಸುತ್ತದೆ.

ದುಃಖ ಎನ್ನುವುದು ತ್ಯಾಗ ಅಲ್ಲ. ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೆಯೋ ಅದೇ ನಿಜವಾದ ತ್ಯಾಗ.

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ಗಾಂಧೀಜಿ

ಕುವೆಂಪು ಕಾವ್ಯ: ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಅಂಶಗಳು

ಜಿ. ಟಿ. ನಾರಾಯಣರಾವ್*

ಎಲ್ಲವನ್ನೂ ಒಳಗೊಂಡಿರುವುದು ವಿಶ್ವ. ಆದ್ದರಿಂದ ವಿಶ್ವದ ಹೊರಗೇನಿದೆ ಅಥವಾ ವಿಶ್ವ ಎಲ್ಲಿ ನೆಲಸಿದೆ ಎಂಬ ಪ್ರಶ್ನೆಗಳಿಗೆ ಅರ್ಥ ಇಲ್ಲ. ವಿಶ್ವದಲ್ಲಿ ಮೂರು ಮುಖ್ಯ ಗುಣಗಳನ್ನು ಗುರುತಿಸ ಲಾಗಿದೆ:

* 'ನಾನು' ಎಂದರೇನೆಂಬ ಜಿಜ್ಞಾಸೆಯಿಂದ ತೊಡಗಿ ನನ್ನಿಂದ ಹೊರಗಿನ ವಿಶ್ವವನ್ನು ಅರಿಯಲೆಳಸುವ ನನ್ನ ಚೇತನ. ಇದು ನನ್ನೊಳಗಿರುವ ಆತ್ಮ. ಇದರ ಲಕ್ಷಣಗಳೇನು? ದೇಹದಿಂದ ಪ್ರತ್ಯೇಕವಾದ ಅಸ್ತಿತ್ವ ಇದಕ್ಕಿದೆಯೇ? ವಿಜ್ಞಾನದ ವಿವಿಧ ಪ್ರಯೋಗಗಳಿಗೆ ಇದನ್ನು ಒಳಪಡಿಸಿ ಇದರ ಗುಣಧರ್ಮಗಳನ್ನು ತಿಳಿಯಲಾದೀತೇ? ಇದನ್ನು ಕತ್ತಿ ತುಂಡರಿಸದು, ಬೆಂಕಿ ಸುಡದು, ನೀರು ಒದ್ದೆಮಾಡದು ಅಥವಾ ಗಾಳಿ ಒಣಗಿಸದು. ಇದು ಅವಿನಾಶಿ (ಗೀತಾ ೨–೨೩, ೩೦). ಆದರೂ ಇದು ಇದ್ದೇ ಇದೆ ಎಂದು ನನ್ನ ನಂಬಿಕೆ. ಜೀವಿ ಮರ್ತ್ಯವಾದರೂ ಜೀವ ಅಮರ ಎಂಬ ಸಂಗತಿ ನನ್ನ ಸುತ್ತಮುತ್ತಲಿನ ಜೀವಿ ಪ್ರಪಂಚದಿಂದ ನನಗೆ ತಿಳಿದು ಬಂದಿದೆ. ಇದೇ ನನ್ನ ನಂಬಿಕೆಯ ಆಧಾರ. ಆತ್ಮವನ್ನು ಕುರಿತ ಅಧ್ಯಯನ, ಅಂದರೆ ಅಧ್ಯಾತ್ಮ, ಈ ನಂಬಿಕೆಯ ಮೇಲೆ ನೆಲಸಿದೆ.

* ಆತ್ಮದಿಂದ ಭಿನ್ನವಾಗಿ ನನ್ನ ದೇಹವಿದೆ. ನೋವು ನಲಿವು ಅಥವಾ ಶೀತ ಶಾಖ ಎಂಬ ವಿವಿಧ ಉದ್ದೀಪನೆಗಳಿಗೆ ಇದು ಯುಕ್ತ ಅನುಕ್ರಿಯೆಗಳನ್ನು ಪ್ರದರ್ಶಿಸುತ್ತದೆ. ಇವು ಇಂದ್ರಿಯಜನ್ಯ ಮತ್ತು ಇಂದ್ರಿಯ ನಿಯಂತ್ರಿತ ಕ್ರಿಯೆಗಳು. ವೈಜ್ಞಾನಿಕ ಪರೀಕ್ಷೆಗಳಿಗೆ ಒಳಪಡುತ್ತವೆ. ವಿಶ್ವದಲ್ಲಿ ನನ್ನ ದೇಹವಲ್ಲದೆ ಇತರ ವಸ್ತುಗಳೂ ಅಸಂಖ್ಯವಾಗಿವೆ: ಪ್ರಾಣಿ, ಸಸ್ಯ, ನೀರು, ಗಾಳಿ, ಚಂದ್ರ, ಸೂರ್ಯ,

ನಕ್ಷತ್ರ ಮುಂತಾದವು. ಈ ಒಟ್ಟು ಸಮುದಾಯ ವಾಸ್ತವತೆ. ಇದರ ಮೇಲೆ ನೆಲಸಿರುವ ಭೌತವಿಶ್ವದ ಅಧ್ಯಯನ ಅಧಿಭೌತ.

* ವಿಶ್ವದ ವಿದ್ಯಮಾನಗಳನ್ನು ಸುದೀರ್ಘಕಾಲ ಚಿಕಿತ್ಸಕ ಬುದ್ಧಿಯಿಂದ ಪರಾಂಬರಿಸಿದಾಗ ಅವುಗಳಲ್ಲಿ ನಿರ್ದಿಷ್ಟ ಕ್ರಮ ಅಥವಾ ಲಯ ಅಂತರ್ಗತವಾಗಿರುವುದು ವೇದ್ಯವಾಗುತ್ತದೆ. ಋತುಗಳ ಮುನ್ನಡೆ, ಚಂದ್ರನ ನವುರು ಲಾಸ್ಯ, ಪರ್ವತ ಸಾಗರಗಳ ಜೀವನಯಾತ್ರೆ, ಬದುಕು ಜಟಕಾ ಬಂಡಿಯ ಉರುಳಾಟ, ಪರಮಾಣುಲೋಕದ ಅಗೋಚರ ಕ್ರಿಯೆಗಳು ಎಲ್ಲದರಲ್ಲಿಯೂ ಸದಾ ಅನುರಣಿಸುತ್ತಿರುವ ಕ್ರಮ ಅಥವಾ ಲಯ ಬೆರಗುಗೊಳಿಸುವಂತಿದೆ. ಎಲ್ಲಿ ಕ್ರಮವಿದೆಯೋ ಅಲ್ಲಿ ಬುದ್ಧಿಶಕ್ತಿ ಇದೆಯೆಂಬುದು ನಮ್ಮ ಅನುಭವ. ಆದ್ದರಿಂದ ಈ ವಿಶ್ವವ್ಯಾಪಿ ಕ್ರಮದ ಹಿನ್ನೆಲೆಯಲ್ಲಿ ಪ್ರಚಂಡ ಬುದ್ಧಿಶಕ್ತಿ ಸ್ಪಂದಿಸುತ್ತಿರಬೇಕೆಂದು ತರ್ಕಿಸುತ್ತೇವೆ. ಇದರ ದೈತ್ಯ ತ್ರಾಣ, ಅಗಾಧ ವ್ಯಾಪ್ತಿ ಅಥವಾ ಘನ ಉದ್ದೇಶ ಎಂದೂ ನಮ್ಮ ಮಂದ ಸಂವೇದನೆಗಳ ಮತ್ತು ಇವುಗಳಿಗೆ ನೆರವು ಊಡುವ ವೈಜ್ಞಾನಿಕೋಪಕರಣಗಳ ಪರಿಧಿಯೊಳಗೆ ಬರಲಾರವು. ನಾಶರಹಿತ, ಅಗಮ್ಯ ಮತ್ತು ಅಪಾರವಾದ ಈ ಕ್ರಮ ಪೌರುಷಕ್ಕೆ ದೈವವೆಂದು ಹೆಸರು. ಅಧಿಭೌತದ ಅನ್ವೇಷಣಫಲವಾಗಿ ಸ್ಫುರಿಸುವ ಅಮೂರ್ತ ಭಾವವಿದು—ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ ಎಂದೂ ಹೇಳುವುದುಂಟು. ಇದನ್ನು ಕುರಿತ ಅಧ್ಯಯನವೇ ಅಧಿದೈವ.

ಪ್ರಾಚೀನ ಭಾರತೀಯ ಚಿಂತನಾನುಸಾರ ರೂಪುಗೊಂಡಿರುವ ತಾರ್ಕಿಕ—ಪ್ರಾಯೋಗಿಕವಲ್ಲ—ಸಂಬಂಧವಿದು: ಅಧ್ಯಾತ್ಮ, ಅಧಿಭೌತ, ಅಧಿದೈವ ಪರಿಕಲ್ಪನೆ. ಅಧಿದೈವಕ್ಕೂ ಅಧಿಭೌತಕ್ಕೂ ನಡುವಿನ ಸೇತುವೆಯಾಗಿ, ಅಜ್ಞಾತಕ್ಕೂ ಜ್ಞಾತಕ್ಕೂ ನಡುವಿನ ಬಂಧವಾಗಿ ಮತ್ತು ಪರಲೋಕಕ್ಕೂ ಇಹಲೋಕಕ್ಕೂ ನಡುವಿನ ವ್ಯಾಖ್ಯಾನವಾಗಿ ಅಧ್ಯಾತ್ಮವಿದೆ.

ಈ ಪರಿಕಲ್ಪನೆಗಳ ಹಾಗೂ ಇವುಗಳ ನಡುವಿನ ಸಂಬಂಧದ ತಳದಲ್ಲಿ ಪ್ರಖರ ಮತಿಗಳ ಖಚಿತ ತಾರ್ಕಿಕ ಚಿಂತನೆ ಕಾಣುತ್ತೇವೆ. ವೈಜ್ಞಾನಿಕ ಮನೋಧರ್ಮ ಹೇಗೆ ವಿಜ್ಞಾನೇತರ ಕ್ಷೇತ್ರಗಳಲ್ಲಿಯೂ ಯಶಸ್ವಿಯಾಗಿ ಪಾತ್ರ ನಿರ್ವಹಿಸಬಲ್ಲದೆಂಬುದನ್ನು ಗುರುತಿಸುತ್ತೇವೆ. ಅಂದ ಮಾತ್ರಕ್ಕೆ ಅಧ್ಯಾತ್ಮ ಖಂಡಿತವಾಗಿಯೂ ವಿಜ್ಞಾನ (ಭೌತ ವಿಜ್ಞಾನ, ದೇಹವಿಜ್ಞಾನ, ಗಣಿತ ಇತ್ಯಾದಿ ಅರ್ಥದಲ್ಲಿ) ಅಲ್ಲ; ಇದರ ಒರೆಗಲ್ಲು ಪ್ರಯೋಗ ಅಲ್ಲ; ಬದಲು, ಋಷಿ ಮುನಿಗಳ ಮತ್ತು ಸಾಧು ಸಂತರ ಪ್ರಮಾಣ ವಾಕ್ಯಗಳು ಎಂಬ ಮುಖ್ಯ ಸಂಗತಿಯನ್ನು ಮರೆಯಬಾರದು. ಇವರು ಎಂಥ ತ್ರಿಕಾಲ ಜ್ಞಾನಿಗಳಾಗಿದ್ದರೂ, ಈ ಕಾರಣದಿಂದ, ಇವರ ನಿರೂಪಗಳು ಅಥವಾ ಸೂಕ್ತಿಗಳು ನಿಸರ್ಗ ಕುರಿತ ವ್ಯಾಖ್ಯಾನ ಆಗಬೇಕಾಗಿಲ್ಲ. ಪ್ರಮಾಣ ವಾಕ್ಯಗಳನ್ನು ಗಣಿತದಲ್ಲಿಯ ಆದ್ಯುಕ್ತಿಗಳಂತೆ (axioms) ಅಂಗೀಕರಿಸಿ ಮುಂದೆ ಸಾಗುವುದೊಂದೇ ಅಧ್ಯಾತ್ಮದಲ್ಲಿಯ ಹಾದಿ. ಎಂದೇ ಈ ಮುಂದಿನ ಸೂಕ್ತಿ: ವಿಜ್ಞಾನದ ಅಡಿಪಾಯ ಪ್ರಯೋಗ, ಅಧ್ಯಾತ್ಮದ ಅಡಿಪಾಯ ನಂಬಿಕೆ.

೨

ಕಾವ್ಯ ಎಂದರೇನು? "ಬಾಳ್ಗಬ್ಬದೊಳ್ ಕರುಣೆ ತಾಂ ಬೇನೆಗುದಿದೊಡಮಲ್ತೆ ಮೊರೆದಪುದು ಮಹಾಕಾವ್ಯ ಶಿಶು ತಾಂ ಚಾರು ವಾಗ್ವೈಖರಿಯ ಛಂದಶ್ಶರೀರದಿಂ?" (ಶ್ರೀ ರಾಮಾಯಣ ದರ್ಶನಂ, ಅ.ಸಂ ೧, ೩೩-೩೪.) ಅದು ಪ್ರತಿಭೆಯ ಜೀವಂತ ಮೂಸೆಯಲ್ಲಿ ರಸಪಾಕಗೊಂಡ ಅನುಭವದ ಲಿಪಿರೂಪ. ಆದ್ದರಿಂದ ಉತ್ತಮ ಕಾವ್ಯ ಸಹೃದಯ ರಸಿಕನಿಗೆ ಏಕಕಾಲದಲ್ಲಿ ಹಲವು ಸ್ತರಗಳಲ್ಲಿ ಅರ್ಥಪೂರಣ ಮಾಡಿ ಉಲ್ಲಾಸವನ್ನೂ ಸಂಸ್ಕಾರವನ್ನೂ ಒದಗಿಸುತ್ತದೆ. ಇಂಥ ಪ್ರತಿಯೊಂದು ಅನುಭವವೂ ಮೂರ್ತ 'ಇಲ್ಲಿ'ಂದ ತೊಡಗಿ ಅಮೂರ್ತ'ಅಲ್ಲಿ'ಗೆ ವಾಯುಯಾನಗೈದು ಅನುಪಮ ಸೌಂದರ್ಯಾಸ್ವಾದನೆ ಮಾಡಿ ಬಳಿಕ ಮೂರ್ತ 'ಇಲ್ಲಿ'ಗೇ ಮರಳುತ್ತದೆ–ಆಕಾಶ ಲಾಳಿಯಂತೆ (space shuttle). ಇಲ್ಲಿಯ ಯಾನಿ ಅಧ್ಯಾತ್ಮ, 'ಇಲ್ಲಿ' ಅಧಿಭೌತ ಮತ್ತು 'ಅಲ್ಲಿ' ಅಧಿದೈವ. ಆದ್ದರಿಂದ ಛಂದಸ್ಸಿನ ಲಯವಿನ್ಯಾಸಕ್ಕೆ ಒಳಪಟ್ಟಿರುವ ಒಂದು ಲಿಪಿ ಶ್ರೇಣಿ ಎಷ್ಟರ ಮಟ್ಟಿಗೆ 'ಕಾವ್ಯ' ಆಗಿದೆ ಎನ್ನುವುದು ಅದರಲ್ಲಿ ಆಧ್ಯಾತ್ಮಿಕತೆ ಹೇಗೆ ಎರಕಗೊಂಡು ಅದರ ಅಂತಸ್ಸತ್ತ್ವವಾಗಿ ಅನುರಣಿಸುತ್ತದೆ ಎಂಬುದನ್ನು ಅವಲಂಬಿಸಿದೆ.

೩

ಈ ದೃಷ್ಟಿಯಿಂದ ಕುವೆಂಪು ಅವರ ಕಾವ್ಯದ ಕೆಲವು ಸಾಲುಗಳನ್ನು ಪರೀಕ್ಷಿಸೋಣ :

ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ
ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮುಂ
ನೀಡಿ.

ಶ್ರೀ ರಾಮಾಯಣ ದರ್ಶನಂ ಅ. ಸಂ. ೩, ೧೩೭-೧೩೪

ಒಂದನೆಯ ಸ್ತರದಲ್ಲಿ ಕಥೆ. ಮಂಥರೆಯ 'ಮಮತೆಯ ಸುಳಿ'ಗೆ ಸಿಕ್ಕ ಕೈಕೆ ಹೇಗೆ ದಶರಥನನ್ನು ವಚನಪಾಲನೆಯ ಯಮಪಾಶದಿಂದ ಕಟ್ಟಿ ಜಗ್ಗಿ ರಾಮಾಯಣದ ಅನಿರೀಕ್ಷಿತ ತಿರುವಿಗೆ ಕಾರಣಳಾಗುತ್ತಾಳೆ ಎನ್ನುವುದಕ್ಕೆ ಇದು ನಾಂದಿ.

ಎರಡನೆಯ ಸ್ತರದಲ್ಲಿ ಇದು ವೈಜ್ಞಾನಿಕ ರೂಪಕವಾಗಿ ಸ್ಪಂದಿಸುತ್ತದೆ. ನಮಗೆ ಚಲನಸ್ವಾತಂತ್ರ್ಯವಿದೆ ನಿಜ. ಆದರೆ ಈ 'ಸ್ವಾತಂತ್ರ್ಯ ಭಾವ' ಕೇವಲ ಭ್ರಮೆ. ವಾಸ್ತವವಾಗಿ ನಾವು ಭೂಮಿಬಂಧಿತರಾಗಿದ್ದೇವೆ. ಸಡಿಲವಾಗಿ ಸೇರಿಕೊಂಡಿರುವ ನೀರಿನ ಅಣುಗಳ ಮತ್ತು ಅತಿ ಚಟುಲತೆಯ ವಾಯುಕಣಗಳ ಪರಿಸ್ಥಿತಿಯೂ ಇದೇ. ಹೀಗೆ ಭೂಮಿ ನಮಗೆಲ್ಲ 'ಇಚ್ಛೆಯಾ ಸ್ವಾತಂತ್ರ್ಯ ಭಾವಮುಂ ನೀಡಿ'ದ್ದರೂ ನಮ್ಮನ್ನು 'ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿ'ಂದ ಕಟ್ಟಿಹಾಕಿದೆಯೋ ಅನ್ನಿಸುತ್ತದೆ. ಈ 'ತಂತ್ರ' ಬೇರಾವುದೂ ಅಲ್ಲ ಸಾಕ್ಷಾತ್ ಗುರುತ್ವಾಕರ್ಷಣೆ ಎಂಬ ಸಂಗತಿ ಇಂದು ಶಾಲಾವಿದ್ಯಾರ್ಥಿಗಳಿಗೆ ಕೂಡ ಗೊತ್ತಿದೆ.

ಮೂರನೆಯ ಸ್ತರದಲ್ಲಿ ಇದು ಆಧ್ಯಾತ್ಮಿಕ ಭಾವನೆಯಾಗಿ ಅನುರಣಿಸುತ್ತದೆ. ಇಲ್ಲಿ 'ವಿರಾಣ್ಮನಂ' ಅಧಿದೈವ, 'ಜಗ' ಅಧಿಭೌತ, 'ಜೀವಿ' ಅಧ್ಯಾತ್ಮ. ಇವುಗಳ ನಡುವಿನ ಸಂಬಂಧ ಹೇಗಿದೆ? ಜೀವಿಗೆ ಸ್ವಾತಂತ್ರ್ಯವಿದೆ—ಒಂದು ಮಿತಿಯವರೆಗೆ, ಅಂದರೆ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಅವಶ್ಯಕವಾದ ಪ್ರಯತ್ನಗಳಲ್ಲಿ ಮಗ್ನವಾಗುವಲ್ಲಿಯ ವರೆಗೆ. ಮುಂದೇನು? ಆ ವಿರಾಣ್ಮನದಲ್ಲಿ ಲೀನವಾಗುವುದೇ ಗುರಿ. ಅದು ಮೋಕ್ಷ ಅಲ್ಲಿ ಅಧ್ಯಾತ್ಮ ಮತ್ತು ಅಧಿಭೌತ ತಮ್ಮ ಪ್ರತ್ಯೇಕತ್ವ ಕಳೆದುಕೊಂಡು ಅಧಿದೈವದಲ್ಲಿ ವಿಲೀನವಾಗಿರುತ್ತವೆ.

ರಾವಣನನ್ನು ಅಧ್ಯಾತ್ಮಕ್ಕೂ ಸೀತೆಯನ್ನು ಅಧಿಭೌತಕ್ಕೂ ರಾಮನನ್ನು ಅಧಿ ದೈವಕ್ಕೂ ಸಮೀಕರಿಸಿದರೆ

> ಪವಿತ್ರತಮು ರಕ್ಷೆ, ಸೀತಾಪ್ರಿಯು ರಾವಣಾತ್ಮಕೆ ಮಹೋದಾರ
> ವಕ್ಷಮಲ್ಲದೆ, ಬೇರೆ ತಾಣಂಗಳಿನ್ನೊಳವೆ ಪೇಳ್
> ಬ್ರಹ್ಮಾಂಡ ಮಂಡಲದಿ
>
> ಶ್ರೀರಾದ, ಶ್ರೀಸಂ, ೯, ೨೨೨-೨೨೫

ಹೀಗೆ 'ರಾಮಾವತಾರಕಿಂ ಗುರುತರಂ ತಾನೈಸೆ ರಾಮಾಯಣಾವತಾರಂ' ಎಂಬುದು ಸ್ಫುರಿಸುತ್ತದೆ.

೪

ಮಹಾಕಾವ್ಯದ ಮಹಾಛಂದಸ್ಸಿನ ಮಹಾಗತಿಯನ್ನು ಬಿಟ್ಟು 'ಅನಿಕೇತನ'ದ ಒಂದು ನುಡಿಯಲ್ಲಿ ನಿಕೇತನ ಹೂಡೋಣ :

> ಎಲ್ಲಿಯೂ ನಿಲ್ಲದಿರು
> ಮನೆಯನೆಂದೂ ಕಟ್ಟದಿರು
> ಕೊನೆಯನೆಂದೂ ಮುಟ್ಟದಿರು
> ಓ ಅನಂತವಾಗಿರು
> ಓ ನನ್ನ ಚೇತನ
> ಆಗು ನೀ ಅನಿಕೇತನ

ಒಂದನೆಯ ಸ್ತರದಲ್ಲಿ ಇದು ಒಬ್ಬ ಪರಿವ್ರಾಜಕನ ಭೌತ ಅನುಭವವನ್ನು ಪ್ರತಿಬಿಂಬಿಸುವ ಸಾರ್ವಕಾಲಿಕ ಸೂತ್ರ. ಆತ ತೀರ್ಥಕ್ಷೇತ್ರ ಸಂದರ್ಶನಾರ್ಥ ಸದಾ ಹಾದಿ ಸವೆಸುತ್ತಿರುವ ಯಾತ್ರಿ ಆಗಿರಬಹುದು, ತಿಂಗಳಿನೂರಿಗೆ ಪಯಣವ ಮಾಡಿ ಮುಂದೊಂದು ದಿನ 'ಮಂಗಲೋಕದ ಅಂಗಳಕೇರಿ' ವಿಶ್ವಸಂಚಾರಿಯಾಗಲು ಬಯಸು ತ್ತಿರುವ ಆಕಾಶಯಾನಿ ಆಗಿರಬಹುದು ಅಥವಾ ಜ್ಞಾನಮೇರುವನ್ನು ಉತ್ತರಿಸಿ ಮತ್ತೂ ಮೇಲಕ್ಕೆ ಏರಲು ತವಕಿಸುತ್ತಿರುವ ಸತ್ಯಶೋಧಕ ನಚಿಕೇತನೇ ಆಗಿರಬಹುದು.

ಇವರೆಲ್ಲರ ಅದಮ್ಯ ಸಾಹಸದ ಪ್ರೇರಕ ಬಲ ಒಂದೇ: ಸದಾ ಅನ್ವೇಷಣೆ, ಮಮಕಾರದ ನಿರ್ಮೂಲನೆ, ವಿಶ್ರಾಂತಿಯ ಉತ್ಪಾಟನೆ.

ಎರಡನೆಯ ಸ್ತರದಲ್ಲಿ ಇದು ಬೆಳಕಿನ (ವ್ಯಾಪಕವಾಗಿ, ವಿಕಿರಣ radiation, ಆಕಾಶಕಾಯಗಳಿಂದ ಮಾಹಿತಿಗಳನ್ನು ಹೊತ್ತು ವಿಶ್ವಸಂಚಾರಗೈಯುತ್ತಿರುವ ಶಕ್ತಿ ಪ್ರಕಾರ) ಗುಣಧರ್ಮಗಳನ್ನು ಪ್ರತೀಕಿಸುತ್ತದೆ. 'ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ'—ಇದು ಬೆಳಕಿನ ಧರ್ಮ. ಚಲನೆ ಅದರ ಉಸಿರು, ನಿಶ್ಚಲತೆ ಸಾವು. ಬೆಳಕು ಎಲ್ಲಿಯೂ (ಉದಾಹರಣೆ ನೀರಿನಂತೆ) ಹೆಪ್ಪುಗೂಡುವುದಿಲ್ಲ. ಅದರ ಪಯಣಕ್ಕೆ ಕೊನೆ ಎಂಬುದಿಲ್ಲ. ಭೂಮಿಯಿಂದ ೧೬೬,೦೦೦ ಜ್ಯೋತಿರ್ವರ್ಷ (light-year) ದೂರದಲ್ಲಿ ಅಷ್ಟು ವರ್ಷಗಳ ಹಿಂದೆ ಸಂಭವಿಸಿದ ಸೂಪರ್ನೋವಾ ಆಸ್ಫೋಟನೆಯ ವಾರ್ತೆ ೧೯೮೭ ರಲ್ಲಿ ನಮಗೆ ತಿಳಿಯಿತು: ಅಲ್ಲಿಂದ ಹೊರಟ ವಿಕಿರಣ ಎಲ್ಲಿಯೂ ನಿಲ್ಲದೇ ಮನೆಯನ್ನು ಕಟ್ಟದೇ, ಕೊನೆಯನ್ನು ಮುಟ್ಟದೇ ಚೇತನರೂಪಿಯಾಗಿ ನಮ್ಮಲ್ಲಿಗೆ ಬಂದು ಮತ್ತೆಯೂ ಮುಂದಕ್ಕೆ ಹೋದದ್ದರಿಂದ.

ಮೂರನೆಯ ಸ್ತರದಲ್ಲಿ ಇದರ ಆಧ್ಯಾತ್ಮಿಕ ಸಾರ್ಥಕ್ಯವನ್ನು ಗುರುತಿಸಬಹುದು. ಅಧ್ಯಾತ್ಮಕ್ಕೆ ನೀಡಿರುವ ಉಪದೇಶವಿದು. ಇಲ್ಲಿ ಮನೆ ಅಥವಾ ಕೊನೆ ಅಧಿಭೌತ. ನಾವೆಲ್ಲ ದೇಹವೆಂಬ ಮನೆಗಳಲ್ಲಿ ಬಂಧಿತರಾಗಿದ್ದೇವೆ, ಈ ಭೂಮಿಗೆ ಸೀಮಿತರಾಗಿದ್ದೇವೆ. ಆದರೆ ಇದು ಕೊನೆಯಲ್ಲ. ಅಧಿದೈವದಲ್ಲಿ ಸಾಯುಜ್ಯವೈದುವ ತನಕ 'ಎಲ್ಲಿಯೂ ನಿಲ್ಲದಿರು!' ಹಾಗೆ ಆದಾಗ, 'ಓ ನನ್ನ ಚೇತನ' ನೀನಾಗುವೆ ಅನಿಕೇತನ ಮತ್ತು ಅನಂತ.

೫

ಉತ್ತಮ ಕಾವ್ಯ ಸಮರ್ಥ ಗಣಿತ ಸೂತ್ರದಂತೆ: ಉಭಯ ತಳಗಳಲ್ಲಿಯೂ ಇರುವ ಘನದ್ರವ್ಯ ಒಂದೇ—ಜೀವನಾನುಭವ. ಇವುಗಳ ಉದ್ದೇಶ ಸಾರ್ವತ್ರಿಕತೆ. ಕುವೆಂಪು ಅವರ ಒಂದು ನುಡಿ:

ಎಲ್ಲ ಸುಚಂಚಲ
ಒಂದೆ ಅಚಂಚಲ
ನಿನ್ನ ಚರಣತಲ ಭಕ್ತಿಬಲ
ಎಲ್ಲ ಬಲಗಳಿಗೆ
ತಾಮೂಲದ ಬಲ
ಸಕಲತಪೋತರು ಪರಮ ಫಲ

ಇದರಲ್ಲಿ ಅನುರಣಿಸುತ್ತಿರುವ ಭಾವನೆಗೂ ಐನ್‌ಸ್ಟೈನರ ಪ್ರಸಿದ್ಧ ರಾಶಿ-ಶಕ್ತಿ ಸಮತೆ ಸಮೀಕರಣ

$$E = mc^2$$

ಇದರಲ್ಲಿ ಸುಪ್ತವಾಗಿರುವ ಭಾವನೆಗೂ ನಡುವೆ, ಉಭಯ ವಿಷಯಗಳನ್ನೂ ಅರ್ಥವಿಸ ಬಲ್ಲ ಸಹೃದಯ ಮತಿಗೆ, ಯಾವ ವ್ಯತ್ಯಾಸವೂ ಕಾಣುವುದಿಲ್ಲ; ಶಕ್ತಿ ಸದಾ ಚಂಚಲ (ಇದು E); ರಾಶಿ ಸದಾ ಅಚಂಚಲ (ಇದು m); ಆದರೆ ಈ ಎರಡನ್ನೂ ಬಂಧಿಸಿ ಸಂಬಂಧಿಸುವ ಮೂಲದ್ರವ್ಯವೊಂದಿದೆ—ಅದು ಬೆಳಕಿನ ವೇಗ (c); ಇವುಗಳ ನಡುವಿನ ಅವಿನಾಸಂಬಂಧವೇ ($E = mc^2$) ಇಲ್ಲಿಯ 'ಮೂಲದ ಬಲ ಸಕಲ ತಪೋತರು ಪರಮ ಫಲ.'

ಶ್ರೇಷ್ಠ ಕವಿ ಒಬ್ಬ ಗಣಿತ ಪ್ರತ್ಯುತ್ಪನ್ನಮತಿಯೂ ಹೌದು, ಶ್ರೇಷ್ಠ ಗಣಿತವಿದ ಒಬ್ಬ ರಸಋಷಿಯೂ ಹೌದು. ಏಕೆಂದರೆ ಉಭಯರ ಮೂಲದ್ರವ್ಯವೂ ಸೃಜನ ಶೀಲತೆ. ಈ ದೃಷ್ಟಿಯಿಂದ ಕುವೆಂಪು ವಾಙ್ಮಯವನ್ನು ವ್ಯಾಪಕವಾಗಿ ಅನ್ವೇಷಿಸಲು ಸಮೃದ್ಧ ಅವಕಾಶವಿದೆ. ಇಲ್ಲಿ ಮಾಡಿರುವುದು ಕೇವಲ ಒಂದು ಪ್ರಯತ್ನ.

ಪಂಪಕುಮಾರವ್ಯಾಸರ
ಪೆಂಪಿನ ನುಡಿಗಳ ನಿವಾಸ ಕನ್ನಡ ದೇಶಂ
ಕಂಪಿಂ ಕತ್ತೂರಿಯಾಗಿಹು
ದಿಂಪಿಂ ಪಿಕದುಲಿಯಿದು ಸಿರಿಗನ್ನಡಗೆಲ್ಗೇ

ಮಕ್ಕಳು, ಯುವಕರು ಮತ್ತು ಮಹಿಳೆಯರು—ಎಲ್ಲರೂ ಸರಿಸಮಾನ ವಾಗಿ ಬೆಳೆಸಿಕೊಳ್ಳಬಹುದಾದ ಶಕ್ತಿ ಅಂದರೆ ಅಹಿಂಸೆ.

ಗಾಂಧೀಜಿ

ಮಹಾದರ್ಶನ ಮತ್ತು ಪ್ರಾಯಶ್ಚಿತ್ತಾದಿ ಕೃತಿಗಳಲ್ಲಿಯ ಉಪಮೆಗಳು

ಎಂ. ಎನ್. ಲಿಂಗಪ್ಪ

'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬುದೊಂದು ಮಾತು; ಮಲ್ಲಿಗೆ ಬೆಳೆದು ಪಲ್ಲವಿಸುವುದು ಬೇರಿನಮೂಲಕವೆ, ತಾಜ್ ಮಹಲ್ ಸ್ಮಾರಕದ ಭವ್ಯತೆ ಮೂಡುವುದು ಸಾಮಾನ್ಯವಾದ ಇಟ್ಟಿಗೆ ಕಲ್ಲುಗಳಿಂದಲೆ; ಪ್ರತಿಯೊಂದರ ಭವ್ಯತೆಯ ಅಡಿಯಲ್ಲಿ ಕಿರಿಯದರ ಕಾಣಿಕೆ ಇದ್ದೇ ಇರುತ್ತದೆ. ಹಾಗೆಯೇ, 'ಶ್ರೀ ರಾಮಾಯಣ ದರ್ಶನಂ' ಕೃತಿಯನ್ನು ನಾಡಿಗೆ ನೀಡಿದ ಕವಿವರ್ಯ ಕುವೆಂಪು ಅವರ ಸಿದ್ಧಿಯ ಹಿಂದೆ ಕೂಡ ಅದೇ ಕ್ರಿಯೆ ಇರಲೇಬೇಕು. ತಾವು ಬರೆದು ಪ್ರಕಟಿಸದೆ ಇರುವ ಅದೆಷ್ಟೋ ಸಾಹಿತ್ಯ ಅವರಲ್ಲಿರಬಹುದು. ಅದನ್ನು ಬೆಳಕಿಗೆ ತರುವುದು ಮುಖ್ಯ. ಈ ನಿಟ್ಟಿನಲ್ಲಿ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಸಹ್ಯಾದ್ರಿ ಪ್ರಕಾಶನದ ಮೂಲಕ 'ಕಥೆಗಳೊಡನೆ ಆರಂಭದಲ್ಲಿ' ಹಾಗೂ 'ಮಹಾದರ್ಶನ ಮತ್ತು ಪ್ರಾಯಶ್ಚಿತ್ತ' ಎಂಬೆರಡು ಕೃತಿಗಳನ್ನು ಹೊರತಂದಿರುವುದು ಶ್ಲಾಘನೀಯ.

ಶ್ರೀ ಕುವೆಂಪು ಅವರ ಪ್ರಾರಂಭದ ಬರವಣಿಗೆಗಳಾದ ಮೇಲೆ ಹೆಸರಿಸಿದ ಕೃತಿಗಳಲ್ಲಿ ಬರುವ ಉಪಮೆಗಳ ಸಮೀಕ್ಷಿಸುವ ವಿನಮ್ರ ಪ್ರಯತ್ನ ಈ ಲೇಖನದ ಉದ್ದೇಶ.

ಶ್ರೀ ಕುವೆಂಪು ಸಾಹಿತ್ಯದ ಉಪಮಾಸಂಪತ್ತೇ ವಿಸ್ಮಯಕಾರಿಯಾದ ಸುಂದರ ಜಗತ್ತು; ಆ ಜಗತ್ತಿನಲ್ಲಿ ವಿಹಾರಗೈಯುವ ಯಾತ್ರಿಕರ ಭಾವಕೋಶ ಶ್ರೀಮಂತವಾಗುತ್ತದೆ; ಸುಪ್ತಕಲ್ಪನಾ ಪ್ರತಿಭೆ ಜಾಗೃತಗೊಳ್ಳುತ್ತದೆ. ಸೃಷ್ಟಿಯ ಅಗೋಚರ ರಹಸ್ಯಗಳು ಮನದಟ್ಟಾಗುತ್ತವೆ[1]. 'ಗಿರಿವನ ಪ್ರಿಯ'ರಾದ ಅವರಿಗೆ ಪ್ರಕೃತಿ ಸಹಜವಾಗಿಯೆ ಮತ್ತುಬರಿಸುತ್ತದೆ. ವೈಜ್ಞಾನಿಕ ಯುಗದಲ್ಲಿ

---

[1] ಮಹಾದರ್ಶನದ ಮುನ್ನುಡಿ—ದೇಜಗೌ

ಜೀವಿಸಿರುವ ಕವಿಗೆ ಆ ಲೋಕಕೂಡ ಕೈಬೀಸಿ ಕರೆಯುತ್ತದೆ; ಸ್ವತಃ ಬೇಟೆಗಾರರಾದ ಅವರನ್ನು ಅದು ವಂಚಿಸೀತೆ? ಬೇಟೆಯಲ್ಲಿ ಸಿಕ್ಕ ಪ್ರಾಣಿಗಳನ್ನು ಮರೆಯಲಾದೀತೆ?— ಹೀಗೆ ಅವರ ಕ್ಷೇತ್ರ ವಿಸ್ತಾರವಾಗುತ್ತಾ ಹೋಗುತ್ತದೆ.

ಮಲೆನಾಡಿನ ದಟ್ಟಾರಣ್ಯದಲ್ಲಿ ಮೂಡಿದ ಕವಿಗೆ ಪ್ರಕೃತಿಯಿಂದ ದೂರವಾಗುವುದು ಸಾಧ್ಯವಾಗದ ಮಾತು. ಅವರ ಶರೀರ ಉದಯರವಿಯಲ್ಲಿದ್ದರೂ ಮನಸ್ಸು ಮಾತ್ರ ಮಲೆನಾಡಿನ ಗಿರಿಗಳ ಮೇಲೆ ವಿಹಾರ ಗೈಯುತ್ತದೆ ಎಂಬ ಮಾತು ಸತ್ಯ. "ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ ಈ ವನ್ಯಸಂಸ್ಕೃತಿಯ ಮುಂದೆ" ಎಂದು ಶ್ರೀರಾಮನ ಬಾಯಿಂದ ಕವಿ ಆಡಿಸಿದ ಮಾತು ಅವರ ಹೃದಯಾಂತರಾಳದಿಂದ ಹೊರ ಹೊಮ್ಮಿದುದಾಗಿದೆ; ಪ್ರಕೃತಿಯ ನೈಜ ಚಿತ್ರಣ ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ.

> "ನೆತ್ತಿಯೊಳು ಮೋಡಗಳ ಹೊತ್ತು ನಿಂತಿರುವ ಮಲೆನಾಡ ಬೆಟ್ಟದೆಡೆ
> ಕಣಿವೆಗಳ ಮರಹೊಕ್ಕ ಗದ್ದೆಗಳ ತೋಟಗಳ ನೋಟವಂ ಮುಚ್ಚಿ
> ನೊರೆಯೆದ್ದ ವಾರಿಧಿಯ ಹೋಲುತ್ತ, ಕಣ್ ನೋಡುವಲ್ಲಿ ಪರಿಯಂತ
> ಕಂಗೊಳಿಸಿದ ಪಸರಿಸಿದ ಮಂಜಾದ ಬಿಳಿಮಂಜು, ಕತ್ತಲೆ ಹೆಣ್ಣು
> ಉಷೆಯ ಮೌಳಿಯೊಳಿಟ್ಟ ಬಜ್ಜರದ ಮಣಿಯಂತೆ ರವಿಯುದಯ ಮೆರೆಂ
> ಮೆಲ್ಲಮೆಲ್ಲನೆ ಸರಿದು ಸೋಲಿನಲಿ ಮರೆಯಾಗಿ ಹಿಮ್ಮೆಟ್ಟುವಂತೆ [2]"

ಇದು ಬೌದ್ಧ ಧರ್ಮ ಮಸುಳಿ ಶಂಕರರು ಪ್ರಗತಿಯಾಗುತ್ತಿದ್ದ ಸಮಯದಲ್ಲಿ ಕವಿ ಬಳಸಿರುವ ಉಪಮೆ.

ಯೋಗೀಶ ಜ್ಞಾನದಲ್ಲಿ ಕುಳಿತು ಮಹಾದರ್ಶನವನ್ನು ಕಾಣುತ್ತಿದ್ದಾನೆ. ಅವನ ಕಣ್ಣಮುಂದೆ ಭಾರತದ ಇತಿಹಾಸ ರಜತಪರದೆಯ ಮೇಲಿನ ಚಲನಚಿತ್ರದಂತೆ ಸಾಗುತ್ತಿದೆ. ಬೌದ್ಧ ಧರ್ಮ ಅವನತಿಯದಾರಿ ಹಿಡಿಯುತ್ತಿರುವ ಸೂಚನೆಯನ್ನು ನೀಡಲು ಕವಿ ತಮಗೆ ಪ್ರಿಯವಾದ ಪ್ರಕೃತಿಲೋಕದಿಂದಲೇ ಹೋಲಿಕೆಯನ್ನು ತೆಗೆದಿರಿಸಿದ್ದಾರೆ. ಇಡೀ ಚಿತ್ರ ಕಣ್ಣಿಗೆ ಕಟ್ಟನಿಲ್ಲುತ್ತದೆ. ಯಾವುದೇ ಹೊಸ ಪಂಥ ಬಂದರೂ ಹಳೆಯ ಪಂಥ 'ಅಂಗಿಬಿಚ್ಚುವಷ್ಟು' ಸುಲಭವಾಗಿ ಅಳಿಸಲಾರದು. ರವಿ ಉದಯವಾದರೂ ಮಂಜುಕೂಡ ಮಂಗಮಾಯವಾಗದು. ಎಷ್ಟು ಸಮಂಜಸವಾದ ಉಪಮೆ.

ಶಂಕರಾಚಾರ್ಯರ ಪ್ರಾಬಲ್ಯ ಕುರಿತ ಉಪಮೆಯನ್ನು ನೋಡಿ.

> "ನಡುವಗಲ ರವಿಯಂತೆ ಮೆರೆದನಾ ಷಣ್ಮತಸ್ಥಾಪನಾಚಾರ್ಯ" [3]

ಇಲ್ಲಿ ಸೂರ್ಯನ ಪ್ರಖರತೆ ಅವರ ತತ್ತ್ವದ ತೀಕ್ಷ್ಣತೆ, ಪ್ರಬಲತೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ. ಪ್ರಖರವಾದ ಸೂರ್ಯ ತಂಪಾಗುವ ಹಾಗೆ ಶಂಕರರ ಅದ್ವೈತಕ್ಕೂ ಇಳಿಮುಖವುಂಟೆಂಬ ಸೂಚ್ಯತೆಯೂ ಇರುವುದನ್ನು ಗಮನಿಸಬಹುದು.

---

[2] ಮಹಾದರ್ಶನ ಪುಟ ೨೮

[3] ಮಹಾದರ್ಶನ ಪುಟ ೨೮

"ಮಧುಮಾಸದೊಳು ಪೂತ ಮಲ್ಲಿಗೆಯ ಬಳ್ಳಿಯಿಂದಲರುದುರುವಂತೆ
ಹಿಮಗಿರಿಯ ಶಿಖರದಿಂದಮಲ ಗಂಗಾಜಲವು ಹರಿದಿಳಿಯುವಂತೆ"[4]

ಋಷಿಯ ಬಾಯಿಂದ ಹರಿದು ಬಂದ ಶುಭವಚನಗಳ ಶುಭ್ರಧಾರೆ. ಯೋಗೀಶನ ಕಣ್ಣ ಮುಂದೆ ಮೈಸೂರು ರಾಜ್ಯ ಉದಯವಾಗುತ್ತಿದೆ. ಅದನ್ನು ಕಂಡ ಋಷಿಯ ಬಾಯಿಂದ ಮೇಲಿನ ರೀತಿಯ ಆಶೀರ್ವಾದ ಹೊರಸೂಸುತ್ತದೆ. ಇಲ್ಲಿ ಕವಿಗೆ ಮೈಸೂರಿನ ಮೇಲಿರುವ ಪ್ರೀತಿ, ಗೌರವವನ್ನು ಕಾಣಬಹುದು. ಮಲ್ಲಿಗೆ ಸೌಂದರ್ಯದ ಸೂಚಕವಾದರೆ, ಗಂಗಾಜಲ ಪಾವಿತ್ರ್ಯದ ಸಂಕೇತವಾಗುತ್ತದೆ.

"ಚಳಿಗಾಲದ ಮುಂಜಾನೆಯಲ್ಲಿ ತಳಿರಿನಿಂದ ಸೋರುವ ಮುತ್ತಿನಂದದ
ಜಲಬಿಂದುಗಳಂತೆ ಅವಿಚ್ಛಿನ್ನವಾಗುದುರಿದುವು"[5]

ಮುಗ್ಧ ಕಿಶೋರನಿಗೆ ಚಂದ್ರ ತಿಳಿಹೇಳುವ ಸಂದರ್ಭದಲ್ಲಿ ಆವಿರ್ಭವಿಸಿರುವ ಈ ಉಪಮೆಯು ಅತ್ಯಂತ ಸೊಗಸಾಗಿದೆ. ಬಾಲಕನಾಗಿ ಕಾಲಕಳೆಯುತ್ತಿರುವ ಆತನಿಗೆ ದೊಡ್ಡವನಾದ ಮೇಲೆ ಈಗಿನ ಆಟಗಳನ್ನೆಲ್ಲ ಬಿಡಬೇಕಲ್ಲ ಎಂಬ ನೋವಾಗಿರಬಹುದು. ಕಣ್ಣುಗಳಿಂದ ನೀರು ಬರುತ್ತದೆ; ಮುತ್ತಿನಂದದ ಹನಿಗಳು ಧುಮುಕುತ್ತವೆ; ಓದುಗರಿಗೂ ತಮ್ಮ ಬಾಲ್ಯ ನೆನಪಾದರೆ ಹಾಗೆ ಆಗಬಹುದಲ್ಲವೆ?

ಜ್ಞಾನಿ ಯೋಗೀಶನ ಕಣ್ಣಮುಂದೆ ಭಾರತದಲ್ಲಿ ಅಧರ್ಮ ತಾಂಡವವಾಡುತ್ತಿರುವ ವೇಳೆ ಬುದ್ಧನ ಜನನವಾದಾಗ ಬಳಸಿರುವ ಉಪಮೆ ನೋಡಿ:

"ಆಗಲಾ ಘೋರಾಂಧಕಾರದಿಂದುದಿಸಿತು ಮಹಾಜ್ಯೋತಿಯೊಂದು
ಕತ್ತಲೆಯನೋಡಿಸುವ ಉದಯ ಭಾಸ್ಕರನಂತೆ ತಳತಳಸಿ ಬಂದು"[6]

'ಆತ ಕತ್ತಲೆಗೆ ಜ್ಯೋತಿಯಾಗಿ ಉದಿಸಿದ' ಎಂಬ ಮಾತು ಎಷ್ಟು ಸೊಗಸಾಗಿದೆ! ಆತನ ಸಾಧನೆ, ಸಿದ್ಧಿಗಳ ಮುನ್ನೋಟಕ್ಕೆ ಇದಕ್ಕಿಂತ, ಸಮರ್ಥ ಉಪಮೆ ಸಿಕ್ಕೀತೆ? 'ಜ್ಯೋತಿ' ಶುಭದ ಸಂಕೇತ, 'ಸೂರ್ಯ' ಬೆಳಕಿನ ಸಂಕೇತ. ಸೂರ್ಯನಿರುವಾಗ ಕತ್ತಲೆಯ ಮಾತೆಲ್ಲಿ?

ಹೀಗೆ ನೋಡುತ್ತಾ ಹೋದರೆ, ಒಂದೆ ಎರಡೆ ಕವಿ ಪ್ರಕೃತಿ ಲೋಕದಿಂದ ಸೂರೆಗೊಂಡಿರುವ ಉಪಮಾ ಸಂಪತ್ತು. ಮಹಾದರ್ಶನದ ಪ್ರಾರಂಭವೆ ಒಂದು ಸುಂದರವಾದ ನೈಸರ್ಗಿಕೋಪಮೆಯಿಂದ ಪ್ರಾರಂಭವಾಗುತ್ತದೆ. ಶಂಕರರ ಉದಯವಾದಾಗ 'ಚಾರ್ವಾಕ, ಲೋಕಾಯತಿಕ, ನಾಸ್ತಿಕರ ಕಬ್ಬಿಣದ ಕೈಲಿ ಸಿಕ್ಕಿ ನುಗ್ಗುನುರಿಯಾದ ಸಂದರ್ಭದಲ್ಲಿ ಬಳಕೆಯಾಗಿರುವ ಸುಂದರ ನೈಸರ್ಗಿಕೋಪಮೆಯಿಂದ ಈ ಭಾಗವನ್ನು ಮುಗಿಸಬಹುದು.

---

[4] ಅದೇ ಪುಟ ೩೩
[5] ಕಥೆಗಳೊಡನೆ ಆರಂಭದಲ್ಲಿ ಪುಟ ೧೦೦
[6] ಮಹಾದರ್ಶನ ಪುಟ ೨೫

"ಮುಂಗಾರ ಮಳೆಗರೆಯಲುಕ್ಕಿ
ಬೇಸಗೆಯ ತಾಪಮಂ ಮರೆತು ಸಂತಸದಿಂದ ಹರಿವ ಹೊಳೆಯಂತೆ
ವೈಶಾಖಮಾಸದೊಳು ನಡುವಗಲ ಬೆಂಗದಿರಿನಿಂದ ಬಾಯಾರಿ
ಕಾಶಿಯಾತ್ರೆಗೆ ಹೊರಟ ದಾರಿಗಂ ಬಟ್ಟೆಯೆಡೆ, ಕಳಿತು ಹಣ್ಣಾಗಿ
ಹೊಂಬಣ್ಣದಿಂದೆಸೆವ ಕಿತ್ತಳೆಯ ಹಣ್ಣುಗಳ ತೋಟಮಂ ನೋಡಿ
ನೆಚ್ಚಿನಲಿ ನಲಿಯುವಂತುಬ್ಬಿದುವು ಹುಟ್ಟೆಬರಲಾ ಮಹಾಜ್ಞಾನಿ"[7]

ಮಳೆ ಬಂದ ಮೇಲೆ ಹೊಳೆ ಬರಲೇಬೇಕು, ಬೇಸಗೆ ಕಳೆದು ಸಂತಸ ಮೂಡಲೇಬೇಕು. ಶಂಕರರ ಉದಯದಿಂದಲೂ ಈ ರೀತಿಯ ಆನಂದವಾಗುತ್ತದೆ. ಹೊಳೆ ಬೆಳವಣಿಗೆಯ ಸಂಕೇತವಾಗಿ ಬಂದಿದೆ. 'ಕಿತ್ತಳೆಯ ತೋಟ' ಕಾಶಿಯಾತ್ರೆಗೆ ಹೊರಟ ಜನಕ್ಕೆ ಸಂತಸ ನೀಡಿದ ಹಾಗೆ 'ಶಂಕರರ ಜ್ಞಾನವೆಂಬ ಹಣ್ಣು' ಅಂದಿನ ಜನಕ್ಕೆ ತೃಪ್ತಿನೀಡುತ್ತದೆ.

ಪ್ರಾಣಿಲೋಕದಿಂದಲೂ ಆರಿಸಿದ ಅನೇಕ ಉಪಮೆಗಳನ್ನು ನೋಡಬಹುದು. ಅವುಗಳ ಸೊಗಸನ್ನರಿಯಲು ಉದಾಹರಣಾರೂಪದಲ್ಲಿ ಕೆಲವನ್ನು ನೋಡೋಣ.

"ಎಲ್ಲೆಲ್ಲಿ ಒಳ್ಳೆ ಭೂಮಿ ಇತ್ತೋ ಅಲ್ಲಿಗೆ ಒಕ್ಕಲಿಗರು ಜೇನುನೊಣಗಳಂತೆ ಮುತ್ತುತ್ತಿದ್ದರು"

ಇದು 'ಕಥೆಗಳೊಡನೆ ಆರಂಭ'ದಲ್ಲಿನ 'ಅವಶ್ಯವಿದ್ದುದು ಅರಡಿ; ಆಸೆಪಟ್ಟದ್ದು ಊರಿಡಿ' ಕಥೆಯಲ್ಲಿ ಬರುವ ಒಂದು ಉಪಮೆ.

ವ್ಯವಸಾಯವೇ ಬಂಡವಾಳವಾದ ಬಡರೈತನಿಗೆ ಭೂಮಿಯೇ ತಾಯಿ; ಆಕೆಯಿಂದಲೇ ಅನ್ನ, ನೀರು; ಅಷ್ಟೇ ಏಕೆ ಆಕೆಯೆ ಆತನಿಗೆ ಸರ್ವಸ್ವ. ಅದೂ ಉತ್ತಮವಾದ ಭೂಮಿಗೆ 'ಜನ ಜೇನುನೊಣಗಳಂತೆ ಮುತ್ತಿದರು' ಎಂಬ ಮಾತು ಸಮಂಜಸವಾಗಿಯೆ ಬಂದಿದೆ. ಸಂಗ್ರಹ ಜೇನಿನದಾದರೂ ಫಲ ಯಾರಿಗೆ ಎಂದು ನೆನೆದಾಗ ರೈತರ ಶೋಷಣೆಯ ಕಟುಸತ್ಯದ ಸೂಚನೆಯೂ ಅಡಕವಾಗಿರುವುದನ್ನು ಕಾಣಬಹುದು.

ಅದ್ವೈತ ಸಿದ್ಧಾಂತಿಯಾದ ಶಂಕರರ ಉದಯವನ್ನು ಹೇಳುವಾಗ ಬಳಸಿರುವ

"ದಂಡಕಾರಣ್ಯದೊಳು ಸಂಚರಿಪ ವೇದಾಂತ ಕೇಸರಿಯ ತೆರದಿ ಜನಿಸಿದಂ ಶಂಕರಂ"[8]

ಎಂಬ ಉಪಮೆ ಅರ್ಥಪೂರ್ಣವಾಗಿದೆ. ಅಷ್ಟೇ ಅಲ್ಲ ಧ್ವನಿಪೂರ್ಣವಾಗಿದೆ. ಕಾಡಿಗೆ ಸಿಂಹವೇ ರಾಜ. ಅಂದಿಗೆ ಶಂಕರರೆ ಧರ್ಮದ ದೊರೆ ಎಂಬುದೆ ಧ್ವನಿ.

ಜ್ಞಾನಿ ಯೋಗೀಶನ ಕಣ್ಣಮುಂದೆ ಭಾರತದ ಸ್ಥಿತಿಗತಿ ಚಲಿಸುತ್ತಿರುವಾಗ ಆಂಗ್ಲರ ಆಮನವಾದ ದೃಶ್ಯ ಬರುತ್ತದೆ. ಆ ಸಂದರ್ಭದಲ್ಲಿ ಬಳಕೆಯಾಗಿರುವ ಉಪಮೆ ನೋಡಿ:

---

[7] ಮಹಾದರ್ಶನ ಪುಟ ೨೭

[8] ಅದೇ ಪುಟ ೨೭

"ಬಿಳಿಯ ಪಟಗಳ ಬಿಚ್ಚಿ, ಎದೆಯ ಮುಂದಕೆ ಚಾಚಿ ಹಂಸಗಳ ತೆರದಿ
ಗಂಭೀರ ಗಮನದಿಂದೈತರುವಾಂಗ್ಲೇಯ ನಾವೆಗಳ ಮಾಲೆ"[9]

ಭಾರತಕ್ಕೆ ಆಂಗ್ಲರು ಬರುತ್ತಿರುವ ಶಿಸ್ತನ್ನು ಹೇಳಲು ಕವಿ ಹಂಸದ ಮರೆಹೋಗಿ ದ್ದಾರೆ. ಆ ಶಿಸ್ತಿನಲ್ಲಿ ಅವರು ಮುಂದೆ ಸಾಧಿಸಿದ ಸಾಮ್ರಾಜ್ಯದ ವಹಿವಾಟು ಅಡಗಿರು ವುದನ್ನು ಕಾಣಬಹುದು. ಬಿಳಿಯಪಟ, ಹಂಸ ಶುಭದ ಸೂಚನೆ. ಆಂಗ್ಲರ ಆಗಮನ ಭಾರತಕ್ಕೆ ಅಗತ್ಯ ಎಂಬುದು ಕವಿಗಳ ಭಾವನೆ ಇದ್ದರೂ ಇರಬಹುದು.

ಭಾರತದ ಸೊತ್ತಿಗಾಗಿ ಆಂಗ್ಲರು 'ಕೆಂಜಿರುವೆಗಳ ತೆರದಿ' ಮುತ್ತಿದರು ಎಂಬ ಉಪಮೆಯ ಸಾರ್ಥಕತೆ ಎಷ್ಟು ಹೇಳಿದರೂ ತೀರದು. ಇಲ್ಲಿ ಶೋಷಣೆಯ ಚಿತ್ರ ಇರುವು ದನ್ನು ಗಮನಿಸಬಹುದು. ಮೇಲುನೋಟಕ್ಕೆ ಅವರ ಬಣ್ಣವೂ ವ್ಯಕ್ತವಾಗುತ್ತದೆ. ಕೆಂಜಿರುವೆ ಮುತ್ತಿದ ಅನುಭವ ಆಗಿದ್ದರೆ ಇಲ್ಲಿ ಉಪಮೆಯ ವಿಸ್ತರಣಕಾರ್ಯ ಅಗತ್ಯ ಬೀಳಲಾರದು; ಅಷ್ಟೇ ಸಾಕು.

ಪಾಶ್ಚಾತ್ಯರ ವಿಜ್ಞಾನ ಸಾಹಿತ್ಯಗಳು ನಮ್ಮವರನ್ನು ಆಕರ್ಷಿಸಿದ ರೀತಿ:

"ಹಾವುಗಳು ಹಾವಾಡಿಗನ ಕೊಳಲಿನಿಂಚರಕೆ ಮರುಳಾಗುವಂತೆ;
ಹಕ್ಕಿಗಳು ಬೇಡರವನೆರಚಿರುವ ತೆನೆಗಳಿಗೆ ಬಂದೆರಗುವಂತೆ"[10]

ಅವರು ಮಾಡಿದ ಕಪಟ, ತೋರಿಸಿದ ಆಸೆ ಇವೆಲ್ಲವನ್ನು ಈ ಜೋಡಿ ಉಪಮೆಗಳು ಧ್ವನಿಸುತ್ತವೆ. ಒಂದು ಸ್ಪಷ್ಟ ಚಿತ್ರವನ್ನು ಕಣ್ಣಮುಂದೆ ತಂದು ನಿಲ್ಲಿಸುವಲ್ಲಿ ಈ ಉಪಮೆ ಗಳು ಸಾರ್ಥಕತೆಯನ್ನು ಪಡೆದಿವೆ.

ಕತೆಗಾರರು ಮಿತ್ರರೊಡಗೂಡಿ ಆಳು ಲಿಂಗನಿಂದ ಕತೆ ಕೇಳುವಾಗ ಒಳಗಡೆಯಿಂದ ದೊಡ್ಡವರು ಬರುತ್ತಿರುವ ಸೂಚನೆಗಳು ಗೊತ್ತಾಗುತ್ತವೆ. "ಗೂಳಿಗಳು ಗುಟುರು ಹಾಕುವಂತೆ" ಹೊರಡುವ ತೇಗುಗಳ ಆರ್ಭಟವೇ ಎಚ್ಚರಗೊಳ್ಳಲು ಸಾಕು. ಗುಟುರಿನ ಸೂಚನೆಯಲ್ಲಿ ಅವರ ಆರೋಗ್ಯದ ಸ್ಥಿತಿಯ ಜೊತೆಗೆ, ಅವರ ಯಜಮಾನಿಕೆಯ ಗತ್ತು ಗೊತ್ತಾಗುತ್ತದೆ.

"ಅಯ್ಯಾ ಅವರಂತೂ ಕುರಿಯಂಥ ಮನುಷ್ಯರು"

ಇದು ಕಥೆಗಳೊಡನೆ ಆರಂಭದಲ್ಲಿನ ಸಂಕಲನದ ಒಂದು ಕತೆಯಲ್ಲಿ ಬಳಕೆಯಾಗಿರುವ ಉಪಮೆ. ದೂರದಿಂದ ಬಂದ ದಳ್ಳಾಳಿ ಒಬ್ಬ ಬಾಸ್ಕೀರರಿಗೆ ಸೇರಿದ ಜಮೀನು ಹೆಚ್ಚಾಗಿರು ವುದಾಗಿಯೂ, ಉಳುವವರಿಗೆ ವಿಪುಲವಾಗಿ ದೊರೆಯುವುದಾಗಿಯೂ ಪಾಹಾಮನಿಗೆ ತಿಳಿಸುತ್ತಾನೆ. ಬಾಸ್ಕೀರರು ಯಾವ ರೀತಿಯ ಜನ ಎಂಬುದನ್ನು ತಿಳಿಸಲು ಈ ಉಪಮೆ

9 ಮಹಾದರ್ಶನ ಪುಟ ೩೪

10 ಅದೇ ಪುಟ ೩೫

ಬಂದಿದೆ. ಬಾಸ್ಕೀರರ ಸಾಧುತನವನ್ನು ತಿಳಿಸುವಲ್ಲಿ ಬಂದಿರುವ ಈ ಉಪಮೆ ಸರಿಯಾಗಿದೆ. ಮುಂದೆ ಅವರು ಪಾಹಾಮನಿಗೆ ಸತ್ಕರಿಸಿದ ರೀತಿಯನ್ನು ನೋಡಿದರೆ ಹೋಲಿಕೆ ಉತ್ಪ್ರೇಕ್ಷೆ ಎನಿಸದು.

ಇಲ್ಲಿ ಮನುಷ್ಯಲೋಕದಿಂದ ಆರಿಸಿದ ಒಂದು ಉಪಮೆಯ ಬಗ್ಗೆ ಹೇಳಿ ಬಿಡುವುದು ಒಳ್ಳೆಯದು.

> "ಹೆತ್ತ ತಾಯಿಯು ಪರದೇಶಕ್ಕೆ ಹೋದ ತನ್ನ ಮಗನ ಗುಣವನ್ನು ಆದರದಿಂದ ಇತರರ ಎದುರು ಎತ್ತಿ ಹಾಡುವಂತೆ"[11]

ಬೋಯಿಯು ತನ್ನ ಕತ್ತೆಯ ಗುಣವರ್ಣನೆ ಮಾಡುತ್ತಾನೆ. ಹೆಂಡತಿ ಮಕ್ಕಳನ್ನು ಕಳೆದುಕೊಂಡ ತಿಮ್ಮಾ ಬೋಯಿಗೆ ಆತನ ಕತ್ತೆಯೆ ಸರ್ವಸ್ವ. ಅದರ ಕೂಗು ಆತನಿಗೆ 'ಶ್ರೀಕೃಷ್ಣನ ಕೊಳಲಿನ ನಾದದಂತೆ' ಕೇಳಿಸುತ್ತದೆ. ಅದರ ಮೇಲಿದ್ದ ಪ್ರೀತಿ ಮಮತೆ, ವಾತ್ಸಲ್ಯ ಎಲ್ಲಾ ಈ ಒಂದು ಉಪಮೆಯಿಂದಲೇ ಸುವ್ಯಕ್ತ. ತಾಯಿ–ಮಗನ ಸಂಬಂಧದ ಹೋಲಿಕೆಯಿಂದ ಕತ್ತೆ ಮತ್ತು ಬೋಯಿಯ ನಡುವಣ ಸಂಬಂಧದ ಗಾಢತೆ ಎಂಥವುದು ಎಂಬುದು ಗೊತ್ತಾಗುತ್ತದೆ.

ಇಂದು ನಾಳೆಗೆ ಇತಿಹಾಸವಾಗುತ್ತದೆ. ಬದುಕಿನಲ್ಲಿ ಆ ಇತಿಹಾಸದ ಗುರುತು ಯಾವುದಾದರೂ ರೂಪದಲ್ಲಿ ಇದ್ದೇ ಇರುತ್ತದೆ. ಸಾಹಿತಿ ಅಲ್ಲಿಂದ ಕೆಲವು ಸರಕುಗಳನ್ನು ಪಡೆಯುತ್ತಾನೆ. ಕುವೆಂಪು ಅವರು ತೆಗೆದಿರಿಸಿರುವ ಕೆಲವು ಐತಿಹಾಸಿಕ ಉಪಮೆಗಳ ಬಗ್ಗೆ ನೋಡೋಣ.

ಕತೆಗಳೊಡನೆ ಆರಂಭದಲ್ಲಿನ 'ಕನಸಿನ ಕನಸು' ಕತೆಯ ಕಿಶೋರ ಕಂತ್ರಿನಾಯಿಯ ಉಪಟಳವನ್ನು ಸಹಿಸದೆ 'ಆವೇಶ ಬಂದ ಭೀಮನಂತೆ' ದೌಡಾಯಿಸುತ್ತಾನೆ. ಮಂಜನ ಮಧ್ಯಸ್ಥಿಕೆಯಲ್ಲಿ ಸಮಾಧಾನಗೊಂಡ ಕಿಶೋರ ವಾಪಸ್ಸು ಬಂದ ರೀತಿಯನ್ನು ತಿಳಿಸಲು ಬಳಸಿರುವ ಒಂದು ಐತಿಹಾಸಿಕ ಉಪಮೆಯನ್ನು ನೋಡಿ :

> "ಜಯಶಾಲಿಯಾದ ಅಲೆಗ್ಸಾಂಡರನಂತೆ"[12] ಕಿಶೋರನು ಠೀವಿಯಿಂದ ಬಂದನಂತೆ. ಅಲೆಗ್ಸಾಂಡರನ ದಂಡೆಯಾತ್ರೆಯೊಡನೆ ಕಿಶೋರನ ಸಾಹಸ ವನ್ನು ಹೋಲಿಸಿರುವುದು ಗಮನಾರ್ಹ. ಹೂವಿನಿಂದ ನಾರು ಸ್ವರ್ಗ ಸೇರಲಿಲ್ಲವೆ ?

ರಾಜಕೀಯ ವ್ಯಕ್ತಿಗಳನ್ನು, ಅವರು ಹೆಸರಿಗಾಗಿ ಪರದಾಡುವ ರೀತಿಯನ್ನು ವಿಡಂಬಿಸಲು ಕಿಶೋರನನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ಬಳಸಿರುವ ಉಪಮೆ ಯನ್ನು ನೋಡಿ :

---

11 ಕಥೆಗಳೊಡನೆ ಆರಂಭದಲ್ಲಿ ಪುಟ ೧೪೧

12 ಅದೇ ಪುಟ ೧೦೩

> "ರಾಜ್ಯ ವಿಧಾಯಕ ಸಭೆಯ ಸದಸ್ಯವರ್ಗದಲ್ಲಿ ಅಚ್ಚುಹಾಕಿದ ತನ್ನ ಹೆಸರನ್ನು ನೋಡುವುದಕ್ಕಾಗಿ ಅನೇಕರು ತಮ್ಮ ಸರ್ವಸ್ವವನ್ನು ವೆಚ್ಚ ಮಾಡುವುದಿಲ್ಲವೆ? ಅವರಂತೆಯೇ ಕಿಶೋರನು ಕಷ್ಟವನ್ನೆಲ್ಲಾ ಸಹಿಸಿ ಕೊಂಡು ಸಾರಥಿಯಾದುದು" [13]

ಈ ಮಾತು ಇಂದಿಗೂ ಸತ್ಯವಾಗಿಯೇ ಉಳಿದಿರುವುದು ಕವಿವರ್ಯರ ದೂರಾಲೋಚನೆಗೆ ಹಿಡಿದ ಕನ್ನಡಿಯಲ್ಲದೆ ಮತ್ತೇನು?

ಕಾಡು ಋಷಿಯಾದ ಕುವೆಂಪು ಅವರಿಗೆ ಕಾಡೇನು ಹೊಸದಲ್ಲ. ಕಾಡಿನ ನರ ನಾಡಿಯೆಲ್ಲ ಗೊತ್ತು. ವೀಣಾವಾದಕನಿಗೆ ಎಲ್ಲಿ ಮಿಡಿದರೆ ಯಾವ ರಾಗ ಹೊರ ಸೂಸುತ್ತದೆ ಎಂಬುದು ಗೊತ್ತು. ಅದೇ ರೀತಿ ಯಾವ ದಿಕ್ಕಿನಲ್ಲಿ ಏನಿದೆ ಎಂಬುದು ಈ ಕವಿಗೆ ಗೊತ್ತು. ಕಾಡಿಗೆ ಸಾಮಾನ್ಯವಾಗಿ ಹೋಗುವುದು ಬೇಟೆಗಾಗಿ; ಇಲ್ಲ ಧ್ಯಾನಕ್ಕಾಗಿ. ಬೇಟೆಯಲ್ಲಿ ಕಂಡುಂಡ ಅನೇಕ ಘಟನೆಗಳನ್ನು ಸಂದರ್ಭೋಚಿತವಾಗಿ ಉಪಮೆಗಳಾಗಿ ಬಳಸಿಕೊಂಡಿರುವುದಕ್ಕೆ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ. ಒಂದು ಉದಾಹರಣೆಯನ್ನು ನೋಡಿ:

> "ಅಯ್ಯೋ! ಎಲ್ಲಿತ್ತೆ? ಆ ಎಂಟಾಣೆ ಎಂದು ಕೂಗುತ್ತಾ ಮಾರ್ಜಾಲವು ಇಲಿಯ ಮೇಲೆ ನೆಗೆಯುವಂತೆ ಹುಡುಗಿಯ ಮೇಲೆ ಹಾರಿದ್ದಳು" [14]

ಇದು ಕಾಬೂಲಿವಾಲ ಕತೆಯಲ್ಲಿ ಬಂದಿರುವ ಒಂದು ಉಪಮೆ. ಕಾಬೂಲಿವಾಲ ಬಾಲಕಿ ಗಿರಿಜೆಗೆ ಪ್ರೀತಿಯಿಂದ ಎಂಟಾಣೆ ಕೊಡುತ್ತಾನೆ. ಅದನ್ನು ನೋಡಿದ ಗಿರಿಜೆಯ ತಾಯಿ ಮಗಳ ಮೇಲೆ ರೇಗಿ ಬೀಳುತ್ತಾಳೆ. ಇದು ಸಂದರ್ಭ. ಹೆಣ್ಣುಮಕ್ಕಳ ಶಿಸ್ತು ಆಗಿನ ಕಾಲದಲ್ಲಿ ಎಷ್ಟಿತ್ತೆಂಬುದು ಇದರಿಂದ ಗೊತ್ತಾಗುತ್ತದೆ. ಹೆಣ್ಣಾದವಳು ಪರಪುರುಷನ ಜೊತೆ ಮಾತಾಡಿದರೆ ಲೋಕವೇ ಹಾರಿಹೋಯಿತು ಎನ್ನುವ ಜನ, ಮಕ್ಕಳನ್ನು ಅಪಹರಿಸುತ್ತಾರೆಂಬ ಭಯಬೇರೆ. ಪ್ರಬಲವಾಗಿಯೆ ಪ್ರತಿಭಟಿಸಿರಬೇಕು. ಆ ಪ್ರತಿಭಟನೆಯ ಸಮರ್ಥ ತಿಳಿವಿಗೆ ಈ ಬೇಟೆಯ ಚಿತ್ರವಿರುವ ಉಪಮೆ ಸೊಗಸಾಗಿ ಮೂಡಿ ಬಂದಿದೆ. ಮುಗ್ಧ ಹುಡುಗಿ ಇಲಿಗೂ, ತಾಯಿಯನ್ನು ಬೆಕ್ಕಿಗೂ ಹೋಲಿಸಿರುವುದು ಸರಿಯಾಗಿದೆ. ಪ್ರತಿಕ್ರಿಯೆ ಇಲ್ಲದೆ ಕೊಟ್ಟ ಶಿಕ್ಷೆ ಅನುಭವಿಸಬೇಕಾದಂಥ ಪರಿಸ್ಥಿತಿ ಗಿರಿಜೆಯದಾಗಿತ್ತು ಎಂಬುದೂ ಗೊತ್ತಾಗುತ್ತದೆ.

ಪುರಾಣದಿಂದ ಆರಿಸಿರುವ ಒಂದು ಉಪಮೆ:

> "ಕುರುರಂಗಕ್ಕೆ ಹೋಗುವ ಸಾಕ್ಷಾತ್ ಅರ್ಜುನನಂತೆ ಜಯಧ್ವನಿ ಮಾಡುತ್ತಿದ್ದನು" [15]

---

13 ಅದೇ ಪುಟ ೧೦೨

14 ಕಥೆಗಳೊಡನೆ ಆರಂಭದಲ್ಲಿ ಪುಟ ೮೨

15 ಅದೇ ಪುಟ ೧೦೧

'ಕನಸಿನ ಕನಸು' ಕತೆಯಲ್ಲಿ ಬಳಕೆಯಾಗಿರುವ ಈ ಪುರಾಣದ ಉಪಮೆ ಆತನ ಮನದಾಳದ ಆನಂದದ ರಸದೌತಣವನ್ನುಣಬಡಿಸಲು ಕವಿಗಳು ಪುರಾಣದ ಮರೆಹೋಗಿದ್ದಾರೆ.

ಪುರಾಣದಿಂದ ತೆಗೆದಿರಿಸಿದ ಉಪಮೆಗಳ ಸೊಗಸಿಗಾಗಿ ಅವರ ಸಾಹಿತ್ಯದ ಯಾವ ಭಾಗವನ್ನಾದರೂ ನೋಡಬಹುದು.

ಕುವೆಂಪು ಸಾಹಿತ್ಯ ಅಧ್ಯಾತ್ಮ ಭೂಮಿಕೆಯಲ್ಲೂ ಬೇರುಬಿಟ್ಟಿರುವ ಸುದ್ದಿ ಓದುಗರಿಗೇನು ಹೊಸದಲ್ಲ. ಅವರ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಅದು ಒಂದು ಘಟ್ಟವನ್ನು ಮುಟ್ಟುವುದನ್ನು ನೋಡಬಹುದು. ಶ್ರೀ ರಾಮಕೃಷ್ಣಾಶ್ರಮದಲ್ಲಿ ಬೆಳೆದ ಶ್ರೀಯುತರಿಗೆ ಆ ಕ್ಷೇತ್ರ ಹೊಸದೇನು ಅಲ್ಲ. ಸಿದ್ಧಿಯನ್ನು ಪಡೆದಿದ್ದಾರೆಂದು ಮತ್ತೆ ಹೇಳಬೇಕಾಗಿಲ್ಲ.

ಕುವೆಂಪು ಅವರ ಉಪಮಾ ಪ್ರಪಂಚ ಅಧ್ಯಾತ್ಮ ರಂಗದಿಂದಲೂ ಹರಿದು ಬಂದಿರುವುದನ್ನು ನೋಡಬಹುದು. ಕೆಲವು ಉದಾಹರಣೆಗಳನ್ನು ನೋಡಿ :

> "ಮುಸಲರಾಗಮನವದು ಛದ್ಮ ವೇಷವನಾಂತ ಪುಣ್ಯದಂತಾಯ್ತು
> ಭರತ ಮಾತೆಗೆ ಮರಳಿ ಮತ್ತೊಂದು ನಾಗರಿಕತೆಯ ಸಂಗ
> ವಾಯ್ತು"[16]

ಯೋಗೀಶನ ಕಣ್ಣಮುಂದೆ ಭರತ ಮಾತೆಯ ಇತಿಹಾಸ ಬಿಚ್ಚಿಕೊಳ್ಳುತ್ತಿದೆ. ಬುದ್ಧನ ನಂತರ ಮುಸಲರ ಆಗಮನವಾಗುತ್ತದೆ. ಅವರಿಂದ ದ್ರೋಹವಾದರೂ ಕಲೆಗಳ ಅವನತಿಯಾದರೂ ಕವಿ ಹೇಳುತ್ತಾರೆ 'ಅವರ ಆಗಮನ ಛದ್ಮವೇಷವನಾಂತ ಪುಣ್ಯ' ಎಂದು. ಅಂದೇ ಕವಿವರ್ಯರ ವಿಶಾಲ ದೃಷ್ಟಿಯನ್ನು, ವಿಶ್ವಮಾನವತೆಯನ್ನು, ಸಕಲರನ್ನು ಸಮದೃಷ್ಟಿಯಿಂದ ನೋಡುವ ಭಾವನೆಯನ್ನು ಇದರಿಂದ ಕಾಣಬಹುದಾಗಿದೆ. ಅಷ್ಟೇ ಅಲ್ಲ, ಹಿಂದೆ ಇದ್ದ ಸಮಾಜದ ಹೀನಾಯ ಸ್ಥಿತಿಯಲ್ಲಿ ಅನಂತರ ಹೊಸದೊಂದು ಆಯಾಮ ಬಂದುದನ್ನು ಗಮನಿಸಬಹುದು.

ಆಂಗ್ಲರಾಗಮನದ ನಂತರ ಸಿದ್ಧಪುರುಷರು ಬಾಳಿದ ಬೀಡು, ಋಷಿವರ್ಯರಾಶ್ರಮದ ನಾಡು, ಶ್ರೀರಾಮಕೃಷ್ಣರವತರಿಸಿದ ಪುಣ್ಯಭೂಮಿ, ಕಬ್ಬಿಗರು ಕಾಳಿದಾಸಾದಿಗಳು ಬರೆ ಬರೆದು ನುತಿಗೈದ ಬೀಡು, ಗೌತಮನೆ ಮೊದಲಾದ ದಿವ್ಯಪುರುಷರ ಚರಣ ಧೂಳಿಗಳನಾಂತು, ಅರ್ಜುನ ಅಭಿಮನ್ಯು ಮುಂತಾದ ರಣವೀರರನ್ನು ಪಡೆದು ಮಂಗಳದ ಕಡಲಾಗಿದ್ದ ಭರತ ಭೂಮಿ "ಮಸಣಮೋನವು ಹಬ್ಬಿ ನಲಿವತಿರೆ ಭೀಕರದ ಸುಡುಗಾಡಿನಂತೆ ಮರಳುಗಳ ಮನೆಯಾಯ್ತು"[17]

ಹಳೆಯುದರ ನಂಬುಗೆಯ ಬಿಟ್ಟು ಹೊಸದರ ಅರ್ಥವನ್ನರಿಯದ ಜನರಿಂದ ಉಂಟಾದ ಪಾಡನ್ನು ತಿಳಿಸಲು ಮೇಲಿನ ಉಪಮೆ ಶಕ್ತವಾಗಿದೆ.

---

16 ಮಹಾದರ್ಶನ: ಪುಟ ೨೬

17 ಅದೇ ಪುಟ ೪೭

ಯೋಗೀಶನಿಗೆ ಭಾರತಿಯ ಅವನತಿ ಪ್ರಾರಂಭವಾಗಿ, ರೋಗರುಜಿನಗಳ ಕಾಟ ಹೆಚ್ಚಾಗಿ, ಬಡತನ ಸಂಕಷ್ಟಗಳಿಂದ ಕೂಡಿದ ನಾಡು ಯಾವ ರೀತಿ ಕಂಡಿತು ಎಂಬಲ್ಲಿನ ಉಪಮೆ :

> "ಪುಣ್ಯ ಭೂಮಿಯು ಮನಕೆ ತೋರಿದುದು ಸೈತಾನನಿಹ ನರಕದಂತೆ"[18]
> ತೋರಿತಂತೆ. ಒಂದು ಸಣ್ಣ ಉಪಮೆಯಿಂದ ಎಷ್ಟೆಲ್ಲಾ ಸಾಧಿತವಾಗಿದೆ.

ಸಿಂಹ ಕಾಡಿನಲ್ಲಿ ಒಂಟಿಯಾಗಿಯೇ ಬೇಟೆಯಾಡಬಲ್ಲದು ; ಆನೆಗೆ ಜೊತೆಯಿರಲೇ ಬೇಕು. ಗುಲಾಬಿ ಒಂದೇ ಇದ್ದರೆ ಸೊಗಸು ; ಮಲ್ಲಿಗೆ ಜೊತೆ ಸೇರಿದರೆ ಚೆನ್ನ ; ಕೆಲವು ಸಂದರ್ಭಗಳಿಗೆ ಒಂದು ಸಣ್ಣ ಉಪಮೆ ಸಾಕಾದರೆ ಕೆಲವುಭಾರಿ ಅವುಗಳ ಮೆರವಣಿಗೆಯೆ ಬೇಕಾಗುತ್ತದೆ. ಈ ರೀತಿಯ ಮಾಲೋಪಮೆಗಳ ಸೊಗಸಿಗಾಗಿ ಕೆಲವು ಉದಾಹರಣೆ ಗಳನ್ನು ನೋಡಬಹುದು.

'ಕನಸಿನ ಕನಸು' ಕತೆಯ ಕಿಶೋರನ ಸಾಹಸದ ವರ್ಣನೆಯ ಸಂದರ್ಭದಲ್ಲಿ ಬಂದಿರುವ ಉಪಮಾ ಗುಚ್ಛ. "ಪೊದರಿನ ಮಧ್ಯದಲ್ಲಿದ್ದ ಕಾಡು ಸಂಪಗೆಯ ಹಣ್ಣುಗಳು 'ಕೆಂಪು ಹವಳಗಳಂತೆ' ಇದ್ದುವಂತೆ. ಅವನ್ನು ಕೀಳುತ್ತಿದ್ದ ಆತನ ಚಮತ್ಕಾರಕ್ಕೆ 'ಶಿಲ್ಪಕೃತ ವಿಗ್ರಹಗಳಂತೆ' ನಿಂತಿದ್ದರಂತೆ. ದಾರಿಯಲ್ಲಿ ಸಿಕ್ಕ ಹಾವನ್ನು ನಾಶಮಾಡಿದ್ದು 'ಶ್ರೀಕೃಷ್ಣನ ಕಾಳಿಂಗ ಮರ್ದನನಂತೆ' ಹೇಗಿದೆ ಉಪಮೆಗಳ ಮೆರವಣಿಗೆ !

ವಿದ್ಯಾರಣ್ಯರ ಅಧಿಕಾರದಲ್ಲಿ ವಿಸ್ತರಿಸಿ, ವಿಜೃಂಭಿಸಿದ ವಿಜಯನಗರದ ಕೀರ್ತಿಯ ಕೊಂಡಾಡಲು ಬಂದಿರುವ ಮಾಲೋಪಮೆಯನ್ನು ನೋಡಿ :

> "ವೈಕುಂಠಪತಿಯ ಸಾನಿಧ್ಯಕ್ಕೆಳಸಿದ ಪುಣ್ಯ ಭಾರತಿಯನಾಂತು
> ನೆಲದಿಂದ ತಿಳಿಯಾಳದಾಗಸವನಡರುತಿಹ ಶಿಖಿಮೇಘದಂತೆ.
> ತಿರೆವೆಣ್ಣಿನಮಲ ಸಂಗನ ಬಯಸಿದಜಪತಿಯ ಬೆನ್ನಿನಲಿ ಹೊತ್ತು
> ಬಣ್ಣ ಬಣ್ಣದ ಕಣ್ಣಗರಿಗೆದರಿ ಹಾರಿಳಿವ ಸೋಗೆನವಿಲಂತೆ,
> ಏಕಾಂಗಿಯಾಗಿ ಇಂಗಡಲಿನಿಂದೆದ್ದರಳಿ, ಕಮನೀಯವಾಗಿ,
> ಸಿರಿಗೆ ನೆಲೆವನೆಯಾದ ಕೆಂದಾವರೆಯ ರಮ್ಯ ಸುಮಪೀಠದಂತೆ,
> ವಾಲ್ಮೀಕಿ ಕವಿವರ್ಯನೆದೆಯಲ್ಲಿ ಬೇರೂರಿ, ಭಾವರಸಮೀಂಟಿ,
> ಮನದಲ್ಲಿ ಮೈಗೊಂಡು ಮೊಳೆತು ಬೆಳೆದಾ ಮಹಾಕಾವ್ಯ ತರುವಂತೆ"[19]

ಹೀಗೆ ಇನ್ನೂ ಮುಂದುವರಿಯುತ್ತಾ ಸಾಗುತ್ತದೆ ಈ ಮೆರವಣಿಗೆ. ಇಲ್ಲಿ ವಿಜಯ ನಗರ ಸಾಮ್ರಾಜ್ಯದ ಎತ್ತರ ಬಿತ್ತರವನ್ನು, ಸೊಗಸನ್ನು, ತಿಳಿಸುವಲ್ಲಿ ಈ ಉಪಮಾಗುಚ್ಛ ಪರಿಣಾಮಕಾರಿಯಾಗಿ ಬಂದಿದೆ. ಈ ಉಪಮಾ ಮೆರವಣಿಗೆಯೆ ಓದುಗರನ್ನು ಒಂದು ಹೊಸ ಲೋಕಕ್ಕೆ ಪ್ರವೇಶ ಮಾಡಿಸುತ್ತದೆ.

---

18 ಅದೇ: ಪುಟ ೪೯

19 ಮಹಾದರ್ಶನ ಪುಟ

ಸುಂದರ ಭಾವಗೀತಾ ರೂಪದ ತಾಜ್‌ಮಹಲನ್ನು ಕುರಿತ ವರ್ಣನೆಯ ಸಂದರ್ಭದಲ್ಲಿ ಬಳಕೆಯಾಗಿರುವ ಮಾಲೋಪಮೆಯನ್ನು ನೋಡಿ :

"ಸೃಷ್ಟಿಯ ದಿಗಂತದೊಳು ಮೂಡುವಿಂದುವಿನಂತೆ ಮನಮೋಹಿಸುತ್ತ,
ಹೆಪ್ಪಾದ ಕೌಮುದಿಯೊ, ಗಡ್ಡೆಗಟ್ಟಿದ ಸುಧೆಯೊ, ತಿರೆಯ ಕಬ್ಬಿಗರ
ಕಬ್ಬಗಳೆಲ್ಲವುಂ ಕರಗಿಳಿಸಿದ ಕಲ್ಪನೆಯ ಮುದ್ದೆಯಂತೆ,
ಆದಿಯಿಂದೆಳೆಯಲುದಿಸಿದ ಶಿಲ್ಪಿವರರಮಲ ಕೀರ್ತಿಯೆಂಬಂತೆ,
ಪ್ರೇಮ ದುಃಖವನೆಲ್ಲ ಹಿಂಡಿತೆಗೆದಾನಂದ ರೂಪುಗೊಂಡಂತೆ,
ಒಲಿದವರ ವಿರಹ ತಾಪವು ಚಲ್ಲಿದಮೃತ ಶಿಲೆಯಾಗಿ ಬಂದಂತೆ,
ಪ್ರೇಮದಮೃತವ ಕರೆದು ಎದೆಯ ಬಟ್ಟಲೊಳಟ್ಟು, ವಿರಹದುರಿಮಾಡಿ,
....
....
ಬಾಳ ಮರುಭೂಮಿಯೊಳು ತಿರುಗುವವರ ಶಾಂತಿಯಾರಾಮದಂತಾಗಿ,
ಭುವನ ಮನಮೋಹಿಸಿತು ತಾಜಮಹಲತ್ಯಂತ ರಮಣೀಯವಾಗಿ,[20]

ಹದಿನೆಂಟು ಸಾಲುಗಳ ವರ್ಣನೆಯಲ್ಲಿ ತಾಜ್‌ಮಹಲ್ ಓದುಗರ ಹೃದಯದಲ್ಲಿ ಶಾಶ್ವತವಾಗಿ ಬೇರೂರುವಂತೆ ಮಾಡುವಲ್ಲಿ ಕವಿ ಯಶಸ್ವಿಯಾಗಿದ್ದಾರೆ. ಪ್ರೇಮದ ಸಂಕೇತವಾದ ತಾಜ್‌ಮಹಲ್ ವರ್ಣನೆಯಲ್ಲಿನ ಪರಿಕರಗಳೆಲ್ಲ ಆ ಲೋಕದಿಂದಲೇ ಹೆಚ್ಚಾಗಿ ಬಂದಿರುವುದು ಕೂಡ ಗಮನಾರ್ಹವಾಗಿದೆ. 'ಮೂಡುವ ಚಂದಿರ', 'ಪ್ರಣಯಿಗಳ ಚುಂಬನಗಳಾನಂದ', 'ಪ್ರೇಮದ ಅಮೃತ'—ಮುಂತಾದ ಮಾತುಗಳು ಕ್ಷಣಕಾಲ ಓದುಗರನ್ನು ಹಿಡಿದು ನಿಲ್ಲಿಸುತ್ತವೆ. ಸವಿದು ಮುಂದೆ ಹೋಗು ಎನ್ನುತ್ತವೆ.

ಸುಂದರವಾದದ್ದನ್ನು ವರ್ಣಿಸಿದ ಕವಿ ಪ್ರತಿಭೆ, ಅದರಾಚೆಗಿನ ವಿಚಾರಗಳನ್ನು ಚಿತ್ರಿಸುವಲ್ಲೇನು ಹಿಂದೆ ಬೀಳುವುದಿಲ್ಲ; ನೋಡಿ :

"ಸಂಗೀತವಾಹಿನಿಯ ನಡುವೆ ಬಹ ದುಃಸ್ವರಗಳರೆಯ ತೆರೆಯಂತೆ,
ದಿವ್ಯ ಸೃಷ್ಟಿಯ ಮಧ್ಯೆ ತೋರಿಬಹ ಘೋರತರ ಯಮಪಾಶದಂತೆ,
ಸೌಂದರ್ಯ ದೇವತೆಯ ವದನಾರವಿಂದದ ವಿರೂಪವೆಂಬಂತೆ"[21]

ಇದು ಹಿಂದೂ ಮುಸಲ್ಮಾನರಲ್ಲಿ ಬಂದ ಮನಸ್ತಾಪದ ಪರಿ. ಇಲ್ಲೆಲ್ಲ ಸುಂದರವಾದದರ ಜೊತೆ ಅಸುಂದರತೆಯ, ಸಂಗೀತವಾಹಿನಿಯ ಮಧ್ಯೆ ಅಪಸ್ವರವನ್ನು ತಂದು ಓದುಗರಿಗೆ ಅವರಿಬ್ಬರ ನಡುವಿನ ಬಿರುಕನ್ನು ತಿಳಿಸುವಲ್ಲಿ ಜಯಗಳಿಸಿದ್ದಾರೆ.

20 ಅದೇ ಪುಟ ೩೭

21 ಮಹಾದರ್ಶನ ಪುಟ ೩೭

ಗಂಭೀರಗಮನದಲಿ ಬಂದ ಪಾಶ್ಚಾತ್ಯನಾವೆಗಳ ಮಾಲೆ ಪಡುಗಡಲನ್ನು ಮುತ್ತಿದ ಪರಿಯನ್ನು ಹೇಳುವಲ್ಲಿ ಬಂದಿರುವ ಉಪಮೆಗಳ ಮೆರವಣಿಗೆಯೊಂದಿಗೆ ಈ ಸಮೀಕ್ಷೆಯನ್ನು ಮುಗಿಸಬಹುದು ; ನೋಡಿ :

"ಮಡಿದ ಬೇಟೆಯ ಕಂಡು ತಿಳಿನೀಲ ನಭದೊಳೆರಂಕೆಗಳ ಕೆದರಿ
ರೊಯ್ಯೆಂಬ ನಾದದಿಂದತಿವೇಗದಿಂದಿಳಿದ ರಣಹದ್ದುಗಳ ತೆರದಿ,
ಪಾಪ ಪುಣ್ಯಗಳೆರಡು ಸೃಷ್ಟಿಯನ್ನಪ್ಪಿಕೊಂಡೈತರುವ ತೆರದಿ,
ಬಾಳಿನೊಳು ಸುಖದ ಕೈ ಹಿಡಿದು ಬಹ ತಿಮಿರವದನದ ದುಃಖದಂತೆ,
ಮುಂಬೆಳಗ ಮುದ್ದಿಡುತಲೈತರುವ ಘೋರತರ ಕಗ್ಗತ್ತಲಂತೆ,
ಭಾರತಿಯ ಸೌಭಾಗ್ಯ ದೌರ್ಭಾಗ್ಯವೆರಡು ಮೈಗೊಂಡಿಳಿಯುವಂತೆ,
....
....
ಬೇಹಾರ ನೆವದಿಂದ ಮೆಲ್ಲನೈತಂದು ಕೆಂಜಿರುವೆಗಳ ತೆರದಿ"[22]

ಓದುತ್ತಾ ಹೋದ ಹಾಗೆ ಭೀಭತ್ಸ ಚಿತ್ರ ಕಣ್ಣಮುಂದೆ ಬಂದು ನಿಲ್ಲುತ್ತದೆ. ಕವಿ ಬಳಸಿರುವ ಪದಗಳು ಮುಂದೆ ಅವರೇನೆಲ್ಲ ಮಾಡಿದರು ಅವುಗಳ ಪ್ರತಿನಿಧಿಗಳಾಗಿರುವುದನ್ನು ಗಮನಿಸಬಹುದು. ಅದರಲ್ಲೂ 'ಮಡಿದ ಬೇಟೆಯ ಕಂಡು ಹಾರಾಡಿ ಬರುವ ಹದ್ದು', 'ಮುತ್ತಿದ ಕೆಂಜಿರುವೆ' ಈ ಸಾಲುಗಳನ್ನಂತು ಓದುಗರು ಮರೆಯುವ ಹಾಗೆ ಇಲ್ಲ. ಶಕ್ತನಾದ ಕವಿ ಏನೆಲ್ಲವನ್ನು ಸಾಧಿಸಬಲ್ಲ ಎಂಬುದು ಗಮನಿಸಬೇಕಾದ ಅಂಶ.

[22] ಅದೇ ಪುಟ ೪೯

ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ
ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

ಗಾಂಧೀಜಿ

ಕುವೆಂಪು ಸಾಹಿತ್ಯ ಕೃತಿಗಳ ಸಾಂಸ್ಕೃತಿಕ ಮಹತ್ವ

ಡಾ|| ಗುರುಪಾದ ಮರಿಗುದ್ದಿ

ಸಾಹಿತ್ಯ ಕೃತಿಗಳು ಆಯಾಕಾಲದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಸೃಷ್ಟಿಯಾಗುವುದರ ಜೊತೆಗೆ, ಆ ಸಂಸ್ಕೃತಿಯ ಅಂಶಗಳನ್ನು ಹೀರಿಕೊಂಡು ಸತ್ವಭರಿತವಾಗಿರುತ್ತವೆ. ಒಂದು ಭಾಷಾ ಮಾಧ್ಯಮದಲ್ಲಿ ಆವಿರ್ಭಾವಗೊಳ್ಳುವ ಸಾಹಿತ್ಯ ಕೃತಿ, ಆ ಭಾಷೆಯನ್ನಾಡುವ ಜನಾಂಗದ ಚಿಂತನೆ, ನಂಬಿಕೆ, ಆಚರಣೆ, ಬೌದ್ಧಿಕ ವಿಕಾಸದ ವಿವರಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿರುತ್ತದೆ. ಆದರೆ ಅಂಥ ವಿವರಗಳನ್ನು ಕಲಾತ್ಮಕ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದರೆ ಮಾತ್ರ ಆ ಕೃತಿ ಗಮನಾರ್ಹವಾಗುತ್ತದೆ. ಕಲಾತ್ಮಕ ಅಭಿವ್ಯಕ್ತಿ ಸಮರ್ಥ ಲೇಖಕನಲ್ಲಿ ಅಭಿಜಾತವಾಗಿರಬಲ್ಲುದು. ಹಾಗಾಗಿ ಅಂಥ ಲೇಖಕ ತನ್ನ ಹಿಂದೆ ಸತ್ವಪೂರ್ಣವಾದುದನ್ನು, ನಿತ್ಯನೂತನವಾದುದನ್ನು, ಕೃತಿರೂಪದಲ್ಲಿ, ಬಿಟ್ಟುಹೋಗುವುದು ಸಾಧ್ಯವಾಗುತ್ತದೆ. ಆ ಸಾಹಿತ್ಯ ಕೃತಿಗಳು ಮುಂಬರುವ ತಲೆಮಾರುಗಳಿಗೆ, ಸಮಕಾಲೀನ ಸಂಸ್ಕೃತಿಯ ಅತ್ಯುತ್ತಮ ಪ್ರತಿನಿಧಿಗಳಾಗಿ ಸಿಲ್ಲುತ್ತವೆ. ಶ್ರೇಷ್ಠ ಲೇಖಕನಾದವನಿಗೆ ಈ ಅರಿವು ಮತ್ತು ಜವಾಬ್ದಾರಿಗಳಿರುತ್ತವೆ.

ಈಗ, ಈ ಹಿನ್ನಲೆಯಲ್ಲಿ ಕುವೆಂಪು ಸಾಹಿತ್ಯವನ್ನು ಕಾಣಬೇಕು. ಕಾವ್ಯ, ನಾಟಕ, ಸಣ್ಣಕಥೆ, ಪ್ರಬಂಧ, ಕಾದಂಬರಿ, ಜೀವನ ಚರಿತ್ರೆ, ಆತ್ಮಚರಿತ್ರೆ, ಕಾವ್ಯಮೀಮಾಂಸೆ, ವಿಮರ್ಶೆ, ಶಿಶುಸಾಹಿತ್ಯ —ಹೀಗೆ ಆಧುನಿಕ ಕನ್ನಡ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಿಂದಾಗಿ ಇಪ್ಪತ್ತನೆಯ ಶತಮಾನದ ಆರಂಭಿಕ ದಶಕಗಳ ಕನ್ನಡದ ಸಂಸ್ಕೃತಿ ಮೂಡಿಬರುತ್ತದೆ. ಕಾವ್ಯದಲ್ಲಿ ಬಳಕೆಗೊಂಡ ಸಂಸ್ಕೃತಮಯ ಕನ್ನಡಭಾಷಾ ಬಳಕೆಗೂ, ಕಾದಂಬರಿಗಳ ಗ್ರಾಮೀಣ ಜನಜೀವನದ ಸೂಕ್ಷ್ಮಾತಿಸೂಕ್ಷ್ಮ ಚಿತ್ರಣಕ್ಕೂ, ವಿಮರ್ಶಾ ಕೃತಿಗಳ ವಿಭಿನ್ನವಾದ ಪರಿಭಾಷೆಗೂ, ನಾಟಕಗಳ ಕಾವ್ಯಮಯತೆಗೂ ಹಲವು ಸಾಂಸ್ಕೃತಿಕ ಕಾರಣಗಳಿರುವುದನ್ನು ಗುರುತಿಸಬಹುದು.

ಕುವೆಂಪು ಸಾಹಿತ್ಯ ಕೃತಿಗಳು ಎರಡು ಮುಖ್ಯವಾದ ಹೋರಾಟ ಚಳುವಳಿಗಳಿಗೆ ಕೊರಳು ನೀಡಿವೆ. ಅಂದಿನ ರಾಷ್ಟ್ರೀಯ ಮಟ್ಟದ ಸ್ವಾತಂತ್ರ್ಯ ಹೋರಾಟ ಮತ್ತು ಇನ್ನೊಂದು ನೆಲೆಯಲ್ಲಿ ಕನ್ನಡಪರವಾದ ಹೋರಾಟ—ಇವೆರಡೂ ಕುವೆಂಪು ಸಾಹಿತ್ಯದ ಒಂದು ಭಾಗವಾಗಿಬಿಟ್ಟಿವೆ. ಒಂದು ರೀತಿಯಲ್ಲಿ ಎರಡೂ ಹೋರಾಟಗಳು 'ಸ್ವದೇಶಿ' 'ಸ್ವಾವಲಂಬನೆ' 'ಸಾತಂತ್ರ್ಯ'ಗಳಿಗೆ ಸಂಬಂಧಿಸಿದ್ದವು. ಕನ್ನಡ ನಾಡು–ನುಡಿಗಳ ಬಗ್ಗೆ ಅಲ್ಲಿಯ ಸ್ಪಂದನ, ಸ್ವಾತಂತ್ರ್ಯಪೂರ್ವಕಾಲದ್ದು ಮತ್ತು ರಾಜ–ಮಹಾರಾಜರಿಗೆ ಮಾನ್ಯತೆಯಿದ್ದ ಕಾಲದ್ದು ಎಂಬುದರಿಂದ ಮಹತ್ವ ಪಡೆಯುತ್ತದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ, ಅಂತರ್–ಬಾಹ್ಯ ಶಕ್ತಿಗಳು ನಡೆಸಿದ್ದ ಆಕ್ರಮಣದ ಪ್ರತಿಯಾಗಿ, 'ಪಾಂಚಜನ್ಯ'ವಾಗಿ 'ಡಿಂಡಿಮ'ವಾಗಿ ಆ ಸಾಹಿತ್ಯ ಸಿಡಿದುನಿಂತಿತು. "..ಎಂದೆಂದಿಗೂ ನೀ ಕನ್ನಡವಾಗಿರು" ಹಾಗೂ "ಕರ್ನಾಟಕ ಎಂಬುದೇನು ಹೆಸರೆ ಬರಿಯ ಮಣ್ಣಿಗೆ?" ಎಂಬ ಆವೇಶ ಅಭಿಮಾನಗಳು, ಕನ್ನಡಿಗರ ಮೌಢ್ಯ, ಆಲಸ್ಯಗಳಿಗೆ ಚಾಟಿ ಏಟುಗಳೂ ಆಗಿವೆ.

ಕುವೆಂಪು ಪ್ರಬಂಧ ಮತ್ತು ಕಾದಂಬರಿಗಳಲ್ಲಿ ಪ್ರಕೃತಿ ತಾನೇತಾನಾಗಿ ವಿಜೃಂಭಿಸಿದೆ. ಪ್ರಕೃತಿ ಮತ್ತು ಮನುಷ್ಯನ ಸಂಬಂಧ, ಕೊಡುಕೊಳ್ಳುವಿಕೆ, ಪ್ರಭಾವ ಪರಿಣಾಮಗಳು ಅಲ್ಲಿ ಮುಖ್ಯವಾಗಿವೆ. ಮಲೆನಾಡು ಹಾಗೂ ಮಲೆನಾಡಿನ ಬದುಕು ವರ್ಣೋಜ್ಜ್ವಲವಾಗಿ ಚಿತ್ರೀಕರಿಸಿದಂತಿದೆ. ಜನರ ವೃತ್ತಿ, ಆಚರಣೆ, ವಿಧಿಗಳು, ಜಾತ್ರೆ, ಕಲೆಗಳ ಬಗ್ಗೆ ವಿಶ್ವಕೋಶಗಳಂತೆ ಆ ಕೃತಿಗಳು ವಿವರಗಳಿಂದ ಸಮೃದ್ಧವಾಗಿವೆ. ಕಾದಂಬರಿಗಳಲ್ಲಿ ಕಾಣಿಸುವ ಬೇಟೆಯನ್ನು ನಿದರ್ಶನಕ್ಕಾಗಿ ಎತ್ತಿಕೊಂಡರೂ ಸಾಕು. ಪ್ರಾಣಿ, ಹಕ್ಕಿ, ಮೀನು, ಜೇನು, ಏಡಿ, ಇರುವೆ ಮುಂತಾದ ಬೇಟೆಗಳೂ, ಕೂಡು, ಗೌರಿಕೆ, ಮರಸು, ಕರೆ, ಸೆಬೆ, ಬಿಲ್ಲು, ಗಾಳ, ಬಲೆ ಮುಂತಾದ ರೀತಿಗಳೂ ಕಾಣಿಸುತ್ತವೆ. ಬದುಕಿನಲ್ಲಿ ತತ್ಪರವಾದ ಜನರು ಅವರ ಕಷ್ಟ–ಸುಖಗಳು, ಆ ಕೃತಿಗಳಿಂದ ಅನುಭವದ ಅಂಶಗಳಾಗುತ್ತವೆ. ಮಲೆನಾಡಂತೂ ತನ್ನ ಮೋಹಕತೆ, ಭೀಕರತೆಗಳಿಂದ ಮಲೆತು ನಿಲ್ಲುತ್ತದೆ. ಕಳೆದ ಶತಮಾನದ ಪ್ರಾಣಿ, ಪಕ್ಷಿ, ಗಿಡ, ಮರಗಳು—ಪ್ರಾಕೃತಿಕ ಬದುಕು—ಒಂದು ದಾಖಲೆಯಾಗಿ ಚಿತ್ರಿತಗೊಂಡಿದ್ದು, ಇಂದಿನ ಆಧುನಿಕ ಯುಗದ ಕಾಡುನಾಶದ ಸಂದರ್ಭದಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತದೆ.

ಕನ್ನಡ ಕೃತಿಗಳನ್ನು ಹೊರತರುವ ಸಾಹಸ ಒಂದೆಡೆಗಾದರೆ, ಸಾಕ್ಷರರ ಮನಕ್ಕೆ ಅವುಗಳನ್ನು ತಲುಪಿಸುವ ಅನಿವಾರ್ಯತೆ, ಅಂದು ಇರುತ್ತಿತ್ತು. ಆದರೆ ಆ ಕಾಲದಲ್ಲಿ ಕೂಡ ಕೇವಲ ಶಿಥಿಲ ಬರಹವಾಗಲಿ, ಪ್ರಚಾರ ಸಾಹಿತ್ಯವಾಗಲಿ ಹೊರಬರಲಿಲ್ಲ. ಜನರನ್ನು ಸುಶಿಕ್ಷಿತರನ್ನಾಗಿ ಮಾಡುವುದರ ಜೊತೆಗೆ ವಿಚಾರವಂತರನ್ನಾಗಿ ಸಿದ್ಧಗೊಳಿಸಬೇಕೆಂಬ ಆಶಯ ಕುವೆಂಪು ಸಾಹಿತ್ಯಕ್ಕಿತ್ತು. ಸಾಂಪ್ರದಾಯಿಕ ನಂಬಿಕೆಗಳು, ರೂಢಿಮೂಲ ಆಚರಣೆಗಳು ರಾಶಿರಾಶಿಯಾಗಿದ್ದ ಸಮಯದಲ್ಲಿ 'ವಿಚಾರ ಕ್ರಾಂತಿಗೆ ಆಹ್ವಾನ'ನೀಡಿದರು. 'ನಿರುಂಕುಶಮತಿಗಳಾಗಿ' ಎಂಬ ಕರೆ ನೀಡಿದರು. "ಯಾವಾತನು ಅಂತಸ್ಸಾಧನೆಯಿಂದ ಆತ್ಮಶ್ರೀ ಸಮನ್ವಿತನಾಗಿರುತ್ತಾನೆಯೋ ಅಂಥವನು ಬುದ್ಧಿಯಲ್ಲಿ, ಭಾವದಲ್ಲಿ, ದೇಹದಲ್ಲಿ, ಜೀವನ ಸಂಗ್ರಾಮದಲ್ಲಿ, ಆತ್ಮಶ್ರೀ ವಿಹೀನನಿಗಿಂತಲೂ

ನಿಸ್ಸಂದೇಹವಾಗಿ ಮೇಲುಗೈಯಾಗುತ್ತಾನೆ. ಸೋಲು, ನಿರಾಶೆ, ಅವಮಾನ ಮೊದಲಾದ ದುರಂತ ಸನ್ನಿವೇಶಗಳು ಒದಗಿದಾಗಲೂ ಅವನ ಶಾಂತಿ, ಅವನ ಧೈರ್ಯ, ಅವನ ನಿರ್ಭರತೆ ಇವು ಅಂತಹನನ್ನು ಕೈಬಿಡದೆ ಉದ್ಧಾರಮಾಡುತ್ತವೆ." ಎಲ್ಲಾ ಶ್ರೀಗಳಿಗಿಂತ 'ಆತ್ಮಶ್ರೀ' ಮುಖ್ಯವೆಂಬ ತತ್ವ ಎಷ್ಟು ಅಪರೂಪದ್ದು, ಅನನ್ಯವಾದದ್ದು ಎಂಬುದನ್ನು ಗ್ರಹಿಸಬೇಕು. ಕನ್ನಡ ವೈಚಾರಿಕ ಕ್ಷೇತ್ರದ ಕ್ಷಿತಿಜಗಳು ಇದರಿಂದ ಮತ್ತೂ ವಿಸ್ತೃತ ಗೊಂಡಿವೆ.

ಬುದ್ಧನ ಪ್ರೇಮ ಶಾಂತಿಗಳು, ಗಾಂಧೀಜಿಯವರ ಅಹಿಂಸೆ, ಸತ್ಯಾಗ್ರಹಗಳು, ಪರಮಹಂಸರ ಮಾನವೀಯ ತತ್ವಗಳು ಕುವೆಂಪು ಕೃತಿಗಳನ್ನು ಪ್ರಭಾವಿಸಿವೆ. ಈ ಕಾರಣದಿಂದಾಗಿ ಜಾತಿ, ಮತ, ಪಂಥಗಳಾಚೆ ದೃಷ್ಟಿ ಬೀರಲು ಸಮನ್ವಯತೆ ಸಾಧಿಸಲು, ಪೂರ್ಣದೃಷ್ಟಿ ಪಡೆಯಲು ಕುವೆಂಪು ಅವರಿಗೆ ಸಾಧ್ಯವಾಯಿತೆನ್ನಬೇಕು.

ಭಾರತೀಯ ಪರಂಪರೆಯ ಉತ್ತಮ ಮೌಲ್ಯಗಳನ್ನು ಜೀರ್ಣಿಸಿಕೊಂಡದ್ದು, ವರ್ತಮಾನದ ಪ್ರತಿ ಆಗುಹೋಗುಗಳಿಗೂ ತೀವ್ರವಾಗಿ ಪ್ರತಿಕ್ರಿಯಿಸಿದ್ದು, ಮುಂದಾ ಲೋಚನೆ ಮುಂಧೋರಣೆಗಳನ್ನು ಬೆಳೆಸಿಕೊಂಡದ್ದು ಈ ಕಾರಣಗಳನ್ನು ಕುವೆಂಪು ಸಾಹಿತ್ಯಸೃಷ್ಟಿಯ ಹಿನ್ನಲೆಯಲ್ಲಿ ಅರಿಯಬಹುದು. ಟಾಲ್‌ಸ್ಟಾಯ್, ಗಾರ್ಕಿ, ಚೆಕೋವ್ ರಶಿಯದ ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಕೃತಿಗಳಿಂದ ಉಳಿಸಿ, ಬೆಳೆಸಿದ್ದಾರೆ. ಅದೇ ತೆರನಾಗಿ ಕುವೆಂಪು ಕೃತಿಗಳು ಕೂಡ ಹೊಸಗನ್ನಡ ಉಷಃಕಾಲ ದಲ್ಲಿ ಅಸದೃಶ ಕಾರ್ಯವೆಸಗಿವೆ. ಹಾಗಾಗಿ ಕುವೆಂಪು ಸಾಹಿತ್ಯದ ಸಾಹಿತ್ಯಕ ಗುಣಾವ-ಗುಣಗಳೇನೇ ಇದ್ದರೂ, ಒಂದು ಕಾಲಖಂಡದಲ್ಲಿ ಇತಿಹಾಸದ ಅಗತ್ಯವನ್ನು ಪೂರೈಸಿ ಸಾಂಸ್ಕೃತಿಕ ದಾಖಲೆಗಳಾಗಿ ನಿಂತಿರುವ ಕಾರಣ ಅವುಗಳಿಗೆ ಹೆಚ್ಚಿನ ಬೆಲೆಯಿದೆ.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ಗಾಂಧೀಜಿ

ಶ್ರೀ ರಾಮಾಯಣ ದರ್ಶನಂ

ಡಾ. ಪ್ರಧಾನ ಗುರುದತ್

ಆಧುನಿಕ ಯುಗದ ಮಹೋನ್ನತ ಕಾವ್ಯ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಜಾಗತಿಕ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆಯೂ ಆಗಿದೆ. ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಗಳ ಪ್ರತೀಕವಾಗಿರುವ ಈ ಕಾವ್ಯದ ಆವಿರ್ಭಾವ ಭಾರತೀಯ ಕಾವ್ಯಕ್ಷೇತ್ರದಲ್ಲಿ ಮಾತ್ರವಲ್ಲದೆ, ಜಾಗತಿಕ ಸಾಹಿತ್ಯಕ್ಷೇತ್ರದಲ್ಲಿಯೇ ಒಂದು ವಿಸ್ಮಯಕಾರಿ ಘಟನೆಯಾಗಿದೆ. ಭಾಷಿಕ–ಸಾಹಿತ್ಯಿಕ ಸಿದ್ಧಿಯ ಉತ್ತುಂಗ ಶಿಖರವನ್ನೇ ಇದು ಪ್ರತಿನಿಧಿಸುತ್ತದೆ. ಅಷ್ಟೇ ಅಲ್ಲ, "ಮಹಾಕಾವ್ಯದ ಕಾಲ ಮುಗಿದುಹೋಯಿತು ಎನ್ನುವವರಿಗೆ ಒಂದು ಸವಾಲಾಗಿ, ಮಹತ್ತಾದುದಕ್ಕೆ ಕಾಲದ ಕಟ್ಟಿಲ್ಲವೆನ್ನುವುದಕ್ಕೆ ಒಂದು ಸಾಕ್ಷಿಯಾಗಿ 'ರಾಮಾಯಣ ದರ್ಶನಂ' ಸೃಷ್ಟಿಯಾಗಿದೆ. ಹಳೆಯ ಕಥೆ ಯುಗಧರ್ಮವನ್ನು ಮೈಗೂಡಿಸಿಕೊಂಡು ಎಷ್ಟರಮಟ್ಟಿಗೆ ಹೊಸದಾಗಬಹುದೆಂಬುದಕ್ಕೆ ಈ ಕಾವ್ಯ ಉಜ್ವಲ ಉದಾಹರಣೆಯಾಗಿದೆ." ಅಂತೆಯೇ "ವೈಜ್ಞಾನಿಕ ಯುಗದ ಪ್ರತಿಭೆಯ ಮೂಷೆಯಲ್ಲಿ ಕರಗಿ ಹೊರಬರುವಾಗ, ಹೊಸ ರೂಪ ಸೌಂದರ್ಯಗಳಿಂದ ಪ್ರಕಾಶಿಸು"ತ್ತಿರುವುದು ಮಾತ್ರವಲ್ಲದೆ, "ಕಾಲವಶರಾದ ಪಂಪ ನಾರಣಪ್ಪಾದಿಗಳಿಗೆ ಅಲಭ್ಯವಾಗಿದ್ದ ವಿಜ್ಞಾನ ಯುಗದ ಅನುಭವಾಲೋಚನೆ"ಗಳಿಂದ ಸಮನ್ವಿತವಾಗಿ ಪ್ರಾಗ್–ವರ್ತಮಾನ–ಭವಿಷ್ಯದ್ ವ್ಯಾಪಿಯಾದ 'ದರ್ಶನ'ವನ್ನೊಳಗೊಂಡು, ಈ ಯುಗದ ವ್ಯಕ್ತಾವ್ಯಕ್ತ ಅಭೀಪ್ಸೆಗಳಿಗೆ ನುಡಿಗೊಟ್ಟಿರುವ ಮಹತ್ತರ ಕೃತಿಯೂ ಆಗಿದೆ. "ಇದರ ಬೃಹದ್ಗರ್ಭದಲ್ಲಿ ಅಡಗಿರುವ ಕಲ್ಪಾಂತರಸ್ಥಾಯಿಯೂ ಲೋಕಾತೀತವೂ ಅತೀಂದ್ರಿಯಗಮ್ಯವೂ ಆದ ರಹಸ್ಯಗಳನ್ನು ಕೆದಕಿಬೆದಕಿ ನೋಡಿ ಇದರ ಗುಟ್ಟು ಇಷ್ಟೇ ಎಂದು ಹೇಳಲು ಎಂಟೆರ್ಡೆಯಲ್ಲ ಹದಿನಾರೆರ್ಡೆಯಿದ್ದರೂ ಸಾಲದು. ಇಲ್ಲಿಯ ಬಹಿರ್ಘಟನೆಗಳು

ಯಾರಿಗಾದರೂ ಅರ್ಥವಾಗುತ್ತವೆ. ಆದರೆ, ಇಂದ್ರಿಯಾತೀತವಾದ ಅಲೌಕಿಕ ಘಟನೆಗಳು ರಸಋಷಿಯ ದಿವ್ಯಪ್ರತಿಭೆಗೆ ಮಾತ್ರ ಗೋಚರವಾಗುತ್ತವೆ. ಪೂರ್ಣದೃಷ್ಟಿಯಿಂದ ನೋಡುವವರಿಗೆ ಮಾತ್ರ ತುಷ್ಟಿಪುಷ್ಟಿಗಳೆರಡೂ ಲಭಿಸಿ, ಅವರ ಚೇತನ ಬೆಳಗುತ್ತದೆ." ಹೀಗಾಗಿ ಕುವೆಂಪು ಅವರೇ ಎಂದಿರುವಂತೆ, "ಕಾವ್ಯ ಬೇಕಾದವರಿಗೆ ಇಲ್ಲಿ ಕಾವ್ಯ ಸಿಗುತ್ತದೆ, ಕಥೆ ಬೇಕಾದವರಿಗೆ ಕಥೆ ಸಿಗುತ್ತದೆ; ದರ್ಶನ ಬೇಕಾದವರಿಗೆ ದರ್ಶನ ಸಿಗುತ್ತದೆ." ಮೇಲಾಗಿ "ಇದು ದೈವೀಶಕ್ತಿಯನ್ನು ಮತ್ತೆ ಈ ಮರ್ತ್ಯಕ್ಕೆ ತಂದಿದೆ; ಮರ್ತ್ಯಕ್ಕೂ ಅಮರ್ತ್ಯಕ್ಕೂ ಸಂಪರ್ಕವನ್ನುಂಟುಮಾಡಿದೆ. ಪೂರ್ಣದೃಷ್ಟಿಯ ಪೂರ್ಣ ದರ್ಶನಕ್ಕೆ ಪೂರ್ಣಪ್ರತಿಮೆ, ಶ್ರೀ ರಾಮಾಯಣ ದರ್ಶನಂ."

'ಶ್ರೀ ರಾಮಾಯಣ ದರ್ಶನಂ' ಸ್ಪಷ್ಟವಾಗಿಯೇ ತನ್ನ ಕಥೆಯ ಚೌಕಟ್ಟಿಗೆ ವಾಲ್ಮೀಕಿಯ 'ರಾಮಾಯಣ'ಕ್ಕೆ ಋಣಿಯಾಗಿದೆ. ಆದರೆ, ಈ ಋಣ ಅಷ್ಟಕ್ಕೇ ಮುಗಿದುಹೋಗುತ್ತದೆ. ಆ ಚೌಕಟ್ಟಿನಲ್ಲಿ ಬೆಳಗುತ್ತ ನಿಂತಿರುವ ಅಪೂರ್ವ ಕಲಾಸೃಷ್ಟಿ ಸಂಪೂರ್ಣವಾಗಿ ಕುವೆಂಪು ಅವರ ಸ್ವಂತ, ಮೌಲಿಕ ಕೊಡುಗೆ. ಅಲ್ಲಲ್ಲಿ, ಕೆಲವೊಂದು ಅನುಭವ ಆಲೋಚನೆಗಳಿಗೆ, ಅವರೇ ಕಾವ್ಯದ ಆರಂಭದಲ್ಲಿ ನಮಿಸಿರುವ ಕೆಲವು ಜಗತೀಕಲಾಚಾರ್ಯರಿಗೂ ಋಣಿಯಾಗಿರಬಹುದು. ಆದರೆ, ಅವರ ಈ ಕಾವ್ಯದ ಯಾವ ಭಾಗವೂ ಎಲ್ಲಿಂದಲೂ ಸಾರಾಸಗಟಾಗಿ ಕದ್ದಿರುವುದಂತೂ ಅಲ್ಲ. ಶ್ರೀ ಕುವೆಂಪು ಅವರ ವ್ಯಾಪಕವಾದ ಅಧ್ಯಯನವನ್ನೇ ಆಧಾರವಾಗಿರಿಸಿಕೊಂಡು, ಅವರ ಭಾವನೆ–ಆಲೋಚನೆ–ಚಿಂತನೆಗಳಿಗೆ ಹೊರಗಿನ ಆಕರಗಳನ್ನು ಅರಸುವ ಪ್ರಯತ್ನಗಳನ್ನೂ ಮಾಡಬಹುದು. ಆದರೆ ಈ ಬಗೆಯ ಆರೋಪಗಳನ್ನು ಎದುರಿಸಿದ, ಪಾಶ್ಚಾತ್ಯ ಮಹಾಕಾವ್ಯದ ಮಹೋನ್ನತ ಸಾಧನೆಯೊಂದರ ಪ್ರತೀಕವಾಗಿರುವ ಮಿಲ್ಟನ್ ಸಾರಿ ಹೇಳಿರುವಂತೆ, "Borrowing, if it not be bettered by the borrower, among good authors is accounted plagiarie." ಇಂಥ ಕೆಲವು ಅನುಭವ–ಆಲೋಚನೆಗಳು ಕುವೆಂಪು ಅವರ ಮಾಂತ್ರಿಕ ಸ್ಪರ್ಶದಿಂದ ಹೇಗೆ ಅಭಿನವ ರಾಮಣೀಯಕತೆಯನ್ನು ಪಡೆದುಕೊಂಡಿವೆ ಎಂಬುದನ್ನು ಗಮನಿಸಿದಾಗ, ಮಿಲ್ಟನ್ನನ ವಿಷಯದಲ್ಲಿ ಫಿಲಿಪ್‌ನೇವ್ ಹೇಳಿರುವ ಮಾತು ಕುವೆಂಪು ಅವರ ವಿಷಯದಲ್ಲಿಯೂ ಅರ್ಥಪೂರ್ಣವಾಗಿ ಅನ್ವಯಿಸುತ್ತದೆ ಎಂದೆನ್ನಿಸುತ್ತದೆ: "It was his peculiar study to explore the traces of genius, in whatever authors had gone with eminence before him. He read them all. He took the golden ornaments from the hands of the best artists; he considered their fashion, their workmanship, their weight, their alloy; and storing them and arranging them for occasion, he adopted them, as he saw fit, to the chalice or the pixis, formed from the sublime patterns of his own mind." ಇದು ಕುವೆಂಪು ಅವರ ಆತ್ಮೀಕರಣ ವಿಧಾನದ ಬಗೆಗಿನ ವ್ಯಾಖ್ಯೆಯೂ

ಆಗುತ್ತದೆ. ಹೀಗಾಗಿ, ಕುವೆಂಪು ಅವರ ಭಾವನೆ, ಆಲೋಚನೆ, ಚಿಂತನಗಳಿಗೆ ಬಾಹ್ಯ ಪ್ರೇರಣಾಸ್ರೋತಗಳನ್ನು ಅರಸುವವರಿಗೆ ನಿರಾಶೆ ಕಟ್ಟಿಟ್ಟ ಗಂಟಾಗುತ್ತದೆ. ಎಲ್ಲಿಂದ, ಏನನ್ನೇ ಅರಸಿ, ಎಳೆದುತಂದರೂ, ಮಿಲ್ಟನ್ನನ ವಿಷಯದಲ್ಲಿ ಜೆ. ಎಸ್. ಹ್ಯಾನ್ ಫೋರ್ಡ್ ಹೇಳಿದಂತೆ, "When the labors of the source hunters are done, **Paradise Lost** remains one of the most original works in English or in any literature" ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವೂ ಜಗತ್ತಿನ ಅತ್ಯಂತ ಮೌಲಿಕ ಕೃತಿಗಳಲ್ಲಿ ಒಂದಾಗುತ್ತದೆ.

ಯಾವುದೇ ಜಾಗತಿಕ ಸಾಹಿತ್ಯಿಕ ಪ್ರತಿಭೆಯ ಎದುರೂ ಕುವೆಂಪು ಮಂಕಾಗಿ ನಿಲ್ಲುವುದಿಲ್ಲ, ಕೈಯೊಡ್ಡಿ ಕೀಳಾಗುವುದಿಲ್ಲ ಎಂಬುದಕ್ಕೆ ಹೋಮರನಂಥ ಪಾಶ್ಚಾತ್ಯ ಸಾಹಿತ್ಯಲೋಕದ ದೈತ್ಯಪ್ರತಿಭೆಯ ಚೇತನವನ್ನೂ ತಮ್ಮ ಒರೆಗಲ್ಲಿನಲ್ಲಿ ಉಜ್ಜಿ ನೋಡುವ ಕುವೆಂಪು ಅವರ ನೈಕಷಮನೋಧರ್ಮವೇ ಸಾಕ್ಷಿಯಾಗಿದೆ. ಉದಾಹರಣೆಗೆ ಹೋಮರನ ಬಗೆಗಿನ ಅವರ ಈ ನಿಲುವನ್ನೇ ನೋಡಬಹುದು :

ಕುವೆಂಪು ಅವರ ಕಾವ್ಯ ವಾಲ್ಮೀಕಿಯ 'ಶ್ರೀ ರಾಮಾಯಣ'ವನ್ನು ಅನೇಕ ವಿವರಗಳಲ್ಲಿ ಮೀರಿ ನಿಲ್ಲುತ್ತದೆ ಎಂಬುದಕ್ಕೆ 'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯದ ಅನೇಕ ಪ್ರಸಂಗಗಳು ನಿದರ್ಶನವಾಗಿ ನಿಲ್ಲುತ್ತವೆ. ಮೊದಲನೆಯದಾಗಿ, ಈ ಕಾವ್ಯದ ಅಧಿನಾಯಕ ಪಾತ್ರವಾಗಿರುವ ಶ್ರೀರಾಮನ ಬಗೆಗಿನ ಅವನ ದೃಷ್ಟಿ ಕೋನವನ್ನೇ ತೆಗೆದುಕೊಳ್ಳಬಹುದು. ವಾಲ್ಮೀಕಿಯಾದರೋ 'ರಾವಣನ ವಧೆ'ಯನ್ನು ಚಿತ್ರಿಸುವುದನ್ನೇ ತನ್ನ ಕಾವ್ಯದ ಪರಮಗುರಿಯಾಗಿಸಿಕೊಂಡಿದ್ದಾನೆ. ಕುವೆಂಪು ಅವರು ಮೂಲದ ಆ ಚೌಕಟ್ಟನ್ನು ಅನುಸರಿಸಿ, "ರಾವಣವದಾರ್ಥಮಿಾ ನರತನುವನಾಶ್ರಯಿಸಿ ಬಂದ ಲೀಲಾವತಾರಿಯೆ" (ಪು. ೮೩೭) ಎಂದು ರಾಮನನ್ನು ಸ್ತುತಿಸಿದ್ದಾರಾದರೂ, "ರಾವಣ ಕಂಸರನ್ನು ವ್ಯಕ್ತಿಶಃ ಕೊಲ್ಲುವುದಕ್ಕೆ ಮಾತ್ರವೇ ಭಗವಂತ ಅವತರಿಸುತ್ತಾನೆ ಎಂಬುದು ಅಯೋಗಮತಿಗಳಿಗಾಗಿ ಇರುವ ಕವಿಕಲ್ಪನೆ" ಎಂದು ದೃಢವಾಗಿ ನಂಬಿದ್ದಾರೆ. ಆದ್ದರಿಂದಲೇ ಅವರ ಯೋಗಮತಿ ನಾವು ಒಮ್ಮೆಗೇ ಬೆಚ್ಚಿ ಬೀಳುವಂಥ ಮಾತುಗಳ ನ್ನಾಡುತ್ತದೆ :

"ಕೊಂದ ಕತದಿಂದೇಂ
ಪೆರ್ಮನಾದನೆ ರಾಮನಾ ಮಾತನುಳಿ : ಪಗೆಯೆ ?
ತೆಗೆತೆಗೆ ! ಪೆರ್ಮೆಗೊಲ್ಮೆಯೆ ಚಿಹ್ನೆ. ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ ? ದೈತ್ಯನಂ ಗೆಲಿದ ಕಾರಣಕಲ್ತು,
ತನ್ನ ದಯಿತೆಯನೊಲಿದ ಕಾರಣಕೆ, ಗುರುಕನಾ
ರಾಮಚಂದ್ರಂ, ಕೋಲಾಹಲದ ರುಚಿಯ ಮೋಹಕ್ಕೆ
ಮರುಳಾದ ಮಾನವರ್ ರಾವಣನ ಕೊಲೆಗಾಗಿ
ರಾಮನಂ ಕೊಂಡಾಡಿದೊಡೆ ಕವಿಗುಮಾ ಭ್ರಾಂತಿ

ತಾನೇಕೆ? ಮಣಿಯುವೆನು ರಾಮನಡಿದಾವರೆಗೆ
ದಶಶಿರನ ವಧೆಗಾಗಿಯಲ್ತು; ಮಂದಾಕಿನಿಯ
ತಿಳಿವೊನಲ ಮೀಯುತಿರಲೊರ್ದಿನಂ ತಾಂ ಕಂಡ
ದೃಶ್ಯ ಸೌಂದರ್ಯದಿಂದಾತ್ಮ ದರ್ಶನಕೇರ್ದ
ರಸ ಸಮಾಧಿಯ ಮಹಿಮೆಗಾಗಿ!” (ಪು. ೧೬೧)

ಕುವೆಂಪು ಅವರ ಈ ಕ್ರಾಂತಿಕಾರೀ, ನಿಲುವಿನಿಂದಾಗಿಯೇ, ಈ ಕಾವ್ಯದಲ್ಲಿ ಮುಖ್ಯರೆಂತೋ ಅಮುಖ್ಯರೂ, ಸಾಮಾನ್ಯರೂ ಗಮನಾರ್ಹರಾಗಿ ಪರಿಣಮಿಸುತ್ತಾರೆ. ವಾಸ್ತವವಾಗಿ, ದೇಜಗೌ ಅವರೆಂದಿರುವಂತೆ, “ಇತಿಹಾಸದ ‘ತೇಲುನೋಟಕ್ಕೆ ಜಾಜ್ವಲ್ಯಮಾನರಾದ ವ್ಯಕ್ತಿಗಳು ಬೀಳುತ್ತಾರೆಯೇ ಹೊರತು, ಎಲೆಮರೆಯಕಾಯಿಯಂತೆ ಶುದ್ಧವಾದ ಬಾಳನ್ನ ಬಾಳಿ ಲೋಕಕಲ್ಯಾಣಕ್ಕಾಗಿ ಮೌನ ತಪಸ್ಸನ್ನು ಆಚರಿಸುತ್ತಿರುವ ಮಹಾತ್ಮರು ಬೀಳುವುದಿಲ್ಲ. ಒಬ್ಬ ತನ್ನ ಸಾಧನೆಯಿಂದ, ಸಿದ್ಧಿಯಿಂದ ಲೋಕವನ್ನು ಆಕರ್ಷಿಸಿ ಸುಪ್ತಚೇತನವನ್ನು ಬಡಿದೆಬ್ಬಿಸಿ, ಬಿರುಗಾಳಿಯಂತೆ ತಿರ್‍ರನೆ ತಿರುಗಿ ಸಿಡಿಲಿನಂತೆ ಆರ್ಭಟಿಸಿ, ಭೂಕಂಪದಂತೆ ನಡುಗಿಸಿ ಅನೇಕ ಸಾಧಕರನ್ನು ಉದ್ಧರಿಸಿ ಮುಕ್ತಾತ್ಮರನ್ನಾಗಿ ಮಾಡಬಹುದು. ಮತ್ತೊಬ್ಬ ಮಂದಾನಿಲನಂತೆ ತನ್ನ ಮೌನ ತಪಸ್ಸಿನಿಂದ ಲೋಕದ ಅರಿವಿಲ್ಲದೆಯೆ ಲೋಕವನ್ನು ಉದ್ಧರಿಸಬಹುದು. ಒಬ್ಬ ‘ಅಸಾಮಾನ್ಯನಾದರೆ ಮತ್ತೊಬ್ಬ ‘ಸಾಮಾನ್ಯ’; ಒಬ್ಬ ನಿರ್ಝರಿಣಿಯಾದರೆ, ಮತ್ತೊಬ್ಬ ಗುಪ್ತಗಾಮಿನಿ. ಆದರೆ, ಇಬ್ಬರ ಲಕ್ಷ್ಯವೂ ಒಂದೆ. ಖಂಡದೃಷ್ಟಿಗೆ ಅವರಲ್ಲಿ ತಾರತಮ್ಯಭಾವ ಉದಿಸಿದರೂ ಪೂರ್ಣದೃಷ್ಟಿಗೆ ಇಬ್ಬರೂ ಒಂದೆಯೆ. ಭಗವದ್ ದೃಷ್ಟಿಗೆ ಹಿರಿಯ ಕಿರಿಯ ಎಂಬ ಭೇದ ಭಾವನೆಯೇ ಇಲ್ಲ. ಸೈನ್ಯದಲ್ಲಿ ಮಹಾಯೋಧನ ಪಾತ್ರ ಎಷ್ಟು ಮುಖ್ಯವೊ ಸಾಮಾನ್ಯ ಯೋಧನ ಪಾತ್ರವೂ ಅಷ್ಟೇ ಮುಖ್ಯ. ಭಗವತ್ಸಂಕಲ್ಪ ಸಿದ್ಧಿಗೆ ಅಸಾಮಾನ್ಯನ ಜೀವನ ಹೇಗೆ ನಿಮಿತ್ತ ಸಾಧನವಾಗುತ್ತದೆಯೋ, ಹಾಗೆಯೆ ಸಾಮಾನ್ಯನ ಜೀವನವೂ ನಿಮಿತ್ತ ಸಾಧನವಾಗುತ್ತದೆ. ಭಗವಂತನಿಗೆ ಅಸಾಮಾನ್ಯತೆಗಿಂತ ಸಾಮಾನ್ಯತೆಯಲ್ಲಿಯೇ ಹೆಚ್ಚು ಒಲವರ....ಈ ತತ್ತ್ವ ಶ್ರೀ ರಾಮಾಯಣ ದರ್ಶನದಲ್ಲಿ ಮೊದಲಿಂದ ಕೊನೆಯತನಕ ಪ್ರತಿಪಾದಿತವಾಗಿದೆ...ಕವಿಯ ಬಹುಮುಖ ಪ್ರತಿಭೆ ಮತ್ತು ಪಾರದರ್ಶಿತ್ವ....ಹಿರಿಯ ವ್ಯಕ್ತಿಗಳಲ್ಲಿ ಎಂತೊ....‘ಸಾಮಾನ್ಯ’ರಲ್ಲಿಯೂ ಭಗವತ್‌ಶ್ರೀಯನ್ನು ದರ್ಶಿಸುತ್ತದೆ.” ಹೀಗಾಗಿ, ‘ಶ್ರೀ ರಾಮಾಯಣ ದರ್ಶನ’ದ ದಿವ್ಯ ಭೂಮಿಕೆಯಲ್ಲಿ, ಮೂಲ ರಾಮಾಯಣದಲ್ಲಿ ನಿರ್ಲಕ್ಷ್ಯಕ್ಕೊಳಗಾಗಿದ್ದ ಅನಾದರಕ್ಕೆ ಪಾತ್ರವಾಗಿದ್ದ, ಅಪೂರ್ಣ ದೃಷ್ಟಿಯ ಕಲ್ಪನೆಯಿಂದ ಜರ್ಜರಿತವಾಗಿದ್ದ ಊರ್ಮಿಳಾ, ಮಂಥರೆಯರಂಥ ಅನೇಕ ಪಾತ್ರಗಳು ನವೋನವವಾಗಿ, ಅಪೂರ್ವವಾಗಿ, ಆಶ್ಚರ್ಯಕರವಾಗಿ ಮೂಡಿ ನಿಲ್ಲುತ್ತವೆ. ಇಷ್ಟಾಗಿಯೂ “ಶ್ರೀರಾಮನಂಥ ಮಹಾಪುರುಷನ ಕಥೆಯ ನಡುವೆ ಕಥಾ ಪ್ರವಾಹಕ್ಕೆ ಅಡ್ಡಿಯಾಗದಂತೆ, ಮುಖ್ಯ ಪಾತ್ರಗಳ ಸ್ವರೂಪ ಸ್ವಭಾವ ಕ್ರಿಯೆಗಳಿಗೆ ಹೊಂದಿಕೊಳ್ಳುವಂತೆ ಪೋಷಕವಾಗುವಂತೆ ಸಾಮಾನ್ಯ ಸಂಗತಿಗಳನ್ನು ನಿರೂಪಿಸುವುದು, ಅವುಗಳನ್ನು ನಿರ್ಲಕ್ಷಿಸದಿರುವುದು ಕಾವ್ಯದ ಹಿರಿಮೆಗೆ ಸಾಕ್ಷೀಭೂತವಾಗಿದೆ” ಎಂಬುದು ತುಂಬ ಗಮನಾರ್ಹವಾದ ಸಂಗತಿ.

ಶ್ರೀ ಕುವೆಂಪು ಅವರು "ಕೋಲಾಹಲದ ರುಚಿಗೆ" ಮರುಳಾಗಿಲ್ಲವೆಂಬುದಕ್ಕೆ 'ಲಂಕಾದಹನ'ದಂಥ ಪ್ರಸಂಗವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದೇ ಸಾಕ್ಷಿ. ಯಾವನೇ ಸಾಧಾರಣ ಕವಿ ಇಂಥ ಅಸಾಧಾರಣ ತೀರ್ಮಾನವನ್ನು ಕೈಗೊಳ್ಳಲಾರ, ಅಷ್ಟು ಮಾತ್ರವಲ್ಲ, ಸಂಸ್ಕೃತಿ ವಿನಾಶದಲ್ಲಿ ನಂಬಿಕೆಯಿಲ್ಲದಿರುವ, ಅಂಥ ಮಾನವತೆಯ ಸುಂದರ ಕುಸುಮ ಸೃಷ್ಟಿಯನ್ನು ಪೋಷಿಸಿಕೊಂಡು ಬರುವ ಹಾಗೂ ಅದರ ನಳನಳಿಕೆಯಲ್ಲಿ ಸುಖ-ಸಂತೋಷಗಳನ್ನು ಕಾಣಬಯಸುವ ಆಧುನಿಕ ರಚನಾತ್ಮಕ ಮನೋಧರ್ಮವೂ ಅದರಲ್ಲಿ ಬೆರೆತು ಬರುವಂತೆ ಮಾಡುವ ಅಪೂರ್ವ ಕೌಶಲವನ್ನೂ ಕುವೆಂಪು ಮೆರೆಯುತ್ತಾರೆ. ಈ ಪ್ರಸಂಗವನ್ನು ಅವರು ನಿರ್ವಹಿಸಿರುವ ರೀತಿಯಂತೂ ಅಸ್ವಾದ್ಯದೃಶವಾಗಿದೆ. ಆಂಜನೇಯನ ಆತ್ಮಿಕ ಸಾತ್ತ್ವಿಕ ಬಲದೆದುರು ಸೋಲನ್ನೊಪ್ಪಿಕೊಂಡ ಲಂಕಾಲಕ್ಷ್ಮಿ ಅವನನ್ನು ಹೀಗೆ ಪ್ರಾರ್ಥಿಸುತ್ತಾಳೆ:

"ನೀಂ ಸಮರ್ಥನೆ ವಲಂ, ಮುನಿದರೀ ಲಂಕೆಯಂ
ಸುಟ್ಟುರುಹಿ ಕಡಲೊಳಳ್ದುವ ಬಲ್ಮೆ ನಿನ್ನೊಳಿಹುದಯ್.
ಬೇಡಿದಪೆನದರಿಂದೆ: ತಾನೆನಿತು ಕೆರಳುವ ಕತಂ
ನಿನಗೊದಗಿದೊಡಮೆನಗೆ ಕೇಡೆಸಗದಿರ್, ಪೂಜ್ಯ.
ಕಲೆಯ ಬಲೆ, ಚೆಲ್ವುನೆಲೆ ಈ ಲಂಕೆ;" (ಪು. ೪೪೫)

ಲಂಕಾದಹನದಿಂದ ಸಾಧಿಸಬಹುದಾಗಿದ್ದ ಕೋಲಾಹಲಕ್ಕಿಂತಲೂ ಹೆಚ್ಚಿನ ಕೋಲಾಹಲ ಮತ್ತು ಪರಿಣಾಮಗಳನ್ನು ಸ್ವಸಾಮರ್ಥ್ಯದಿಂದ ಆಂಜನೇಯ ಮೆರೆಯುವಂತೆ ಮಾಡಿದ್ದಾರೆ. ಆದರೆ, ಘಟನೆಯನ್ನು ಹೀಗೆ ಬದಲಾಯಿಸಿರುವುದರಿಂದ ಕಥಾಸ್ವಾರಸ್ಯಕ್ಕಾಗಲೀ, ಕಥೆಯ ವಿಕಾಸಕ್ಕಾಗಲೀ ಭಂಗ ಒದಗಿಲ್ಲವೆಂಬುದನ್ನು ಗಮನಿಸಬೇಕು.

ಈ ಮನೋಧರ್ಮಕ್ಕೆ ಅನುಗುಣವಾಗಿಯೇ ಕವಿ ಇಂಥ ಅನೇಕ ಮಾರ್ಪಾಟುಗಳನ್ನು ಮಾಡಿದ್ದಾರೆ. ಉದಾಹರಣೆಗೆ, ಈ ಯುಗದಲ್ಲಿ ಅನನ್ಯ ರೀತಿಯಲ್ಲಿ ಭಾರತ ಸ್ಥಾಪಿಸಿದ 'ಅಹಿಂಸೆ'ಯ ಮೌಲ್ಯವನ್ನು ಕುವೆಂಪು ತಮ್ಮ ಕಾವ್ಯದಲ್ಲಿ ಸ್ಥಾಪಿಸಿರುವ ರೀತಿ ನಮ್ಮನ್ನು ಬೆರಗುಗೊಳಿಸುತ್ತದೆ. 'ಪುತ್ರ ಕಾಮೇಷ್ಟಿ'ಯ ಪ್ರಸಂಗದಲ್ಲಿ ಇದನ್ನು ಕಾಣಬಹುದು. ಆ ಸಂದರ್ಭದಲ್ಲಿ ಜಾಬಾಲಿಯ ಮೂಲಕ ಕವಿ ಈ ಮಾತುಗಳನ್ನಾಡಿಸಿದ್ದಾರೆ:

"ಕುಲಪುರೋಹಿತರೊರೆದ ಜನ್ನಮಂ ಕೈಕೊಂಡು
ಪಸುಳೆರನ್ನರ ಪಡೆವೆಯುದು ದಿಟಂ. ಕೇಳಾದೊಡಂ
ಸನ್ನೊಂದು ಕಾಣ್ಕೆಯಂ. ಪೂರ್ವಪದ್ಧತಿವಿಡಿದು
ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾಕಾರ್ಯವಿಲ್ಲದಿಹ ಪ್ರೇಮಕ್ಕೆ
ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು

ಜಗವನಾಳುವ ಮತಂ.........ವಿಶ್ವಮುಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ ಹಿಂಸೆಯಿಂ
ಪ್ರೇಮಮೂರ್ತಿಗಳಾದ ಸಂತಾನಮುದಿಸದಯ್.

*   *   *

ವಿಶ್ವಶಕ್ತಿಸ್ವರೂಪಿಯುನಗ್ನಿಯಂ ಭಜಿಸು ನೀಂ
ಸಾತ್ವಿಕ ವಿಧಾನದಿಂ. ಪ್ರಜೆಗಳಂ ಬಡವರಂ
ಸತ್ಕರಿಸವರ್ಗೆ ಬಗೆ ತಣಿವವೋಲ್. ತೃಪ್ತಿಯಿಂ
'ದೊರೆಗೊಳ್ಳಿತಕ್ಕೆ !' ಎಂದಾ ಮಂದಿ ಪರಸಲ್ಕೆ,
ಪರಕೆಯುದೆ ದೇವರಾಶೀರ್ವಾದಕೆಣೆಯಾಗಿ
ಕೃಪಣ ವಿಧಿಯಂ ಪಿಂಡಿ ತಂದೀವುದೈ ನಿನಗೆ
ನೆಲದರಿಕೆಯೊಳ್ಮಕ್ಕಳಂ. ಜನಮನದ ಶಕ್ತಿ
ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮಿಳೆಗೆ
ತಪ್ಪದೆಳೆತರ್ಪುದು ಕಣಾ !" (ಪು. ೨೧–೨೨)

ಅಂತೆಯೇ, ಆಧುನಿಕ ಯುಗದಲ್ಲಿ ನೀತಿಯ ನಿಕಷ ಹೆಣ್ಣಿಗೊಂದು ಗಂಡಿಗೊಂದು ಆಗಿರುವುದು ಸಾಧ್ಯವಿಲ್ಲ; ಒಂದೇ ಒರೆಗಲ್ಲು ಇಬ್ಬರಿಗೂ ಸಮಾನರೂಪದಲ್ಲಿ ಅನ್ವಯವಾಗಬೇಕು ಎಂಬುದನ್ನು ಕುವೆಂಪು ಅವರು 'ಅಗ್ನಿ ಪರೀಕ್ಷೆ'ಯ ಪ್ರಸಂಗದಲ್ಲಿ ಸಾರಿ ಹೇಳಿದ್ದಾರೆ, ಇದಂತೂ ರಾಮಾಯಣ ಪರಂಪರೆಯಲ್ಲೇ ಅಪೂರ್ವವಾದ ನೂತನ ಸೃಷ್ಟಿಯಾಗಿ ಮೆರೆಯುತ್ತದೆ. ಯುದ್ಧದಲ್ಲಿ ಶ್ರೀರಾಮ ತನ್ನ ವಿಜಯದ ಅನಂತರ, ಸಾಲಂಕೃತಳಾಗಿ ಕರೆತರಲಾದ ಸೀತೆಯನ್ನು ಕಂಡು, ಹೀಗೆನ್ನುತ್ತಾನೆ :

"ಶಿರಃಸ್ನಾತೆ ! ಭೂಜಾತೆ !
ರಾಕ್ಷಸಶ್ರೀಯುತೆ ! ಅಲಂಕೃತೆ !" ಎನುತ್ತೆನುತೆ,
ವಕ್ರೋಕ್ತಿನಖದಿಂ ನೃಸಿಂಹಾವತಾರಮಂ
ಪುನರಭಿನಯಿಸುವಂತೆ, ಕೋಮಲೆಯ ಹೃದಯಮಂ"
(ಪು. ೬೫೦-೫೧)

ಜಾಳಂದ್ರಗೊಳಿಸಿ, ಅಷ್ಟೇ ಸಾಲದೆಂಬಂತೆ,

"ಸಂದದು ಪೂಜ್ಕೆ ನನಗೆ. ಕುಲತೇಜಮಂ
ಮತ್ತೆನ್ನ ಪುರುಷಕಾರವನುಳಿಸಿ ಜಯಿಸಿದೆನ್
ಕೊಂದೆನ್ ದಶಗ್ರೀವನಂ ; ನಿನ್ನಂ ಪಡೆಯಲಲ್ತು...
ನೀಂ ಸ್ಪುರದ್ರೂಪಿಣಿಯೆ ದಲ್ ! ದಶಾನನ್ ಅವಶಿ ;
ದಶರಥಾತ್ಮಜನಲ್ತು ! ತಿಳಿಯುವೊಡೆ ತಿಳಿ, ಸುಜ್ಞೆ,
ಪೇಳ್ದ ವಾಕ್ಯಾರ್ಥಮಂ." (ಪು. ೬೫೧)

ಎಂದಾಗ ಸೀತೆಗೆ ಬಡಿಗೆಯಿಂದ ಬಡಿದಂತಾಯ್ತು. ಮರುಕ್ಷಣವೇ ಮುಂದಿನ ಮಾರ್ಗವನ್ನು ನಿಶ್ಚಯಿಸಿ—

"ರಾಕ್ಷಸಂ ಮುಟ್ಟಿದನೆ? ನಾನಲ್ತು,
ದೈವಮುಪರಾಧಿ. ಮೆಯ್ಯನಲ್ಲದೆ ಮನವನೇಂ
ಮುಟ್ಟಿದನೆ? ಮುಟ್ಟಲಾರದೆ ಸುಟ್ಟು ಸೀದನಯ್,
ನಿನ್ನಲಗಿನೇರ್ಗೆಂತುಟಂತೆ!" (ಪು. ೮೫೨)

—ಎಂದು, ಹಾಗೂ "ಸದ್ಗತಿಗೆ ಶರಣೆನಗೆ ಹವ್ಯವಾಹನನಲ್ಲದನ್ಯರಂ ಕಾಣೆ" (ಪು. ೮೫೩) ಎಂದು ತನ್ನ ಸೂಚನೆಯ ಮೇರೆಗೆ ಲಕ್ಷ್ಮಣ ಸಿದ್ಧಪಡಿಸಿದ ಚಿತೆಯನ್ನು ಪ್ರವೇಶಿಸುತ್ತಾಳೆ. ಜನರೆಲ್ಲ ಇತ್ತ ಬೊಬ್ಬಿರಿಯುತ್ತಿದ್ದರೆ "ಸಾಕ್ಷಿಯೊಲ್ ನಿಟ್ಟಿಸುತಿರ್ದ ರಾಮಾನನಂ ತಾನಾಯ್ತು ದೀಪ್ಯಮಾನಂ" (ಪು. ೮೫೩) ಮುಂದೆ ಆದುದಾದರೂ ಏನು?

"ಚಲಿಸಿದನು ಚಿತೆಗೆ, ನೋಳ್ಪರಾ
ವಿಸ್ಮಯಂ ಚಿಂತೆಗೆ ತಿರುಗುವಂತೆ; ಓವೊವೋ
ಎಂಬನಿತರೊಳೆ ತಾಂ ಪ್ರವೇಶಿಸುತ್ತುಜ್ವಲಿಪ
ಗೋಪುರೋಪಮದಗ್ನಿ ಮಧ್ಯೆ ಮರೆಯಾದನೈ
ಜಮದಗ್ನಿಜಾತನಂ ಜಯಿಸಿದಾತಂ!" (ಪು. ೮೫೪)

ಅನಂತರದಲ್ಲಿ ಹವ್ಯವಾಹನನ ಪವಿತ್ರ ತನುವಿನಿಂದ ಜಾನಕಿಯನ್ನು ಕೈಹಿಡಿದು ಕರೆದುಕೊಂಡು ಶ್ರೀರಾಮ ಹೊರಬರುತ್ತಾನೆ. ಓಡಿಬಂದು ದಿಂಡುರುಳಿದ ಅನಲೆ, ಸರ್ವರ ಹೃದಯದಲ್ಲಿದ್ದ—

"ಹದಿಬದೆಯನಗ್ನಿವುಗಿಸುವುದಿರಲಿ,
ತನ್ನಂ ಪರೀಕ್ಷಿಸುವರಾರೊ? ತಾನೇಂ ಪೊರ್ದೊ
ದುರಿತ ದೋಷಕೆ?" (ಪು. ೮೫೦)

—ಎಂಬ ಶಂಕೆಗೆ ಅಭಿವ್ಯಕ್ತಿ ನೀಡಿದ್ದು ಮಾತ್ರವಲ್ಲದ, ಈ ಬೆಳವಣಿಗೆಯ ಪರಿಣಾಮವಾಗಿ ಸಾಧಿತವಾದ ಮಹತ್ವಪೂರ್ಣ ಸತ್ಯವಾವುದೆಂಬುದನ್ನು ಹೊರಗೆಡಹುತ್ತಾಳೆ:

"ಪೂಜ್ಯೆಯಂ ಪಾಲಿಸುವ ನೆವದಿ ನೀನೂ ಪರೀಕ್ಷಿತನಲಾ!"
(ಪು. ೮೫೬)

ದರ್ಶನ–ಚೋದಿತವಾದ ಕಾವ್ಯಪ್ರತಿಭೆ ಎಂಥ ಉತ್ತಮವಾದ ಸಾಹಿತ್ಯವನ್ನು ಒದಗಿಸಬಲ್ಲದು ಎಂಬುದಕ್ಕೆ ಈ ಪ್ರಸಂಗ ನಿರ್ವಿವಾದಿತವಾದ ಸಾಕ್ಷ್ಯವನ್ನು ಒದಗಿಸುತ್ತದೆ. ಇದು ಶ್ರೀರಾಮನ ಲೋಕಗುರುತ್ವಕ್ಕೆ ತಗುವ ಆದರ್ಶವೇ ಆಗಿದೆ.

ಇದೇ ರೀತಿ, ಮಂಥರೆಯೂ ಇಲ್ಲಿ 'ಮಮತೆಯ ಸುಳಿ'ಯಾಗಿ ಅಭಿನವ, ಸೃಷ್ಟಿಯಾಗಿ ಮೂಡಿದ್ದಾಳೆ. ಕುವೆಂಪು ಅವರ ತ್ರಿಕಾಲ ಸ್ಪರ್ಶಿಯಾದ ಕವಿ ಪ್ರಜ್ಞೆಯ ಪ್ರತೀಕವಾಗಿಯೂ ಈ ಪಾತ್ರ ಮೂಡಿಬಂದಿದೆ. ದಶಶಿರನ ವಿಧಿಯೇ ಈ ಸಂದರ್ಭದಲ್ಲಿ ಮಂಥರೆಯ ಮನಸ್ಸನ್ನು ಮಥಿಸಿತಂತೆ :

"ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ,
ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ
ನೀಡಿ. ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?
ಮಥಿಸಿದುದು ದಶಶಿರನ ವಿಧಿ ಮಂಥರೆಯ ಮನದಿ
ತನ್ನ ತಂತ್ರದ ಕೃತಿಯನಾ ಇರುಳ್ ಕನಸಿನಲಿ :" (ಪು. ೭೦-೭೧)

ಆ ಕನಸಾದರೂ ಎಂಥದು !

"ಮುದುಕಿಯಾದಾ ಕೈಕೆ ಭರತನಂ ಕೈವಿಡಿದು
ಮರುಧರೆಯನಲೆಯುತಿರ್ದಳ್ ವಿಧವೆಯೋಲ್. ಕುಬ್ಜೆ
ಕರೆದೊಡಂ ಕಿವಿಗೊಡದೆ, ಮಗನೊಡನೆ ಕಿರಿರಾಣಿ
ಮುಂದುಮುಂದೆಯುದ್ದಿರಿ, ಬೈಗುಗಳ್ತಲೆಯಿಳಿದು
ನುಂಗಿದತ್ತಿರ್ವರಂ." (ಪು. ೭೧)

"ಈ ಕನಸು ಕೇವಲ ಅವಳ ವ್ಯಷ್ಟಿ ಮನಸ್ಸಿನ ಸೃಷ್ಟಿಯಾಗಿರದೆ ಸಮಷ್ಟಿ ಮನಸ್ಸಿನ ವ್ಯೂಹರಚನಾರ್ಥವಾದ ಸೃಷ್ಟಿಯೂ ಆಗಿದೆ" ಎಂಬುದನ್ನು ಗಮನಿಸಬೇಕು. ಇದರ ಪರಿಣಾಮವಾಗಿ, ಮಂಥರೆ ಕೈಕೆಯನ್ನು ಬಗೆಬಗೆಯಾಗಿ ಚುಚ್ಚಿ ಎಬ್ಬಿಸುತ್ತಾಳೆ. "ಸಂಮಥಿತ ದಶರಥ ತನುಜ ಜೀವಿತ ಕಥಾಸಾಗರೋತ್ಥಿತ ಘೋರಗರಳ" ಉದಿಸಿ ಬರುವುದಕ್ಕೆ ಮೂಲಕಾರಣವಾಗುತ್ತಾಳೆ.

ರಾಮ ವನವಾಸದ ಮಹಾಘಟನೆಗೆ ಕಾರಣಳಾಗುವ "ಮಂಥರೆ ಎಲ್ಲಿಂದಲೋ ತೇಲಿಬಂದ ತರಗೆಲೆಯಲ್ಲ. ಅವಳನ್ನು ವಿಧಿಮೊದಲೆ ವಿಲಕ್ಷಣವಾಗಿಯೆ ಸೃಷ್ಟಿಸುತ್ತಾನೆ. ತನ್ನ ಮಹದ್ ಪ್ರಕಾರಗಳನ್ನೆಲ್ಲ ವಿಕಾರಗಳ ಮೂಲಕವೂ ಅಲಕ್ಷಿತಗಳ ಮೂಲಕವೂ ಸಾಧಿಸುತ್ತಾನೆ. ಅದೆಲ್ಲವೂ ಅನ್ಯಾಸಾಧ್ಯವೆಂಬಂತೆಯೂ ತೋರಿ ಮೇಲಾಗಿ ಸೃಷ್ಟಿಕರ್ತ ತನ್ನ ಯಾವ ಲೀಲಾಕಾರ್ಯವನ್ನೂ ಎಷ್ಟು ಹಿಂದೆಯೇ ಪ್ರಾರಂಭಿಸಿಬಿಡುತ್ತಾನೆ. ರಾಮ ರಾವಣರಾರೂ ಹುಟ್ಟಿಲ್ಲದ ಮುನ್ನವೆ ಈ ವ್ಯಕ್ತಿಯ ಪ್ರಾದುರ್ಭಾವವಾಗುತ್ತದೆ" ಎಂಬುದು ಬಹುಮುಖ್ಯವಾದ ಸಂಗತಿ. ರಾಮಾಯಣದ ಇತರ ಕವಿಗಳಾರೂ ಗುರುತಿಸದೆ ಹೋಗಿದ್ದ, ವಾಲ್ಮೀಕಿಯಲ್ಲಿ ತುಂಬ ಸೂಕ್ಷ್ಮ ಸೂಚನೆಯಂತಿರುವ "ಜ್ಞಾತಿದಾಸೀ, ಯತೋ ಜಾತಾ ಕೈಕೇಯ್ಯಾಸ್ತು ಸಹೋಷಿತಾ" (೭.೧) ಎಂಬ ಮಾತುಗಳನ್ನು

ಗ್ರಹಿಸಿ, ಅತ್ಯದ್ಭುತವೂ, ಅತ್ಯಪೂರ್ವವೂ, ಆದ ಚಿತ್ರವನ್ನು ಸೃಷ್ಟಿಸುತ್ತದೆ, ಕುವೆಂಪು ಅವರ ಪ್ರಾಗ್-ವರ್ತಮಾನ-ಭವಿಷ್ಯದ್ ವ್ಯಾಪಿಯಾದ ಸರ್ವಂಕಷ ಪ್ರತಿಭೆ. ಆ ಚಿತ್ರ ಹೀಗಿದೆ:

"ಕೈಕೆಯ ತಾತನೊರ್ದಿನಂ
ಬೇಂಟೆಯಾಯಾಸದಿಂ ಬೈಗುಪೊಳ್ತಡವಿಯೊಳ್
ಪರಿವಾರದೊಡನೆ ಬರುತಿರೆ, ಪಳುವೆ, ತಾನಳುವಂತೆ
ಗೋಳಿಟ್ಟುದೊಂದು ಶಿಶುರೋದನಂ. ಕೂರ್ಗೆಲಸದಿಂ
ಪಿಂತಿರುಗುತಿರ್ದ ಪಾರ್ಥಿವನೊಳುದಿಸಿತು ಕರುಣೆ,
ಕಟ್ಟಲಿಹ ಕಬ್ಬಕೆ ಮೊದಲ್‌ಗುದ್ದಲಿಯ ಪೂಜೆಪೋಲ್.
ನಡೆದು ನೋಡಲ್ಕೆ, ಕಾಣಿಸಿತೊಂದು ದಸ್ಯುಶಿಶು,
ಮುಳ್‌ಮಣ್ಣು ತರಗೆಲೆಯಿಡಿದ ನೆಲದ ಮೇಲಿರುವೆ
ಮುತ್ತಿ, ಹಾ, ವಿಕೃತಿ ವಕ್ರತೆ ರೂಹುಗೊಂಡಂತೆ!
ಪೆತ್ತವರ ಸುಳಿವಿಲ್ಲದಿರ್ದ ಆ ಪೆಣ್‌ಪಸುಳೆಯಂ
ಪಿಡಿದೆತ್ತಿ ಕಟ್ಟಿರುಂಪೆಯನೊರಸಿ, ಸಂತೈಸಿದನ್
ಗೂಬೆಯಪಶಕುನದ ವಿಕಾರಯುಲಿಯನ್ನೇರ್ದು
ಕವಿಯುತಿರೆ ಕಾಡುಗಳ್ತಲೆ, ತಂದನೂರಿಗವಳಂ
ದಾರಿಯ ಸಡೆವ ಮಾರಿಯಂ ಮನೆಗೆ ತರುವಂತೆ,
ಮುಂದಣ ಮಹಾದುಃಖ ದಾವಾನಳಕೆ ತನ್ನ
ಕಿರುಗಜ್ಜದಾ ಒಂದೆ ಕಿಡಿಯಿ ಮುನ್ನುಡಿಯಿಡುವ
ವಿಧಿ ವಿಲಾಸದಲಿ! (ಪು. ೩೪)

ಇದು ಕೇವಲ ಕಥಾ ಸ್ವಾರಸ್ಯಕ್ಕಾಗಿ ಕವಿ ನಿಯೋಜಿಸಿರುವ ತಂತ್ರವಲ್ಲವೆಂಬುದನ್ನೂ ನಾವು ಗಮನಿಸಬೇಕು. ಏಕೆಂದರೆ ಈ ಮಹಾ ಘಟನೆಯ ಅನಂತರದಲ್ಲಿ, ಅಜ್ಞಾತಳಾಗಿಸಿಬಿಡುವ ಮೂಲಕ ಮಂಥರೆಯ ಪಾತ್ರಕ್ಕೆ ಮಂಗಳವನ್ನು ಹಾಡಿಬಿಡಬಹುದಾಗಿತ್ತು. ಸಾಧಾರಣ ಕವಿಯಾಗಿದ್ದಲ್ಲಿ ಬಹುಶಃ ಆಗುತ್ತಿದ್ದುದೂ ಹೀಗೆಯೇ. ಆದರೆ, ಮಂಥರೆಯ ಪೂರ್ವ ಇತಿಹಾಸಕ್ಕೆ ಸಿಗುವ ರೀತಿಯಲ್ಲಿಯೇ ಉತ್ತರ ಇತಿಹಾಸವನ್ನೂ-ಅಂದರೆ, ಮಂಥರಾ ಲಕ್ಷ್ಮಿಯ ಚಿತ್ರವನ್ನು ಕಲ್ಪಿಸಿರುವುದು ಕುವೆಂಪು ಅವರಂಥ ದರ್ಶನ ಪ್ರತಿಭೆಯ ಕವಿಗೆ ಮಾತ್ರ ಸಾಧ್ಯವಾಗುವಂಥ ಸಂಗತಿ. ಜೊತೆಗೆ, ಇದರಲ್ಲಿ ಸಮಾಜದ ದಲಿತ ವರ್ಗದ ಬಗೆಗಿನ ದನಿಯೂ ಅಡಗಿದೆ ಎಂಬುದೂ ಗಮನಾರ್ಹವಾದ ಸಂಗತಿ.

ಈ ವಿಭೂತಿಗಳ ಜೊತೆಗೆ, ಈ ಕಾವ್ಯದ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸಿಕ್ಕಿಸಿರುವಂಥ ವೈಶಿಷ್ಟ್ಯವೆಂದರೆ ಅದರ ಸಾಮಾನ್ಯತಾ ಪ್ರೀತಿ. ಭಾರತೀಯ ಸಾಹಿತ್ಯೇತಿಹಾಸದಲ್ಲಿಯೇ ಹಿಂದೆಂದೂ ಕಂಡುಬರದಿದ್ದಂಥ ಪ್ರಮಾಣದಲ್ಲಿ ಹಾಗೂ ವೈವಿಧ್ಯದಲ್ಲಿ

ಇಲ್ಲಿ ಈ ಸಾಮಾನ್ಯತಾ ಪ್ರೀತಿ ಮೈದೋರಿದೆ. "ರಣದ ಸಾಹಸಕಥೆಯು ಬಣ್ಣನೆಗೆ ಬಡತನವೆ ಹೇಳ್? ಹೇರಳಂ! ದಿನದಿನದ ಸಾಧಾರಣದ ಶಾಂತ ಸರಳ ಜೀವಿತದ ವರ್ಣನೆಯೆ ವಿರಳಂ. ನಾನದನೆ ಕೈಕೊಂಡೆ–ಸಗಲೆಳೆಸುವೆಂ" (ಪು. ೧೫೪) ಎಂಬ ಮಾತಿನಲ್ಲಿ ಕವಿಯೇ ತಮ್ಮ ಈ ಕಾವ್ಯೋದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ 'ಶ್ರೀ ರಾಮಾಯಣದರ್ಶನಂ'ದಲ್ಲಿ ಹೆಜ್ಜೆಹೆಜ್ಜೆಗೂ ನಿದರ್ಶನಗಳು ಕಾಣದೊರೆಯುತ್ತವೆ.

ಕುವೆಂಪು ಅವರಲ್ಲಿ ಕಥಾ ನಿರೂಪಣೆ ಕವಿ ಸಹಜವಾದ ನೇರಶೈಲಿಯಲ್ಲಿ ಮೈದಳೆಯುತ್ತದೆ. ದೇಜಗೌ ಅವರ ಸರಿಯಾಗಿಯೇ ಹೇಳಿರುವಂತೆ "ಸಕಲ ಕಾವ್ಯ ಪ್ರಕಾರಗಳ ಬಹುಮುಖಶೈಲಿ ಈ ಮಹಾಕಾವ್ಯದಲ್ಲಿ ಸಂಗಮಗೊಂಡು ಏಕ ಪ್ರವಾಹವಾಗಿ ಹರಿದಿರುವುದನ್ನಿಲ್ಲಿ ಗಮನಿಸಬಹುದು. ಇದರಲ್ಲಿ ಭಾವಗೀತೆ, ಕಥನಕವನ, ವರ್ಣನಕಾವ್ಯ, ನಾಟಕ, ಹಾಗೂ ಭಾಷಣ ಕಲೆಗಳು ಸಮಾವೇಶಗೊಂಡಿವೆ. ಹಾಸ್ಯದ ಸರಸಿಯಲ್ಲಿ ಈಜಾಡಿ ಮನಃಕ್ಲೇಶವನ್ನು ಪರಿಹರಿಸಿಕೊಳ್ಳಬಹುದು; ಕರುಣರಸ ಗಂಗೆಯಲ್ಲಿ ಮಿಂದು ಪರಿಶುಭ್ರವಾಗಬಹುದು. ವೀರಾಧಿವೀರರ ಶಿಖರಗಳನ್ನೇರಿ ದರ್ಶನರಸಪಾನದಿಂದ ಅಮೃತತ್ತ್ವದ ಕಡೆಗೆ ಮುಖವಾಗಬಹುದು; ಕುಳಿತೆಡೆಯಿಂದಲೇ ನಿಸರ್ಗದ ಚೆಲುವು ದಾನಿಗಳಲ್ಲಿ ವಿಹರಿಸಬಹುದು, ಜಗಜ್ಜೀವನವನ್ನು ನಿಯಂತ್ರಿಸುತ್ತಿರುವ ಮಹದನುಭವಗಳ ಮತ್ತು ಮಹದಾಲೋಚನೆಗಳ ಸಂಗ್ರಹಾಲಯದಲ್ಲಿ ನಿರಂತರವಾಗಿ ಉಪಾಸನಾ ನಿರತರಾಗಬಹುದು." ಇಡೀ ಕಾವ್ಯದಲ್ಲಿಯೇ ಕಥೆ, ಪಾತ್ರ ಮತ್ತು ಸನ್ನಿವೇಶದ ದೃಷ್ಟಿಯಿಂದ ಅನಗತ್ಯವಾಗಿದೆಯೆಂದು ಹೇಳಬಹುದಾದ ಯಾವುದೇ ಅಂಶ ನುಸುಳಿಕೊಳ್ಳುವುದಕ್ಕೆ ಕವಿ ಅವಕಾಶ ಕೊಟ್ಟಿಲ್ಲ. ಸನ್ನಿವೇಶ ನಿರೂಪಣೆಯಲ್ಲಾಗಲೀ ಪಾತ್ರ ರಚನೆಯಲ್ಲಾಗಲೀ ಸಾಂಪ್ರದಾಯಿಕ ಬಂಧನದ ಚಿಹ್ನೆಗಳು ಎಲ್ಲಿಯೂ ಗೋಚರಿಸಿಲ್ಲ. ಅಷ್ಟೇ ಅಲ್ಲ, ಇಲ್ಲಿಯ ಪಾತ್ರ–ಸನ್ನಿವೇಶಗಳು ಸದ್ಯಃ ಪ್ರಯೋಜನಸೀಮಿತವಾಗಿರದೆ, ಇಡೀ ಕಥಾನಕವನ್ನು ವ್ಯಕ್ತಾವ್ಯಕ್ತವಾಗಿ ವ್ಯಾಪಿಸಿಕೊಂಡಿರುತ್ತವೆ. ಇತ್ತ, ವಾಲ್ಮೀಕಿಯಲ್ಲಿನ ಸೂಚನೆಯನ್ನು ಅನನ್ಯರೂಪದಲ್ಲಿ ಗ್ರಹಿಸಿ, ಇಡೀ ಕಾವ್ಯದಲ್ಲಿ ಹೃದ್ಯವಾದ ಸಾಂಸಾರಿಕ ಚಿತ್ರಗಳು ಸಮುಚಿತವಾಗಿ ಹರಡಿಕೊಳ್ಳುವಂತೆ ಮಾಡಿದ್ದಾರೆ ಎಂಬುದು ಈ ಕಾವ್ಯದ ಮತ್ತೊಂದು ವೈಶಿಷ್ಟ್ಯ. ಈ ದೃಷ್ಟಿಯಲ್ಲಿ ಈ ಮಹಾಕಾವ್ಯ ಹೊಸದೊಂದು ಆಯಾಮವನ್ನೇ ತೆರೆದಿದೆ ಎಂದು ಹೇಳಬಹುದು. ಇದು ಎಷ್ಟು ವೈವಿಧ್ಯಮಯವಾಗಿರಬಹುದು ಎಂಬುದನ್ನು ಈ ಕಾವ್ಯ ತೋರಿಸಿಕೊಟ್ಟಿದೆ. ಉದಾಹರಣೆಗೆ, ಇದು ವಾಲಿ–ಸುಗ್ರೀವರ ಪ್ರಸಂಗದಲ್ಲಿ ಕಾಣಿಸಿಕೊಳ್ಳುವ ಇಂಥ ಚಿತ್ರವಾಗಬಹುದು.

........................ತಮ್ಮಸಂ
ಅಣ್ಣ ಬಾ ಬಾರೆಂದು ಜೊಲ್ಲ ತೊದಳಿಂ ಚೀರ್ವ,
ಸಣ್ಣ ಸುಗ್ರೀವನಂ, ನೋಳ್ಪರಾ ಕಣ್ಮಣಿಯ
ಚಿಣ್ಣನಂ, ಕಂದ ಸುಗ್ರೀವನಂ, ತನ್ನೊಲಿದ
ಮುದ್ದು ಸುಗ್ರೀವನಂ ಬೆಳ್ನಿಸೊಳ್ ಪೊತ್ತು, ತಾಯ್ಗೆ

ಕಂದ ಬಾರೆನ್ನುತಿರೆ, "ಉಪ್ಪು ಬೇಕೇ ಉಪ್ಪು ?"
ಎನುತೆ ತಾಂ ಪರಿದಾಡುತನಿಖರಂ ನಗಿಸಿದಾ
ಚಿಕ್ಕಂದಿನೊಂದು ಚಿತ್ರಂ ಸ್ಮೃತಿಗೆ ಮೈದೋರೆ
ರೋಷಚ್ಯುತಂ ವಾಲಿ ಶಾಂತನಾದನ್ (ಪು. ೩೨೪)

ಅಥವಾ ಕುಂಭಕರ್ಣ–ಅನಲೆಯರ ಜೂಟಾಟ–ಅಣಕ–ಸರಸಗಳೂ ಆಗಬಹುದು :

...ಆ ಅಯ್ಯನೆಮ್ಮೊಡನೆ ಎನಿತೊ ಸೂಳ್
ಕುಳಿತು ಸರಸವನಾಡುತಿರ್ದನ್ ! ಹಾಸ್ಯಮಂ
ನುಡಿದಣಕಿಸುತ್ತೆಮ್ಮನೆಂತಳ್ಬಿಬಿರಿವಂತೆ
ನಗಿಸುತಿರ್ದನ್ ! ಕಳ್ಳರಾಟದಲಿ ನಾವಟ್ಟಿ
ಅವನೋಡಿ, ನಾನ್ ಪಿಡಿಯಲಾರದಿರೆ, ಕೊನೆಕೊನೆಗೆ
ನಗೆ ತಡೆಯಲಾರದೆಯೆ ಸೋಲ್ತು ನಿಲುತಿರ್ದನಂ
ನಾನ್ ಮುಟ್ಟೆ, ನನ್ನನಂಬರಕೆತ್ತಿ ಮೇಲೆಸೆದು
ಪಿಡಿದು 'ನೀನೊಂದು ಪೂವಿನ ಚೆಂಡು' ಎನುತೆನ್ನ
ಮುದ್ದಾಡುತಿರ್ದನ್ 'ಚೆಂಡುವೂ ! ಚೆಂಡುವೂ !'
ಎಂದಟ್ಟಹಾಸಂ ಮೊಳಗಲದ್ಭುತಂ ನಗುತೆ ! (ಪು. ೭೧೧-೧೨)

ಅಥವಾ ರಾಮ–ಸೀತೆಯರ ಇಂಥ ಸರಸ–ಸಲ್ಲಾಪವೂ ಆಗಬಹುದು :

ಸೀತೆ......ಅಡುಗೆ ತೊಡಗಿದಳು. ಪಸಿಸೌದೆಯಿಂ
ಪೊಗೆಯಲ್ಲದುರಿದೋರಲೊಲ್ಲದಿರೆ, ಧರಣಿಸುತೆ
ಮುಳಿದೊಲೆಯ ಮೋರೆಯಂ ತಿವಿದು ಕಟ್ಟಿಗೆಯಿಂದೆ,
ಕಣ್ಣೊರಸಿ, ಮೂಗೊರಸಿ, ಮೊಗವೆಲ್ಲ ಮಸಿಯಾಗೆ,
ಮಿಂದುಟ್ಟ ಮಡಿ ಮಾಸೆ, ಸಿಗ್ಗೇರ್ದು ಸಿಡುಕುತಿರೆ
ವಜ್ರರೋಮಾಶ್ರಮದಿನಧ್ಯಯನಮಂ ಮುಗಿಸಿ
ರಾಮನೈತಂದನಲ್ಲಿಗೆ. ಕರೆದನರ್ಧಾಂಗಿಯಂ,
ಕಾಣದಿರೆ. ಹೊಗೆಯ ಹೊಟ್ಟೆಯೊಳಿರ್ದ ಓಕೊಂಡಳಂ
ಕುರಿತು ಬಿನದಕೆ : ಪಸಿವೆನ್ ಅನುಣಲ್ವೇಳ್ಕುಮನೆ ;
ಮಡದಿ : ಪಸಿಸೌದೆಯಿಂದಡುಗೆಯೆಂತಪ್ಪುದಯ್ ?
ಪೊಗೆಪುನುಣಿಮನೆ ; ರಾಮನಾಕೆಯಂ ಬಳಿಸಾರ್ದ
ಮಸಿಯಿಡಿದು ನಶ್ಮೊಗಂ ಮುಸುದಿಯವತಾರಮಂ
ತಾಳ್ದಿರ್ದುದಂ ಕಂಡು, ನಗೆ ತಡೆಯಲಾರದೆಯೆ
ಹೊರಗೆ ಬಂದಳ್ಬಿ ಬಿರಿಬಿರಿಯೆ ನಗತೊಡಗಿದನ್.
ಬಂದ ಲಕ್ಷ್ಮಣನಣ್ಣನಾ ಪರಿಗೆ ಬೆರಗಾಗಲಾ

ರಾಮನೆಂದನ್ : "ನೋಡು, ನಡೆ ಒಳಗೆ. ಅತ್ತಿಗೆಗೆ
ಬದಲೊರ್ವ ವಾನರಿಯ......" ಎಂದರ್ಧ ವಾಕ್ಯದೊಳೆ
ಗಹಗಹಿಸಿ ನಗುತಿರೆ, ಸುಮಿತ್ರಾತ್ಮಜಂ ನಡೆದು
ನೋಡಿದನ್ : ನಗಲಿಲ್ಲವನ್ ! (ಪು. ೧೩೦)

ಇವುಗಳ ಸ್ವಾರಸ್ಯ, ಸೌಂದರ್ಯ ಸಾಸಿರಮಡಿಯಾಗುವುದು ಅವುಗಳನ್ನು ಸೂಕ್ತ ಸನ್ನಿವೇಶದಲ್ಲಿ ಧ್ವನಿಪೂರ್ವಕವಾಗಿ ಬಳಸಿಕೊಂಡಿರುವುದರಿಂದ. ಇಂಥ ಚಿತ್ರಗಳು 'ರಾಮಾಯಣದರ್ಶನಂ'ದಲ್ಲಿ ಬಹುಸಂಖ್ಯಾತವಾಗಿವೆ. ಸಾಹಿತ್ಯದಲ್ಲಿ ಇಂಥ ಚಿತ್ರಗಳು ಬಹುವಾಗಿ ದೊರೆಯುವುದಿಲ್ಲವೆಂಬುದು ಅವುಗಳ ಮೌಲ್ಯವನ್ನು ಹಲವು ಮಡಿಯಾಗಿ ಸುತ್ತದೆ.

ಈ ಕಾವ್ಯದಲ್ಲಿನ ವರ್ಣನೆಗಳು ಕಥೆಯ ಅವಿಭಾಜ್ಯ ಅಂಗವೆಂಬಂತೆ ಹಬ್ಬಿಕೊಳ್ಳುತ್ತವೆ; ನಿಯಮ ಪೂರೈಕೆಗಾಗಿಯೇ ಯಾವುದೂ ಇಲ್ಲಿ ಸ್ಥಾನವನ್ನು ಪಡೆಯುವುದಿಲ್ಲ. ಅಷ್ಟೇ ಅಲ್ಲ, ಮಾನವ ಪ್ರಕೃತಿಗೆ ಪೋಷಕವಾಗಿ ಪೂರಕವಾಗಿ ಹಿನ್ನೆಲೆಯಾಗಿ ಮುನ್ನೆಲೆಯಾಗಿ ಧ್ವನಿಪೂರ್ಣವಾಗಿ ಪ್ರಕೃತಿ ಇಲ್ಲಿ ಬಂದು ಬೆರೆಯುತ್ತದೆ. ಇಲ್ಲಿಯ ಬಹುತೇಕ ಚೇತೋಹಾರಿ ಪ್ರಕೃತಿ ವರ್ಣನೆಗಳು ಜೀರ್ಣ–ಕವಿಸಮಯಾತೀತವೂ, ಅಭಿನವವೂ ಆಗಿದ್ದು ಭಾರತೀಯ ಸಾಹಿತ್ಯದ ಅಕ್ಷಯ ನಿಧಿಗಳಾಗಿವೆ. ಉದಾಹರಣೆಯಾಗಿ ಸಾಗರದ ಈ ವರ್ಣನೆಯನ್ನು ನೋಡಬಹುದು :

ತೆರೆ ಪರಂಪರೆ : ಮೊರೆ ಪರಂಪರೆ : ಪರಂಪರೆಯ
ಬೆಳ್ನೊರೆನೊರೆಯ ಪೊರೆಯ ಸಾಗರದ ನಾಗರನ
ಭೋರ್ಗರೆವ ಭೋಗ ಕುಲ ಬಲಮುಪ್ಪಳಿಸಿದುದು
ನಿರಂತರಂ, ತಟಗತ ಅಶೋಕವನ ವಂಕಿಮ
ಶಿಲಾವೇಲೆಯಂ. (ಪು. ೩೪೫)

ಅಂತೆಯೇ, ಮುಂಗಾರಿನ ಈ ವರ್ಣನೆಯೂ :

......ಓ ಆ ದಿಗಂತದೆಡೆ, ವರದಂತೆವೋಲ್
ಕಾಣಿಸಿತು ವರ್ಷಶಾಪಂ, ರವಿಸಂಗಿ, ಶರಧಿಶಿಶು,
ನೀರದಸ್ತೂಪನೀಲಂ. ಶಿವನ ಜಟೆಯಂತೆ ವೋಲ್
ಶಿಖರಾಕೃತಿಯಿನುಣ್ಮಿ ಮೇಲಮೇಲಕ್ಕೇರ್ದು
ಶೈಲಾಕೃತಿಯಿನುರ್ಬಿ, ತೆಕ್ಕನೆ ಕೆದರ್ದತ್ತು.
ಕುಣಿವ ಕಾಳಿಯ ಕರಿಯ ಮುಡಿ ಬಿಚ್ಚಿ ಪರ್ವುವೋಲ್,
ಸಂಜೆಬಾನಂ ಮುಸುಕಿ ಮುಚ್ಚಿ ಮೇಣ್ ಕಾರ್ಗ್ಗಾಳಿ
ಬೀಸಿದುದು ಮಲೆಯ ಮಂಡೆಯ ಕಾಡುಗೂದಲಂ
ಪಿಡಿದಲುಬಿ ತೂಗಿ. ನೋಳ್ಪಂಗೊರಲಿದತ್ತಡವಿ ;

ಹಳೆಮರಗಳುರುಳೆ, ಮರಕೆ ಮರವುಜ್ಜಿ ; ಕೊಂಬೆಗೆ
ಕೊಂಬೆ ತೀಡಿ ; ಮಳೆಯೊಳ್ ಬಿದಿರು ಕರ್ಕಶವುಲಿಯ
ಕೀರಿ. ಸಿಡಿರೋಷದಿಂ ಕಿಡಿಯಿಡುವ ಮುಸಿನವಿರ
ಪುಬ್ಬಿರ್ನಾ ಕಾರ ರಾಕ್ಷಸಿಯಕ್ಷಿಯಲೆವಂತೆ
ಮಿಂಚಿತು ಮುಗಿಲಿನಂಚು. ಸಂಘಟಣೆಗೆ ಸಿಡಿಲ್
ಗುಡುಗಿದುವು ಕಾರ್ಗಲ್ ಮುಗಿಲ್ ಬಂಡೆ. ತೋರ ಹನಿ
ಮೋಣಾಲಿಕಲ್ ಕವಣೆ ವೀಸಿದುವು. ಬಿಸಿಲುಡುಗಿ,
ದೂಳುಂಡೆಗಟ್ಟೆ, ಮಣ್ತೊಯ್ದು, ಕಮ್ಮನೆ ಸೊಗಸಿ
ತೀಡಿದುದು ನೆಲಗಂಪು ನಲ್......(ಪು. ೩೫೪-೫೫)

ಇಂಥ ವರ್ಣನೆಗಳನ್ನು ಕಂಡು ಮನಮಾರುಹೋಗುವುದು ಮಾತ್ರವಲ್ಲ; ಸಹಜಾನುಭವವನ್ನು ಸವಿದ ಸಾರ್ಥಕ್ಯದ ಭಾವ ಮನಸ್ಸನ್ನು ತುಂಬಿಕೊಳ್ಳುತ್ತದೆ.

ಇಷ್ಟೆಲ್ಲ ಅಧ್ಯಯನ, ವ್ಯುತ್ಪತ್ತಿ ಮತ್ತು ಪ್ರತಿಭೆಗಳಿಂದ ಕೂಡಿದ ಕವಿಯ ಈ ಕೃತಿ ವಿದ್ವನ್ಮಣಿಗಳ ಕಪಾಟಿನ ಶೋಭೆಯ ಉದ್ಗ್ರಂಥ ಮಾತ್ರವಾಗದೆ, ಸಾಹಿತ್ಯ ಲೋಕದ ಕುತೂಹಲದ ವಸ್ತು ಮಾತ್ರವಾಗದೆ, ಜನಸಾಮಾನ್ಯರೂ ಸವಿದು ಆನಂದಿಸಬಹುದಾದ ಸಾಹಿತ್ಯದ ಸ್ವಾದು ಫಲವಾಗಿರುವುದು ನಿಜಕ್ಕೂ ನಮ್ಮ ಪುಣ್ಯವೇ ಸರಿ. ಅಂಥ ಕವಿಯನ್ನು ಪಡೆದ ನಾವೂ ನಿಜಕ್ಕೂ ಧನ್ಯರೇ ಸರಿ.

ಪರಭಾಷೆಯ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳನ್ನು ಅವರದೇ ಆದ ಭೂಮಿಯಲ್ಲಿ ಪರದೇಶಿಗಳನ್ನಾಗಿ ಮಾಡಿದೆ.

ಗಾಂಧೀಜಿ

ಕುವೆಂಪು ಅವರ ಕವನಗಳು

ಡಾ. ಶ್ರೀಕಂಠ ಕೂಡಿಗೆ

ನಿಸರ್ಗಾರಾಧನೆ, ಸೌಂದರ್ಯದ ಅನ್ವೇಷಣೆ, ಅಧ್ಯಾತ್ಮಿಕತೆ, ಸಾಮಾಜಿಕ ಎಚ್ಚರ, ವೈಚಾರಿಕ ಮನೋಭಾವ ಮತ್ತು ವಿಶ್ವ ಮಾನವ ಪ್ರಜ್ಞೆಯಂಥ ಭೂಮ ಭಾವಗಳನ್ನು ಭಾವಗೀತೆಯಂಥ ಪುಟ್ಟಪ್ರಕಾರಕ್ಕೆ ಬಗ್ಗಿಸಿ ಕುವೆಂಪು ಓದುಗರ ಮನವನ್ನು ರೋಮಾಂಚನಗೊಳಿಸಿದ್ದಾರೆ. ಪಾಶ್ಚಾತ್ಯ ಕಾವ್ಯಾಭ್ಯಾಸ ಮೊದ ಮೊದಲು ಅವರನ್ನು ಇಂಗ್ಲಿಷ್ ಕಾವ್ಯರಚನೆಗೆ ಆಕರ್ಷಿಸಿತಾದರೂ ಅನಂತರ ಐರಿಷ್‌ಕವಿ ಕಸ್ಸಿನ್ ಅವರ ಮಾರ್ಗದರ್ಶನದಿಂದ ಕನ್ನಡಾಭಿಮಾನಿಯಾಗಿ 'ಕನ್ನಡ ಡಿಂಡಿಮ' ಬಾರಿಸಿದ್ದು ಇಂದು ಐತಿಹಾಸಿಕ ಸಂಗತಿಯಾಗಿದೆ.

ಕನ್ನಡ ಭಾಷೆ ಆಧುನಿಕ ಭಾವನೆ, ಮಹದಾಲೋಚನೆಗಳನ್ನು ವ್ಯಕ್ತಪಡಿಸಲು ಸಾಧ್ಯವೆ? ಎಂಬ ಹೊಸಗನ್ನಡ ಅರುಣೋದಯ ಕಾಲದ ಸಾರ್ವತ್ರಿಕ ಅಳುಕು ಕುವೆಂಪು ಅವರನ್ನೂ ಬಾಧಿಸಿದಂತೆ ಕಾಣಿಸುತ್ತದೆ. ಜೊತೆಗೆ ಅಕ್ಷರ ಕಾಣದ ದಟ್ಟಕಾಡಿನ ಮಲೆನಾಡಿನ ನಡುವಿನಿಂದ ಎದ್ದು ಬಂದ ಕವಿಗೆ ಶಿಷ್ಟಸಮಾಜ ಈಗಾಗಲೇ ಹುಟ್ಟು ಹಾಕಿದ ನವಿರು ಕಾವ್ಯ ಸಂಪ್ರದಾಯ ಆಳದಲ್ಲೆಲ್ಲೊ ಆತಂಕವನ್ನು ಹುಟ್ಟುಹಾಕಿರಬೇಕೆಂದು ತೋರುತ್ತದೆ. ಅವರ ಮೊದಲ ಬಹುತೇಕ ಕವನಗಳು ಇಂಗ್ಲಿಷ್‌ನಿಂದ ಅನುವಾದಗೊಂಡಿರುವುದು, ಶಿಷ್ಟ ಸಮಾಜದ ಬದುಕು, ಬೆಡಗು, ಬಿನ್ನಾಣಗಳನ್ನು ಚಿತ್ರಿಸುವಾಗ ಸಾಲಂಕೃತವಾದ ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಅಳವಡಿಸಿಕೊಳ್ಳಲು ಯತ್ನಿಸಿರುವುದು ಮೇಲಿನ ಸಂದೇಹಗಳನ್ನು ಸಮರ್ಥಿಸುವಂತಿವೆ. ೧೯೨೨ರಲ್ಲಿ ಪ್ರಕಟವಾದ 'ಬಿಗಿನರ್ಸ್ ಮ್ಯೂಸ್'ನಿಂದ ಆರಂಭವಾದ ಈ ಬಗೆಯ ತಲ್ಲಣ ಮತ್ತು ಆತಂಕ ಸ್ವತಂತ್ರ ಕವನ ಸಂಕಲನ 'ಕೊಳಲು' (೧೯೩೦) ಪ್ರಕಟವಾಗುವವರೆಗೆ ಮುಂದುವರಿದಂತೆ ಅನ್ನಿಸುತ್ತದೆ. ಮುಂದಿನ ದಿನಗಳಲ್ಲಿ ಕುವೆಂಪು ತಮ್ಮ ಭಾವಸಮೃದ್ಧತೆ ಹಾಗೂ ವೈವಿಧ್ಯತೆಗಳಿಂದಾಗಿ ಅಪೂರ್ವ

ಭಾವಗೀತಕಾರರಾಗಿ ರೂಪುಗೊಂಡದ್ದನ್ನು ಕಾಣುತ್ತೇವೆ. ಕಾಜಾಣದಿಂದ ಪ್ರೇತಕ್ಯೂ ವರೆಗೆ ೨೬ ಕವನ ಸಂಕಲನಗಳಲ್ಲಿ ಹಂಚಿಕೊಂಡ ಅವರ ಭಾವಗೀತೆಗಳ ಸಂಖ್ಯೆ ಸಾವಿರಕ್ಕೂ ಮಿಕ್ಕಿವೆ. ಪ್ರಕೃತಿ, ಪ್ರಣಯ ಅಧ್ಯಾತ್ಮ, ಸಮಾಜ, ನಾಡುನುಡಿ ಪ್ರೇಮ, ಕ್ರಾಂತಿ, ಸಮಾನತೆ ಇತ್ಯಾದಿ ವಸ್ತುವೈವಿಧ್ಯವನ್ನು ಹೊಂದಿರುವ ಇವರ ಕವಿತೆಗಳಲ್ಲಿ ಸಮಗ್ರ ಜೀವನದೃಷ್ಟಿ ಇದೆ. ಕೆಲವು ಕವಿತೆಗಳು ಬಿಡಿಯಾಗಿ ಕೆಲವು ಇಡಿಯಾಗಿ ಕವಿಯ ಜೀವನ ದರ್ಶನವನ್ನು ಹೊಮ್ಮಿಸುತ್ತದೆ.

ಆಂಗ್ಲ ಕವಿ ವರ್ಡ್ಸ್‌ವರ್ಥನಂತೆ ತಮ್ಮನ್ನು ಕುವೆಂಪು 'ನಿಸರ್ಗಕವಿ' ಎಂದು ಕರೆದುಕೊಂಡರೂ ಇವರ ಕವಿತೆಗಳ ಬಾಹುಳ್ಯ ದೊಡ್ಡದು. ನಿಸರ್ಗಪ್ರಿಯತೆಯೊಂದಿಗೆ ಆಧ್ಯಾತ್ಮವೂ, ಸೌಂದರ್ಯಪ್ರಜ್ಞೆಯೂ ಸರಿಪ್ರಮಾಣದಲ್ಲಿ ಪಾಲುಪಡೆದಿದೆ. ನಿಸರ್ಗದ ಅಂತರಂಗ ಮತ್ತು ಬಹಿರಂಗವನ್ನು ಪೂರ್ಣದರ್ಶನದಲ್ಲಿ ಕುವೆಂಪು ಕಂಡಿದ್ದಾರೆ. ಮಲೆಯನಾಡು ಕವಿಗೆ ತಾಯಿ ಮನೆಯಾಗಿ, ಕಾಡು ದೇವರ ಬೀಡಾಗಿ, ಹಿರಿಯ ಮುಡಿಯಾಗಿ, ಶಿವನಗುಡಿಯಾಗಿ ಕಂಡಿದೆ. ಕವಿಯ ಭಾವಲೋಕಕ್ಕೆ 'ಬನವೆಣ್ಣೆ ಮೊದಲಿನಾ ಮನದನ್ನೆ'ಯಾಗಿ ಕಂಡಿದ್ದಾಳೆ. 'ಬಾ ಫಾಲ್ಗುಣ ರವಿದರ್ಶನಕೆ', 'ಪಕ್ಷಿ ಕಾಶಿ' 'ದೇವರು ರುಜು ಮಾಡಿದನು' 'ಹಸುರು' ಮುಂತಾದ ಕವಿತೆಗಳು ನಿಸರ್ಗದ ಬಗೆಗಿನ ತಾಧ್ಯಾತ್ಮಕ್ಕೆ ಅತ್ಯುತ್ತಮ ನಿದರ್ಶನಗಳಾಗಿವೆ. ಪ್ರಕೃತಿಯ ವಿವರ ಸಮಸ್ತ ವನ್ನು ಬಿಡಿಬಿಡಿಯಾಗಿ ರೇಖಿಸಿರುವುದು ಅವರ ಕವಿತೆಗಳ ವೈಶಿಷ್ಟ್ಯವಾಗಿದೆ. ಭಾವಗೀತೆ ಗಳಲ್ಲಿ ಗಿರಿವನಪ್ರಿಯತೆಯ ಅನಂತಸ್ವರಗಳನ್ನು ಇಷ್ಟೊಂದು ವೈವಿಧ್ಯಮಯವಾಗಿ ಹೊರಹೊಮ್ಮಿಸಿದ ಮತ್ತೊಬ್ಬ ಕವಿ ಕನ್ನಡದಲ್ಲಿಲ್ಲ ಎನ್ನುವಷ್ಟರಮಟ್ಟಿಗೆ ಅವುಗಳ ಬೀಸು ಇದೆ. ಪ್ರಕೃತಿಯ ಲಲಿತ ಸುಂದರ ಮುಖವನ್ನೂ, ನಾಟ್ಯವಿಲಾಸವನ್ನು ರೇಖಿಸಿದ ಕವಿಯೇ ಅದರ ರುದ್ರಭಯಂಕರತೆಯನ್ನು ಬಣ್ಣಿಸಿರುವುದು ಕಾಣಿಸುತ್ತದೆ. "ಕಣಿವೆ ಇಳಿದು ತೆಮರನೇರಿ। ತರುಗಳಲ್ಲಿ ತಳಿರ ಹೇರಿ। ಹೊಸತು ಜೀವ ಕಳೆಯ ಬೀರಿ ಸುಗ್ಗಿ ಬರುತಿದೆ।" ಎನ್ನುವ ಕವಿಯ ಲೇಖನಿಯೇ "ಮಳೆಯಲ್ಲಿದು! ಪ್ರಲಯದ ಆದೇಶ" ಎಂಬ ಚಿತ್ರಕೊಡುತ್ತದೆ. ಉತ್ಸಾಹ, ಉನ್ಮಾದ, ಆದೇಶ, ಭಾವೋತ್ಕಟತೆ ಕುವೆಂಪು ಅವರ ಭಾವಗೀತೆಗಳ ಸ್ಥಾಯಿಗುಣವಾಗಿ ಕಾಣಿಸುತ್ತವೆ. ಕೆಲವೊಮ್ಮೆ ಲೋಕವಿಹಾರಿ ಯಾದ ಭಾಷೆ ಪ್ರಕೃತಿ, ಅನುಭಾವಗಳ ವಿಚಾರ ಬಂದಾಗ ಸಂಸ್ಕೃತದ ಕಡೆಗೆ ವಾಲುತ್ತದೆ. ಭಾವಗೀತೆಗಳಿಂದ ಹಿಡಿದು ಮಹಾಕಾವ್ಯ, ಕಾದಂಬರಿಗಳವರೆಗೆ ಈ ಮಾತು ನಿಜ. ಆದರೆ ಭಾಷೆಯ ಈವೊಂದು ದೋಷವನ್ನೇ ಪ್ರಧಾನಮಾಡಿ ಇಡೀ ಕುವೆಂಪು ಅವರ ಕಾವ್ಯ ರಾಶಿಯನ್ನೇ ಸಾರಸಗಟು ತಿರಸ್ಕರಿಸುವ, ಅಸಮತೋಲನದ ವಿಮರ್ಶೆ ಕೆಲವೊಮ್ಮೆ ವಿಜೃಂಭಿಸಿರುವುದು ಕಾಣಿಸುತ್ತದೆ.

ಕುವೆಂಪು ಕವನಗಳಲ್ಲಿ ಸಂಸಾರ ಪ್ರೇಮ, ಪ್ರಣಯ ಭಾವಗಳು ನವುರಾಗಿ, ಅರ್ಥಪೂರ್ಣವಾಗಿ ಕಾಣಿಸುತ್ತವೆ. "ನಮ್ಮ ಬಾಳಿಗೆ ಸಾಕ್ಷಿ ಹೋಳಿಗೆ, ನಾನು ಕಣಕ ನೀನು ಹೂರ್ಣ" ಎಂಬ ಮಾತುಗಳಾಗಲಿ "ನೀನಿದ್ದರೆ ಮನೆ ತುಂಬು; ಇರದಿರೆ ಬಯಿಪಾಳ್ ತೆರವು, ನೀ ಬಂದರೆ ಮನ ತುಂಬು; ಬರದಿರೆ ಬಾಳ್ ಬರಿ ತೆರವು" ಎಂಬ ಸಾಲುಗಳಾಗಲಿ ಮೇಲಿನ ಅಭಿಪ್ರಾಯಕ್ಕೆ ಪೋಷಕವಾಗಿವೆ. ಪ್ರಣಯ ಕವನಗಳಲ್ಲಿ

ನವಿರಾದ ಹಾಸ್ಯವಿರುವಂತೆ ಆಧ್ಯಾತ್ಮದೃಷ್ಟಿಯೂ ಕೂಡಿಕೊಂಡಿದೆ. “ಶ್ರೀಮಾತೆಯ ಪಾದದಲಿ, ಮಕ್ಕಳು ನಾಲ್ವರು ನಾಲ್ವೆರಳು, ಸಹಧರ್ಮಿಣಿ ಸತಿ ಹೆಬ್ಬೆರಳು! ಶ್ರೀಗುರು ವಾಶೀರ್ವಾದದಲಿ, ಕವಿಗೀ ಸಂಸಾರವೆ ಪೂಜೆ” ಎನ್ನುತ್ತಾರೆ. ತಾತ್ವಿಕಚಿಂತನೆಯ ಭಾರ ವನ್ನು ಭಕ್ತಿ—ಆಧ್ಯಾತ್ಮಗೀತೆಗಳು ತಡೆಯಬಲ್ಲವೇ ಹೊರತು ಪ್ರಣಯಗೀತೆಗಳಲ್ಲ ಎಂಬ ಭಾವನೆ ಕೆಲವು ಕವನಗಳನ್ನು ಓದಿದಾಗ ಬರುವುದುಂಟು.

ವರ್ಣ–ವರ್ಗ–ಜಾತಿಭೇದ, ಶ್ರೀಮಂತರು–ಬಡವರ ನಡುವಿನ ಅಂತರ, ಮೂಢ ನಂಬಿಕೆ, ಅವುಗಳನ್ನು ಪೋಷಿಸುವ ಪುರೋಹಿತಶಾಯಿ ಮುಂತಾದುವುಗಳ ವಿರೋಧದ ಗಟ್ಟಿದನಿ ನವೋದಯ ಕಾವ್ಯದಲ್ಲಿ ಮೊದಲು ಕೇಳಿಬಂದದ್ದು ಕುವೆಂಪು ಅವರಲ್ಲಿ. ಮೌಢ್ಯ, ಶೋಷಣೆಗಳ ವಿರುದ್ಧ ಬಂಡೇಳುವಾಗ ಅವರ ‘ಕೊಳಲು’ ದನಿ ‘ಪಾಂಚಜನ್ಯ’ ವಾಗುತ್ತದೆ,

“ಕೊಲ್ಲುತಿಹುದಜ್ಞಾನ ಸಂಪ್ರದಾಯದ ಬಾಹು
ನಮ್ಮ ಕುತ್ತಿಗೆಯ ಹಿಸುಕಿ !
ನಾಸ್ತಿಕತೆ ನಷ್ಟಹಾನಿಯ ದುಷ್ಟ ಮೌಢ್ಯಕ್ಕಿಂ ಮೇಲು”

“ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ”

ಕುವೆಂಪು ಅವರ ಸಾಮಾಜಿಕ ಪ್ರಜ್ಞೆ ಮಾತಿನ ಸಿಡಿಗುಂಡುಗಳಾಗಿ, ಆವೇಶಯುಕ್ತವಾಗಿ ಹೊರಹೊಮ್ಮುತ್ತವೆ. ‘ನೂರು ದೇವರನೆಲ್ಲ ನೂಕಾಚೆ ದೂರ। ಭಾರತಾಂಬೆಯೆ ದೇವಿ ನಮಗಿಂದು ಬಾರ’ ಉತ್ಸಾಹಸ್ಥಾಯಿಯಾದ ಮಾತು ಮೊಳಗುತ್ತದೆ. ಮೇಲಿಲ್ಲದ ಕೀಳಿಲ್ಲದ ಸರ್ವಸಮಾನತೆಯ ಬಾಳಿನ ಕನಸು ಕಾಣುತ್ತದೆ. ಕೃತಿ ಸಣ್ಣದಿರಲಿ ದೊಡ್ಡ ದಿರಲಿ ಅದರಲ್ಲಿ ಸರ್ವೋದಯದ, ಸರ್ವ ಸಮನ್ವಯದ ದೃಷ್ಟಿ ಅಂತರ್ಗತವಾಗಿರುತ್ತದೆ. ಬೀಜರೂಪವಾಗಿ ಕವಿತೆಗಳಲ್ಲಿ ಅಂತರ್ಗತವಾಗಿದ್ದ ಕವಿಚಿಂತನೆ ದರ್ಶನದ ಮಹಾವೃಕ್ಷ ವಾಗಿ ಕವಲೊಡೆದದ್ದು ಶ್ರೀ ರಾಮಯಾಣ ದರ್ಶನಂ ಮಹಾಕಾವ್ಯದಲ್ಲಿ, ಬಿಡಿ ಬಿಡಿ ಯಾಗಿ ಕವಿತೆ, ನಾಟಕ, ಕಾದಂಬರಿಗಳಲ್ಲಿ ಗರಿಗಟ್ಟಿಕೊಂಡ ಕುವೆಂಪು ಅವರ ಚಿಂತನೆ ಅವರ ಮಹಾಕಾವ್ಯದಲ್ಲಿ ಮಹದ್ದರ್ಶನವಾಗಿ ಕಾಣಿಸಿಕೊಂಡಿತು.

ಭಾವಶೀಲ ಗುಣ ಕುವೆಂಪು ಅವರ ಕವಿತೆಗಳ ಒಂದು ಮುಖವಾದರೆ ವಿಚಾರ ಶೀಲತೆ ಅವರ ಕವಿತೆಗಳ ಇನ್ನೊಂದು ಮುಖ. ಚಿಂತನಶೀಲತೆ ಹಾಗೂ ತಾತ್ವಿಕತೆ ಅವರ ಕವಿತೆಗಳ ಮತ್ತೊಂದು ಗುಣ. ಇದನ್ನು ಮರೆತರೆ ಕವಿ ವ್ಯಕ್ತಿತ್ವದ ಪೂರ್ಣದರ್ಶನ ಓದುಗರಿಗೆ ದೊರೆಯದು. ಕವಿಯ ಪ್ರಜ್ಞೆಯ ಮೇಲೆ ಕಾಲಕಾಲಕ್ಕೆ ಉಂಟಾದ ಪ್ರಭಾವಗಳು ಅವರ ವ್ಯಕ್ತಿತ್ವ ಮತ್ತು ಕಾವ್ಯ ವ್ಯಕ್ತಿತ್ವವನ್ನು ರೂಪಿಸಿವೆ ಎಂಬುದು ನಿರ್ವಿವಾದದ ಸಂಗತಿ. ತಾವು ಓದಿದ ಹರಿದಾಸರ ಪದಗಳು, ಗದುಗಿನ ಭಾರತ–

ಜೈಮಿನಿ ಭಾರತ, ರಾಮಕೃಷ್ಣ ಪರಮಹಂಸ ವಿವೇಕಾನಂದರ ಪ್ರಭಾವಲಯ, ಸ್ವಾಮಿ ಸಿದ್ಧೇಶ್ವರಾನಂದಜೀಯವರ ಸೌಹಾರ್ದಯುತ ಸಂಪರ್ಕ ಇವು ಕವಿಯ ಮನಸ್ಸನ್ನು ಚಿಂತನಪರವನ್ನಾಗಿ ಮಾಡಿವೆ. ಹಾಗಾಗಿ ಅವರು ಚಿಂತನಪರ ತಾತ್ವಿಕ ಕವಿಯಾಗಿದ್ದಾರೆ. ಬರಬರುತ್ತಾ ಕುವೆಂಪು ಅವರ ಕವಿತೆಗಳ ಉತ್ಸಾಹ ಚಿಂತನೆಯಾಗಿ; ಉದ್ವೇಗ ದರ್ಶನ ದೀಪ್ತಿಯಾಗಿ ಕಾಣಿಸ ತೊಡಗುತ್ತದೆ. ಭಾವ ಅನುಭಾವವಾಗಿ ಪರಿವರ್ತನೆಗೊಳ್ಳುತ್ತದೆ. "ಸೂರ್ಯೋದಯ ಚಂದ್ರೋದಯ। ದೇವರ ದಯೆ ಕಾಣೋ।" "ರವಿವದನವೆ ಶಿವಸದನ। ಬರಿ ಕಣ್ಣದು ಮಣ್ಣೋ। ಶಿವನಿಲ್ಲದ ಸೌಂದರ್ಯವೆ। ಶವ ಮುಖದ ಕಣ್ಣೋ।" ಎನ್ನುವಾಗ ಕವಿ ಕೇವಲ ಪ್ರಕೃತಿ ಆರಾಧಕರಾಗಿ ನಿಲ್ಲುವುದಿಲ್ಲ. ಶಿವಪ್ರಜ್ಞೆಯ ಭೂಮಾನುಭವಕ್ಕೆ ಕವಿ ಮನಸ್ಸು ಒಲಿಯುತ್ತದೆ. ಕುವೆಂಪು ಅವರ ತಾತ್ವಿಕ ಚಿಂತನೆ ಗಟ್ಟಿಯಾಗಿ ಹೊಳಹು ಹಾಕಿದ್ದು ಅವರ ಆಧ್ಯಾತ್ಮಿಕ ಗೀತೆಗಳಲ್ಲಿ ಕಾಣಿಸುತ್ತದೆ. ಉಪನಿಷತ್ ದರ್ಶನ ಮತ್ತು ಅದ್ವೈತ ದೃಷ್ಟಿಗಳು ಏಕತ್ರಗೊಂಡು ಕುವೆಂಪು ಅವರ ಸಂವೇದನೆಯನ್ನು ಅಪ್ಪಟ ಭಾರತೀಯ ಕವಿಯನ್ನಾಗಿ ರೂಪಿಸಿವೆ ಎನ್ನಬಹುದು.

ಮನುಷ್ಯನ ಬದುಕನ್ನು ಅನೇಕ ಉಪಾಧಿಗಳು ಸುತ್ತುವರಿದುಕೊಂಡು ಅವನನ್ನು ಕ್ಷುಲ್ಲಕನನ್ನಾಗಿ ಮಾಡಿದೆ. ಆ ಎಲ್ಲಾ ಉಪಾಧಿಗಳನ್ನು ಕಳಚಿ ಮನುಷ್ಯನನ್ನು ಪೂರ್ಣ ಮಾನವನನ್ನಾಗಿ, ವಿಶ್ವಮಾನವನನ್ನಾಗಿ ಮಾಡುವುದು ವಿದ್ಯೆಯ ಕರ್ತವ್ಯವಾಗಬೇಕೆಂದು ಕುವೆಂಪು ನಂಬುತ್ತಾರೆ. ಅಂಥ ಕನಸಿನ, ನಂಬಿಕೆಯ, ನಿರ್ಧಾರದ ಸಾಕಾರಗಳಾಗಿ ಅವರ ಕವಿತೆಗಳಿವೆ.

ತಾಳ್ಮೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ—ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು.

ಗಾಂಧೀಜಿ

ಚಿತ್ರಾಂಗದಾ

ಸೀತಾರಾಮ ಜಾಗೀರ್‌ದಾರ್

ಮಹಾಕವಿ ಕುವೆಂಪು ಅವರ ಮೇರು ಕಾವ್ಯ 'ಶ್ರೀ ರಾಮಾಯಣ ದರ್ಶನಂ" ಕೃತಿಯ ಮುನ್ಸೂಚಕ, ಖಂಡಕಾವ್ಯ, 'ಚಿತ್ರಾಂಗದಾ'. ಈ ಕಾವ್ಯದ ಕಥೆ 'ಬಭ್ರುವಾಹನ' ಎಂದರೆ ಅರ್ಜುನ–ಬಭ್ರುವಾಹನರ ಕಾಳಗದ ಮುಖಾಂತರ ಕಾವ್ಯ, ನಾಟಕ, ಬಯಲಾಟ, ಯಕ್ಷಗಾನ ಮುಂತಾಗಿ ಹಲವು ಸಾಹಿತ್ಯಕ ವಿಧಾನಗಳಲ್ಲಿ ಕರ್ನಾಟಕದಲ್ಲಿ ಬಹಳ ಪ್ರಸಿದ್ಧ. ಮಹಾಭಾರತ, ಜೈಮಿನಿಭಾರತ, ಇವುಗಳ ಅನುವಾದಗಳ ಮುಖಾಂತರ ಭಾರತದ, ತದಂತರ್‌ಗತ ಕರ್ನಾಟಕ ದೇಶದ ಮೂಲೆ ಮೂಲೆಗೂ ಹಬ್ಬಿರುವ ಕಾವ್ಯ ವಸ್ತು.

'ಮಣಿಪುರ' ಇಲ್ಲವೇ 'ಮಣಲೂರು' ರಾಜಧಾನಿಯಿಂದ ರಾಜ್ಯವನ್ನು ಆಳುತ್ತಿದ್ದ 'ಚಿತ್ರವಾಹನ' ಎಂಬ ಪಾಂಡ್ಯ ಅರಸು. ಆತನಿಗೆ ಗಂಡುಮಕ್ಕಳಿರಲಿಲ್ಲ; ಆದರೆ ಚಿತ್ರಾಂಗದೆ ಎಂಬ ಮಗಳಿದ್ದಳು. ಅರ್ಜುನನು ತೀರ್ಥಯಾತ್ರೆಗೆ ಹೊರಟಿದ್ದ ಕಾಲದಲ್ಲಿ ಅವನಿಗೆ ಚಿತ್ರಾಂಗದೆಯನ್ನು ಕೊಟ್ಟು ಮದುವೆ ಮಾಡಿದ; ಅವನಿಂದ ಜನಿಸಿದ ಬಭ್ರುವಾಹನನೆಂಬ ಮಗನನ್ನು ಪುತ್ರಿಕಾಪುತ್ರ ಧರ್ಮದಿಂದ ಸ್ವೀಕಾರಮಾಡಿ ಮಗಳನ್ನೂ ಮೊಮ್ಮಗನನ್ನೂ ತನ್ನಲ್ಲಿಯೇ ಇರಿಸಿಕೊಂಡು ಮಣಿಪುರದ ರಾಜ್ಯಕ್ಕೆ ಅವನನ್ನು ಅಧಿಕಾರಿಯನ್ನಾಗಿ ಮಾಡಿದ. ಮಹಾಭಾರತದಲ್ಲಿ ಚಿತ್ರಾಂಗದಾ ಪ್ರಸ್ತಾಪ ಆದಿಪರ್ವ, ಸಭಾಪರ್ವ ಅಶ್ವಮೇಧಪರ್ವ ಮತ್ತು ಮಹಾಪ್ರಸ್ಥಾನ ಪರ್ವಗಳಲ್ಲಿ ಹಬ್ಬಿ ನಿಂತಿದೆ. ವ್ಯಾಸಮಹಾಭಾರತದಲ್ಲಿ, ಸಭಾಪರ್ವದಲ್ಲಿ ಪಾಂಡವರ ರಾಜಸೂಯಯಾಗದಲ್ಲಿ, ತೆಂಕಣಕ್ಕೆ ಹೊರಟ ಸಹದೇವನ ಸೈನ್ಯವು ಬಭ್ರುವಾಹನನ್ನು ಸೋಲಿಸಿದಂತೆ ಬರೆದಿದೆ. ಆ ತಾಯಿ ಮಕ್ಕಳು ಕಪ್ಪಕಾಣಿಕೆ ಕೊಟ್ಟಂತೆ ವಿವರಣೆಯಿದೆ. ಆದರೆ ಮುಂದೆ ಅಶ್ವಮೇಧದಲ್ಲಿ ಅರ್ಜುನನ ಯಜ್ಞಾಶ್ವವನ್ನು ತಡೆದು ನಿಲ್ಲಿಸಿ ಅವನನ್ನು ರಣರಂಗ

ದಲ್ಲಿ ಕೊಂದುಬಿಡುತ್ತಾನೆ. ಆದರೆ ಮರಳಿ ಸಂಜೀವಕಮಣಿಯ ಮೂಲಕ ಆತನನ್ನು ಬದುಕಿಸಿದ. ಕುಮಾರವ್ಯಾಸನ ಕರ್ಣಾಟ ಭಾರತ ಕಥಾ ಮಂಜರಿಯಲ್ಲಿ ಇಷ್ಟು ವಿವರಗಳಿಲ್ಲದಿದ್ದರೂ ಎರಡು ಪದ್ಯಗಳಲ್ಲಿ ಈ ಕಥೆಯ ಕಿಂಚಿದ್ ವಿವರಣೆಯಿದೆ :

ಈತನನು ಕಂಡರಿದು ಪಾಂಡ್ಯನು
ಹೀತಳಾಧಿಪ ನಿಜಕುಮಾರಿಯ
ನೀತಗಿತ್ತನು ಬಭ್ರುವಾಹನನಾದನಾಕಯಲಿ
ಈತ ಕಳುಹಿಸಿಕೊಂಡು ದೈತ್ಯಾ
ರಾತಿಗೆರಗಿಯನಂತಶಯನ
ಖ್ಯಾತಿ ವಿಭವವನೀಕ್ಷಿಸುತ ಹರುಷದಲಿ ನಡೆತಂದ ॥

(ಆದಿಪರ್ವ, ಸಂಧಿ–೧೯, ಪದ್ಯ–೧೬). ರಾಜಸೂಯಯಾಗದಲ್ಲಿ ಸಹದೇವನು ಸೋಲಿಸಿದ ರಾಜರಲ್ಲಿ ಪಾಂಡ್ಯರಾಜನೂ ಒಬ್ಬ (ಸಭಾಪರ್ವ, ಸಂಧಿ–೫, ಪದ್ಯ–೨೦). ಹತ್ತನೆಯ ಪರ್ವದ ಅನಂತರದ ಕಥೆ ಕುಮಾರವ್ಯಾಸನು ಬರೆಯಲಿಲ್ಲವಾದುದರಿಂದ ನಮಗೆ ಆತನ ಕೃತಿಯಲ್ಲಿ ಅಶ್ವಮೇಧದ ವಿವರಣೆ ಕಾಣುವಂತಿಲ್ಲ.

ಕರ್ನಾಟಕದಲ್ಲಿ ಬಭ್ರುವಾಹನನ ಕಥೆ ಪ್ರಸಿದ್ಧವಾದುದು ಕವಿ ಲಕ್ಷ್ಮೀಶನ ಕನ್ನಡ 'ಜೈಮಿನಿ ಭಾರತ' ಗ್ರಂಥದಿಂದಲೇ ಎಂದರೆ ತಪ್ಪಾಗದು. ಕುವೆಂಪು ಅವರು ತಮ್ಮ ಕಾವ್ಯ ಕೃತಿಯ ಮೇಲೆ ಲಕ್ಷ್ಮೀಶನ ಕೃತಿ ಸಾಕಷ್ಟು ಪ್ರಭಾವ ಬೀರಿದೆಯೆಂದು ಸೂಚಿಸಿದ್ದಾರೆ. ಶ್ರೀಯುತರು 'ಚಿತ್ರಾಂಗದಾ' ಕಾವ್ಯಕ್ಕೆ ಮೂಲ ಆಕರಗಳೆಂದರೆ ರವೀಂದ್ರನಾಥ ಠಾಕೂರರ 'ಚಿತ್ರಾ' ಮತ್ತು ಕವಿ ಲಕ್ಷ್ಮೀಶನ ಕನ್ನಡ ಕಾವ್ಯ ಎಂದು ಸ್ಪಷ್ಟವಾಗಿಯೆ 'ಅರಿಕೆ' ವಿಭಾಗದಲ್ಲಿ ಸೂಚಿಸಿದ್ದಾರೆ. ಚಿತ್ರಾಂಗದಾ ಕಾವ್ಯವನ್ನು ಎರಡು ಭಾಗಗಳಾಗಿ ವಿಂಗಡಿಸಿದರೆ ಪೂರ್ವಭಾಗಕ್ಕೆ ಠಾಕೂರರ ಕೃತಿ ಮತ್ತು ಉತ್ತರ ಭಾಗಕ್ಕೆ ಲಕ್ಷ್ಮೀಶ ಕೃತಿಯೆಂದೂ ತಿಳಿಸಿದ್ದಾರೆ. ಈ ಎರಡು ಕೃತಿಗಳು ಕೇವಲ ಆಕರಗಳಷ್ಟೇ. ಅವರೇ ಹೇಳಿರುವಂತೆ ಈ ಕೃತಿ ಕನ್ನೆ ಕೇವಲ ಅವರ ಕೃತಿಗಳ ಮಿಶ್ರಣಗೊಂಡ ವಸ್ತುವಲ್ಲ; ಆದರೆ ಆ ಬಣ್ಣ ಬೆಡಗುಗಳನ್ನು ಹೊತ್ತುನಿಂತ ಬೇರೊಬ್ಬ ಕಲಾಸುಂದರಿ. ಲಕ್ಷ್ಮೀಶನ ಕೃತಿಯಲ್ಲಿ ೧೭ ನೆಯ ಸಂಧಿಯಲ್ಲಿ ನಮಗೆ ಬಭ್ರುವಾಹನನ ಕಥೆ ಆರಂಭವಾಗಿ ಮುಂದೆ ೨೨, ೨೩, ಹಾಗೂ ೨೪ ನೆಯ ಸಂಧಿಗಳಲ್ಲಿ ಕಥೆಯು ವಿಸ್ತಾರಗೊಂಡು ಎಲ್ಲ ಸುಖಾಂತವಾಗಿದೆ. ಚಿತ್ರಾಂಗದಾ ಹಸ್ತಿನಾಪುರಕ್ಕೆ ಉಲೂಪಿ, ದೇವಕಿ ಮತ್ತು ಯಶೋದೆಯರ ಜೊತೆಗೆ ಭೀಮನ ನೇತೃತ್ವದಲ್ಲಿ ಯಜ್ಞದ ಮುಕ್ತಾಯ ಸಮಾರಂಭಕ್ಕೆ ಹೋಗುತ್ತಾಳೆ. ಕುವೆಂಪು ಅವರ ಕೃತಿ ಸಂಪೂರ್ಣ ಬೇರೆ ರೂಪ ತಳೆದು ನಿಂತಿದೆ. ಈ ಕಾವ್ಯದಲ್ಲಿ ಲೌಕಿಕದಿಂದ ಆದರ್ಶದ ಸ್ತರಕ್ಕೆ ಏರಿದೆ ಚಿತ್ರಾಂಗದಾ ಹಾಗೂ ಅವಳ ಪ್ರಿಯಕರ ಅರ್ಜುನನ ವ್ಯಕ್ತಿತ್ವ. ಸುಂದರ ಸರಳರಗಳೆಯ ಬಂಧ ಅನಂತರದಲ್ಲಿ ಮಹಾ ಛಂದಸ್ಸಿಗೆ ತಿರುಗಿರುವುದೂ ಕುವೆಂಪು ಅವರ ಮಹಾ ಛಂದಸ್ಸಿನ ಮೂಲ ಎಲ್ಲಿ ಏನು ಎತ್ತ ಎಂಬುದರ ಅರಿವನ್ನು ನಮಗೆ ಮೂಡಿಸುತ್ತದೆ. ಪಂಚಮಾತ್ರಾಗಣದ ನಿಯತಲಯ ಸರಳರಗಳೆಯ ಜೀವಾಳ; ಅದರ ಉಲ್ಲಂಘನೆ ಎಂದರೆ ನಿಯತಲಯ ಉಲ್ಲಂಘನೆ ಮಹಾಛಂದಸ್ಸಿನ ಸ್ವರೂಪ ಎನ್ನಬಹುದು. ಎರಡೂ ವೀಣೆಯ ನಾದದಲ್ಲಿ ಲೀನವಾಗಿ ಕಿವಿಗೆ ಕರ್ಣರ

ಸಾಯನವಾಗಿ ಮೆರೆಯುವ ಸುಮಧುರ ಶೈಲಿಯ ಛಂದೋಬಂಧಗಳು. ಕುವೆಂಪು ಶೈಲಿ ಓದುಗನ ಕನ್ನಡ ಭಾಷೆಯ ಮಟ್ಟವನ್ನು ಎತ್ತುತ್ತದೆ. ಸಹೃದಯ ಓದುಗ ತನ್ನ ಮಟ್ಟವನ್ನು ಎತ್ತರಿಸಿಕೊಳ್ಳದಿದ್ದರೆ ಅವರ ಕಾವ್ಯ ಸೌಂದರ್ಯವನ್ನು ಸವಿಯುವಲ್ಲಿ ಅಸಫಲನಾಗುತ್ತಾನೆ. ಗಿರಿಶಿಖರಗಳ ಸೌಂದರ್ಯ ಸವಿಯಬೇಕಾದರೆ ಆ ಶೃಂಗಗಳನ್ನು ಏರಬೇಕಲ್ಲದೆ ನಿಂತಲ್ಲಿ ನಿಂತರೆ, ಆ ಸವಿಯನ್ನು ಸವಿಯುವಂತಿಲ್ಲ, ಚಿತ್ರಾಂಗದಾ ಕಾವ್ಯದ ಶೈಲಿ ಈ ಮಾದರಿಯದು.

ಚಿತ್ರಾಂಗದಾ ಕಾವ್ಯದಲ್ಲಿ ಆರು ಪರ್ವಗಳಿವೆ. ಶ್ರವ್ಯ ಕಾವ್ಯದಂತೆ ಇದನ್ನು ಓದಿದರೆ ಇವು ಪರ್ವಗಳು. ಶ್ರವ್ಯ ಕಾವ್ಯವನ್ನು ದೃಶ್ಯಕ್ಕೆ ಅಳವಡಿಸಿದರೆ ಇದೊಂದು ಆರಂಕಿನ ನಾಟಕ. ಆರು ಪರ್ವಗಳಲ್ಲಿ ಕಥಾಪ್ರವಾಹ ಹೀಗೆ ಹರಿದಿದೆ:

ರಾಜ ಚಿತ್ರವಾಹನನ ಏಕಮೇವ ಪುತ್ರಿ; ಪುರುಷನ ಹಾಗೆ ಬೆಳೆದ ಸ್ತ್ರೀ ಚಿತ್ರಾಂಗದಾ. ಹರೆಯ ಒಡಮೂಡಿ ಹೆಣ್ಣಿನ ಸಹಜ ಆಶೆ ಆಕಾಂಕ್ಷೆಗಳ ಸಂವೇದನೆಗೆ ಸ್ಪಂದಿಸುವ ಗಂಡೆದೆಯ ಕೋಮಲೆ. ಒಂದು ಚೈತ್ರಪ್ರಭಾತ. ಬೆಳಗಿನಲ್ಲಿ ಬನಬನದಲ್ಲಿ ಹನಿ ಉದುರಿ ವನದೇವಿ ವಸಂತದ ಆಗಮನದಿಂದ ಹರ್ಷಿತಳಾಗಿ ಹರ್ಷಬಾಷ್ಪ ಸುರಿಸಿದ್ದಾಳೆ ಎನ್ನೋ ರೀತಿಯಲ್ಲಿದೆ. ಆಗ—

ಮಣಿಪುರದ
ನೃಪ ತನಯೆ ವೇಷವಾವೇಶದೊಳ್ ಬಿಜ್ಜೆಯೊಳ್
ಬಿಲ್ಲಬಿನ್ನಾಣದೊಳ್ ಬೀರದೊಳ್ ಕೆಚ್ಚೆದೆಯ
ಕಜ್ಜದೊಳ್ ಲಜ್ಜೆಯರಿಯದ ಧೀರ ಚರ್ಯೆಯೊಳ್
ನೃಪಕುಮಾರನೆ ತಾನು ಎಂಬಂತಿರಿರ್ದಾಕೆ
ನಿಂದಳದೊ ಮೊತ್ತಮೊದಲಬಲತಾ ಭಾವದಿಂ
ಹಾ ಪೆಣ್ತನದ ನಾನೂನನುಭವಿಸಿ!

ಹೀಗೆ ಆಕೆ ನಿಲ್ಲಲು ಕಾರಣ ಇದಿರು ದಡದಲ್ಲಿ ಒಂದು ಬಂಡೆಯಲ್ಲಿ ಓರ್ವ ವ್ಯಕ್ತಿ ಪದ್ಮಾಸನದಲ್ಲಿ ಕುಳಿತಿದ್ದ. ಆ ಭಂಗಿ—

ಸೌಂದರ್ಯಮೆ ಶರೀರಮಂ ತಾಳ್ದಿಳೆಗೆವಂದು
ತಪಮಿರ್ದುದೆಂಬಿನಂ ತಾಪಸನ ತೇಜಸ್ಸು
ಮೋಹಿಸಿತ್ತಳುಕಿಸಿತ್ತಾ ಮೋಹನಾಂಗಿಯಂ,
ಮೊದಲ ಭೇಟಂ ಮೊಳೆಯುವೆಳ ಎದೆಯುಳಂ ಕನ್ಯೆ
ಚಿತ್ರಾಂಗಿಯಂ

ಸೋತು ನಿಂತಳು ಲಲನೆ—ಬರೆದ ಚಿತ್ರದ ಹಾಗೆ; ಸ್ವಲ್ಪಕಾಲ. ಇಬ್ಬರೂ ಸಂಧಿಸುತ್ತಾರೆ. ಅರ್ಜುನ, ಸನ್ಯಾಸಿ ವೇಷದಲ್ಲಿ ಯಾತ್ರೆಗೆಂದು ನಡೆದು ಹೊರಟ ನಡೆದವನು. ಚಿತ್ರಾಂಗದೆ, ಹೆಣ್ಣಾದರೂ ಪುರುಷ ಪೋಷಾಕಿನಲ್ಲಿ. ಅರ್ಜುನನಿಗೆ ಅವಳು—ತರುಣ ವೀರನ ಹಾಗೆ ತೋರುತ್ತಾಳೆ, ಗುರುತಿಸದೆ ಸ್ತ್ರೀಯೆಂದು ಬಗೆಯದೆ 'ಆರು ನೀನೆಲೆ

ತರುಣವೀರ' ಮುಂತಾಗಿ ಪ್ರಶ್ನಿಸುತ್ತಾನೆ. 'ನುಡಿ, ಅಂಜದಿರು' ಎಂದು ಹೇಳಿದಾಕ್ಷಣ ಚಿತ್ರಾಂಗದೆಯ ಪ್ರತಿಸ್ಪರ್ಧಿಭಾವ ಸಿಡಿದು ಏಳುತ್ತದೆ. ನುಡಿಯುತ್ತದೆ.

ಅಂಜುವವರಾವಲ್ಲ ! ಅಂಜಿಕೆಯ ಕಂಡಿಲ್ಲ
ಕೇಳಿಲ್ಲ ! ಅಂಜಕುಳಿಗಳ ರಕ್ಷಣೆಯೆ ನಮ್ಮ
ಕುಲಕರ್ಮ; ನಂಜಿನಂತಹ ಲೋಕ ಕಂಟಕರ
ಭಂಜನೆಯೆ ನಾವೊಲಿದ ಕರ್ತವ್ಯ!

ಮತ್ತೆ "ನೀನಾರೆಲೆ ತಪಸ್ವಿ" ಎಂದು ಪ್ರಶ್ನಿಸಿ ಅರ್ಜುನನ ಪೂರ್ವಾಪರ ಸಂಗತಿಗಳನ್ನು ಚಾಣಾಕ್ಷತನದಿಂದ ಸಂಗ್ರಹಿಸುತ್ತಾಳೆ. ಒಂದು ಬಗೆಯ ಮೂದಲಿಕೆ ತಿರಸ್ಕಾರ—ಅಹಂಮಿಕೆಯ ಅಂಧಕಾರದಲ್ಲಿ— ಇಬ್ಬರಲ್ಲಿ ಸಂವಾದವು ನಡೆಯುತ್ತದೆ. ಅರ್ಜುನನ ತನ್ನ ವಂಶದ ಹಿರಿಮೆಗಳನ್ನು ಪ್ರಸಿದ್ಧಿಯನ್ನು ವಿವರಿಸುತ್ತ ವ್ಯಂಗ್ಯದ ನುಡಿಗಳಲ್ಲಿ ಎದುರಿರುವ ವ್ಯಕ್ತಿ ಸಿಟ್ಟಾಗಿ ಸೆಡೆಯುವಂತೆ ವರ್ತಿಸುತ್ತಾನೆ. ಆದರೆ ಚಿತ್ರಾಂಗದೆ ಪುರುಷನ ವೇಷದಲ್ಲಿರುವ ಪ್ರಚ್ಛನ್ನರೂಪದ ವ್ಯಕ್ತಿ ವಿಸ್ಮಯದ ಭಾರದಲ್ಲಿ ಕುಗ್ಗಿ ಕುಸಿಯುತ್ತಾಳೆ. 'ನಾರಿ ನಿಂತಳು ಕಂಬದಂತಲ್ಲಿ'. ನರ ಎಂದರೆ ಅರ್ಜುನ ಹಿಂದಕ್ಕೆ ನೋಡದೆ ಕಾಡಿನಲ್ಲಿ ಮುಂದಕ್ಕೆ ನಡೆದು ಮಾಯವಾಗುತ್ತಾನೆ. ಚಿತ್ರಾಂಗದೆಗೆ 'ತನ್ನ ಬಾಳಿನ ಆರಾಧನೆಯ ಮೂರ್ತಿ, ತನ್ನೊಲವಿನ ಅರ್ಜುನ, ತನ್ನ ಎದುರಿನಲ್ಲಿ ನಿಂತಾಗ' ತಿಳಿಯದೆ ಮಾತನಾಡಿದ ತಿಳಿಗೇಡಿತನಕ್ಕೆ ಗಾಬರಿಗೊಂಡು ಶೋಕತಪ್ತಳಾಗುತ್ತಾಳೆ; ಪಾಳೆಯಕ್ಕೆ ಹಿಂತಿರುಗುತ್ತಾಳೆ. ಪುರುಷನ ಕಂಡ ತರುಣಿ ಬೆಣ್ಣೆಯಂತೆ ಕಾಮನ, ಆತನು ದೇವನ, ಇಕ್ಷು ಬಿಲ್ಲಿನ ಹೊಡೆತಕ್ಕೆ ಗಾಯಗೊಳ್ಳುತ್ತಾಳೆ. ತನ್ನ ಗಂಡಸು ವೇಷಕ್ಕೆ—ಗಂಡಸುತನಕ್ಕೆ—ತಾನೆ ನಾಚುತ್ತಾಳೆ ಚಿತ್ರಾಂಗದೆ. ಆಗ ತನ್ನ ನಚ್ಚಿನ ಆಳನ್ನು, ಅಲಂಕರಿಸುವ ಮನೆವಾಳ್ತಿಯನ್ನು, ಪ್ರಸಾಧನ ಚತುರೆಯನ್ನು ಕರೆದು ಸ್ತ್ರೀಗೊಪ್ಪುವ ಉಡುಗೆ ತೊಡುಗೆಗಳನ್ನು ಉಡಿಸಿ ತೊಡಿಸಿ ಅಲಂಕರಿಸುವಂತೆ ಕೇಳಿಕೊಳ್ಳುತ್ತಾಳೆ. ಯಾರಿಗೂ ಹೇಳದೆ ಮನವನ್ನು ಗೆದ್ದ, ಯತಿ ಇದ್ದ, ನೆಲೆಗೆ ಕತ್ತಲೆಯಲ್ಲಿ ನಡೆದುಹೋಗುತ್ತಾಳೆ. ಯತಿಯನ್ನು ಕಂಡು ನಮಸ್ಕಾರವನ್ನು ಹೇಳುತ್ತಾಳೆ. ಆ ರಾತ್ರಿಯಲ್ಲಿ ಏಕಾಕಿಯಾಗಿ ಸ್ತ್ರೀಯೋರ್ವಳು ಬಂದುದು ಅರ್ಜುನನಿಗೆ ಅಚ್ಚರಿಯಾಗುತ್ತದೆ; ಆ ಸ್ತ್ರೀರೂಪ, ಕಪಟವೊ ದಿಟವೊ ಮಾನವಿಯೊ ಮೋಹಿನಿಯೊ ರಕ್ಕಸಿಯೊ ಎಂಬ ಶಂಕೆ ತಾಳುತ್ತಾನೆ. ಎಚ್ಚರದಿಂದ ಕೇಳುತ್ತಾನೆ:

"ಆರು ನೀನೆಲೆ ತರುಣಿ? ಈ ರಾತ್ರಿ, ಈ ಘೋರ
ವಿಪಿನದೊಳ್ ನಕ್ತಂಚರಿಯವೋಲ್ ಅದೇಕಿಂತು
ಸುತ್ತುತಿಹೆ? ಕೋಳ್ಮಿಗಗಳಲೆವ ಪೊಳ್ತಿದು; ಪೆಣ್
ನೀನಾಗಿಯುಂ ಇನಿತಳುಕದೆಯೆ ಇರುಳನಲೆಯುತಿಹೆ?
ಮಾನವ ಸ್ತ್ರೀಯರ್ಗೆ ಈ ಬಾಳ್ಕೆ ಸೋಜಿಗಂ
ಮೇಣ್‌ಸದ್ವಂಶಜಾತರಿಗೆ ತಾಂ ತಗುವುದಲ್ತು"

ಅದಕ್ಕೆ ಆಕೆ, ಕಾಮಾತುರೆ, ಇನಿತು ಸುಳ್ಳನ್ನು ಬೆರಸಿ ಹೇಳುತ್ತಾಳೆ:

ನಿನ್ನನ್ನರಿರೆ ಯತಿವೀರ
ಕಾಡೆ ತಾನಾದಪುದು ನಾಡಿನಿಂತಲು ಮಿಗಿಲ್
ಸುಕ್ಷೇಮತರಮಾಗಿ ; ದಿವಮಾದಪುದು ರಾತ್ರಿ ತಾಂ;
ಭಯಮೆ ತಾನಹುದುಲ್ಲಸಂ ; ನಕ್ತಂಚರತೆ ತಾನೆ
ನಿರ್ಮಲ ಪ್ರೇಮಯಾತ್ರೆಗೆ ಸಮಂ ! ಪ್ರಣಯಾಗ್ನಿ
ಎದೆಯನಾವರಿಸೆ ಕತ್ತಲೆಯಿಹುದೆ ಕಂಗಳಿಗೆ ?
ಒಲುಮೆಗಿಚ್ಚಿನ ಕೆಚ್ಚಿನಿದಿರೊಳೇವುದು ಭೀತಿ ? ಮೇಣ್
ನಿನ್ನೆಡೆಯೊಳಾನಿರೆ ಕುಲೀನತೆಗೆ ಕುಂದಿಹುದೆ ?
ಪಿರಿಯದೊಂದಾಸೆಯುರಿ ಬಗೆಗೆ ತಗುಲಿರೆ ಬಂದೆ;
ನೀನದಕೆ ಗುರಿ ! ಕೌತುಕಕೆ ಬೆಚ್ಚದಿರ್ ಬರಿದೆ,
ವೀರ ಯತಿ. ಇಂದು ಬೆಳಗುಂ ಬೊಳ್ತು ಬಳಿಯಿರ್ಪ
ದೀರ್ಘ ವಿಸ್ತೃತ ದೀರ್ಘಿಕೆಯು ದಡದೆ ತಿರುಗಾಡೆ
ಬಂದಿರ್ದ ನನ್ನಗ್ರಜಂ ನಿನ್ನನರುಹಿದನ್
ನನಗೆ. ಯತಿವೇಷದಿಂದೆನ್ನಾಸೆಯರ್ಜುನನೆ,
ಪ್ರೇಮದ ತಪಸ್ಸೆ ಸಾಕ್ಷಾತ್ಕರಣವೆತ್ತಂತೆ,
ಇಲ್ಲಿಗೈತಂದುದನ್ ಕೇಳ್ದೊಡೆನ್ನಿಚ್ಛೆ ಲತೆ
ದಾಂಗುಡಿವರಿದು ಬಂದಿಹುದು ನಿನ್ನಡಿಗಳಿಗೆ
ವೀರ ಅರ್ಜುನದೇವ, ಅಪರಿಚಿತೆಯಾದೊಡಂ
ನಿನ್ನ ಪ್ರೇಯಸಿ ನಾನು. ಪ್ರಣಯ ಭಿಕ್ಷೆಯಬೇಡಿ
ಬಂದೆನಾಂ, ಸುಂದರನೆ, ದಯೆಗೈ, ಕರುಣಿಸೆನಗೆ

ಧೀರನಾರಿಯ ಧೈರ್ಯಕ್ಕೆ ಅರ್ಜುನ ಕಿರುನಗೆ ಬೀರುತ್ತಾನೆ. 'ಬ್ರಹ್ಮಚರ್ಯವ್ರತವನ್ನು ಹಿಡಿದ ಯತಿ' ತಾನೆಂದು ಹೇಳಿ ಸುಮ್ಮನಿರದೆ ಆಕೆಯನ್ನು "ಬನವೆಣ್ಣೆ ನಿನ್ನೊಳೇನಿದೆ ಎನಗೆ ಎಣೆಯಾಗಿ" ಎಂದು ಮುಂತಾಗಿ ಛೇಡಿಸಿ ತಿರಸ್ಕರಿಸುತ್ತಾನೆ. ತಿರಸ್ಕೃತ ಕನ್ಯೆ ತಪಕ್ಕೆ ನಿಲ್ಲುತ್ತಾಳೆ—ಅತ್ತ, ಇತ್ತ ಅರ್ಜುನ ಒಲಿದು ಬಂದ ಸುಂದರಿಯ ರೂಪಕ್ಕೆ ಮರುಳಾಗುತ್ತಾನೆ ಆಕೆಯನ್ನು ಕಲಿಯಬೇಕೆಂದು ಹೊರಡುತ್ತಾನೆ. ಪ್ರಣಯಪ್ರಸಂಗ ತಪೋಭಂಗದಲ್ಲಿ ಅವಸಾನಗೊಳ್ಳುತ್ತದೆ. ಇಬ್ಬರೂ ತಪಸ್ಸಿಗಳು ಹಲವುದಿನಗಳ ಸಂಗದಲ್ಲಿ ಒಂದಾಗುತ್ತಾರೆ. ಅರ್ಜುನ ಆರುತಿಂಗಳದ ಅವಧಿಯಲ್ಲಿ ಬಂದು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಆಕೆಯ ಬೆರಳಿಗೆ ತನ್ನ ಮುದ್ರೆಯುಂಗರ ತೊಡಿಸಿ ಹೋಗುತ್ತಾನೆ.

ಆರು ತಿಂಗಳಕ್ಕೆ ಹೇಳಿದಂತೆ ಬರಲಿಲ್ಲ. ಇಬ್ಬರಿಗೂ ಪುನರ್ಮಿಲನ ಸಂಘಟಿಸಲಿಲ್ಲ. ಹತ್ತಾರು ವರುಷ ಆಕೆ ನೂಕಿದಳು ದಿನ ಮಾನ—ಹಾಡಿ ಗಾಂಧರ್ವಗೀತೆ, "ಒಲುಮೆಗಿಂತಲು ಬೇರೆ ಪರಮಾರ್ಥವಿನ್ನಿಲ್ಲ ನರರ ಬದುಕಿನಲಿ" ಎಂದು. ಸಮಯಕ್ಕೆ ಬರದೆ ಅನಂತರ ಬಂದು ಕಾಣದೆ ಮನದನ್ನೆಯನ್ನು ಹಿಂದಕ್ಕೆ ಹೋಗುತ್ತಾನೆ—ಅರ್ಜುನ.

ಕಾಲ ಚಕ್ರ ಉರುಳುತ್ತದೆ. ಜೀವನರಥವೂ ಮುಂದಕ್ಕೆ ಸಾಗುತ್ತದೆ. ಇಬ್ಬರ ಬೇಟದ ಸಾಕ್ಷಿಯಾಗಿ—ಹೂಗಳ ಸಂಗಮದ ಕುರುಹಾಗಿ ಬಭ್ರುವಾಹನ ಹುಟ್ಟಿ ಬೆಳೆಯುತ್ತಾನೆ. ಧರ್ಮರಾಜನ ಅಶ್ವಮೇಧದ ಕುದುರೆ ಬಂದಾಗ ಹಿಡಿದು ಕಟ್ಟುತ್ತಾನೆ. ಚಲವನ್ನು ಬಲವನ್ನು, ಮೆರೆಯುತ್ತಾನೆ. "ಕ್ಷತ್ರಿಯರ ಪಂಥದಿಂದಾತನ ತುರಂಗಮಂ ಕಟ್ಟಿದೆನ್" ಎಂದು ತಾಯಿಗೆ ತಿಳಿಸುತ್ತಾನೆ. ಯುದ್ಧ ಸರಿಯಲ್ಲ ಗುರುವಿಗೆ ಸಂಪತ್ತೆಲ್ಲವನೂ ಒಪ್ಪಿಸೆನ್ನುತ್ತಾಳೆ ಆದರೇನು ವಿಧಿ ಒಡ್ಡಿದ ಬಲೆ ಬೇರೆಯೆ. ತಂದೆ ಮಕ್ಕಳಿಗೆ—ಅಹಂಮಿಕೆಯ ಅತಿರಭಸದಲ್ಲಿ—ಯುದ್ಧ ಏರ್ಪಡುತ್ತದೆ. ಕರ್ಕಶತೆ ದಿಛಿಲ್ ಭುಗಿಲ್ಲೆಂದು ಎದ್ದು ನಿಲ್ಲುತ್ತದೆ "ಕದನಕಾಳಿ" ಹಬ್ಬಿ ನಿಲ್ಲುತ್ತದೆ.

ರುಂದ್ರ ಚಾಮುಂಡಿಯ ಚಲಚ್ಚಂಡ ಛಂದಸಿಗೆ
ಚಲಿಸಿತು ಚಮೂದ್ವಯ ಜಳಧಿ ಲಯವಿನೋದದಲಿ !

ಸುದ್ದಿಯು ಬರದೆ ಗಾಬರಿಯಲ್ಲಿದ್ದ ಚಿತ್ರಾಂಗದೆ ಕನಸುಕಾಣುತ್ತಾಳೆ. "ತಲುವಿದರೆ ಬೀಳುವುದು ಪಾರ್ಥನ ಕಳೇಬರಂ ರಣಧರೆಗೆ" ಎಂದು ಕಂಡಾಗ ಕಂಪಿಸಿ ಏಳುತ್ತಾಳೆ "ಹಾ ಮಗನೆ! ಹಾ ಪತಿಯೆ!" ಎಂದು. ಕುದುರೆಯೊಂದನ್ನು ತರಿಸಿ ರಣರಂಗಕ್ಕೆ ಹೊರಡುತ್ತಾಳೆ— ಮಣಿಗಿಪುರದರಾಣಿ ಚಿತ್ರಾಂಗದೆ. ಆಚೆ ಈಚೆ ಕಡೆಗಳಿಂದ ಬರುವ ಬಾಣಗಳು ಆಕೆಯನ್ನು ಛೇದಿಸುತ್ತವೆ. ಯಾವುದರ ಪರಿವೇ ಇಲ್ಲದ ಆ ಚಿತ್ರಾಂಗದೆ ತಂದೆ ಮಕ್ಕಳನ್ನು ತನ್ನ ಜೀವವನ್ನು ತೃಣವೆಂದು ಬಗೆದು ಕೂಡಿಸುತ್ತಾಳೆ. ಮತ್ತೆ ಹೇಳಿದಳು

ಚಿತ್ರೆ, ತನ್ನ ಕಥೆಯಾದ್ಯಂತಮಂ ಬಹುಲ
ಸಂಕ್ಷೇಪದಿಂದೆ ನರನಾಮಾಂಕಿತದ ಮುದ್ರೆಯಿಂ
ಶ್ರೀಯುಂಗರವನಿತ್ತಳಾತನ ಕೈಗೆ ಸಾಕ್ಷಿಯಂ

ಹೊಂದಿಸಿ, ಸಂಧಿಸಿ ಶಾಂತಿ, ಚಿತ್ರಾಂಗದೆ ಅಮೃತಮಯ ಚಿರ ಸಮಾಧಿಗೆ ಕಣ್ಣು ಮುಚ್ಚಿದಳು; ರಣರಂಗ ಕಂಬನಿಯ ಮಳೆಯಲ್ಲಿ ತೊಯ್ದು ಹೋಯಿತು.

* * *

ಕುವೆಂಪು ಅವರ ಚಿತ್ರಾಂಗದಾ ಒಂದು ದೃಷ್ಟಿಯಲ್ಲಿ ಠಾಕೂರರ 'ಚಿತ್ರಾ' ಮತ್ತು ಲಕ್ಷ್ಮೀಶನ ಕನ್ನಡ ಜೈಮಿನಿ ಭಾರತ ಕಥಾ ಸಂಗಮವೆಂದು ತೋರಿದರೂ ಆ ಎರಡಕ್ಕೂ ಭಿನ್ನವಾದ ಸ್ವತಂತ್ರ ಕೃತಿ. ಇದೊಂದು ಸುಂದರ ಮಧುರ ರಸಮಯ ರಸಾಲ ಪ್ರಣಯ ಕವಿತೆ. ಕಾಳಿದಾಸ, ಪಂಪ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾಗಿ ಅನೇಕ ಕವಿಗಳ ಭಾವನಾ ತರಂಗಳು ಮೇಳವಿಸಿ ಇಲ್ಲಿ ತಪ್ಪದೆ ಆದ ಮರುವುಟ್ಟಿನಿಂದ ಹೊಸದೊಂದು ಆನಂದವನ್ನು ಕೊಡುತ್ತವೆ; 'ಕಾವ್ಯಂ ಆನಂದಾಯ' ಎಂದು ಸಾರುತ್ತವೆ, ಇಲ್ಲಿನದು ಉಚ್ಛೃಂಖಲಾ ಪ್ರಣಯವೂ ಅಲ್ಲ; ಪೌರಾಣಿಕ ನೀಲನಭದ ಗಗನಕುಸುಮವೂ ಅಲ್ಲ. ಇದೊಂದು ಸಹಜತೆಯ ಹಳಿಯ ಮೇಲೆ ನಡೆವ ಸ್ಮಾರಕ ನಿಕೇತನ, ಪ್ರಣಯಸ್ತೂಪ.

ಕುವೆಂಪು ಯುಗ

ಕೆ. ಎಸ್. ಭಗವಾನ್

ಬಹುಶಃ ಆಧುನಿಕ ಕನ್ನಡ ಸಾಹಿತ್ಯದ ಅತ್ಯಂತ ದೊಡ್ಡ ಲೇಖಕ ಕುವೆಂಪು. ಸಾಹಿತ್ಯದ ಸರ್ವ ಪ್ರಕಾರಗಳಲ್ಲಿಯೂ ಒಂದೇ ಬಗೆಯ ವಿಶಿಷ್ಟತೆಯನ್ನು ಅವರು ಸಾಧಿಸಿದ್ದಾರೆ. ಕಥೆ, ಕವನ, ಭಾವಗೀತೆ, ಕಥನಕವನ, ಖಂಡಕಾವ್ಯ, ಮಹಾಕಾವ್ಯ, ಜೀವನ ಚರಿತ್ರೆ, ಶಿಶುಸಾಹಿತ್ಯ, ಮಹಾಕಾದಂಬರಿ, ವಿಮರ್ಶೆ, ಮೀಮಾಂಸೆ, ವಿಚಾರ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಪ್ರಥಮ ದರ್ಜೆಯ ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯ ಸೃಷ್ಟಿ ಸಂಖ್ಯೆಯಲ್ಲಿ ಮಿಗಿಲಾಗಿರುವಂತೆ ಸತ್ವದಲ್ಲಿ ಮಹತ್ವದ್ದಾಗಿದೆ. ಪಂಪ ಚಂಪೂ ಕಾವ್ಯಗಳನ್ನು ರಚಿಸಿ ಚಂಪೂ ಯುಗವನ್ನು ಆರಂಭಿಸಿದನು. ಸಾಹಿತ್ಯ ಚರಿತ್ರಕಾರರು ಅದನ್ನು ನ್ಯಾಯವಾಗಿಯೆ ಪಂಪ ಯುಗವೆಂದು ಕರೆದರು. ಹರಿಹರ ಹೊಸ ಕಾವ್ಯ, ಛಂದಸ್ಸುಗಳ ಶಕೆಯನ್ನು ಶುರುಮಾಡಿದನು. ಅದು ಹರಿಹರ ಯುಗವೆಂದು ಹೆಸರಾಯಿತು. ಕುಮಾರವ್ಯಾಸನ ಕಾಲದ ಸಾಹಿತ್ಯ ಕುಮಾರವ್ಯಾಸ ಯುಗವೆಂದು ವಿಖ್ಯಾತವಾಯಿತು. ಕುವೆಂಪು ಮಹಾಕಾದಂಬರಿ "ಕಾನೂರು ಹೆಗ್ಗಡಿತಿ" (೧೯೩೬) ಬರೆದ ಮೇಲೆ ಬೃಹದ್‌ಗಾತ್ರದ ಅನೇಕ ಕಾದಂಬರಿಗಳು ಪ್ರಕಟವಾದವು. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' (೧೯೪೧), ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಚನ್ನಬಸವ ನಾಯಕ'(೧೯೪೯) ಮತ್ತು 'ಚಿಕವೀರ ರಾಜೇಂದ್ರ' (೧೯೫೬), ವಿನಾಯಕ ಕೃಷ್ಣ ಗೋಕಾಕರ 'ಸಮರಸವೇ ಜೀವನ' (೧೯೫೬), ರಾವಬಹದೂರರ 'ಗ್ರಾಮಾಯಣ' (೧೯೬೦), ಇತ್ಯಾದಿ. ಕುವೆಂಪು ಅವರ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' (೧೯೪೯) ರಚನೆಯಾದ ಮೇಲೆ ಅನೇಕ ದೀರ್ಘಕಾವ್ಯಗಳು ಹೊರಬಿದ್ದಿವೆ. ಜಯದೇವಿ ತಾಯಿ ಲಿಗಾಡೆ ಅವರ 'ಸಿದ್ಧರಾಮ ಚಾರಿತ್ರ' (೧೯೬೫), ಮಾಸ್ತಿ ಅವರ 'ಶ್ರೀ ರಾಮ ಪಟ್ಟಾಭಿಷೇಕ' (೧೯೭೨), ಗೋಕಾಕರ

'ಭಾರತ ಸಿಂಧು ರಶ್ಮಿ' (೧೯೮೨), ಭೂಸನೂರಮಠ ಅವರ 'ಭವ್ಯಮಾನವ' (೧೯೮೩), ಪು. ತಿ. ನರಸಿಂಹಾಚಾರ್ಯರ 'ಶ್ರೀಹರಿ ಚರಿತ' (೧೯೮೮), ಇತ್ಯಾದಿ. ನಾಟಕದಲ್ಲಿ ('ಬಿರುಗಾಳಿ') ಸರಳರಗಳೆಯನ್ನು ಮೊಟ್ಟಮೊದಲಿಗೆ ಬಳಸಿ ಪಳಗಿಸಿದರು. ಆಮೇಲೆ ಸರಳ ರಗಳೆಯ ನಾಟಕಗಳು ಸಾಕಷ್ಟು ಮೂಡಿದವು. ಜೀವನಚರಿತ್ರೆ 'ಸ್ವಾಮಿ ವಿವೇಕಾನಂದ' ಅಚ್ಚಾದ ಮೇಲೆ ಕನ್ನಡದಲ್ಲಿ ಜೀವನ ಚರಿತ್ರೆಗಳ ಸುರಿಮಳೆಯಾಯಿತು. ಹೀಗೆ ಅನೇಕ ಪ್ರಥಮಗಳಿಂದ ತಮ್ಮ ತಲೆಮಾರಿನ ಹಾಗೂ ಸಮಕಾಲೀನ ಸಾಹಿತಿಗಳ ಮೇಲೆ ಪ್ರತ್ಯಕ್ಷ ವಾಗಿ ಪರೋಕ್ಷವಾಗಿ ಕುವೆಂಪು ಅಪಾರ ಪ್ರಭಾವ ಬೀರಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಜ್ಞಾನಪೀಠ ಪ್ರಶಸ್ತಿಗಳನ್ನು ಕನ್ನಡಕ್ಕೆ ಮೊಟ್ಟಮೊದಲು ಅವರು ಗಳಿಸಿ ಕೊಟ್ಟರು. ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಪ್ರತಿಷ್ಠಿತ ಬಹುಮಾನ 'ಪಂಪ ಪ್ರಶಸ್ತಿ' ಯನ್ನು ಮೊದಲಿಗೆ ಕುವೆಂಪು ಅವರು ಪಡೆದದ್ದು ಅರ್ಥಪೂರ್ಣವಾಗಿದೆ. ಪಂಪನ ಧ್ಯೇಯ ಸೂಕ್ತಿ 'ಮನುಷ್ಯ ಜಾತಿ ತಾನೊಂದೆ ವಲಂ' (ಇದು ವಾಸ್ತವವಾಗಿ ಜಿನಸೇನಾಚಾರ್ಯರ ಮಾತು) ಕುವೆಂಪು ಸಾಹಿತ್ಯದ ಕೇಂದ್ರ ಪ್ರಜ್ಞೆ ಆಗಿದೆ. ಈ ಎಲ್ಲಾ ಕಾರಣಗಳಿಂದ ಇದು ಕುವೆಂಪು ಯುಗ ಎಂದು ಮುಂದಿನ ಸಾಹಿತ್ಯ ಚರಿತ್ರಕಾರರಿಂದ ಹೆಸರು ಪಡೆಯು ತ್ತದೆ. ಈ ಯುಗದ ಸಾಹಿತ್ಯ ಪ್ರತ್ಯೇಕವಾಗಿ ದಾಖಲಾದಾಗ 'ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸ'ವೆನ್ನಿಸಿಕೊಂಡರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಕುವೆಂಪು ಯುಗ' ಎಂಬ ಹೆಸರಿನಲ್ಲಿ ಲಿಖಿತವಾಗುತ್ತದೆ. ಪಂಪ, ಹರಿಹರ, ಕುಮಾರವ್ಯಾಸ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೂರು ಮುಖ್ಯ ಅವಸ್ಥೆಗಳನ್ನು ಪ್ರತಿನಿಧಿಸುತ್ತಾರೆ; ಕುವೆಂಪು ನಾಲ್ಕನೆಯ ಘಟ್ಟವನ್ನು ಉದ್ಘಾಟಿಸಿ ಅಪ್ರತಿಮರಾಗಿದ್ದಾರೆ.

ಕನ್ನಡದ ರತ್ನತ್ರಯರೆಂದು ಪಂಪ, ಪೊನ್ನ, ರನ್ನ ಪ್ರಖ್ಯಾತರಾಗಿದ್ದಾರೆ. ಇದೇ ಮಾತನ್ನು ಕನ್ನಡದ ಮೂವರು ಆಧುನಿಕ ಕವಿಗಳಿಗೆ ಹೇಳುವುದು ಈಗ ಕೇಳಬರು ತ್ತಿದೆ. ಇದು ಕನ್ನಡ ವಿಮರ್ಶೆಯ ಬಡತನವನ್ನು ಪ್ರದರ್ಶಿಸುವ ಮಾತು. ಏಕೆಂದರೆ ಪೊನ್ನ ರನ್ನರನ್ನು ಪಂಪನ ಪರಂಪರೆಗೆ ಸೇರಿಸುವುದರಲ್ಲಿ ಅರ್ಥವಿದೆ. ಪಂಪ ಲೌಕಿಕ ಕಾವ್ಯವನ್ನೂ ಧಾರ್ಮಿಕ ಕಾವ್ಯವನ್ನೂ ಬರೆದಂತೆ ಪೊನ್ನ ರನ್ನ ಇಬ್ಬರೂ ಬರೆದಿ ದ್ದಾರೆ. ಕಾವ್ಯ ವಸ್ತುವಿನಿಂದ ಛಂದಸ್ಸಿನಿಂದ ಮೂವರಲ್ಲೂ ಸಾಮ್ಯ ಅನುರೂಪ ಗಳಿವೆ. ಆದರೆ ಕುವೆಂಪು ಪುತಿನ ಬೇಂದ್ರೆ ಇವರಿಗಿಲ್ಲ. ಕುವೆಂಪು ಮಹಾಕಾವ್ಯ ಮತ್ತು ಮಹಾಕಾದಂಬರಿಗಳನ್ನು ಬರೆದರು. ಬೇಂದ್ರೆ ಮತ್ತು ಪುತಿನ ಅವರಿಗೆ ಅವು ಸಾಧ್ಯವಾಗಲಿಲ್ಲ. ಬೇಂದ್ರೆ, ಪುತಿನ ಸಂಪ್ರದಾಯವಾದಿಗಳಾದರೆ ಕುವೆಂಪು ಪ್ರಗತಿ ವಾದಿಗಳು. ಬೇಂದ್ರೆಯವರ ತುತ್ತಿನ ಚೀಲ, ಕುರುಡು ಕಾಂಚಾಣ, ಅನ್ನಾವತಾರ ಇಂಥ ಕವಿತೆಗಳಲ್ಲಿ ಅಂತಃಕರಣದ ಅನುಕಂಪ ಮಿಡಿದು ಸುಂದರ ಭಾವಗೀತೆಗಳು ಬಂದಿದ್ದರೂ, ಆ ಅನುಕಂಪಭಾವ ತೀವ್ರ ವಿಚಾರವಾಗಿ ತಾತ್ವಿಕತೆಯನ್ನು ಪಡೆಯುವು ದಿಲ್ಲ. ಸಿದ್ಧಾರ್ಥ ರೋಗಿಯನ್ನೂ ಶವವನ್ನೂ ನೋಡಿ ಮರುಕಪಟ್ಟು ಸುಮ್ಮನಿದ್ದರೆ ಅವನು ಬುದ್ಧನಾಗುತ್ತಿರಲಿಲ್ಲ; ಇತರರ ನೋವು ಅವನ ನೋವಾಗಿ, ಆ ಸಂಕಟವೆ ಅವನ ಬಾಳನ್ನು ನೇಯ್ದ ಬೆಳಕಿನ ಲಾಳಿಯಾಯಿತು. ಚಾತುರ್ ವರ್ಣ್ಯದ ಅಮಾನುಷ ಅಸಮಾನತೆಯ ಬಗ್ಗೆ, ಕುವೆಂಪು ಅವರನ್ನು ಬಿಟ್ಟರೆ ಅವರ ತಲೆಮಾರಿನ

ಯಾವ ಲೇಖಕನೂ ಅದರ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿಲ್ಲ. ಆದರೆ ಕುವೆಂಪು ಅದು ಸಂಪೂರ್ಣ ನಿವಾರಣೆಯಾಗಬೇಕೆಂದು ಸಮಬುದ್ಧಿಯಿಂದ ತೂರ್ಯಧ್ವನಿಯಲ್ಲಿ ಹೇಳಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಸರ್ವೋದಯ, ಸೋದರತ್ವ ಕುವೆಂಪು ಸಾಹಿತ್ಯದ ಉಸಿರಾಗಿರುವಂತೆ, ಕೊಂಚಮಟ್ಟಿಗೆ ಪ್ರಗತಿಶೀಲರನ್ನು ಬಿಟ್ಟರೆ ಮುಖ್ಯವಾಗಿ ಬಸವರಾಜ ಕಟ್ಟೀಮನಿ ಹಾಗೂ ಬಂಡಾಯ ಮತ್ತು ದಲಿತ ಲೇಖಕರನ್ನು ಹೊರತುಪಡಿಸಿದರೆ, ಬೇರೆ ಬರಹಗಾರರ ಧ್ಯೇಯ ಧೋರಣೆಗಳ ಸೂತ್ರಗಳಾಗಿಲ್ಲ. ಆದ್ದರಿಂದ ಕುವೆಂಪು, ಬೇಂದ್ರೆ ಮತ್ತು ಪುತಿನ ಅವರಿಗೆ ಸಾಮ್ಯಗಳಿಗಿಂತ ವೈಷಮ್ಯಗಳೂ, ಸಾದೃಶ್ಯಗಳಿಗಿಂತ ವೈದೃಶ್ಯಗಳೇ ಹೆಚ್ಚಾಗಿ ಕಾಣುತ್ತವೆ. ಈ ಮೂವರು ಕವಿಗಳನ್ನು ಹೊಸಗನ್ನಡ ಸಾಹಿತ್ಯದ ರತ್ನತ್ರಯರೆಂದು ಕರೆಯುವುದು ಸೂಕ್ತ ಎನ್ನಿಸುವುದಿಲ್ಲ. ಕುವೆಂಪು ಅವರ ಎತ್ತರಕ್ಕೆ ಉಳಿದಿಬ್ಬರನ್ನು ಏರಿಸುವ ಪ್ರಯತ್ನವಾಗುತ್ತದೆ; ಅಥವಾ ಕುವೆಂಪು ಅವರನ್ನು ಅವರ ಮಟ್ಟಕ್ಕೆ ಇಳಿಸಿದಂತಾಗುತ್ತದೆ. “ಯುಗದ ಕವಿಗೆ ಜಗದ ಕವಿಗೆ ನಮೋ” ಎಂದು ಕುವೆಂಪು ಬಗ್ಗೆ ಬೇಂದ್ರೆಯವರು ಹಾಡಿ ವಿವಾದಕ್ಕೆ ಅಸ್ಪದವಿಲ್ಲದಂತೆ ಮಾಡಿದ್ದಾರೆ.

ವಿಶ್ವದ ಇತಿಹಾಸದಲ್ಲಿ ಪುನರುಜ್ಜೀವನ ಮತ್ತು ಮತಸುಧಾರಣೆ ಹಾಗೂ ಫ್ರಾನ್ಸಿನ ಮಹಾಕ್ರಾಂತಿ ಮೂರು ಮಹಾನ್ ಘಟನೆಗಳಾಗಿವೆ. ಪ್ರಾಚೀನ ಪ್ರಪಂಚ ಪ್ರಶ್ನಿಸದೆ ಒಪ್ಪಿಕೊಂಡು ಬಂದಿದ್ದ ನಂಬಿಕೆಗಳನ್ನೆಲ್ಲ ಪುನರುಜ್ಜೀವನ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ವೈಚಾರಿಕತೆ ಅಳ್ಳಾಡಿಸಿ ಬೀಳಿಸಿತು: ಮಾನವ ಮತಿಯನ್ನು ಎಲ್ಲ ಶೃಂಖಲೆಗಳಿಂದಲೂ ಬಿಡಿಸಿ ಬೆಳೆಸಿತು; ಎಲ್ಲಿಯೂ ನಿಲ್ಲದಂಥ ನಿರಂತರ ಅನ್ವೇಷಣೆಯನ್ನು ಕಲಿಸಿತು. ಫ್ರಾನ್ಸಿನ ಮಹಾಕ್ರಾಂತಿ ಹಳೆಯ ಜಗತ್ತಿನ ಹುಸಿ ಮೌಲ್ಯಗಳನ್ನು ಪುಡಿಪುಡಿ ಮಾಡಿತು; ಸರ್ವಾಧಿಕಾರವನ್ನು ಅಳಿಸಿ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನೂ ಆದರ್ಶಗಳನ್ನೂ ಬಿತ್ತಿತು. ಅದುವರೆಗೂ ಅಚಲವಾಗಿದ್ದ ಸಾಮ್ರಾಜ್ಯಗಳು ಅಲುಗಾಡತೊಡಗಿದವು. ಕ್ಷಿಪ್ರದಲ್ಲಿಯೆ ಅವುಗಳೆಲ್ಲ ಒಂದಾದ ಮೇಲೆ ಒಂದರಂತೆ ಧರೆಗೆ ಉರುಳಿದವು, ಸ್ವಾತಂತ್ರ್ಯ, ಸಮಾನತೆ, ಸೋದರತೆ ಎಂಬ ಬಾಂಬುಗಳಿಂದ ಭಸ್ಮವಾಗಿ. ಕಳೆದ ಸುಮಾರು ಮುನ್ನೂರು ವರ್ಷಗಳಲ್ಲಿ ವಿಶ್ವಸಾಹಿತ್ಯದ ಧಾಟಿಧೋರಣೆಗಳನ್ನು ಈ ಮಂತ್ರತ್ರಯಗಳು ಅಗಾಧವಾಗಿ ಬದಲಾಯಿಸಿವೆ. ಅಷ್ಟೊಂದು ಪ್ರಮಾಣದಲ್ಲಿ ಪ್ರಪಂಚ ಸಾಹಿತ್ಯದಲ್ಲಿ ಯಾವ ತತ್ವವು ಪ್ರಣೀತವಾಗಿರಲಿಲ್ಲ, ಪ್ರಭಾವ ಬೀರಿರಲಿಲ್ಲ. ಅದನ್ನು ಸಾಂದ್ರವಾಗಿ ಕನ್ನಡದಲ್ಲಿ ಭಟ್ಟಿಯಿಳಿಸಲು ಮಾಧ್ಯಮವಾದವರು ಕುವೆಂಪು. ಅವರ ಕಾವ್ಯ ‘ಕೊಳಲಿ’ನಂತೆ ಉಲಿದು ‘ನವಿಲಿ’ನಂತೆ ನಲಿದು ‘ಪಾಂಚಜನ್ಯ’ವಾಗಿ ಮೊಳಗಿ ‘ಅಗ್ನಿಹಂಸ’ದಂತೆ ಏರಿದೆ. ಅಲ್ಲಿ ಸರ್ವ ‘ದರ್ಶನ’ಗಳ ಸಮನ್ವಯವೂ, ಸಾಮರಸ್ಯವೂ ಕಾಣುತ್ತದೆ. ಮಾನವ ಚೇತನದ ಉನ್ಮೀಲನದ ಸಾಧನೆಯಿದೆ. ಆಧುನಿಕ ಕನ್ನಡ ಸಾಹಿತ್ಯ ಸೌಧದ ನಿರ್ಮಾಣಕ್ಕೆ ಕುವೆಂಪು ಕೊಡುಗೆ ಶೇಕಡ ಐವತ್ತು ಭಾಗವಾದರೆ, ಇತರ ಸಾಹಿತಿಗಳ ಕಾಣಿಕೆ ಉಳಿದ ಅರ್ಧ ಭಾಗವಾಗಿದೆ ಎಂದು ತೋರುತ್ತದೆ.

ಹಿಂದೆ ಉಭಯಕವಿ ಅಥವಾ ಉಭಯ ಭಾಷಾ ಪಂಡಿತನಾಗಿದ್ದ ಕನ್ನಡ ಕವಿ, ಇಂದು ತ್ರಿಭಾಷಾ, ಚತುರ್‌ಭಾಷಾ, ಬಹುಭಾಷಾ ಪ್ರವೀಣನಾಗುತ್ತಿದ್ದಾನೆ. ಇದರಿಂದ ಹಳೆಗನ್ನಡ ನಡುಗನ್ನಡ ಕವಿಗಳಿಗೆ ಇರದ ಸೌಲಭ್ಯ ಈಗ ಇಂಗ್ಲಿಷ್ ಬಲ್ಲ ಕನ್ನಡ

ಲೇಖಕರಿಗೆ ಲಭಿಸಿವೆ. ನಾನಾ ಭಾಷಾಸಾಹಿತ್ಯ ಸಂಸ್ಕೃತಿಗಳ ಸತ್ವವನ್ನು ಅರಿತು ಕನ್ನಡದ ಸಂಪತ್ತನ್ನು ಹೆಚ್ಚಿಸಬೇಕೆಂಬ ಆಕಾಂಕ್ಷೆಯಿಂದ ಅನೇಕ ಶಕ್ತಿಗಳು ಶ್ರಮಿಸುತ್ತಿವೆ. ಕನ್ನಡದ ಎಲ್ಲೆಗಳನ್ನು ಹಿಗ್ಗಲಿಸಲು, ಅನುಭವದ ಎತ್ತರವನ್ನು ಏರಿಸಲು ಪಾಶ್ಚಾತ್ಯ ಸಾಹಿತ್ಯ ಪ್ರಚಂಡ ಪ್ರಚೋದಕವಾಗಿದೆ, ಪ್ರಬಲ ಸವಾಲಾಗಿದೆ. ಮತಮೂಲವಾಗಿದ್ದ ಸಾಹಿತ್ಯದ ಬೆನ್ನೆಲುಬು ಕಳಚಿಕೊಂಡಿದೆ. ಲೌಕಿಕ ಬದುಕಿನ ನೋವು, ಸೋಲು, ಗೆಲುವು, ಪ್ರೀತಿ, ಭೀತಿ, ಸಾಹಿತ್ಯದ ಕಿರುಳಾಗಿದೆ. ಯಾವುದೇ ಮತಪಂಥ ಮಠಗಳಿಗೂ ಪಾರಂಪರ್ಯವಾಗಿ ಸೇರದ ಕುವೆಂಪು ಸ್ವಚ್ಛಂದವಾಗಿ ಮನೋರಾಜ್ಯದಲ್ಲಿ ವಿಹರಿಸುತ್ತ ಲೌಕಿಕವಾದದ (ಸೆಕ್ಯುಲರಿಸಂ) ಅತ್ಯಂತ ಸಮರ್ಥ ಮುಖವಾಣಿಯಾದರು. ಸಂಕುಚಿತ ವರ್ತುಲದಲ್ಲಿ ಸಿಕ್ಕಿಕೊಳ್ಳದೆ ಇಡೀ ಮಾನವ ಜನಾಂಗ ಗಳಿಸಿ ಉಳಿಸಿಕೊಂಡು ಬಂದಿರುವ ಶಾಶ್ವತ ಮೌಲ್ಯಗಳನ್ನೆಲ್ಲ ಬೆಳೆಸಲು ಸಾಧನಶೀಲರಾದರು. ಎಲ್ಲ ಧರ್ಮಗಳ ವಿಭೂತಿ ಪುರುಷರ ಸಂತರ ಮಹಾತ್ಮರ ವಾಣಿಯನ್ನೂ ಹೃದಯಪೂರ್ವಕವಾಗಿ ಆಲಿಸಿ, ಅವರ ಆಧ್ಯಾತ್ಮ ಅನುಭವಗಳನ್ನು ಸ್ವಾನುಭವದ ಒರೆಯಲ್ಲಿ ಉಜ್ಜಿ ಪರೀಕ್ಷಿಸಿ ಅಂಗೀಕರಿಸುವುದನ್ನು ಅವರ ವಾಙ್ಮಯದಲ್ಲಿ ಕಾಣಬಹುದು.

"ಬುದ್ಧಿ ಭಾವಗಳ ವಿದ್ಯುದಾಲಿಂಗನ"ವೆಂದು ಪ್ರತಿಭೆಯನ್ನು ಕುವೆಂಪು ವ್ಯಾಖ್ಯೆ ಮಾಡಿದರು; ಅವೆರಡರ ಸಂಗಮವನ್ನು ತಮ್ಮ ಸಾಹಿತ್ಯದಲ್ಲಿ ತಂದರು. ಪಾಶ್ಚಾತ್ಯ ಕಾವ್ಯಮೀಮಾಂಸೆಯ ಮಹಾವಿಮರ್ಶಕ ಲಾಂಜಿನಸ್ ಸಾಹಿತ್ಯದಲ್ಲಿ ಭವ್ಯತೆ ಲಭಿಸಬೇಕಾದರೆ ಉದಾತ್ತ ವಿಚಾರ ಮತ್ತು ಭಾವನೆಗಳು ಕಲಾತ್ಮಕವಾಗಿ ಮೈಪಡೆಯಬೇಕೆಂದು ಹೇಳುತ್ತಾನೆ. ಅಂಥ ಭವ್ಯತೆಯನ್ನು ಅವರ ಕೃತಿಗಳಲ್ಲಿ ದರ್ಶಿಸಬಹುದು. ಲಾಂಜಿನಸ್ ಹೇಳುವ ಭವ್ಯತೆ ಹೆಚ್ಚಾಗಿ ಮಾನಸಿಕಸ್ತರದದ್ದಾದರೆ ಕುವೆಂಪು ಅವರಲ್ಲಿ ಅದು ಮನೋಭೂಮಿಕೆಯನ್ನು ದಾಟಿ ಹೋಗುತ್ತದೆ.

ಪಾಶ್ಚಾತ್ಯ ಸಾಹಿತ್ಯ ಮತ್ತು ವಿಮರ್ಶೆಯ ಪರಿಚಯ ಬೇಂದ್ರೆಯವರ ಕಾವ್ಯ ಮತ್ತು ವಿಮರ್ಶೆಯಲ್ಲಿ ಅಷ್ಟಾಗಿ ಕಾಣುವುದಿಲ್ಲ; ಅದು ಸಂಸ್ಕೃತ ಕಾವ್ಯಗಳ ಪರಿಮಿತಿಯಲ್ಲಿ ಸಾಗುತ್ತದೆ. ಅವರ ವಿಮರ್ಶೆಗೆ ಶಾಸ್ತ್ರೀಯ ಶಿಸ್ತು ಪ್ರಾಪ್ತವಾಗದೆ ಭಾವನಾತ್ಮಕ ಅನ್ನಿಸಿಕೆಗಳಾಗಿ ತೇಲುವಾಗುತ್ತದೆ. ಪುತಿನ ಅವರ ವಿಮರ್ಶೆಯಲ್ಲಿ ಭಾರತೀಯ ಲಾಕ್ಷಣಿಕರ ಅರಿವು ಬೇಂದ್ರೆಯವರಿಗಿಂತ ಹೆಚ್ಚಾಗಿ ಕಂಡು ಬರುತ್ತದೆ; ಆದರೆ ಪಾಶ್ಚಾತ್ಯ ಕಾವ್ಯ ಮಹಾಕಾವ್ಯಗಳ ಮತ್ತು ವಿಮರ್ಶೆಯ ಗಾಢ ಪರಿಚಯ ಸಿಗುವುದಿಲ್ಲ. ಡಿವಿಜಿ ಅವರ ಸಾಹಿತ್ಯ ಮೀಮಾಂಸೆಯಲ್ಲಿ ಸಂಸ್ಕೃತ ಕಾವ್ಯ ಮತ್ತು ಲಕ್ಷಣ ಗ್ರಂಥಗಳ ಹಾಗೂ ಶ್ರುತಿ–ಸ್ಮೃತಿಗಳ ಪ್ರಕಾಂಡ ಪಾಂಡಿತ್ಯದ ಅನುಭವವಾಗುತ್ತದೆ. ಪಾಶ್ಚಾತ್ಯ ರಾಜಕೀಯ ಚಿಂತನಧಾರೆಯ ಅರಿವು ಅವರಿಂದ ಲಭಿಸಿದರೂ, ಅಲ್ಲಿನ ಮಹಾಕೃತಿಗಳ ಚರ್ಚೆ ಸಿಗುವುದಿಲ್ಲ. ಗೋಕಾಕರು ಮತ್ತು ಮಾಸ್ತಿಯವರ ಸಾಹಿತ್ಯ ವಿಮರ್ಶೆಯಲ್ಲಿ ಐರೋಪ್ಯ ಕಾವ್ಯ ಮತ್ತು ವಿಮರ್ಶೆಯ ಪರಿಚಯ ಮತ್ತು ಪ್ರಭಾವ ಗಾಢವಾಗಿದೆ. ಕಾರಣ, ಈ ಇಬ್ಬರು ಮಹನೀಯರೂ ಇಂಗ್ಲಿಷ್ ಭಾಷಾ ಸಾಹಿತ್ಯದ ಶಾಸ್ತ್ರೀಯ ವಿದ್ಯಾರ್ಥಿಗಳಾಗಿ ಪದವೀಧರರಾದವರು. ಆದರೆ ಹಳೆಗನ್ನಡ ಕವಿಗಳನ್ನು ಕುರಿತು ಚರ್ಚೆ ಅಷ್ಟಾಗಿ ಇಲ್ಲ. ಈ ಎಲ್ಲ ಲೇಖಕರೂ ವಿಮರ್ಶಕರೂ ತೋರುವ ಅರೆಕೊರೆಯನ್ನು

ಕುವೆಂಪು ಪೂರೈಸುತ್ತಾರೆ. ವೇದೋಪನಿಷತ್ತುಗಳು, ಪುರಾಣೇತಿಹಾಸಗಳು, ಗೀತೆ, ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮತ್ತು ಮೀಮಾಂಸೆಗಳ ಆಳವಾದ ತಿಳಿವು ಅವರ ಕಾವ್ಯ ಮತ್ತು ಮೀಮಾಂಸೆಯಲ್ಲಿ ವ್ಯೆವೆತ್ತಿವೆ. ಪಾಶ್ಚಾತ್ಯ ಮಹಾಕಾವ್ಯಗಳ ರಸಸ್ಯಂದಿ ಭಾಗಗಳ ಚರ್ಚೆಯನ್ನು ಅವರಲ್ಲಿ ನೋಡಬಹುದು. ಪಂಪನಿಂದ ತಮ್ಮ ಕಾಲದವರೆಗಿನ ಎಲ್ಲ ಹಳಗನ್ನಡ ನಡುಗನ್ನಡ ಪ್ರಧಾನ ಕವಿಗಳನ್ನು ತಮ್ಮ ವಿಮರ್ಶಾ ವಿಚಕ್ಷಣೆಗೆ ಒಳಪಡಿಸಿದ್ದಾರೆ; ಅವರ ನೃತ್ತಿಯೂ ಇದಕ್ಕೆ ಪ್ರಬಲ ಪೂರಕವಾಯಿತು. ವೈಜ್ಞಾನಿಕ ಅಧ್ಯಯನಗಳಿಂದ ಕನ್ನಡ ವಿಮರ್ಶೆಯ ಅಡಿಪಾಯವನ್ನು ಭದ್ರಪಡಿಸಿದರು. 'ರಸೋ ವೈ ಸಃ' ಕೃತಿಯಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ ದರ್ಶಿಸದ ಎತ್ತರಗಳನ್ನು ಕಂಡರು; ತಮ್ಮ ಕಾಣ್ಕೆಯನ್ನು ಸೈದ್ಧಾಂತಿಕವಾಗಿ ಸ್ಥಿರಪಡಿಸಿದರು. ಕುವೆಂಪು ಪ್ರತಿಭೆಯಲ್ಲಿ ಮಾತ್ರವಲ್ಲ ಪಾಂಡಿತ್ಯದಲ್ಲಿಯೂ ಅದ್ವಿತೀಯರೆನ್ನಬಹುದು.

ತಮ್ಮ ಎರಡು ಮಹಾಕಾದಂಬರಿಗಳಿಂದ—'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' (೧೯೬೭)—ಅದುವರೆಗೆ ಕನ್ನಡ ಸಾಹಿತ್ಯಕ್ಕೆ ಗೊತ್ತಿರದಿದ್ದ ಹೊಚ್ಚ ಹೊಸ ಲೋಕವನ್ನು, ಬದುಕನ್ನು, ಅನುಭವ ಸಾಮಗ್ರಿಯನ್ನು ಪರಿಚಯಿಸಿದರು. ಇದು ಅವರ ಮಹತ್ತಮ ಸಾಧನೆಯೆಂದು ಹೇಳಬಹುದು. ಭಾರತದ ಜನಸಂಖ್ಯೆಯ ಶೇಕಡ ಎಂಬತ್ತು ಮಂದಿ ಹಳ್ಳಿಗಾಡಿನ ಜನರ ಗೋಳು, ಅಜ್ಞಾನ, ಮೌಢ್ಯ, ಮೇಲುಕೀಳಿನ ತಾರತಮ್ಯ ಭಾವನೆ, ಹಿಂಸೆ, ಸುಲಿಗೆ ಮುಂತಾದ ಅಂಶಗಳು ಸಾಹಿತ್ಯವನ್ನು ಪ್ರವೇಶಿಸಿರಲಿಲ್ಲ. ಗ್ರಾಮೀಣ ಬದುಕನ್ನು ಮಹಾಕಾವ್ಯ ಪ್ರಮಾಣದಲ್ಲಿ ಪ್ರಥಮ ಬಾರಿಗೆ ಕಾದಂಬರಿಗಳಲ್ಲಿ ಚಿತ್ರಿಸಿದರು. ಮನುಷ್ಯನ ಅಂತಶ್ಚೇತನದಲ್ಲಿ ಬೇರೂರಿರುವ ಆದರ್ಶಪ್ರೀತಿ ಮತ್ತು ಲೋಕದ ಕಟುವಾಸ್ತವದ ಗಟ್ಟಿತನ ಅಪೂರ್ವವಾಗಿ ಸಂಮಿಳನವಾಗಿರುವುದನ್ನು ಅವರ ಕಾದಂಬರಿಗಳಲ್ಲಿ ಗುರುತಿಸಬಹುದು. (ಈ ವಿಷಯವಾಗಿ ಆಸಕ್ತರು ಇದೇ ವಿಮರ್ಶಕನ 'ಬದಲಾವಣೆ' ಪುಸ್ತಕದಲ್ಲಿ ಸಂಕಲಿತವಾಗಿರುವ 'ಕುವೆಂಪು ಅವರ ಗದ್ಯ', 'ಕಾನೂರು ಹೆಗ್ಗಡಿತಿ ಮತ್ತು ಬಂಡಾಯ' ಹಾಗೂ 'ಕುವೆಂಪು ಕಂಡ ದಲಿತ ಜೀವನ' ಎಂಬ ವಿಮರ್ಶಾತ್ಮಕ ಪ್ರಬಂಧಗಳನ್ನು ಅವಲೋಕಿಸಬಹುದು.)

ಸಣ್ಣ ಕಥೆಗಳಲ್ಲಿ ಮತ್ತು ಮಹಾಕಾದಂಬರಿಗಳಲ್ಲಿ ವಸ್ತುವನ್ನು ಸಂಪೂರ್ಣ ಸ್ವಂತವಾಗಿ ಸೃಷ್ಟಿಸಿದ ಕುವೆಂಪು ತಮ್ಮ ನಾಟಕ, ಖಂಡಕಾವ್ಯ ಮತ್ತು ಮಹಾಕಾವ್ಯಗಳಿಗೆ ಇತಿವೃತ್ತವನ್ನು ಪುರಾಣೇತಿಹಾಸಗಳಿಂದ ಆರಿಸಿಕೊಂಡರು. "ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?" ಎಂದು 'ರಾಮಾಯಣ ದರ್ಶನ'ದ ಪ್ರಾರಂಭದಲ್ಲಿ ಹೇಳುವುದರ ಮುಖಾಂತರ ತಮ್ಮ ವಿಧಾನವನ್ನು ಸಮರ್ಥಿಸಿಕೊಂಡಿದ್ದಾರೆ. ಷೇಕ್ಸ್‌ಪಿಯರನನ್ನು ಕುರಿತ ತನ್ನ ಪ್ರಬಂಧದಲ್ಲಿ ಅಮೆರಿಕದ ಶ್ರೇಷ್ಠ ಸಾಹಿತಿ-ತತ್ವಜ್ಞಾನಿ ಎಮರ್‌ಸನ್ ಆಡುವ ನುಡಿಗಳು ಮನನೀಯವಾಗಿವೆ: "Great men are distinguished more by range and extent than by originality.... No great men are original....The greatest genius is the most indebted man." (ಮಹಾವ್ಯಕ್ತಿಗಳು ಸ್ವೋಪಜ್ಞತೆಗಿಂತ ವ್ಯಾಪ್ತಿ

ವಿಸ್ತಾರಗಳಿಂದ ವಿಶಿಷ್ಟರಾಗಿದ್ದಾರೆ....ಯಾವ ಮಹಾವ್ಯಕ್ತಿಯೂ ಸ್ವೋಪಜ್ಞನಲ್ಲ.... ಅತ್ಯಂತ ಪ್ರತಿಭಾವಂತ ಅತ್ಯಂತ ಋಣಿಯಾದ ವ್ಯಕ್ತಿ.) ಷೇಕ್‌ಸ್ಪಿಯರ್ ತನ್ನ ನಾಟಕಗಳ ವಸ್ತುಗಳನ್ನು ತಾನೇ ಸೃಷ್ಟಿಸದೆ, ಬೇರೆ ಬೇರೆ ಆಕರಗಳಿಂದ ಆಯ್ದುಕೊಂಡನು. ಹೋಮರ್ ಜನಮನದಲ್ಲಿ ನೆಲೆಗೊಂಡಿದ್ದ ದಂತಕಥೆಗಳಿಗೆ ಕಾವ್ಯರೂಪ ಕೊಟ್ಟನು. ಅವನ ನಂತರ ಬಂದ ಈಸ್ಕಿಲಸ್, ಸಾಫೋಕ್ಲಿಸ್, ಯೂರಿಪಿಡಿಸ್ ಕವಿಗಳು ಅವನ ಎರಡು ಅಮರ ಮಹಾಕಾವ್ಯಗಳಿಂದ ಪ್ರಸಂಗಗಳನ್ನು ಎತ್ತಿಕೊಂಡು ದೃಶ್ಯಕಾವ್ಯಗಳನ್ನು ರಚಿಸಿದರು. ಹೋಮರ್ ಮಹಾಕವಿಯಿಂದ ವರ್ಜಿಲ್ ಕವಿಯೂ, ವರ್ಜಿಲನಿಂದ ಡಾಂಟೆ ಕವಿಯೂ ಪ್ರೇರಣೆ ಪಡೆದರು. ಇವರೆಲ್ಲರಿಂದ ಮಿಲ್ಟನ್ ಪ್ರಭಾವಿತನಾಗಿ ಬೈಬಲ್ ಕಥೆಯನ್ನು ಆಧರಿಸಿ ಮಹಾಕಾವ್ಯ ಕಟ್ಟಿದನು. ಜನಪದ ವಾಹಿನಿಯಲ್ಲಿ ಹರಿಯುತ್ತಿದ್ದ ಪುರಾಣ ಪುಣ್ಯ ಕಥೆಗಳನ್ನು ವಾಲ್ಮೀಕಿ ಮತ್ತು ವ್ಯಾಸ ಕಾವ್ಯಕಲೆಯಾಗಿ ಮಾರ್ಪಡಿಸಿದರು. ಈ ಇಬ್ಬರು ಮಹಾಕವಿಗಳಿಂದ ಸಂಸ್ಕೃತ ಕವಿಗಳೂ ನಾಟಕಕಾರರೂ ವಸ್ತುಗಳನ್ನು ತೆಗೆದುಕೊಂಡರು; ಅವರಿಂದ ಭಾರತೀಯ ವಿವಿಧ ಭಾಷಾ ಕವಿಗಳು ಪ್ರಭಾವಿತರಾಗಿ ತಮ್ಮ ತಮ್ಮ ಕೃತಿಗಳನ್ನು ನಿರ್ಮಿಸಿದರು. ಕನ್ನಡದಲ್ಲಿ ಪಂಪ ರನ್ನ ಕುಮಾರವ್ಯಾಸ ಮುಂತಾದವರಿಗೆ ಮಹಾಭಾರತವೂ, ನಾಗಚಂದ್ರ (ಜೈನರಾಮಾಯಣ) ನರಹರಿ ಮುದ್ದಣ ಮುಂತಾದವರಿಗೆ ರಾಮಾಯಣವೂ ಅಕ್ಷಯ ಗಣಿಗಳಾದವು. ವ್ಯಾಸಭಾರತವನ್ನು ಪಡಿಮೂಡಿಸಲು ದೊರಕಿದ ಪಂಪ ಹಾಗೂ ನಾರಣಪ್ಪರಂಥ ಮಹಾಕವಿಗಳು, ವಾಲ್ಮೀಕಿ ರಾಮಾಯಣಕ್ಕೆ ಕುವೆಂಪು ಬರುವವರೆಗೂ ಲಭಿಸದೆ ಹೋದುದು ಸೋಜಿಗವಾಗಿದೆ. ಹೀಗೆ ಸಮೀಕ್ಷಿಸಿದಾಗ ವಿಶ್ವಕವಿಗಳಲ್ಲಿ ಪ್ರತಿಯೊಬ್ಬರೂ, ಬಹುತೇಕ ಅಪವಾದವಿಲ್ಲದಂತೆ, ಹಳೆಯ ಕಥೆಗಳನ್ನೇ ಮತ್ತೆ ಮತ್ತೆ ಹೇಳುವಂತೆ ಕಾಣುತ್ತದೆಯಲ್ಲ. ಏಕೆ?

ದಂತಕಥೆ (myth)ಗಳೆಂದರೆ ಗೊಡ್ಡು ಪುರಾಣವೆಂದು ಭಾವಿಸಬಾರದು. ಒಂದು ಜನಾಂಗದ ನಂಬಿಕೆಯ ಆದರ್ಶಗಳ ಮೌಲ್ಯಗಳ ಸಂಸ್ಕೃತಿಯ ಚಿರಪ್ರತಿಮೆಗಳಾಗಿ ಪುರಾಣ ಪಾತ್ರಗಳು ಬೆಳೆಯುತ್ತವೆ. ಅವು ಮಾನವ ಚೇತನದ ಶಾಶ್ವತ ಅನ್ವೇಷಣೆಯ ಜೀವಂತ ಪ್ರತಿರೂಪಗಳು. ಕಾಲಕಾಲಕ್ಕೆ ಸಂಸ್ಕೃತಿ ಬೆಳೆದಂತೆ ಅವೂ ಬೆಳೆಯುತ್ತಾ ಹೋಗುತ್ತವೆ. ಸಮರ್ಥಕವಿ ತನ್ನ ಯುಗದ ಜ್ಞಾನದ ಉತ್ತುಂಗ ಶಿಖರವಾಗುತ್ತಾನೆ; ಎಲ್ಲಾ ಬಗೆಯ ಸಂಕೀರ್ಣತೆಗೆ ಸಾಧನವಾಗುತ್ತಾನೆ. ತಾನು ಗಳಿಸಿದ ಅನುಭವ ಮತ್ತು ಅರಿವಿನ ಬೆಳಕಿನಲ್ಲಿ ನಂಬಿದ ಕಥೆಯನ್ನು ತನ್ನ ಕಾಲದ ತಗಾದೆಗಳಿಗೆ ತಕ್ಕಂತೆ ವಿಸ್ತರಿಸುತ್ತಾನೆ, ಪುನರ್ ಸೃಜಿಸುತ್ತಾನೆ, ವ್ಯಾಖ್ಯಾನಿಸುತ್ತಾನೆ, ದರ್ಶಿಸುತ್ತಾನೆ. ಮಹಾಕಾವ್ಯಗಳಲ್ಲಿ ಉಸಿರಾಡುವ, ನಡೆದಾಡುವ ದೇವಾನುದೇವತೆಗಳು ಯಾವುದೋ ಅದೃಶ್ಯಲೋಕದ ವ್ಯಕ್ತಿಗಳಲ್ಲ. ಭೌತ ಜಗತ್ತಿನಿಂದ ಅರಳಿದ ಶಕ್ತಿಗಳು. ಫಲತುಂಬಿ ತೂಗುವ ಕಲ್ಪವೃಕ್ಷದ ತಲೆಗಂಗಳನ್ನು ನೋಡುವವರಿಗೆ ಭೂಮಿಯಲ್ಲಿ ಆಳವಾಗಿ ಇಳಿದಿರುವ ಅದರ ಬೇರುಗಳು ಗೋಚರಿಸುವುದಿಲ್ಲ. ಕೊಂಬೆರೆಂಬೆಗಳನ್ನು ನಾಲ್ದೆಸೆಗೂ ಹರಡಿ ಬಿಳಲುಗಳ ಊರೆಯಿಂದ ನಿಂತಿರುವ ವಿಶಾಲ ವಟವೃಕ್ಷದ ಮೇಲ್ಭಾಗದಂತೆ ಪುರಾಣಪಾತ್ರಗಳು ಅದಿಭೌತಿಕವಾಗಿ ಕಾಣಿಸುತ್ತವೆ. ಜೀವಸಂತತಿಗಳ

ವಿಕಾಸವನ್ನು ವೈಜ್ಞಾನಿಕವಾಗಿ ಪ್ರಾಣಿಶಾಸ್ತ್ರ ವಿವರಿಸುವಂತೆ, ಮಾನವಚೇತನದ ಬೆಳವಣಿಗೆಯನ್ನು ಮನೋವಿಜ್ಞಾನ ಮತ್ತು ಯೋಗಶಾಸ್ತ್ರಗಳು ವಿಶ್ಲೇಷಿಸುತ್ತಿವೆ. ಆದರೆ ಎಲ್ಲ ಪುರಾಣಕಥೆಗಳೂ ಮಾನವ ಮನಸ್ಸಿನ ಬೆಳವಣಿಗೆಯನ್ನು ಪ್ರತಿನಿಧಿಸುತ್ತವೆಂದು ಭಾವಿಸುವುದು ಸಾಧುವಲ್ಲ. ಅವುಗಳನ್ನು ವಿಂಗಡಿಸಿ ವಿಶ್ಲೇಷಿಸಬೇಕಾಗುತ್ತದೆ. ಉನ್ನತಿಕಥೆ ಮತ್ತು ಅವನತಿಕಥೆ ಎಂದು ಪುರಾಣಗಳನ್ನು ವಿಭಜಿಸಬಹುದು. ಅಶಿಕ್ಷಿತರಲ್ಲಿ ದೆವ್ವ ಮತ್ತು ದೇವರು ಶಬ್ದಗಳು ಬಳಕೆಯಲ್ಲಿವೆ. ಸುಶಿಕ್ಷಿತರಲ್ಲಿ ಅವೇ ಆಸುರೀ ಮತ್ತು ದೈವೀಶಕ್ತಿಗಳೆಂಬ ಹೆಸರು ಪಡೆಯುತ್ತವೆ. ದೆವ್ವ ಮನುಷ್ಯನ ಸರ್ವ ಪ್ರಗತಿಯನ್ನು ಕುಂಠಿತಗೊಳಿಸಿದರೆ ದೇವರು ಎಲ್ಲ ಕೆಡಕುಗಳನ್ನು ನಿವಾರಣೆ ಮಾಡಿ ಮಾನವ ಸಾಧ್ಯತೆಗಳಿಗೆ ಸಂಪೂರ್ಣ ಇಂಬು ಕೊಡುವ ಉದ್ಧಾರಕ ಭಾವನೆಯಾಗಿದೆ. ದೆವ್ವ ಮತ್ತು ದೇವರು ಪರಿಕಲ್ಪನೆಗಳು ಕೆಟ್ಟತನ ಮತ್ತು ಒಳ್ಳೆಯತನದ ಪ್ರತಿಮೆಗಳು. ವಾಸ್ತವವನ್ನು ಉತ್ತಮಪಡಿಸುವುದೆ ಆದರ್ಶದ ಉದ್ದೇಶ. ಒಂದು ಕೆಳಕ್ಕೆ ತುಳಿದರೆ ಇನ್ನೊಂದು ಮೇಲಕ್ಕೆ ಎತ್ತುತ್ತದೆ. ಇದೇ ನರಕ ಸ್ವರ್ಗಗಳ ಸಾಂಕೇತಿಕ ಅರ್ಥ. ಈ ರೀತಿ ಪುರಾಣವನ್ನು ಬಳಸುವ ಅಳಗೊಳಿಸುವ ಲೇಖಕ ದಾರ್ಶನಿಕನಾಗುತ್ತಾನೆ; ಕಾಲದೊಳಗೇ ಕಾಲಾತೀತನಾಗುತ್ತಾನೆ. ಅಂತರ್ ವೀಕ್ಷಣ ಪಾತಾಳಗರುಡನಿಂದ ಮಹಾಕವಿ ಪ್ರತಿಭೆ ಮನುಷ್ಯನ ಸುಪ್ತಾಸುಪ್ತ ಪ್ರಜ್ಞೆಯನ್ನು ಸಮಗ್ರವಾಗಿ ಹಿಡಿಯುತ್ತದೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಹಳೆಯ ಕಥೆ ಪುನರ್‌ಸೃಷ್ಟಿಯಾಗಿದೆ. ಆದ್ದರಿಂದಲೆ ಕವಿ ಕಾವ್ಯದ ಕೊನೆಯಲ್ಲಿ "ಬರಿ ಕಥೆಯಲ್ತು, ಕಥೆ ತಾಂ ನಿಮಿತ್ತ ಮಾತ್ರಂ, ಆತ್ಮಕೆ ಶರೀರದೋಲಂತೆ" ಎಂದು ತಮ್ಮ ವಿಧಾನವನ್ನು ಸೂಚಿಸುತ್ತಾರೆ. ರಾಮಾಯಣ ಏಕಕಾಲದಲ್ಲಿ ಭೌತಿಕವೂ ಅಧಿಭೌತಿಕವೂ ಆದ ಕಥೆ; ಮನುಷ್ಯ ಸಹಜ ತುಯ್ತುಗಳಿಗೆ ಸಿಲುಕಿಕೊಂಡು ತೀವ್ರವಾಗಿ ಸ್ಪಂದಿಸುವುದರಿಂದ ಮಾನವೀಯವಾದರೆ, ಅವುಗಳನ್ನು ಗೆಲ್ಲಬೇಕೆಂಬ ಸತತ ಸಾಧನೆಯಿಂದ ದೈವಿಕವಾಗುತ್ತದೆ. ಮಂಗ ವಿಕಾಸವಾಗಿ ಮಾನವನಾದಂತೆ, ಮಾನವ ಬೆಳೆದು ದೇವನಾಗುತ್ತಾನೆ. ಮೋಹನದಾಸ ಗಾಂಧಿ ಮಹಾತ್ಮಗಾಂಧಿಯಾಗುತ್ತಾನೆ, ದಶರಥರಾಮ ಲೋಕರಾಮನಾಗುತ್ತಾನೆ. ಅವರ ಹಾಗೆ ಇಡೀ ಮಾನವ ಜನಾಂಗವೆ ಸಾಧನಶೀಲವಾಗಿ ಸಿದ್ಧಿ ಗಳಿಸಿದರೆ ಆಗ ಶೋಷಣೆಯಿಲ್ಲದ, ಮೇಲು ಕೀಳಿನ ಆಚರಣೆಯಿಲ್ಲದ ಸಮತಾರಾಜ್ಯ—ತನಗೆ ತಾನೇ ನೆಲೆಗೊಳ್ಳುತ್ತದೆ. ಹಳೆಯ ಕಥೆ ಸುಪರಿಚಿತವಾಗಿ ಸರ್ವಾದರಣೀಯವಾಗಿರುವುದರಿಂದ ಅದರ ಮೂಲಕ ಹೊಸ ದರ್ಶನವನ್ನು ಕಾಣಿಸಿದ್ದಾರೆ, ಹಳೆಯ ಒಡವೆಯ ಚಿನ್ನವನ್ನು ಎಸೆಯದೆ ಅದರ ರೂಪವನ್ನು ಬದಲಾಯಿಸುವಂತೆ. ಆಂತರಿಕ ನಿಗ್ರಹ ಸಾಧಿತವಾದ ಮೇಲೆ ಬಾಹ್ಯ ಕಟ್ಟುಪಾಡುಗಳು ನಿರರ್ಥಕವಾಗುತ್ತವೆ. ರಾಮ ಮಗನಾಗಿ, ಸೋದರನಾಗಿ, ಪ್ರಜೆಯಾಗಿ, ಪತಿಯಾಗಿ, ಪಿತನಾಗಿ, ಪ್ರಭುವಾಗಿ ದೊಡ್ಡ ಆದರ್ಶಗಳ ಚಿರ ಮಾದರಿಯಾಗುತ್ತಾನೆ (archetype-ಮೂಲಮಾದರಿ; ಮೂಲರೂಪ). ಮಾದರಿ ಎಂದರೆ ಯಾಂತ್ರಿಕ ಮನುಷ್ಯನಲ್ಲ. ಆತ ಎಲ್ಲ ಬಗೆಯ ಭಾವನೆಗಳನ್ನು ತೀರಾ ತೀಕ್ಷ್ಣವಾಗಿ ಅನುಭವಿಸುತ್ತಾನೆ. ಆಗ ರಕ್ತದ ಕಾವಿನಲ್ಲಿ ತತ್ವಗಳು ಕುದಿದು ಪರೀಕ್ಷೆಗೊಳಪಟ್ಟು ಪಾಕಗೊಂಡು ಸತ್ಯವಾಗುತ್ತವೆ. ಆದ್ದರಿಂದ ಚಿರಮಾದರಿ ಪಾತ್ರ ಏಕಕಾಲದಲ್ಲಿ

ವೈಯಕ್ತಿಕವೂ ಸಾರ್ವತ್ರಿಕವೂ ಆಗಿದೆ. ಮಾನವಜನಾಂಗದ ಅಮೂರ್ತ ಅನುಭವದ ಮೂರ್ತ ಅಭಿವ್ಯಕ್ತಿಯೆ ಪುರಾಣ.

ಆದಿಕವಿ ಪಂಪನ ಜೊತೆ ಹೋಲುವ ಆಧುನಿಕ ಕವಿ ಕುವೆಂಪು. ಪಂಪ ಒಂದು ಲೌಕಿಕ ಕಾವ್ಯವನ್ನೂ ಒಂದು ಅಲೌಕಿಕ ಕಾವ್ಯವನ್ನೂ (ಜಿನಾಗಮಂ) ರಚಿಸಿ ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಿದನು. ಹಾಗೆಯೆ, ಕುವೆಂಪು ಮಹಾಕಾದಂಬರಿಗಳಲ್ಲಿ ಲೌಕಿಕವನ್ನೂ ರಾಮಾಯಣ ದರ್ಶನದಲ್ಲಿ 'ಅಲೌಕಿಕ'ವನ್ನೂ ಸೆರೆಹಿಡಿದರು. ಬಾಣಭಟ್ಟನ, ನಾಗವರ್ಮನ 'ಕಾದಂಬರಿ'ಯಲ್ಲಿ ಚಿತ್ರಿತವಾಗಿರುವ ಚಂದ್ರಾಪೀಡ ಪತ್ರಲೇಖೆಯರನ್ನು 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿನ ಮುಕುಂದಯ್ಯ ಪೀಂಚಲು ಪಾತ್ರಗಳು ಗಾಢವಾಗಿ ಹೋಲುತ್ತವೆ, ಸತ್ವದಲ್ಲಿ. ಹೆಣ್ಣು ಗಂಡಿನ ನಡುವೆ ನಿಷ್ಕಾಮ ಸಂಬಂಧ ಸಾಧ್ಯ ಎನ್ನುವುದನ್ನು ಈ ಯುಗಳ ಜೋಡಿ ಯಲ್ಲಿ ನೋಡಬಹುದು. ಸಾಹಿತ್ಯ ಪರಂಪರೆಯನ್ನು ಆಳಗೊಳಿಸಿ ವಿಸ್ತರಿಸಿ ಪುನರುಜ್ಜೀವನ ಗೊಳಿಸುವುದನ್ನು ಕುವೆಂಪು ಅವರಲ್ಲಿ ಕಾಣಬಹುದು.

ಕುವೆಂಪು ಸಾಹಿತ್ಯ ಕ್ರಾಂತಿಯನ್ನು ಅವಧರಿಸಿಕೊಂಡಿದೆ. ಅದನ್ನು ರಕ್ತಕ್ರಾಂತಿ ಅಥವಾ ರಾಜಕೀಯ ಕ್ರಾಂತಿ ಎಂಬ ಸೀಮಿತವಾದ ಅರ್ಥದಲ್ಲಿ ತಿಳಿಯಬಾರದು. ಜ್ಞಾನದ ಎಲ್ಲೆಗಳನ್ನು ವಿಸ್ತರಿಸುವ, ಸಾಹಿತ್ಯದ ಕ್ಷಿತಿಜಗಳನ್ನು ವಿಶಾಲಗೊಳಿಸುವ, ದೀಪ್ತ ಅನುಭವಗಳನ್ನು ಅನಾವರಣಗೊಳಿಸುವ, ಒಳಗಿನ ಕಾಡು ಮೃಗಗಳನ್ನು ಪಳಗಿಸಿ ಬಾಳಿಗೆ ಬೆಳಕು ನೀಡುವ ಆಧ್ಯಾತ್ಮಿಕ ಅರಾಜಕತೆ ಎಂಬ ನಾನಾ ಅರ್ಥಛಾಯೆಗಳಲ್ಲಿ 'ಕ್ರಾಂತಿ'ಪದವನ್ನು ಅವರಲ್ಲಿ ಪರಿಭಾವಿಸಬೇಕು. ಬದುಕು ಬಹುರೂಪಿಯಾಗಿ ಆದಷ್ಟು ಇಡಿಯಾಗಿ ಅವರ ಸಾಹಿತ್ಯ ಸೃಷ್ಟಿಯಲ್ಲಿ ನಿಹಿತವಾಗಿದೆ. ರೈತರು, ಕಾರ್ಮಿಕರು, ವಿಚಾರವಾದಿಗಳು, ಸ್ತ್ರೀಯರು, ಮಕ್ಕಳು, ಮುದುಕರು, ದಲಿತರು, ಪಂಡಿತರು, ಆಧ್ಯಾತ್ಮ ಜೀವಿಗಳು, ಮಾನವತಾವಾದಿಗಳು—ಹೀಗೆ ಎಲ್ಲ ವರ್ಗಗಳ ಸರ್ವಸ್ತರದ ವಾಚಕರಿಗೆ ಪ್ರಿಯವಾಗುವಂತೆ, ಅವರ ಉನ್ನತಿಗೆ ನೆರವಾಗುವಂತೆ ಸಾಹಿತ್ಯ ರಚನೆ ಮಾಡಿದ್ದಾರೆ; ಸಾಹಿತ್ಯ ಸಮೃದ್ಧಿಯ ಸಂಕೇತವಾಗಿದ್ದಾರೆ. ಕುವೆಂಪು ಅವರದು ಅಖಂಡ ಪ್ರತಿಭೆ.

ತಾಳ್ಮೆ ಒಂದು ಇದ್ದರೆ ಪರ್ವತವನ್ನೂ ದಾಟಬಹುದು.

ಗಾಂಧೀಜಿ

ಕವಿಶೈಲ - ಕುವೆಂಪು

ಸುಜನಾ

ದಿಗಂತ ವಿಸ್ತಾರವಾದ ಗಗನೋನ್ನತ ಪರ್ವತಶ್ರೇಣಿಯನ್ನು ಸಮೀಪದ ತಪ್ಪಲಿನಲ್ಲಿ ನಿಂತು ನೋಡಿದಾಗ ಅದರ ಎತ್ತರವಾಗಲಿ ಹರವಾಗಲಿ ಕಾಣುವುದು ಆಂಶಿಕವಾಗಿಯಷ್ಟೆ. ಕವಿಶೈಲರಾದ ಕುವೆಂಪು ವಿಚಾರದಲ್ಲೂ ಈ ಅನುಭವವೆ ಆಗುತ್ತದೆ. ಒಂದು ಸಮಗ್ರ ದೃಷ್ಟಿಗಿನ್ನೂ ಅವರ ಕೃತಿಶ್ರೇಣಿಯ ವ್ಯಾಪ್ತ್ಯೋನ್ನತಿಯನ್ನು ಅಳವಡಿಸಿಕೊಳ್ಳುವುದು ಈ ತನಕ ದುಸ್ಸಾಧ್ಯವಾಗಿದೆ. ಕಾಲದ ದೃಷ್ಟಿಯಿಂದಲೂ ನಾವು ಆ ಪರ್ವತದ ತುಂಬಾ ಹತ್ತಿರ ನಿಂತಿರುವಂತೆ ತೋರುತ್ತದೆ. ಹಲವಂದದ ಕೃತಿಯನ್ನು ನೀಡಿದ ಈ ಕವಿದೈತ್ಯ ಕೇವಲ ಪ್ರಶಂಸೆಗೂ ಕೇವಲ ಅವಜ್ಞೆಗೂ ಒಳಪಡುವುದರಿಂದಾಚೆಗೆ ಬೆಳೆದಿರುವುದರಿಂದ ಇನ್ನೂ ಯಾರೊಬ್ಬರ ಅಧ್ಯಯನದ ಸಮಗ್ರಾನುಭವಕ್ಕೆ ಆಂಶಿಕವಾಗಲ್ಲದೆ ಉಳಿದಂತೆ ದುಃಗ್ರಾಹ್ಯವಾಗಿದ್ದಾರೆ. ಮಕ್ಕಳ ಕವನಗಳಿಂದ ಹಿಡಿದು ಮಹಾವಿದಗ್ಧರ ಕೃತಿಯನ್ನು ನೀಡಿರುವಂತೆ ; ವಸ್ತು ಸತ್ಯವನ್ನೂ ಚಿತ್ರಿಸುವಂತೆ ಪ್ರತಿಮಾಸತ್ಯವನ್ನೂ ದರ್ಶಿಸುವ ಕೃತಿಗಳನ್ನೂ ನೀಡಿದ್ದಾರೆ. ವೈಚಾರಿಕ ಬರಹಗಳಲ್ಲಿ ಕಾಣುವ ವಸ್ತುನಿಷ್ಠೆಯಾಚೆಗೂ ಆಚೆಗಿರುವ ವಿಚಾರೋತ್ತರ ಶ್ರದ್ಧೆಯನ್ನೂ ಅವರ ಕೃತಿಗಳಲ್ಲಿ ನಿಚ್ಚಳವಾಗಿ ಕಾಣಬಹುದು. ಸತ್ತಂತಿರುವವರನ್ನು ಬಡಿದೆಚ್ಚರಿಸುವ ಕೃತಿಯನ್ನೂ, ಎದ್ದವರು ಎದ್ದ ಮೇಲೆ ಹೊಟ್ಟೆಯ ಕಿಚ್ಚಿನಿಂದ ಕಚ್ಚಾಡತೊಡಗಿದರೆ ಆ ಒಳಕಿಚ್ಚನ್ನು ನಂದಿಸುವಂತಹ ಅಗ್ನಿಶಾಮಕ ಕೃತಿಯನ್ನೂ ನೀಡಿದ್ದಾರೆ. ಕಚ್ಚಾಡುವ ಜೀವಗಳು ಒಲಿದುಕೊಡುವಂತಹ ಎಲ್ಲ ಒಟ್ಟಿಗೆ ಬಾಳುವಂತಹ ದರ್ಶನದ ಬೆಳಕುನೀಡುವ ಕೃತಿಯನ್ನೂ ನೀಡಿದ್ದಾರೆ.

ಹೀಗಾಗಿ ಈ ಕವಿಯನ್ನು ಒಂದು ಸರಳರೇಖೆಗೆ ಅಳವಡಿಸುವುದು ಕಷ್ಟ. ಒಮ್ಮೊಮ್ಮೆ ವಿರೋಧಾಭಾಸಗಳ ಗಂಟೆಂದೂ ಕಾಣಬಹುದಾದ ಈ ಕವಿ ಆ ಎರಡನ್ನೂ ಕೂಡಿಸಿ ಆಡಿಸುವ, ಅರಗಿಸಿ

ಕೊಂಡು ಬೆಳೆದಿರುವ ಸಂಕೀರ್ಣವೆಂಬುದನ್ನು ಮರೆಯಬಾರದು. ಭಾವಗೀತಾತ್ಮಕತೆಯನ್ನೂ ಮಹಾಕಾವ್ಯದ ಸ್ರೋತವನ್ನೂ, ವಾಸ್ತವಿಕ ದೈನಂದಿನ ಚಿತ್ರಗಳನ್ನೂ ಪೌರಾಣಿ ಪ್ರತಿಮೆಗಳನ್ನೂ, ಕಟು ವಿಚಾರದ ಹರಿತವನ್ನೂ, ಸ್ನಿಗ್ಧಮುಗ್ಧ ಶ್ರದ್ಧೆಯ ಮಾರ್ದವವನ್ನೂ, ಶ್ರೀಸಾಮಾನ್ಯತಾ ಪ್ರೀತಿಯನ್ನೂ ಭವ್ಯತಾ ಭಕ್ತಿಯನ್ನೂ—ಮೇಲು ನೋಟಕ್ಕೆ ವಿಭಿನ್ನವೆನ್ನಬಹುದಾದವುಗಳನ್ನು ಕಾಮನಬಿಲ್ಲಿನ ಸೇತುಬಂಧದಿಂದ ಕೂಡಿಸಿದ್ದಾರೆ. ಕಲ್ಕತ್ತಾದ ಹೌರಾ ಸೇತುವೆಯಂತೆ ಆ ದಡ ಈ ದಡಗಳನ್ನು ಒಂದೇ ಬಾಗಿನಿಂದ ಕೂಡಿಸಿದ್ದಾರೆ. ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಗೆ ನೂರಾರು ಕಂಬಗಳುಂಟು. ನಡುಗಂಬಗಳಿಲ್ಲದ ಹೌರಾ ಸೇತುವೆಯ ಕಮಾನಿನ ಭಾರವೆಲ್ಲವೂ ಎರಡು ದಡಗಳ ಭೀಮಕಂಭಗಳಮೇಲೆ ನಿಂತಿರುವಂತೆ ಅಸಂಗತ ವಿಸಂಗತಗಳೆಂಬಂತೆ ಕಾಣುವ ಈ ಅತಿಗಳು ಇವರ ಸಮನ್ವಯ ದೃಷ್ಟಿಗೆ—ಪೂರ್ಣದೃಷ್ಟಿಗೆ ಬಂಧಗೊಂಡಿರುವುದು ಮಾತ್ರವಲ್ಲ ಭದ್ರವೂ ಆಗಿವೆ. ಮೇಲುನೋಟಕ್ಕೆ ಎರಡು ಭಿನ್ನದರ್ಶದ ಕೃತಿಗಳಂತೆ ತೋರುವ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವಾಗಲಿ 'ಮಲೆಗಳಲ್ಲಿ ಮದುಮಗಳು' ಮಹಾಕಾದಂಬರಿಯಾಗಲಿ ಈ ಪೂರ್ಣದೃಷ್ಟಿಯಿಂದ ಸೃಷ್ಟಿಗೊಂಡವು. ಈ ಎರಡೂ ಮಹಾಕೃತಿಗಳು ತೋರಿಕೆಯ ಭಿನ್ನತೆಯನ್ನು ಬಹು ಭದ್ರವಾಗಿಯೆ ತಾಳಿಕೊಂಡಿವೆ. ಕುವೆಂಪು ಕಾದಂಬರಿಗಳನ್ನು ಮೆಚ್ಚಿ ಶ್ರೀ ರಾಮಾಯಣದರ್ಶನವನ್ನಾಗಲಿ 'ಬೆರಳ್‌ಗೆ ಕೊರಳ್' 'ಶ್ಮಶಾನ ಕುರುಕ್ಷೇತ್ರ' ಶೂದ್ರ ತಪಸ್ವಿ' ನಾಟಕಗಳನ್ನಾಗಲಿ ಗಂಭೀರವಾಗಿ ಪರಿಭಾವಿಸದಿರುವುದು ಈ ಸೇತುಕ್ರತುಶಕ್ತಿಯ ಏಕತೀರವನ್ನಷ್ಟೆ ಒಪ್ಪಿಕೊಂಡಂತಾಗುತ್ತದೆ. ಪ್ರಸ್ತುತ ಶ್ರೀ ರಾಮಾಯಣದರ್ಶನಂ ಮಹಾಕಾವ್ಯದ ಬಗೆಗೆ ಹೇಳುವುದಾದರೆ, ಇದು ಪ್ರಕಟವಾಗಿ ೪೦ ವರ್ಷವಾಯಿತು. ಆದರೆ ಒಂದು ಜನಾಂಗದ, ಒಂದು ಯುಗದ ಗಂಭೀರಾನುಭವಗಳ ಪ್ರತಿಮೆಯಾದ ಈ ಕೃತಿ ವೇದ್ಯವಾಗಬೇಕಿದ್ದ ಪ್ರಮಾಣದಲ್ಲಿ ಇನ್ನೂ ಆಗಿಲ್ಲದಿರುವುದು ನಾವಿನ್ನೂ ಪರ್ವತಪಂಕ್ತಿಯ ಸಮೀಪದ ತಪ್ಪಲಿನಲ್ಲಿರುವ ಸ್ಥಿತಿಯನ್ನೇ ಪುಷ್ಟೀಕರಿಸುತ್ತದೆ. ೧೯೩೬ ರ ವೇಳೆಗೆ ಪ್ರಕಟವಾದ—ಆದರೆ ಆ ಮುನ್ನ ನಾಲ್ಕೈದು ವರ್ಷಗಳ ಹಿಂದೆಯೆ ಬರಹಗೊಂಡಿದ್ದ—ಕಾನೂರು ಹೆಗ್ಗಡತಿ ಕಾದಂಬರಿ ಆ ಕಾಲದ ಯಾವ ಕನ್ನಡ ಕಾದಂಬರಿಯೂ ಕಲ್ಪಿಸಿಕೊಳ್ಳಲಾರದ ಹರಹನ್ನೂ ಸಂಕೀರ್ಣತೆಯನ್ನೂ ಜೀವಂತ ಸಹಜತೆಯನ್ನೂ ಪಡೆದುಕೊಂಡು ಮೂಡಿತು. ಇಂದೂ, ಇಷ್ಟೆಲ್ಲ ಕಾದಂಬರಿಯ ಹೆಬ್ಬೆಳಸು ಬಂದಿದ್ದರೂ, ಅದನ್ನು ಕಡೆಗಣಿಸುವುದಿರಲಿ ಪರಿಗಣನೆಗೆ ತೆಗೆದುಕೊಳ್ಳದೆ ನಮ್ಮ ಕಾದಂಬರಿ ವಿವೇಚನೆಯೆ ಮೊದಲಾಗದು. ಪ್ರತಿಕೃತಿಯಾದ ಕಾದಂಬರಿಯ ಬಗೆಗೇ ಈ ತೆರನಾದರೆ ಭವ್ಯ ಪ್ರತಿಯೆಯ ಸೃಷ್ಟಿಯಾದ ಶ್ರೀ ರಾಮಾಯಣದರ್ಶನದ ಬಗೆಗೆ ಏನೆನ್ನಬಂದೀತು.

ಮೊದಮೊದಲು ಮಹರ್ಷಿ ವಾಲ್ಮೀಕಿಗಳ ಕೈ ಹಿಡಿದು ನಡೆಯುವ ಈ ಕವಿ ಕಾವ್ಯದ ಮಧ್ಯಕ್ಕೆ ಬರುವ ವೇಳೆಗೆ ದಾಪುಗಾಲುಹಾಕುತ್ತ ನಡೆಯುವುದನ್ನು, ಬಾನಲ್ಲಿ ಹಾರಾಟ ಮಾಡುವುದನ್ನು ಕಾಣುತ್ತೇವೆ.

ಹಾಗೆಂದು ಮೂಲರಾಮಾಯಣವನ್ನು ತಿರುಚುವ, ಉಲ್ಲಂಘಿಸುವ ಕೆಲಸ ನಡೆದಿದೆ ಎಂದಲ್ಲ. ಇಲ್ಲಿ ರಾವಣನೆ ಸೀತೆಯನ್ನು ಕದ್ದೊಯ್ಯುತ್ತಾನೆ. ಶ್ರೀ ರಾಮನೆ

ವಾಲಿ ರಾವಣ ಕುಂಭಕರ್ಣರನ್ನು ಕೊಲ್ಲುತ್ತಾನೆ. ಲಕ್ಷ್ಮಣನೆ ಇಂದ್ರಜಿತುವನ್ನು ಸಂಹರಿಸುತ್ತಾನೆ. ಈ ಎಲ್ಲ ಮೂಲಧಾತುವನ್ನೂ, ಜೀವಕೇಂದ್ರವನ್ನೂ ಕವಿ ಭೇದಿಸ ಹೋಗಿಲ್ಲ. ಸಮಷ್ಟಿ ಜನಮನಸ್ ಸೃಷ್ಟಿಯಾದ ರಾಮಾಯಣದಂತಹ ಕಥೆಗಳ ಜೀವ ಕೇಂದ್ರವನ್ನು ಹಾಗೆ ಒಡೆಯಬರುವುದಿಲ್ಲ. ಆದರೆ ಕಾಲಯಾನ ಮೂಡಿಬಂದಿರುವ ಆ ಕಥೆ ನಮ್ಮ ಯುಗದ ಕಾಲದ—ದೇಶದಲ್ಲಿ ಬಾಳಲು ಅದರ ಗೂಢ ಸ್ಪಂದನಗಳನ್ನು ಅರಿತು ರೂಪಗೊಳ್ಳಬೇಕಾಗುತ್ತದೆ. ರಾಮ—ರಾವಣರು ತೀವ್ರ ವಿರುದ್ಧ ದಿಕ್ಕಿನ ಧ್ರುವಗಳಾಗಿರುವಂತೆಯೆ ಒಂದು ವ್ಯೂಹ ಪೂರ್ಣವಾಗಲು (circuit) ಎಲ್ಲೋ ಹೇಗೋ ಸಂಬಂಧಗೊಳ್ಳುತ್ತಾರೆ. ಅದನ್ನು ಆಧ್ಯಾತ್ಮಿಕವಾಗಿ ಸಾಧಿಸುವ ಕಲೆಯನ್ನು ಕವಿಯಿಲ್ಲಿ ತೋರಿದ್ದಾರೆ.

ಹೀಗೆ ಮಾಗುವಾಗ ರಾಮ ರಾವಣರನ್ನು ಸರಳಗೊಳಿಸಿಲ್ಲ, ಅಥವಾ ಅಸ್ಪಷ್ಟ ಪ್ರತಿಮೆಗಳಾಗಿ ಮಾಡಿಲ್ಲ. ಸರಳರೇಖೆಯ ತುತ್ತ ತುದಿಯ ಬಿಂದುಗಳು ದೂರದ ಕೂಡದ ಸ್ಥಿತಿಯಲ್ಲಿದ್ದರೂ, ಭೂಮಿಯಮೇಲೆ ಆ ಸರಳರೇಖೆಯನ್ನು ಅತಿ ಲಂಬಿಸಿದಾಗ ಆ ನೇರ ರೇಖೆಯೆ ಬಾಗುತ್ತ ಹೋಗಿ ಆ ದೂರದ ಬಿಂದುಗಳು ಕೂಡಿ ಒಂದಾಗುತ್ತದೆ; ಸರಳರೇಖೆ ವೃತ್ತವಾಗುತ್ತದೆ. ರಾಮ—ರಾವಣರ ಪರಿಯಾದರೂ ಅಷ್ಟೆ. ಕವಿ ಈ ಇಬ್ಬರ ವಿಶಿಷ್ಟತೆಯನ್ನೂ ಗಾಢಗೊಳಿಸಿದ್ದಾರೆ. ರಾಮನ ಪೂರ್ಣರಾಮತ್ವ ಜಾಗೃತ ವಾಗುವುದೂ ರಾವಣನ ರಾವಣತ್ವ ಮಾಗುವುದೂ ಜೊತೆಜೊತೆಯಲ್ಲೆ ನಡೆಯುತ್ತದೆ. ರಾಮತ್ವದಲ್ಲಿ ಮಾಗಿದ ರಾವಣತ್ವ ಐಕ್ಯಗೊಳ್ಳುವುದನ್ನು ಈ ಕಾವ್ಯ ಪ್ರತಿಮಿಸುತ್ತದೆ. ರಾವಣನ ಈ ಮಾಗುವಿಕೆಯಲ್ಲೇಂತೊ ರಾಮನ ರಾಮತ್ವ ವಿಕಸನದಲ್ಲೂ ನಾನಾ ಪಾತ್ರಗಳು ತಮ್ಮನ್ನು ಗೊತ್ತಿಲ್ಲದಂತೆ ಅರ್ಪಿಸಿಕೊಂಡಿರುತ್ತವೆ. ಮೇಲುನೋಟಕ್ಕೆ ವಿರೋಧಿಸತ್ತ್ವಗಳೆಂಬಂತೆ ಕಂಡರೂ ಪರಸ್ಪರರ ಆಗುವಿಕೆ—ಮಾಗುವಿಕೆಯಲ್ಲಿ ಈ ಎಲ್ಲರೂ ಭಾಗಿಗಳಾಗುತ್ತಾರೆ. ರಾಮನ ವನವಾಸಕ್ಕೆ ಕಾರಣರಾದ ಮಂಥರೆ ಕೈಕೆಯಾಗಲಿ ಸೀತಾಪಹರಣಕ್ಕೆ ಪ್ರೇರಣೆ—ಸಾಧನ ಕರ್ತೃಗಳಾದ ಶೂರ್ಪನಖಿ, ಮಾರೀಚ, ರಾವಣ ರಾಗಲಿ ಎಲ್ಲರೂ ಸೀತಾರಾಮರ ಆಗುವಿಕೆಗೆ—ಪೂರ್ಣ ವಿಕಸನಕ್ಕೆ ಕಾರಣರಾಗುತ್ತಾರೆ. ಅಷ್ಟೆ ಅಲ್ಲ, ಹಾಗೆ ಮಾಡುತ್ತಲೆ ತಮ್ಮ ಮಾಗುವಿಕೆಗೂ ಪ್ರೇರಣರಾಗುತ್ತಾರೆ. ಹಾಗೂ ಅವರ ಪರಿಣಮನಕ್ಕೆ ಸೀತಾರಾಮಾದಿಗಳೂ ತಾರಕವಾಗುತ್ತಾರೆ. ಈ ಎಲ್ಲ ಪಾತ್ರಗಳೂ ತಮ್ಮ ಸ್ವಭಾವದಲ್ಲಿ ಆಳವಾಗಿ ಬಾಳುತ್ತಲ್ಲೆ ಸಮಷ್ಟಿ ಸ್ವಭಾವದತ್ತ ಬಾಗುತ್ತವೆ, ಮಾಗುತ್ತವೆ. ಒಟ್ಟನಲ್ಲಿ ಎಲ್ಲರ ಸಹಜಸ್ವಭಾವದ ಬಾಳನ್ನೂ ಅವರ ಆಗುವಿಕೆಯನ್ನೂ ಮಾಗುವಿಕೆಯನ್ನೂ ಈ ಕೃತಿಯಲ್ಲಿ ಕಾಣುತ್ತೇವೆ. ಈ ಕ್ರಿಯೆ ಸುಪ್ತ ಗುಪ್ತವಾಗಿಯೂ ವ್ಯಕ್ತವಾಗಿಯೂ ನಡೆಯುತ್ತದೆ. ಇಡೀ ಕಾವ್ಯದ ಕ್ರಿಯೆ ಒಂದು ಅದ್ಭುತ ರಾಸಾಯನಿಕ ಜೈವಿಕಕ್ರಿಯೆಯಾಗಿ ನಡೆಯುತ್ತದೆ.

ನಮ್ಮ ಯುಗದ ಆಧ್ಯಾತ್ಮಿಕ ವೈಜ್ಞಾನಿಕ ರಾಜಕೀಯ ಸಾಮಾಜಿಕ ಶಕ್ತಿಗಳ ಗಾಢ ಅರಿವಿಲ್ಲದ ಕವಿಯಿಂದ ಇಂಥ ಮಹತ್ ಕೃತಿಯ ಸೃಷ್ಟಿ ಸಾಧ್ಯವಾಗುತ್ತಿರಲಿಲ್ಲ. ಆಗಿರುವಾಗ ಈ ಕೃತಿ ಬೇರೆ ಯಾವ ಕಾಲ ದೇಶದಲ್ಲಾದರೂ ಹುಟ್ಟಿಕೊಳ್ಳಬಹುದಾದ ಕೃತಿಯಲ್ಲ.

ನೆಲದಮೇಲೆ ಸಂಚರಿಸುತ್ತಾ ಪ್ರಾರಂಭವಾಗುವ ಈ ಕಾವ್ಯ ಮುಂದೆ ಸಾಗಿದಂತೆ ಗಗನೋಡ್ಡೀನಕ್ಕೆ ತೊಡಗುತ್ತದೆ. ಶ್ರೀ ಸಂಪುಟದಲ್ಲಿ ಬರುವ ಘಟನೆಗಳೆಲ್ಲ ವಿಶೇಷಾನುಭವ ವಿಲ್ಲದ—ಅತೀಂದ್ರಿಯಾನುಭವಗಳಿಲ್ಲದ—ಕವಿಯಿಂದ ಮೂಡಿಬರುವುದು ಸಾಧ್ಯವಲ್ಲ. ಇವುಗಳದೆ ವಿಶೇಷ ಪ್ರಪಂಚ. ಮಾನವ ಮನಸ್ಸಿನ ವಿಶೇಷ ಸ್ಥಿತಿಗಳನಿಲ್ಲಿ ಅತಿ ಆತ್ಮೀಯ ವಾಗಿ ಮೂರ್ತೀಕರಿಸಿದ್ದಾರೆ. ಲೌಕಿಕಾನುಭವಗಳ ಚಿತ್ರೀಕರಣದಲ್ಲೆಂದೂ ಈ ಅಲೌಕಿಕ —ಅಸಾಮಾನ್ಯ ಅನುಭವಗಳ ಶಿಲ್ಪೀಕರಣದಲ್ಲೂ ಕವಿ ಅಸಾಧಾರಣ ಸತ್ತ್ವ ತೋರಿ ದ್ದಾರೆ. ಈ ಅತಿಶಯ ಅನುಭವಗಳನ್ನು ಮುಟ್ಟನೋಡಬಹುದೆಂಬಂತೆ ಮೂರ್ತೀಕರಿಸಿ ದ್ದಾರೆ.

ಇಂಥ ದೊಡ್ಡ ಕವಿ ಏಕಿನ್ನೂ ಗಾಢಸಂವೇದನೆಯಾಗಿಲ್ಲ? ಹೋಮರನ ಪ್ರಭಾವ ವಲಯದಲ್ಲಿ ಬೆಳೆದ ಲ್ಯಾಟಿನ್ ಕವಿ ವರ್ಜಿಲ್‌ನನ್ನು ಕವಿಮಾನದಂಡವಾಗಿ ಪರಿಗಣಿಸು ತ್ತಾರೆ, ನವ್ಯ ಕವಿ ಎಲಿಯಟ್‌ರು. ವಾಲ್ಮೀಕಿಗಳ ದಾರಿಯಲ್ಲೆ ನಡೆದೂ ಹೊಸ ಲೋಕಗಳನ್ನು ಕಾಣಿಸಿರುವ ಈ ಕವಿ—ಕೃತಿ ಏಕೆ ನಮ್ಮ ಪ್ರಜ್ಞಾವಂತ ಕವಿ ವಲಯದ ಪರಿಭಾವನೆಗೆ ಸಿಲುಕಿಲ್ಲ, ನಿಲುಕಿಲ್ಲ? ಪ್ರಾಯಶಃ ನಾವಿನ್ನೂ ಪರ್ವತಶ್ರೇಣಿ ತಪ್ಪಲಲ್ಲೆ ಇದ್ದೇವೆ.

ಜೀವನದಿಯಲ್ಲಿ ಒಮ್ಮೆ ಮುಳುಗು ಹಾಕಿದರು ಸಾಕು
ಸಾಗರದ ಜಗದ ಸಕಲ ನದಿಗಳ ಈಷದವಗಾಹನವ
ಜೀವ ಪಡೆದಂತೆನ್ನಿಸುವುದು.
ನಿಮ್ಮ, ನಿಮ್ಮ ಕೃತಿಗಳ ಮನನ ನೂತನಸನಾತನದ
ಮತ್ತಂತೆ ಮೂಡು ಪಡುವಣದ ಗಾಳಿಬೆಳಕ,
ಶಿಶುಮುಗ್ಧ ಹಾಸವನ್ನಂತೆ ರಭಸಮತಿ ಯೌವನವಂ
ಪರಿಣತ ಮನಸ್ತರು ಸುಧಾಫಲವನಂತೆ
ಹುಳಿಯೊಗಚುರುಚಿ ಪೊಗರನು,
ಜ್ವಲನ ತೇಜವನಂತೆ ಶಾಂತ ದೀಪ್ತಿಯನು,
ಜಾನಪದವನ್ನಂತೆ ಸಂದಿಗ್ಧ ನಾಗರಿಕ ಮತಿಯ
ಅಂತೆ ಮಾಲ್ಮೋದ್ದೀಪ್ತ ದೇವಾಭಿರತಿಯ,
ವಿಪುಲ ವಾಸ್ತವವನಂತೆ ಸಫಲ ಪ್ರತಿಮಾವಿಧಿಯ
ವ್ಯಗ್ರ ಪ್ರತಿಭಟನವನ್ನಂತೆ ನಿಶ್ಚಲಶ್ರದ್ಧೆಯನು
ಸಂಮಥಿತ ಬುದ್ಧಿಯನ್ನಂತೆ ನಿಶ್ಚಯದ ಸಿದ್ಧಿರತಿಯ
ಜೀವಕ್ಕೆ ಮಿಂಚಿಸುವುದಂತೆ ಸಿಂಚಿಸುವುದು.
ವ್ಯಾಸವಾಲ್ಮೀಕಿಗಳ ಮತ್ತೆ ಔಪನಿಷದಿಕದ ಪರಂಪರೆಯೆ
ನಿಮ್ಮುದ್ಭ ಕೃತಿಗಳಲಿ ಸತ್ಪುತ್ರಕವೆನಿಸಿ ಚಿರಂಜೀವಿಯೆನಿಸಿರುವುದು.
ನಾಗರಿಕದಪಸ್ಮಾರ ಗರ್ತದೊಳಸೆಳೆತಕೊಳಗಾಗದೆಯೆ
ಸಂಸ್ಕೃತವಾದ ಜಾನಪದಸತ್ತ್ವ ನೀವು.
ಚಿಲ್ಲರೆಯ ಸಂಗದಲಿ ಚಿಲ್ಲರೆಗೆ ತನ್ನ ಇರವಿನ ಕೇಡು,
ಬಂಧಸಾಣ್ಣದ ಕೂಡೆ ಬೆಲೆ ಹಿಗ್ಗಿಯೂ ತನ್ನತನ ಉನಗೊಳ್ಳದ ಕೋಡು!

ಕಥನಕವನಗಳು

ಜಿ. ಜಿ. ಮಂಜುನಾಥನ್

ಕಥನಕವನಗಳು ಸಂಕಲನದ ಮೊದಲ ಕವನ ಕರಿಸಿದ್ದ. ಮಲೆನಾಡಿನ ಅಭುಕ್ತ ಮೂಲೆಯ ಯಃಕಶ್ಚಿತ್ ಮನುಷ್ಯನೇ ಇದರ ನಾಯಕ. ಕರಿಸಿದ್ದ, ಗಿಡ್ಡಿ, ಬೈರ, ಹಂಡನಾಯಿ ಇವು ಇಲ್ಲಿನ ಪಾತ್ರಗಳು. ಕರಿಸಿದ್ದ ಗಿಡ್ಡಿಯರ ಮಗ ಬೈರ ಅವಲದಹೂವನ್ನು ಕುಯ್ಯಲು ಹೋಗಿ ಕೆರೆಯಲ್ಲಿ ಮುಳುಗಿದ್ದು ಇದರ ವಸ್ತು. ಇದನ್ನು ಅತ್ಯಂತ ಆಪ್ಯಾಯಮಾನವಾಗಿ ನಡೆಸಿಕೊಂಡು ಹೋಗಿದ್ದಾರೆ. ಕಥನಕವನದ ಮೊದಲ ಪಂಕ್ತಿ ಮಲೆನಾಡಿನ ಜೀವನದ ಹಿನ್ನೆಲೆಯಲ್ಲಿ ಮೂಡಿಬಂದ ಎಲ್ಲ ಕಥನಕವನಗಳಿಗೂ ಪೂರ್ವ ಪೀಠಿಕೆಯಾಗಿ ನಿಲ್ಲುತ್ತದೆ. ಆ ಮೂಲಕ ಕಥನಕವನಗಳ ಓದುಗನನ್ನು ತಮ್ಮ ತೆಕ್ಕೆಗೆ ಕವಿ ತೆಗೆದುಕೊಳ್ಳುತ್ತಾರೆ. ಈ ಸಾಲುಗಳು ಬಯಲು ಸೀಮೆಯ ಓದುಗನಿಗೆ ಊರು ಎಂದರೆ ಬರುವ ಜನ ಬಾಹುಳ್ಯ, ಮನೆಗಳ ಸಂಖ್ಯೆ, ಅಂಗಡಿ, ಮುಂಗಟ್ಟು ಮುಂತಾದ ಎಲ್ಲ ಕಲ್ಪನೆಗಳಿಗೂ ವಿರಾಮವನ್ನು ಹಾಕಿ ಮಲೆನಾಡಿನ ಪರಿಸರವನ್ನು ರೂಪಿಸುವಲ್ಲಿ ಯಶಸ್ವಿಯಾಗಿವೆ. ಕುವೆಂಪು ಅವರು ಕಥಾನಿರೂಪಣೆಯಲ್ಲಿ ತೋರುವ ಸಂಯಮ, ಕುತೂಹಲವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಮುಂತಾದ ಒಳ್ಳೆಯ ಕಥೆಗಾರನ ಲಕ್ಷಣ ಅವರ ಕಥನಕವನಗಳಲ್ಲಿಯೂ ಕಂಡುಬರುತ್ತದೆ. ಕರಿಸಿದ್ದನ ಕಥೆಯನ್ನು ಹೇಳುವ ಮೂಲಕ ಅವರು ಒಬ್ಬ ನಾಡಾಡಿಯ ಜೀವನದ ಹಿಂದೆ ಕೂಡ ಜಗತ್ತಿನ ಸಾಮಾನ್ಯಧರ್ಮವನ್ನು ಕಾಣುತ್ತಾರೆ. ಅವರ ಕವಿಚೇತನಕ್ಕೆ ಕರಿಸಿದ್ದನೂ ಒಂದೇ ಶ್ರೀರಾಮಚಂದ್ರನೂ ಒಂದೇ ಆಗಿ ಕಾಣುತ್ತಾರೆ. ಮಗು ಜನಿಸಿದಾಗ ಆತ ಬಡತನದ ತೊಟ್ಟಿಲನ್ನು ಬಲಗೊಂಡು ಭಕ್ತಿಯಿಂದ ಮೂರುಕಾಸನ್ನು ತೋಟದಾಚೆಯ ಭೂತನಿಗೆ ಮುಡಿಪಾಗಿ ಕಟ್ಟಿದನು. ಆದರೂ ತಿರುಪತಿಯ ವೆಂಕಟೇಶನ ಭಕ್ತರಿಗೆ ಆದ ಆನಂದ, ವಿಶ್ವನಾಥನ ಭಕ್ತರಿಗೆ ಆದ ಆನಂದ ಅವನಿಗೂ ಒದಗಿ ಬಂದಿತು

ಎಂದು ಹೇಳುವಲ್ಲಿ ಕವಿಯ ವಿಶಾಲದೃಷ್ಟಿ ಕಂಡು ಬರುತ್ತದೆ. "ಒಂದು ಅಳಲಿನ ಕೂಗು, ಒಂದು ಮಿಂಚುವ ಹುಳು, ಒಂದು ಹುಲ್ಲಿನ ಎಸಳು ಸಾಧಾರಣ ದೈನಂದಿನ ದೃಷ್ಟಿಗೆ ಯಃಕಶ್ಚಿತವೂ ಅಲ್ಪವೂ ಗಮನಕ್ಕೆ ಬಾರದವೂ ಆಗಿರಬಹುದು. ಆದರೆ ಭೂಮವಾದ ಚಿತ್ತಪಸ್ಸಿನಿಂದ ತುಂಬಿ ತುಳುಕಿ ಮಿಡಿಯುತ್ತಿರುವ ಕವಿಚೇತನದ ಸಿಡಿಮದ್ದಿನರಾಶಿ ಯಂತಿರುವ ಪ್ರತಿಭೆಗೆ ಯಾವ ಅಲ್ಪವಸ್ತುವಾದರೂ ಒಂದು ಕಿಡಿಯಾಗಿ ಪ್ರಚಂಡಶಕ್ತಿ ಜ್ಯೋತಿಯ ಆಸ್ಫೋಟನೆಗೆ ನಿಮಿತ್ತವಾಗಬಹುದು"[1] ಎನ್ನುವ ಮಾತು ಕರಿಸಿದ್ದನಿಗೂ ಅನ್ವಯಿಸುತ್ತದೆ. ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ಎನ್ನುವ ಸರ್ವೋದಯ ತತ್ವಕ್ಕೆ ಒಂದು ಸ್ಪಷ್ಟ ಭಾಷ್ಯವಾಗಿ ನಿಲ್ಲುತ್ತದೆ ಕರಿಸಿದ್ದ ಕಥನಕವನದ ಅಂತ್ಯಭಾಗ. ಬೈರನ ಮರಣ ಸಂದರ್ಭವನ್ನು ದಾಖಲಿಸುವ ಸಮಯದಲ್ಲಿ—

ಯಮನ ಕರಣಿಕನಾಗ ಕಾಲದೋಲೆಯ ಮೇಲೆ
ಚಿತ್ರಗುಪ್ತನು ಬರೆದು ಚಿತ್ರಿಸಿದನಿಂತೆಂದು :
ಪಾರ್ಲಿಮೆಂಟಿನಲೊಬ್ಬ ಭಾಷಣವ ಮಾಡಿದನು......
ವಂಗದೇಶದೆ ಕವಿಯು ನಾಟಕವನಾಡಿದನು......
ಹಿಮಗಿರಿಯ ಮೇಲೊಬ್ಬ ಸಾಧುವಾದನು ಸಿದ್ಧ......
ಜರ್ಮನಿಯ ದೇಶದಲಿ ನಡೆದಿದೆ ಮಹಾಯುದ್ಧ......
ಕುಪ್ಪಳಿಯ ಕೆರೆಯಲ್ಲಿ ಬೈರ ಹುಡುಗನು ಬಿದ್ದ......
ಮಡಿದವಗೆ ಮರುಗುವರು ಗಿಡ್ಡಿ, ಕರಿಸಿದ್ದ......
ಹಂಡನಾಯಿಯು ಮರುಗಿ ಕಣ್ಣೀರು ಕರೆದಿತ್ತು......
ಆಫ್ರಿಕದಿ ಕಂಬಿ ತಪ್ಪಿದ ರೈಲು ಬಿದ್ದಿತ್ತು......
ಕಾಶಿಯಲಿ ಹಾರುವರು ಹೇಳುವರು ವೇದ......
ಚಿತ್ರಗುಪ್ತನಿಗಿದೆಯೆ ಮೇಲು ಕೀಳಿನ ಭೇದ......

ಈ ಭಾಗಕ್ಕೆ ವಿವರಣೆ ಅವಶ್ಯಕವೆ ?

ಮಂಜಣ್ಣ[2] ಹೇಳಿದ ಸ್ಥಳಗತೆಯೂ ಕರಿಸಿದ್ದ ಕಥನ ಕವನದಂತೆಯೇ ದುರಂತದಲ್ಲಿ ಮುಗಿಯುವ ಒಂದು ಸಾಂಸಾರಿಕ ಚಿತ್ರ. ಮಲೆನಾಡು ಎಷ್ಟು ರಮಣೀಯವೋ ಅಷ್ಟೇ ರುದ್ರಭಯಂಕರ. ತನ್ನನಲ್ಲೆ ಸಿಂಗಿಯನ್ನು ಊರಿಗೆ ಕರೆತರಲು ಹೋದ ಕರಿಸಿದ್ದನನ್ನು

[1] ನೆನಪಿನ ದೋಣಿ ಪುಟ ೪೮೬

[2] ಮಂಜಣ್ಣ ನಮ್ಮ ಮನೆಯ ಆಳು; ಬಹಳ ಹಳೆಯ ಮನುಷ್ಯ; ಅಂದರೆ ಸುಮಾರು ಅರವತ್ತು ವರಷ. ಅವನ ಮುಖದ ತುಂಬ ಬಿಳಿಯ ಗಡ್ಡ ಮೀಸೆ. ತಲೆಯ ತುಂಬ ಹಣ್ಣು ಹಣ್ಣು ಕೂದಲು...ಮಂಜಣ್ಣನೆಂದರೆ ನಮಗೆಲ್ಲ ಪ್ರಾಣ; ಏಕೆಂದರೆ ನಮಗೆಲ್ಲ ಅವನೇ ಕತೆಗಾರ. ಆ ವೃದ್ಧಮೂರ್ತಿಯನ್ನು ನೋಡಿದ ಕೂಡಲೆ ಹುಡುಗರಾದ ನಮಗೆಲ್ಲ ಅವನು ನಮಗೆ ಆಳು ಎಂಬುದು ಮರೆತು ಹೋಗಿ, ಅವನಲ್ಲಿ ಗುರುಭಾವ ಉಂಟಾಗುತ್ತಿತ್ತು. ಲವಕುಶರಿಗೆ ವಾಲ್ಮೀಕಿ ಯನ್ನು ಕಂಡರೆ ಯಾವ ಭಾವ ಉಂಟಾಗುತ್ತಿತ್ತೊ ಆ ಭಾವ—ಮಲೆನಾಡಿನ ಚಿತ್ರಗಳು. ಐದನೆಯ ಮುದ್ರಣ ೧೯೬೧, ಪುಟ ೯೭.

ಬೀಳ್ಕೊಡಲು ಬಂದಿದ್ದವರು ಬೈರಣ್ಣ, ತಿಮ್ಮಕ್ಕ, ಸಣ್ಣುಪ್ಪಟ್ಟ. ಇವರೆಲ್ಲರೂ ಸಿಂಗಿ ಕರಿಸಿದ್ದರನ್ನು ಬೀಳ್ಕೊಡುವ ಸಂದರ್ಭ ಸೌಭದ್ರೆ, ಪಾಂಡವರನ್ನು ಅಂದು ಕಳುಹಿದ ಕೃಷ್ಣನ ಕ್ರಿಯೆಗೆ ಸಮವಾಗಿ ಕವಿಗೆ ಕಾಣುತ್ತದೆ. ಅವರಿಂದ ಬೀಳ್ಕೊಂಡ ಸಿಂಗಿ ಕರಿಸಿದ್ದರು ಮುಂದೆ ಗುಡ್ಡದ ನೀರಿನ ನೆರೆಯ ಹೊಡೆತಕ್ಕೆ ಸಿಕ್ಕಿ ಬೀಳುತ್ತಾರೆ. ಆ ನಲ್ಲ ನಲ್ಲೆಯರ ಆಲಿಂಗನ ಮೃತ್ಯುವಿನ ಆಲಿಂಗನವಾಗುತ್ತದೆ. ಮಕ್ಕಳ ನೆನಪಾಗಿ ಗುಡಿಸಲೆ ಕಣ್ಣೆಂದೆ ನಿಂತಂತೆ ಆಗುತ್ತದೆ. ಮುಂದೇನು ನಡೆಯಿತೊ ನಾ ಹೇಳಲಾರೆ. ಬಲು ಘೋರ ಬಲುಘೋರ ನೀನು ಕೇಳಲಾರೆ ಎನ್ನುವ ಮುಕ್ತಾಯ ತುಂಬ ಧ್ವನಿಪೂರ್ಣ ವಾಗಿ ನಿಲ್ಲುತ್ತದೆ. ಮೌನ ಚಿನ್ನ ಮಾತು ಬೆಳ್ಳಿ ಎನ್ನುವ ಮಾತಿನ ಸಾರ್ಥಕ್ಯ ಇಲ್ಲಿ ಕಂಡುಬರುತ್ತದೆ.

ಮರಸುಬೇಟೆ, ಡೂಲಿ, ನಾಗಿ ಕಥನಕವನಗಳು ಮಲೆನಾಡಿನ ಜೀವನದಲ್ಲಿ ಅನಿವಾರ್ಯ ಅಂಗವಾದ ಬೇಟೆಯ ಮೂರು ಮುಖವನ್ನು ನೀಡುತ್ತವೆ. ಮಲೆನಾಡಿನ ವರಿಗೆ ದಿನನಿತ್ಯದ ಹವ್ಯಾಸವಾದ ಬೇಟೆ ರಂಜನೆಯನ್ನು ಒದಗಿಸುವಂತೆಯೇ ದಾರುಣ ದುಃಖವನ್ನು ನೀಡುತ್ತದೆ. ಅಂತಹ ದುರಂತವೊಂದರಿಂದ ಪಾರಾದ ಘಟನೆಯನ್ನು ಮರಸುಬೇಟೆ ಒಳಗೊಂಡಿದೆ. ತಂದೆಯ ಗುಂಡಿಗೆ ಅನಿರೀಕ್ಷಿತವಾಗಿ ಆಹುತಿಯಾಗ ಬೇಕಾಗಿದ್ದ ಮಗು ಅಜ್ಞಾತಶಕ್ತಿಯ ಕೈವಾಡದಿಂದ ಬದುಕಿ ಉಳಿಯುತ್ತದೆ. ಬೇಟೆಗಾರನ ಜೀವನದ ತಿರುವಿಗೆ ಕಾರಣವಾಗುತ್ತದೆ. ಮರಸುಬೇಟೆ ಕಥನಕವನದ ಮಗುವಿನ ಮುಗ್ಧತೆ "ನಾನು ಬಹೆನಪ್ಪಯ್ಯ ಕಾಡಿಗೆ" ಎನ್ನುವ ಮಾತಿನಲ್ಲಿ ವ್ಯಕ್ತವಾಗಿದೆ. ಅಷ್ಟೇ ಅಲ್ಲ ಅದು ಹಟಹಿಡಿದು ನಿಂತಿದೆ. ಆ ಮಗುವಿಗೆ ತಂದೆಯು—

> "ಅಲ್ಲಿ ಹುಲಿಯಿದೆ; ಹಂದಿ ಹಿಂಡಿದೆ
> ಮುಳ್ಳುಕಲ್ಲಿದೆ: ಹಳುವು ಹಬ್ಬಿದೆ
> ಸಣ್ಣವನು; ಹೆಬ್ಬಾವು ಕಂಡರೆ
> ಹಾಕುವುದು ತಿಂದು"

ಎಂದು ಹೇಳುವ ಬೆದರಿಕೆ, ಹೆದರಿಕೆ ಯಾವುವೂ ತಟ್ಟುವುದೇ ಇಲ್ಲ. ತಂದೆ ಬೇಟೆಗೆ ಹೋದನೇಲೆ ಅವನ ಅರಿವಿಗೆ ಬಾರದಂತೆ ಮಗುವೂ ಆತನನ್ನು ಹಿಂಬಾಲಿಸುತ್ತದೆ. ಕೊಲೆಯ ಕೋವಿಯ ತಪದೊಳಿದ್ದ ಜಾಣ ಗುರಿಗಾರ, ಹಳು ಅಲುಗುವುದನ್ನು ನೋಡು ತ್ತಲೆ ಕೋವಿಯ ಕುದುರೆಯನ್ನು ಎಳೆಯುತ್ತಾನೆ. ಈಡು ಹಾರಲಿಲ್ಲ. ಕೇಪುಕೆಟ್ಟಿದೆಯೆ? ಕಿವಿಗೆ ಮಸಿಯೈತರದೆ? ಮಾಟ ಮಾಡಿಹರೇನು? ಇಂತಹ ದ್ವಂದ್ವಗಳಲ್ಲಿ ಸಿಕ್ಕಿದ ಬೇಟೆ ಗಾರನಿಗೆ ಕಂಡದ್ದಾದರೂ ಏನು?

> ಶಿವನೆ! ಶಿವ ಶಿವನೆ!
> ಬೇಟೆಗಾರಗೆ ತನ್ನನರಸುತ
> ಬರುವ ಕಂದನ ಕಂಡು ಹರಣವೆ
> ಹಾರಿ ಹೋಯಿತು ಹಳುವದಲಿ ಅದೊ
> ಅವನೆ? ಹೌದವನೆ!

ಆತ ಮುಂದೆಂದೂ ಬೇಟೆಯಾಡುವುದಿಲ್ಲ ಎಂದು ಅಹಿಂಸೆಯ ವ್ರತವನ್ನು ಹೂಡುತ್ತಾನೆ. ಜನರು ಕೇಪು ಕೆಟ್ಟಿರಬೇಕು, ಮಸಿಯು ಕೆಟ್ಟಿರಬೇಕು, ಕೋವಿ ಕನಿಕರ ತೋರಬಲ್ಲುದೆ ಎಂದು ಹೇಳಿದರೂ ಆತ ಅದನ್ನು ಲೆಕ್ಕಿಸುವುದಿಲ್ಲ. ವಿಚಾರಮಂಥನಕ್ಕಿಂತ ವೈಯಕ್ತಿಕ ಅನುಭವ ಇಲ್ಲಿ ತನ್ನ ಮೇಲ್ಮೆಯನ್ನು ಸಾಧಿಸಿದೆ. ಇದೇ ಇಲ್ಲಿನ ವಿಶೇಷ. ಇಂತಹುದೇ ಮರಸುಬೇಟೆಯ ಸಂದರ್ಭವನ್ನು ಕುರಿತು ಕುವೆಂಪು ಅವರು ೧೯೨೬ನೆಯ ಮೇ ೧೫ನೆಯ ಶನಿವಾರದ ದಿನಚರಿಯಲ್ಲಿ "ಕಾಡಿನಲ್ಲಿ ಕೋವಿ ಹಿಡಿದು ಮರಸು ಕುಳಿತೆ, ಬೇಟೆಯಾಡುವುದು ಕೆಟ್ಟದ್ದೆಂದು ಆಲೋಚಿಸುತ್ತಾ, ಮತ್ತೊಮ್ಮೆ ಪ್ರತಿಜ್ಞೆ ಮಾಡಿದೆ ಬೇಟೆಯಾಡುವುದಿಲ್ಲ ಎಂದು" ಎಂದು ಬರೆದಿದ್ದಾರೆ.

'ಡೂಲಿ' ಒಂದು ನಾಯಿಯ ಹೆಸರು. ಈ ಕಥನಕವನದ ಹಿನ್ನೆಲೆ ನೆನಪಿನ ದೋಣಿಯಲ್ಲಿ ಹೀಗಿದೆ "ಬೇಟೆಯಾಡುವುದು ಮಲೆನಾಡಿನವರಿಗೆ ಒಂದು ದಿನನಿತ್ಯದ ಹವ್ಯಾಸದ ಕಸುಬಾಗಿದ್ದರೂ ನನಗೆ ಬುದ್ಧಿ ತಿಳಿದ ಮೇಲೆ ನನ್ನ ತಂದೆ ಕೋವಿ ತೆಗೆದು ಕೊಂಡು ಕಾಡಿನ ಕಡೆಗೆ ವಿಶೇಷವಾಗಿ ಹೋಗುತ್ತಿದ್ದುದು ನೆನಪಿಲ್ಲ. ಹಬ್ಬದ ಹಿಂದಿನ ದೊಡ್ಡ ಬೇಟೆಗೆ ಗುಂಪಿನ ಜೊತೆಯಲ್ಲಿ ಹೋಗುತ್ತಿದ್ದುದು ನೆನೆಪಿದೆ. ಹಳು ನುಗ್ಗುವ ತಂಟೆಗೆ ಹೋಗದೆ ಬಿಲ್ಲಿಗೆ ಮಾತ್ರ ನಿಲ್ಲುತ್ತಿದ್ದರೆಂದು ತೋರುತ್ತದೆ. ಆದರೆ ಅವರು ಯಾವ ದೊಡ್ಡ ಶಿಕಾರಿ ಮಾಡಿದ್ದು ನನಗೆ ಗೊತ್ತಿಲ್ಲ. ಅವರ ಬೇಟೆಯ ಹುಚ್ಚು ಇಳಿದು ಹೋಗಿದ್ದಿರಬೇಕು. ಅದಕ್ಕೆ ಕಾರಣ ಹಿಂದೊಮ್ಮೆ (ಬಹುಶಃ ನಾನು ಹುಟ್ಟುವ ಮೊದಲು ಅಥವಾ ತೊಟ್ಟಿಲ 'ಬಾಲೆ' ಯಾಗಿದ್ದಾಗ!) ಅವರು ಒಂದು ಹಬ್ಬದ ದೊಡ್ಡ ಬೇಟೆ ಯಲ್ಲಿ ಬಿಲ್ಲಿಗೆ ನಿಂತಿದ್ದಾಗ, ಅವರ ಮುಂದಿನ ನಾಯಿ ಅಟ್ಟಿಸಿಕೊಂಡು ಬಂದ ಒಂದು ಹೆಬ್ಬಂದಿಗೆ ಗುಂಡಿಕ್ಕಿದರಂತೆ, ಆ ಗುಂಡು ಹಂದಿಗೆ ತಗುಲಿ, ಅದನ್ನು ಹಾಯ್ದು, ಅದರ ಆಚೆಗೆ ಬೆನ್ನಟ್ಟಿ ಬರುತ್ತಿದ್ದ ನಾಯಿಗೂ ತಗಲಿ, ಅದು ಸತ್ತಿತಂತೆ. ಆ ದಿನ ಅವರು ಕಣ್ಣೀರಿಕ್ಕಿ ಬಹಳ ಸಂಕಟಪಟ್ಟರಂತೆ. ಊಟವನ್ನು ಮಾಡದೆ ಆ ಹಂದಿಯ ಮಾಂಸ ವನ್ನು ಮುಟ್ಟಲಿಲ್ಲವಂತೆ! ತಮ್ಮ ಮಕ್ಕಳಲ್ಲಿ ಒಂದು ಸತ್ತರೆ ಅದನ್ನು ಒಪ್ಪಮಾಡಿ ಹೂಳುವ ರೀತಿಯಲ್ಲಿ ಸಂಪ್ರದಾಯದ ಪ್ರಕಾರ ಆ ನಾಯಿಯನ್ನು ಮಣ್ಣುಮಾಡಿದ ರಂತೆ! ಅದರ ಹೆಸರು 'ಡೂಲಿ' ಎನ್ನುತ್ತಿದ್ದರು (ಪುಟ ೨೪–೨೫) ಇದೇ ವಸ್ತು ಡೂಲಿ ಕಥನಕವನವಾಗಿದೆ. ಇದರಲ್ಲಿ ಬೇಟೆಗಾರ ತಿಮ್ಮ ಮತ್ತು ಅವರ ವಿವರಗಳು ಹೀಗೆ ದೊರೆಯುತ್ತವೆ.

> ತಿಮ್ಮ ದೊಡ್ಡ ಬೇಟೆಗಾರ, ಮಲೆಯ ನಾಡಿಸೇಡುಗಾರ.
> ಡೂಲಿಯೊಳ್ಳೆ ಬೇಟೆನಾಯಿ ಹಿರಿಯಕುಲದ ಚೀನಿನಾಯಿ !
> ಹಂದಿಮಿಗಗಳನ್ನು ಹಿಡಿಸು ಕೀರ್ತಿವೆತ್ತುದದರ ತಾಯಿ !
> ಬೇಟೆಗಾರರಿಬ್ಬರಿಂತು ಬೇಟೆಯಾಡುತ್ತಿದ್ದರು.

ಬೇಟೆಗಾರ ಮತ್ತು ನಾಯಿ ಕಾಡಿನಲ್ಲಿ ನಡೆಯುತ್ತಿರುವಾಗ ತಿಮ್ಮನಿಗೆ ದೂರ ಬೆಳೆದ ಬಳ್ಳಿ ಹೊದರುಗಳಲ್ಲಿ ನಾಯಿಯ ಬೊಗಳುವಿಕೆ, ಹಂದಿಯ ಹೂಂಕಾರ ಒಂದಾದ

ಮೇಲೆ ಒಂದರಂತೆ ಕೇಳಿಸಿತು. ಹಂದಿಯನ್ನು ನಾಯಿ ತಡೆಯಿತೆಂದು ತಿಳಿದ ತಿಮ್ಮ ಕೋವಿಯನ್ನು ಎತ್ತಿ ಗುರಿಯ ಗುಂಡು ಹೊಡೆದನು. ಆಗ—

ಮುಗ್ಗರಿಸುತ ಹಂದಿ ಬಿತ್ತು ; ಡೂಲಿ ಕೂಗುತ್ತಾಚೆ ಬಿತ್ತು !
ತಿಮ್ಮ ಮುಂದೆಯೋಡಿ ನೋಡೆ ನಾಯಿಯಳುತ ಹೊರಳುತ್ತಿತ್ತು !
ಹಂದಿಯೊಡಲ ದಾಟಿ ಗುಂಡು ನಾಯಿಯೊಡಲ ಛೇದಿಸಿತ್ತು !
ತಿಮ್ಮನ ಕಡೆ ನೋಡುತೊರಲಿ ಡೂಲಿ ಕಣ್ಣು ಮುಚ್ಚಿತು !

ಅಂದು ಕಣ್ಣುಮುಚ್ಚಿದ 'ಡೂಲಿ' ಈ ಕಥನಕವನದ ಮೂಲಕ ಶಾಶ್ವತವಾಯಿತು. ತಿಮ್ಮನ ಕಡೆ ನೋಡುತೊರಲಿ ಡೂಲಿ ಕಣ್ಣು ಮುಚ್ಚಿತು ಎನ್ನುವ ಮಾತು ಆ ಇಡೀ ಪ್ರಸಂಗದ ಲಿಖಿತವ್ಯಾಖ್ಯಾನವಾಗುತ್ತದೆ. ಪರಿಭಾವಿಸಿದಷ್ಟೂ ಭಾವನಾ ಲೋಕ ವಿಸ್ತಾರಗೊಳ್ಳುತ್ತದೆ.

ಡೂಲಿ ಒಂದು ಸರಳ ಕತೆ. ಒಂದು ಘಟನೆ ನೇರವಾಗಿ ನಿರಪಿತವಾಗಿದೆ. ನಾಗಿ ಒಂದು ಸಂಕೀರ್ಣಕತೆ. ಮಾದ ಮತ್ತು ಮಾದಿಯರ ಜೀವನ, ಮಾದಿಯಿಂದ ಬೈಯ್ಯಿಸಿ ಕೊಂಡ ನಾಗಿ ತಪ್ಪಿಸಿಕೊಂಡ ಹಸು ತುಂಗೆಯನ್ನು ಹುಡುಕಿಕೊಂಡು ಹೋಗುವುದು, ಬೇಟೆಗಾಗಿ ಹೋದ ಮಾದ ಅರಿಯದೆ ಮಿಗವೆಂದು ತನ್ನ ಮಗಳನ್ನೆ ಗುಂಡಿಕ್ಕಿ ಕೊಲ್ಲುವುದು, ಮಗಳು ಮತ್ತು ತಂದೆಯರ, ಸಾವು, ಆರು ತಿಂಗಳ ಅನಂತರ ಮಾದನನ್ನು ಮರೆತ ಮಾದಿ ಸಿಂಗನನ್ನು ಮದುವೆಯಾಗುವುದು, ಬಟ್ಟೆಹೆಣೆಯಲು ಬಿದಿರುತರಲು ಹೋದ ಮಾದಿ ಮತ್ತು ಸಿಂಗರು ಒಂದನ್ನೊಂದು ಅಪ್ಪಿಕೊಂಡು ಬಿದ್ದಿದ್ದ ಅಸ್ತಿಪಂಜರಗಳನ್ನು ಕಂಡು ಹೆದರಿ ಊರಿಗೆ ಬಂದು ಸತ್ತು ಹೋಗುವುದು, ಮುಂದೆ ಅವರು ದೆವ್ವವಾದರು ಎನ್ನುವ ಪ್ರತೀತಿಯಲ್ಲಿ ಮುಕ್ತಾಯವಾಗುವುದು ಹೀಗೆ ಘಟನೆಗೊಂದು ಘಟನೆ ತಳಕು ಹಾಕಿಕೊಂಡು ಹೋಗುತ್ತದೆ.

ನಾಗಿ ಕಥನಕವನ ಪ್ರಾರಂಭವಾಗುವುದೇ ನಿರೀಕ್ಷೆ ಆತಂಕಗಳಿಂದ. ಇಡೀ ಕಥೆಯಲ್ಲಿ ದುರಂತಛಾಯೆ ದಟ್ಟೈಸಿದೆ. ಮಗು ನಾಗಿಗೆ ಎಲ್ಲ ದನಗಳೂ ಬಂದಿವೆ. ತುಂಗೆ ಮಾತ್ರ ಸಿಕ್ಕಲಿಲ್ಲ. ಹುಡುಕುತ್ತ ಹುಡುಕುತ್ತ ಕತ್ತಲಾಗಿದೆ. ಮನೆಗೆ ಬಂದರೆ ಗುಡಿಗೆ ಬರಲೇ ಬೇಡ ಎನ್ನುವ ಚಿಕ್ಕಮ್ಮನ ಬೆದರಿಕೆಯ ಜೊತೆಗೆ ನೂಕುವಿಕೆ–ಇದು ಒಂದು ಘಟ್ಟ. ಮನೆಯನ್ನು ಬಿಟ್ಟು ಹೊರಟ ಮಗು ಅವ್ವ ಅವ್ವಾ ಎಂದು ಜನವಿಹೀನವಾದ ಕಾಡಿನಲ್ಲಿ, ದಟ್ಟವಾದ ಮಲೆಯನಾಡಿನಲ್ಲಿ ಕೂಗುತ್ತಿರುವಾಗ ಬಂದ ಮರುಧ್ವನಿಯನ್ನು ಹಿಂಬಾಲಿಸುತ್ತಾ ಕಂಬಳಿಯ ತೊಪ್ಪೆಯನ್ನು ಹಾಕಿಕೊಂಡು ಅಲೆಯುತ್ತಿರುತ್ತಾಳೆ. ಬೇಟೆಗಾಗಿ ಹೋದ ಮಾದ ಏನೂ ದೊರೆಯದಿರಲು ಕೋವಿಯನ್ನು ಹೆಗಲಮೇಲೆ ಇಟ್ಟು ಬರುವಾಗ ಹಳುವಿನಲ್ಲಿ ಏನೋ ಹಂದುವುದನ್ನು ಕಂಡನು. ಹೊಸ ಹೆಂಡತಿ ಮಾದಿಗೆ ಏನನ್ನಾದರೂ ಕೊಂಡು ಹೋಗುವ ಹುಮ್ಮಸ್ಸಿನಲ್ಲಿ ಕರಿಯ ಕಂಬಳಿಯ ತೊಪ್ಪೆ ಹಾಕಿಕೊಂಡು ಬರುತ್ತಿದ್ದ ನಾಗಿಯನ್ನು ಹಂದಿಯೆಂದೇ ಭಾವಿಸಿ ಗುಂಡಿಕ್ಕಿದನು. ಈ ಘಟನೆ ಮುಂದೆ ನಾಲ್ಕು ಜೀವಗಳ ಕೊನೆಗೆ ಕಾರಣವಾಗುತ್ತದೆ. ಸಾಯುವಾಗ ಕೂಡ ನಾಗಿ ತಂದೆಯನ್ನು ಕಂಡು—

"ಬೈಯಬೇಡ ಅಪ್ಪ ಎನ್ನ ತುಂಗೆಯನ್ನು ತುಂಗೆಯನ್ನು—ತರುವೆ,
ಹೊಡೆಯ ಬೇಡ ಹುಡುಕಿ ತರುವೆ" ಎಂದು ಸತ್ತಳು.

ಎನ್ನುವ ಚಿತ್ರ ಹೃದಯವಿದ್ರಾವಕವಾಗಿ ಮೂಡಿ ಬಂದಿದೆ. ಕಾಲ ಎಲ್ಲವನ್ನು ಮರೆಸುತ್ತದೆ. ಮಾದಿಯು ಮಾದನನ್ನು ಮರೆತು ಸಿಂಗನನ್ನು ಮದುವೆಯಾಗುತ್ತಾಳೆ. ಆದೇ ಮಾದಿ ಮತ್ತು ಸಿಂಗರು ಹರ್ಷದ ಹೊನಲಿನಲ್ಲಿರುವಾಗ ಸತ್ತರು. ಇದು ನಡೆದ ಘಟನೆ. ಆದರೆ ಇದು ಮಲೆನಾಡಿನ ಜನಜೀವನದಲ್ಲಿ ಪಡೆದುಕೊಂಡ ತಿರುವು ಬಾಳಿಗೆ ತೀರ ಹತ್ತಿರವಾಗಿದೆ. ಈ ಮಾತಿಗೆ ಪೋಷಕವಾಗಿ 'ಮಲೆನಾಡಿನ ಚಿತ್ರಗಳ' ಪುಟ ೭೧ರಲ್ಲಿ ಬರುವ "ನಾನೂ ನೀನೂ ನಂಬದಿದ್ದರೂ ಹಳ್ಳಿಯಲ್ಲಿ ಪ್ರತಿಯೊಬ್ಬನೂ ಭೂತದ ಮಹಿಮೆಯಲ್ಲಿ ನಮ್ಮಿಂದ ಗ್ರಹಿಸಲಸದಳವಾದ ನಂಬಿಕೆ ಇಟ್ಟಿದ್ದಾನೆ. ಭೂತದ ವಿಷಯ ವಾದ ಕಣಿಗಳು ನಿಜವಾಗಿ ನಡೆದವೆಂದೇ ಅವನ ಬಲವಾದ ನಂಬಿಕೆ. ಹೆಚ್ಚೇನು ಈ ನಂಬಿಕೆಯ ಮೇಲೆಯೇ ಅವನು ಜೀವಿಸುತ್ತಾನೆ" ಎನ್ನುವ ಮಾತುಗಳನ್ನು ನೋಡ ಬಹುದು. ಈ ಕಾರಣದಿಂದ ನಾಗಿಯ ಅಂತ್ಯ ಜನಜೀವನದ ಪಡಿಯಚ್ಚಾಗಿ,

"ನಾಗಿ ಇಂದಿಗು ಅಂಬ ಅಂಬಾ ಎಂದು ತುಂಗೆಯಕರೆದು ಕರೆದೂ
ದೆವ್ವವಾಗಿ ಕತ್ತಲಲ್ಲಿ ತಿರುಗುತಿರುವಳು" ಎಂಬರು!
ಕೆಲರು "ಹುಣ್ಣಮೆ ರಾತ್ರಿಯಲ್ಲಿ ಅಪ್ಪಿದಸ್ಥಿಯ ಪಂಜರೆರಡು
ಕೇಕೆ ಹಾಕುತ ಮಾದಿಸಿಂಗರ ಅಟ್ಟುತಿರುವುವು" ಎಂಬರು!

ಎನ್ನುವ ಮುಕ್ತಾಯವನ್ನು ಕಂಡುಕೊಂಡಿದೆ.

ಮನುಷ್ಯ ಹಕ್ಕಿಯಂತೆ ಹಾರಬಲ್ಲ. ಮೀನಿನಂತೆ ಈಜಬಲ್ಲ ಆದರೆ ನೆಲದ ಮೇಲೆ ಮನುಷ್ಯನಾಗಿ ಬಾಳಲಾರ ಎನ್ನುವ ಮಾತಿದೆ. ವೈಜ್ಞಾನಿಕವಾಗಿ ಇಂದು ಚಂದ್ರನ ಮೇಲೆ ಮನುಷ್ಯ ನಡೆದಾಡಿದ್ದಾನೆ. ಗ್ರಹಾಂತರಗಳನ್ನೇ ತನ್ನ ತೋಳತೆಕ್ಕೆಗೆ ತೆಗೆದು ಕೊಂಡಿದ್ದಾನೆ. ವಿಶ್ವದ ನಿಗೂಢತೆಯನ್ನು ಬಯಲು ಮಾಡುತ್ತಿದ್ದಾನೆ. ಆದರೂ ತನ್ನ ನೆರೆಯವನೊಡನೆ, ಕೇರಿಯವನೊಡನೆ ಸಮನಸ್ಕನಾಗಿ ಬಾಳಲಾರ. ಅವನನ್ನು ಸಂಶಯ ಪಿಶಾಚಿ ಕಾಡುತ್ತದೆ. ದ್ವೇಷ ತಿಂದುಹಾಕುತ್ತಿರುತ್ತದೆ. ಇರುವವರು ಇಲ್ಲದವರ ನಡುವಣ ಹೋರಾಟ, ಜಾತೀಯತೆಯ ಮೇಲುಕೀಳಿನ ಹೋರಾಟ ಮುಂತಾದುವು ದೇಶದಲ್ಲಿ ಅಶಾಂತಿಗೆ, ಅರಾಜಕತೆಗೆ ಕಾರಣವಾಗಿವೆ. ದೇವರಿಗೆ ಯಾವ ನಾಮಹಾಕಬೇಕು? ತೆಂಕಲೆಯೊ? ವಡಗಲೆಯೊ? ದಾಸಕೂಟ ಹೆಚ್ಚೊ? ವ್ಯಾಸಕೂಟ ಹೆಚ್ಚೋ? ದೇವಸ್ಥಾನದಲ್ಲಿ ಮೊದಲ ತೀರ್ಥ ಯಾರಿಗೆ ಕೊಡಬೇಕು? ಇಂತಹ ಹೋರಾಟಗಳಿಗೆ ಕೋರ್ಟು ಕಟ್ಟಲೆಗಳನ್ನು ನಡೆಸಿದ್ದಾರೆ; ಮುಂದೆಯೂ ನಡೆಸಲಿದ್ದಾರೆ. ಇಂತಹ ಪ್ರಭುತಿಗಳಿಗೆ ಕುವೆಂಪು ಅವರ 'ಘಂಟಾಕರ್ಣ' ಒಂದು ಚುಚ್ಚುಮದ್ದು.

ಘಂಟಾಕರ್ಣ ಮಹಾಶಿವಭಕ್ತ, ಆತನ ಶಿವಭಕ್ತಿ ಎಷ್ಟರಮಟ್ಟಿನದೆಂದರೆ ಹುಡುಗರ ಲೇವಡಿಗೂ ಕೂಡ ಗುರಿಯಾಗುವಂತಹದು. ಆ ಶಿವಭಕ್ತ ಬೇರೆಯ ದೇವರ ಭಕ್ತರ ಕಂಡರೆ—

ಹಲ್ಲನು ಕಡಿವನು ಬಲುರೇಗಿ ;
ಸುರಿವನು ಕೆಂಡದ ಮಳೆಯಾಗಿ !

ಅವನಿಗೆ ಹರಿ ಎಂದರೆ ಬರಿಯ ಬೊಂತೆ, ಹರ ಎನ್ನಲು ಹಾಲಿಗೆ ಜೇನಿಳಿದಂತೆ. ಬೊಮ್ಮನದಂತೂ ಕಚ್ಚಟಕಂತೆ. ಬಾಯಿಗೆ ಬಂದಂತೆ ಬಯ್ಯುತ್ತಾನೆ. ಇಂತಹ ಭಕ್ತನನ್ನು ಕಂಡ ಶಿವನು—

"ಭಕ್ತನೆ, ಅದ್ವಯವಾಗಿಹ ಶಕ್ತಿ
ಒಂದಿದೆ ; ಅದನಾರಾಧಿಸೆ ಭಕ್ತಿ
ಬ್ರಹ್ಮನು ಹರಿಹರರೆಂಬುವರೆಲ್ಲ
ಆ ಚೈತನ್ಯಕೆ ಬೇರೆಯವರಲ್ಲ"

ಎಂದು ಹೇಳಿ ಸಕ್ಕರೆಯಿಂದಾದ ವಿವಿಧ ರೂಪದ, ನಾಮದ ತಿಂಡಿ, ಹೇಗೆ ಸಿಹಿಯಲ್ಲದೆ ಬೇರಲ್ಲವೋ ಹಾಗೆಯೇ ಈ ಶಕ್ತಿ ಕೂಡ ಎಂದು ಹೇಳುತ್ತಾನೆ. 'ಏಕಂ ಸತ್ ವಿಪ್ರಾ ಬಹುಧಾವದಂತಿ' ಎನ್ನುವ ಮಾತಿಗೆ ಈ ಭಾಗ ವ್ಯಾಖ್ಯಾನವಾಗಿದೆ. ನಿನ್ನ ನಿನ್ನ ದೇವರನ್ನು ಪೂಜಿಸು. ಇತರ ದೇವರನ್ನು ಹಳಿಯಬೇಡ ಎನ್ನುತ್ತಾನೆ. ಶಿವನಿಷ್ಠಾ ಭಕ್ತ ಈಶ್ವರನ ಮಾತನ್ನೂ ಲೆಕ್ಕಿಸುವುದಿಲ್ಲ. ಈ ಭಕ್ತನಿಗೆ ಪಾಠಕಲಿಸುವ ಸಲುವಾಗಿ ಆತ ಹರಿಹರ ರೂಪವನ್ನು ತಾಳುತ್ತಾನೆ. ಘಂಟಾಕರ್ಣನಿಗೆ—

ಹರಭಾಗವ ಕಾಣಲು ಸಂತೋಷ ;
ಹರಿಭಾಗವ ಕಂಡತಿ ರೋಷ !
ಸ್ತುತಿಗಿನ್ನೇಂ ಗತಿ ಗತಿ ? ಎಂತಹ ಕ್ಲೇಶ !
ಹೆದರಿಕೆ ಏನ್ ? ಅರೆ ! ಇದೆ ಶ್ಲೇಷ !
ಶ್ಲೇಷ ಸಹಾಯದೊಳೊಂದೇ ಸ್ತೋತ್ರದಿ
ಹರಸ್ತುತಿಗೈದು ಹರಿಯನು ಬೈದು
ಹರಮುಖವಿದ್ದಾ ಪಕ್ಷಕೆ-ನಮಿಸಿ
(ಹರಚಂದ್ರನ ಹರಿದೋಷವ ಕ್ಷಮಿಸಿ)
ಫಲಪುಷ್ಪದಿ ಪೂಜೆಯ ಮಾಡುತಿರೆ,
ಧೂಪದ ಹೊಗೆಯನು ನೋಡಿದನು !

ಅಯ್ಯೋ ಗತಿ ಏನು !
ಏನದು ಏನು ?

ಸಹೃದಯನೂ ಇಲ್ಲಿ ಏನದು ಏನು ? ಎನ್ನುವ ಪ್ರಶ್ನೆಗಳ ಗೊಂದಲದಲ್ಲಿ ಮುಳುಗುತ್ತಾನೆ. ಈ ಕಥನ ಕವನದ ಪರಾಕಾಷ್ಠೆ ಇಲ್ಲಿದೆ. ಘಂಟಾಕರ್ಣನ ವೀರನಿಷ್ಠೆಯನ್ನು ಎತ್ತಿ ಹಿಡಿಯುತ್ತದೆ. ಅಷ್ಟೇ ಅಲ್ಲ ಅವನ ವ್ಯಕ್ತಿತ್ವ ಓದುಗನ ಅನುಕಂಪಕ್ಕೆ ಕೂಡ

ಪಕ್ಕಾಗುತ್ತದೆ. ಘಂಟಾಕರ್ಣ ತಲೆಯನ್ನು ಮೇಲೆತ್ತಿ ನೋಡುತ್ತಾನೆ. ಈತ ಹಾಕಿದ ಧೂಪದ ಹೊಗೆ ಹರಿಯ ಮೂಗಿಗೆ ಹೋಗುತ್ತಿದೆ. ಧೂಪಕ್ಕಿಂತ ಹೆಚ್ಚಾಗಿ ಘಂಟಾ ಕರ್ಣನೇ ಉರಿದೆದ್ದ. ಔಡನ್ನು ಕಚ್ಚಿ 'ಹರಿಯು ಮೂಗನು ಹಿಡಿದನು ಮುಚ್ಚಿ', ಈ ಹುಚ್ಚನ್ನು ನೋಡಿ ಹರಿಹರರಿಬ್ಬರೂ ನಕ್ಕು ಗಗನಕ್ಕೆ ಹೋದರು. ಮಕ್ಕಳು ಶಿವಭಕ್ತನನ್ನು ಪೀಡಿಸಲೆಂದು ಹೋದಲ್ಲಿ ಬಂದಲ್ಲಿ ಹರಿಹರಿ ಎಂದು ಪೀಡಿಸತೊಡಗಿದರು. ಆತ ಅದನ್ನು ಕೇಳಲಾರದೆ ಕಿವಿಗಳೆರಡಕ್ಕೂ ಗಂಟೆಯನ್ನು ಕಟ್ಟಿದನು. ಅಂದಿನಿಂದ ಆತನಿಗೆ ಘಂಟಾಕರ್ಣ ಎನ್ನುವ ಹೊಸ ಹೆಸರಾಯಿತು. ಕುವೆಂಪು ಅವರ ದೇವರ ಬಗೆಗಿನ ಭಾವನೆಯನ್ನು ಕೆಳಗಿನ ಪಂಕ್ತಿಗಳು ವ್ಯಕ್ತಪಡಿಸುತ್ತವೆ.

"......ಅದ್ವಯವಾಗಿಹ ಶಕ್ತಿ
ಒಂದಿದೆ ; ಅದನಾರಾಧಿಸೆ ಭಕ್ತಿ.
ಬ್ರಹ್ಮನು ಹರಿಹರರೆಂಬುವರೆಲ್ಲ......
ಎಲ್ಲ ನದಿಗಳೂ ಕಡಲಿಗೆ ಕೊನೆಗೆ
ಎಲ್ಲ ಹಾದಿಗಳು ಒಂದೇ ಮನೆಗೆ
ಸರ್ವಸ್ತೋತ್ರವೂ ತುದಿಯಿಲಿ ನನಗೆ ;
ಇದನರಿತರೆ ಶಾಂತಿಯು ನಿನಗೆ"

ಭಗವಂತನ ಬಗ್ಗೆ ಕುವೆಂಪು ಅವರ ನಿಲುವು ಇದು. ಅವರನ್ನು ಅರ್ಥಮಾಡಿಕೊಳ್ಳಲಾರದ ಕೆಲವರು ಅವರನ್ನು ನಾಸ್ತಿಕರೆಂದು ಭಾವಿಸಿದುದೂ ಉಂಟು. ಅವರು ಭಕ್ತ ಮತ್ತು ಭಗವಂತನ ಮಧ್ಯೆ ದಲ್ಲಾಳಿಗಳಿರಬಾರದು, ಆ ಹೆಸರಿನಲ್ಲಿ ಶೋಷಣೆ ನಡೆಯಬಾರದು ಎನ್ನುವುದನ್ನು ಪ್ರತಿಪಾದಿಸುತ್ತಾರೆ. ಇದನ್ನೇ ಬಸವಣ್ಣನವರೂ ಕೂಡ 'ತಾನುಂಬ ಊಟವನು, ತನ್ನ ರತಿಕೂಟವನು' ಎನ್ನುವ ಮಾತಿನಲ್ಲಿ ಹೇಳುತ್ತಾರೆ. "ನನ್ನ ಜೀವನ ವೆಲ್ಲ ಕಲ್ಪನೆ ಸ್ಮೃತಿಗಳ ಕೃಪೆಯಿಂದ ಸುಖ ಶಾಂತಿ ಪೂರ್ಣವಾಗಿದೆ. ನಾನು ಮನುಷ್ಯ ನಿರ್ಮಿತ ದೇವಾಲಯಗಳಿಗೆ ಹೋಗಬೇಕಾಗಿಲ್ಲ. ಪ್ರಕೃತಿ ಅಲ್ಲಲ್ಲಿ ಆಗಾಗ ದಾನಮಾಡಿರುವ ಭವ್ಯ ಸುಂದರ ದೃಶ್ಯಗಳು ನನ್ನ ಕಲ್ಪನೆಯಲ್ಲಿ ಸೆರೆಯಾಗಿರುವುದರಿಂದ ನಾನು ಬಯಸಿ ದಾಗ ಅವುಗಳ ದರ್ಶನವಾಗುತ್ತದೆ. ಆದರ್ಶಗಳ ಮುಂದೆ ನರನಿರ್ಮಿತ ದೇವಾಲಯಗಳು ಕ್ಷುದ್ರವಾಗುತ್ತವೆ" (ಮಲೆನಾಡಿನ ಚಿತ್ರಗಳು ೪–೫). ಈ ಹಿನ್ನೆಲೆಯಲ್ಲಿ ನಾವು ಅವರ ವಿಚಾರವಾದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದೆ. ರಾಮಕೃಷ್ಣ ಪರಮಹಂಸ, ವಿವೇಕಾನಂಕ, ಅರವಿಂದ ಘೋಷ್, ರವೀಂದ್ರನಾಥ ಠಾಕೂರರ ಪರಂಪರೆಯಲ್ಲಿ ಬೆಳೆದ ಒಂದು ಚೇತನ ಹೇಗೆ ತಾನೇ ನಾಸ್ತಿಕನಾಗಲು ಸಾಧ್ಯ. ಅವರು ಹಿಂದೂಧರ್ಮವನ್ನು ಹೇಗೋ ಹಾಗೆಯೇ ಜಗತ್ತಿನ ಇತರ ಎಲ್ಲ ಧರ್ಮಗಳನ್ನೂ ಪ್ರೀತಿಸುತ್ತಾರೆ. ಆದುದರಿಂದ ಅವರ ಸ್ತರಕ್ಕೇರಲಾರದವರು ಮಾತನ್ನಾಡಿದಾಗ ಏಳು ಜನ ಕುರುಡರು ಕಂಡ ಆನೆ ಯಂತಾಗುತ್ತದೆ. ಈ ದೃಷ್ಟಿಯಿಂದ ಅವರ ಘಂಟಾಕರ್ಣ ಕಥನಕವನವನ್ನು ಮತ್ತೆ ಮತ್ತೆ ಪರಿಭಾವಿಸಬಹುದಾಗಿದೆ.

ರಕ್ತರಜನಿ ರಾಮಾಯಣದ ಘಟನೆಯೊಂದನ್ನು ಆಧರಿಸಿದೆ. ದಶರಥ ತನ್ನ ಅರಿವಿಲ್ಲದೆ ಋಷಿಕುಮಾರನ ಸಾವಿಗೆ ಕಾರಣನಾಗುತ್ತಾನೆ. ಪ್ರಚಲಿತವಿರುವ ಕತೆಯಂತೆ ಆ ಋಷಿಕುಮಾರನ ತಂದೆಯು ದಶರಥನಿಗೆ ನಿನ್ನ ಅಂತ್ಯಕಾಲದಲ್ಲಿ ನಿನ್ನ ಮಕ್ಕಳು ನಿನ್ನ ಬಳಿಯಲ್ಲಿ ಇಲ್ಲದಿರಲಿ ಎನ್ನುವ ಶಾಪವನ್ನು ಕೊಡುತ್ತಾನೆ. ಕವಿ ಇಲ್ಲಿ ಆ ಶಾಪ ಪ್ರಸಂಗವನ್ನು ಮಾರ್ಪಾಡು ಮಾಡಿಕೊಂಡಿದ್ದಾರೆ. ಕಾಲಗರ್ಭದಲ್ಲಿ ವಿಧಿಯನಿಯತಿ ಹೀಗಿದೆ ಅದನ್ನು ಹೊಕ್ಕ ದೃಷ್ಟಿ ಕಂಡಿದೆ ಅದನ್ನು ಹೇಳುತ್ತೇನೆ ಕೇಳು ಎಂದು ಋಷಿಯು ಹೇಳುವ ಭಾಗ ಹೀಗಿದೆ—

ಏಳು ! ನೃಪತಿಯೆ ಏಳು ! ಶಪಿಸೆನು—
ನಿನ್ನನಾದರೆ ಕಾಲಗರ್ಭವ
ಹೊಕ್ಕದೃಷ್ಟಿಗೆ ತೋರುತಿದೆ : ನೀ
ನಳಿವ ಸಮಯದಿ ನಿನ್ನ ಪುತ್ರರು
ಬಳಿಯೊಳಿರದೆ ವನಾಂತರದಿ ಸಂ
ಚರಿಸುತಿರುವರು ! ಸುತರನಗಲಿದ
ನೀನು ದುಃಖದಿ ಮಡಿವೆ !

ಹೀಗೆ ಹೇಳಿ ಆತ ಕೆಲವು ಸಮಾಧಾನದ ಮಾತುಗಳನ್ನು ಹೇಳಿ ಯೋಗನಿದ್ರೆಯಲ್ಲಿ ಐಕ್ಯವಾಗುತ್ತಾನೆ. ದಶರಥನಂತಹ ಒಬ್ಬ ಚಕ್ರವರ್ತಿ ಆ ಸಮಯದಲ್ಲಿ 'ಮಸಣದ ಗಾಳಿಯಂದದಿ ನಿಂತನೊಬ್ಬನೆ ಪರ್ಣಶಾಲೆಯಲಿ!' ಎನ್ನುವ ಮಾತು ಸಹೃದಯನ ಅನುಕಂಪವನ್ನು ಗಳಿಸಿಕೊಳ್ಳುತ್ತದೆ. ಪ್ರಕೃತಿ ಈ ಎಲ್ಲ ಘಟನೆಗಳ ಮಧ್ಯೆಯೂ ತನ್ನ ಕರ್ತವ್ಯವನ್ನು ಚಾಚೂತಪ್ಪದೆ ನಡೆಸಿಕೊಂಡು ಹೋಗುತ್ತದೆ, ಎಲ್ಲವನ್ನು ಸಹಿಸಿಕೊಳ್ಳುತ್ತದೆ ಎನ್ನುವ ಭಾವ—

ನಿಶೆಯ ಮೌನವು ಹರಡಿಕೆಲ್ಲೆಡೆ
ಅಲ್ಲಿ ಬನದಳಿ ಮಲಗಿ ನಲಿದುದು
ಮಧುರ ಮೋಹನ ಸಾಂದ್ರಸುಂದರ
ವಿಪಿನಚಂದ್ರಿಕೆಯು

ಎನ್ನುವ ಮಾತುಗಳಲ್ಲಿ ವ್ಯಕ್ತವಾಗಿದೆ.

ತಾನಾಜಿ ಮತ್ತು ಪ್ರತಾಪಸಿಂಹ ಐತಿಹಾಸಿಕ ವಸ್ತುಗಳು. ಈ ಕಥನ ಕವನಗಳ ಮೂಲಕ ಕವಿ ಸ್ವಾತಂತ್ರ್ಯಸಂಗ್ರಾಮಕ್ಕೆ ಕನ್ನಡಿಗರನ್ನು ಸಜ್ಜುಗೊಳಿಸಿದ್ದಾರೆ.

ದೇಶ ನನ್ನದು, ನನ್ನದು ನಾಡು
ಎನ್ನದ ಮಾನವನೆದೆ ಸುಡುಗಾಡು !

ಎಂದು ಪ್ರಾರಂಭವಾಗುವ ಪ್ರತಾಪಸಿಂಹ ಮುಂದುವರೆದು ದೇಶದ್ರೋಹಿಗೆ ಸಾಯುವುದಕ್ಕೆ ಸ್ಥಳವೆಲ್ಲಿ, ಸತ್ತರೂ ಅವನಿಗೆ ಸುಡುಗಾಡೆಲ್ಲಿ? ಸೂಡುಮಾಡಲು ಕಟ್ಟಿಗೆಯೆಲ್ಲಿ

ಎನ್ನುವ ಪ್ರಶ್ನೆಗಳೊಡನೆ ಮುಂದುವರಿಯುತ್ತದೆ. ದೇಶದ್ರೋಹಿಗೆ ಇಹವಿಲ್ಲ, ಪರವಿಲ್ಲ. ಆತ ಬದುಕಿದರೆ ಕೇಳುವವರಿಲ್ಲ. ಸತ್ತರೆ ಅಳುವವರಿಲ್ಲ. ಆತನ ಹೆಣವನ್ನು ಬೆಂಕಿ ಮುಟ್ಟದು ನಾಯಿ ನರಿಯೂ ತಿನ್ನದು ಎಂದು ಹೇಳುತ್ತ ಮುಂದುವರಿದು

ಹೆತ್ತತಾಯಿಯು ಸಗ್ಗಕ್ಕಿಮ್ಮಡಿ,
ಹೊತ್ತ ಭೂಮಿಯು ಮುಕ್ತಿಗೆ ಮುಮ್ಮಡಿ,
ದೇಶಭಕ್ತಿಯು ನಾಲ್ಮಡಿ !—ಸಾಯಲ್ಕೈಮಡಿ !

ಎಂದು ನಿಲ್ಲುತ್ತದೆ. ಪ್ರತಾಪಸಿಂಹನ ಕತೆ ಕವಿಗೆ ಸ್ವಾತಂತ್ರ್ಯದ ಅಭಿಮಾನವನ್ನು ತಾಳಲು ಇತರರನ್ನು ಬಡಿದೆಬ್ಬಿಸಲು ಒಂದು ಮಾಧ್ಯಮ ದಾರಿದೀಪ ಎನ್ನುವ ಮಾತು—

ಪ್ರತಾಪಸಿಂಹನ ಕತೆಯನು ಕೇಳಿ,
ದೇಶದಮೇಲಭಿಮಾನವ ತಾಳಿ ;
ಪರದೇಶಿಯರಾಟೋಪವ ಸೀಳಿ,
ಸ್ವತಂತ್ರಯಜ್ಞಕೆ ಬಾಳನು ಬೇಳಿ !
ಭಾರತವೀರರಿಗುಚಿತದಿ ಬಾಳಿ !

ಎನ್ನುವ ಸಂದೇಶವಾಕ್ಯಗಳಲ್ಲಿ ಮುಗಿಯುತ್ತದೆ. ಸ್ವಾತಂತ್ರ್ಯಸಂಗ್ರಾಮ 'ಮಾಡು ಇಲ್ಲವೆ ಮಡಿ" ಎನ್ನುವ ಘೋಷಣೆಯನ್ನು ನೀಡುತ್ತದೆ. ಅದರ ಕವಿಕಾಣ್ಕೆ ತಾನಾಜಿ ಕವನದ ಈ ಭಾಗಗಳಲ್ಲಿ ವ್ಯಕ್ತವಾಗಿದೆ.

ಎಲ್ಲಿಗೆ ಓಡುವಿರಿಲ್ಲೇ ನಿಲ್ಲಿ !
ವೀರಸ್ವರ್ಗವು ನಮಗಿಂದಿಲ್ಲಿ !
....
ಕಾದಿ ಉಳಿಯಿರಿ ! ಇಲ್ಲವೆ ಅಳಿಯಿರಿ !
ಕೀರ್ತಿಯು ಬರಲೇಕಪಕೀರ್ತಿ !

ಎನ್ನುವ ವೀರಘೋಷವನ್ನು ತಾನಾಜಿ ಮತ್ತು ಪ್ರತಾಪಸಿಂಹ ಕಥನಕವನಗಳ ಮೂಲಕ ನೀಡಿದ್ದಾರೆ. ತಾನಾಜಿ ಮತ್ತು ಪ್ರತಾಪಸಿಂಹ ಕಥನಕವನಗಳನ್ನು ಓದಿದ: ಓದುಗಳಿಗೆ ಮೈಜುಮ್ಮೆನ್ನುತ್ತದೆ—

ಎಲ್ಲಿ ಮೈನವಿರೇಳುವುದಲ್ಲಿ,
ಎಲ್ಲಿ ಖಡ್ಗದ ಖಣೆ ಖಣಲಲ್ಲಿ,
ಎಲ್ಲಿ ವೀರರ ಮುಂಡಗಳಲ್ಲಿ,
ಎಲ್ಲಿ ರಕ್ತದ ರಣಧುನಿಯಲ್ಲಿ—ಅಲ್ಲಿ ತಾನಾಜಿ !
ಎಲ್ಲರ ಮುಂದೆಯು ತಾನಾಜಿ !

ಕದನದಲೆಲ್ಲಿಯೂ ತಾನಾಜಿ !
ವೀರಪುಂಗವ ತಾನಾಜಿ :—ಕಲ್ಕಿ ತಾನಾಜಿ !

ತಾನಾಜಿಯು ಉದಯನನ್ನು ಎದುರಿಸುತ್ತಾನೆ. ಈ ಉದಯಭಾನುವಾದರೋ—

"ಚಂಡವಿಕ್ರಮ, ಗಂಡು ಪರಾಕ್ರಮಿ,
ಬಂದನು ಮುಂದೆ ಉದಯಭಾನು !"

ಇವರಿಬ್ಬರ ಕಾದಾಟ

"ಮಿಂಚು ಮಿಂಚನ್ನು ಸೆಣಸುವ ತೆರದಿ
ಸಿಡಿಲು ಸಿಡಿಲನ್ನು ಸೆಣಸುವ ತೆರದಿ,
ಆನೆಯಾನೆಯು ಕೆಣಕುವ ತೆರದಿ,
ಸಿಂಹಸಿಂಹನ ಕೆಣಕುವ ತೆರದಿ"—

ನಡೆಯುತ್ತದೆ. ಇಬ್ಬರೂ ಒಬ್ಬರನ್ನೊಬ್ಬರು ಕೊಲ್ಲುತ್ತಾರೆ. ಮಾವಳಿಯಾಳುಗಳಿಗೆ ಆ ಸಂದರ್ಭದಲ್ಲಿ 'ಹರ ಹರ ಮಹಾದೇವ್' ಘೋಷಣೆ ಸ್ಫೂರ್ತಿಯ ಸೆಲೆಯಾಗಿ ನಿಲ್ಲುತ್ತದೆ. ರಜಪೂತರ ಬಲ ಕ್ಷೀಣಿಸುತ್ತದೆ. ಈಗ ಸೂರ್ಯಾಜಿಯು ವಿಜಯಸೂಚಕವಾಗಿ ಗುಡಿಗಳ ಸುಡಿ; ಎಂದು ಹೇಳುತ್ತಾನೆ. ರಾಯಗಡದಿಂದ ಈ ಸೂಚನೆಗಾಗಿ ಕಾದುನೋಡುತ್ತಿದ್ದ ಶಿವಾಜಿ ಹಿಗ್ಗುತ್ತಾನೆ. ಬೆಳಗಾಗುವಷ್ಟರಲ್ಲಿ ದಳಪತಿಯಳಿದವಾರ್ತೆ ಬರುತ್ತದೆ. ಆ ವಾರ್ತೆಯನ್ನು ಕೇಳಿ—

ಕಣ್ಣೀರ್ಗರೆಯುದ ಶಿವರಾಯನು ತಾ
ಕಂಬನಿಗರೆದನು ಇಂತೆಂದು :
"ಸಿಂಹದುರ್ಗವು ಕೈಸೇರ್ದುದು ; ಹಾ
ಮಾಯವಾದುದು ಸಿಂಹವು !—ನನ್ನ ಸಿಂಹವು !"

ಎಂದು ಕಂಬನಿಗರೆಯುತ್ತಾನೆ. ಇದು ಕವಿಯ, ಸಹೃದಯನ ಉದ್ಗಾರವಾಗಿಯೂ ನಿಲ್ಲುತ್ತದೆ. ಈ ತಾನಾಜಿ ಕವನ ರಚಿತವಾದ ಸಂದರ್ಭವನ್ನು ಕುರಿತು ಕುವೆಂಪು ಅವರು "ಒಬ್ಬ ವೀರನನ್ನು ಹೆತ್ತ ವೀರನಂತೆ ನನ್ನೆದೆಯು ಹಿಗ್ಗಿದುದು. ಬರೆದು ಪೂರೈಸಿದ ಮೇಲೆ ಬಹಳ ಆಯಾಸವಾದಂತಿತ್ತು. ನಾನೇ ರಾಯಗಡದಿಂದ ತಾನಾಜಿಯ ಜೊತೆಯಲ್ಲಿ ಹೊರಟು ಸಿಂಹಗಡವನ್ನು ಹತ್ತಿ ಯುದ್ಧ ಮಾಡಿ, ಮರಳಿಬೆಳಗ್ಗೆ ತಾನಾಜಿಯು ಸತ್ತ ವರ್ತಮಾನವನ್ನು ಶಿವಾಜಿಗೆ ಹೇಳಿದವನಷ್ಟು ಬಳಲಿಕೆಯಾಗಿತ್ತು" ಎಂದಿದ್ದಾರೆ. ಆ ಬಳಲಿಕೆಗೆ ೨೨–೮–೧೯೩೦ ರಂದು ಮಹಾರಾಜರವರ ಕಾಲೇಜಿನ ಯೂನಿಯನ್ ಸಭೆಯಲ್ಲಿ ತಾನಾಜಿಯನ್ನು ಹಾಡಿದಾಗ ವೆಂಕಣ್ಣಯ್ಯನವರ ಹಿಗ್ಗಿಗೆ ಪಾರವಿರಲಿಲ್ಲ" ಎನ್ನುವ ಅವರ ವರದಿ ಉತ್ತಮ ಸಾಂತ್ವನವಾಗಿದೆ.

"....ಪ್ರತಾಪನ ಯಾವ ಗುಣವನ್ನು ನಾವು ಮೆಚ್ಚೋಣ? ಯಾವ ಗುಣ ಹೆಚ್ಚು ಅಭಿನಂದದೀಯವಾದದ್ದು? ಇಂಥ ಒಂದು ಸಮಸ್ಯೆಯ ಹಿನ್ನೆಲೆಯಲ್ಲಿ ಈ ಕವನ ಆರಂಭವಾಗಿ ಅಪೂರ್ಣವಾಗಿ ನಿಂತಿದೆ" ಎನ್ನುವ ಟಿಪ್ಪಣಿಯೊಂದಿಗೆ ಈ ಕವನ ಆರಂಭವಾಗಿದೆ. ಏಳು ದಿನಗಳ ಕಾಲ ಮೊಗಲರೊಡನೆ ಹೋರಾಡಿದ ರಜಪೂತಸೇನೆ ಬಲಗುಂದಿತು. ಉದಯಸಿಂಹ ಚಿತ್ತೂರು ನಗರವನ್ನು ಬಿಟ್ಟು ಕಮಲಮೇರುವಿಗೆ ಓಡಿದನು. ಆತನ ಮಗ ವೀರಪ್ರತಾಪನು ತಂದೆಯ ಹಾಗೆ ಓಡಿಹೋಗಲಿಲ್ಲ. ಆ ಕಡೆ ಸಾಮ್ರಾಟ ಅಕ್ಬರ, ಈ ಕಡೆ ರಾಣಾಪ್ರತಾಪ. ಚಿತ್ತೂರಿನ ನೆಲದಲ್ಲಿ ರಕ್ತದಕೋಡಿ ಹರಿಯಿತು. ಜಯಮಲ್ಲ ರಣರಂಗದಲ್ಲಿ ಮೋಸದಿಂದ ಸತ್ತನು. ರಾಣಾಪ್ರತಾಪನನ್ನು ಉಳಿಸಬಯಸಿದ ಆತನ ಹಿತೈಷಿಗಳು ಕಮಲಮೇರುವನ್ನು ಶತ್ರುಗಳು ಹಿಡಿದರು ಎನ್ನುವ ಸುದ್ದಿಯನ್ನು ಹಬ್ಬಿಸಿದರು. ತಂದೆಯನ್ನು ರಕ್ಷಿಸುವ ಸಲುವಾಗಿ ಪ್ರತಾಪಸಿಂಹ ಅಳಿದುಳಿದಿದ್ದ ಸೈನ್ಯವನ್ನು ತೆಗೆದುಕೊಂಡು ಕಮಲಮೇರುವಿಗೆ ಹೋದನು. ಇತ್ತ ಚಿತ್ತೂರು ಶತ್ರುವಶವಾಯಿತು. ಅರಾವಳಿ ಬೆಟ್ಟದ ಮೇಲೆ ನಡೆದ ವೀರಘಟನೆಗಳ ಸರಮಾಲೆಯನ್ನು ರುದ್ರಪುರಾಣವನ್ನು, ರಕ್ತಪುರಾಣವನ್ನು ಈ ಕವನದಲ್ಲಿ ಕಂಡರಿಸಿದ್ದಾರೆ.

ಜಯಸಿಂಹನ ಕೊನೆಗಾಲ ಟೆನ್ನಿಸನ್ ಕವಿಯ 'Morte D'Arthur' ಕವನವನ್ನು ಆಧರಿಸಿ ಬರೆದದ್ದು. ಈ ಕವನ ಭೀಕರರಣರಂಗದ ವರ್ಣನೆಯಿಂದ ಆರಂಭವಾಗಿದೆ. ಅಲ್ಲಿ ಗತಾಸುವಾಗಿದ್ದ ಜಯಸಿಂಹನನ್ನು ವೀರನೊಬ್ಬ ಪಾಳುಗುಡಿಯಲ್ಲಿ ತಂದು ಮಲಗಿಸುತ್ತಾನೆ. ಆದೆಂದರೆ ತನ್ನ 'ಮಾಕಾಳಿ' ಕತ್ತಿಯನ್ನು ಸಮೀಪದ ಸರೋವರಕ್ಕೆ ಎಸೆದು ಬಂದು ಅಲ್ಲಿ ನಡೆದುದನ್ನು ಹೇಳು ಎನ್ನುತ್ತಾನೆ. ಆ ಕೆಲಸಕ್ಕೆ ಒಪ್ಪಿ ಹೊರಟ ರಣವೀರ ಆ ಕತ್ತಿಯನ್ನು ಒರೆಯಿಂದ ಕಳಚಿ ನೋಡುತ್ತಾನೆ—

"...........ಕೂಡೆ
ಮುಗಿಲಿನಂಚನು ಕಳೆದು ತಣ್ಗದಿರನುಕ್ಕತಿಹ ಕಾಂತಿಯಲಿ ಮೂಡೆ
ವಜ್ರವೈಡೂರ್ಯಾದಿ ಮುತ್ತುಗಳ ಕೆತ್ತನೆಯ ಖಂಡೆಯದ ಪೆಂಪು—
ಮಿರುಗಿ ಮಿಂಚಿತು; ತೊಳಗಿ ರಂಜಿಸಿತು, ಕಂಡುಬರೆ ಮಳೆಬಿಲ್ಲಿನಿಂಪು!

ಅಂತಹ ಸೊಗಸಾದ ಕತ್ತಿಯನ್ನು ಬಿಸುಡಲಾಗದೆ ಕೊಳದ ತಡಿಯ ಜೊಂಡನ್ನು ಬಗೆದು ಅಡಗಿಸುತ್ತಾನೆ. ಜಯಸಿಂಹನಲ್ಲಿಗೆ ಬಂದಾಗ ಆತ ಅಲ್ಲೇನು ನಡೆಯಿತು ಎನ್ನುತ್ತಾನೆ. ಆತ ಸತ್ಯವನ್ನು ಮರೆಸಿ—

"ತೆರೆಗಳಾಡುತ ಬಂದು ಜೊಂಡಿಗೆ ತಾಗಿ ಪೊರೆವುದ ಕೇಳಿದೆ!
ಮರುಗಿ ನೊರೆ ನೊರೆಯಾಗಿ ಬಂಡೆಯ ಬದಿವ ನೀರನು ನೋಡಿದೆ!"

ಎನ್ನುತ್ತಾನೆ. ದೊರೆ ರೇಗಿ ಮತ್ತೊಮ್ಮೆ ಕಳಿಸುತ್ತಾನೆ. ಆಗ ರಣವೀರ—

"ಬಿಸುಡಲೀ ಕೈದುವನು ನಷ್ಟವು ಧರೆಗೆ ದಿಟವದು! ಧಾರಿಣಿಯೊಳಂ
ದತುಲವಸ್ತುವನೆಸೆದ ಪಾತಕಿಯಾಗುವೆನು ನಾನು

ಬಿಸುಡದೆಯೆ ನಾನಿಂದು ಪ್ರೊರೆದರೆ ಮುಂದೆ ಕಾಲಾಂತರದೊಳಸಿಂಚ
ಭೂವರನ ಜಯಸಿಂಹನಸಿಯಿಂದೊಲಿದು ಹಿಗ್ಗುವರು......"

ಎನ್ನುವ ಭಾವನೆಯಿಂದ ಎಸೆಯಲಾರದೆ ದೊರೆಯ ಬಳಿಗೆ ಬಂದು ಮತ್ತೊಮ್ಮೆ ಸುಳ್ಳು ಹೇಳುತ್ತಾನೆ. ಆಗ ದೊರೆ—

"......ತೆರಳು !
ಕೂರಸಿಯನೆಸೆಯದಲೆ ನೀ ಬಂದರೀಯೆಡೆಗೆ
ಕಡಿದು ಕೆಡಹುವೆ ಸಲಹಿದೀ ಕೈಯಲಿ !"

ಎನ್ನುತ್ತಾನೆ. ರಣವೀರ ಕೊಳಕ್ಕೆ ಕತ್ತಿಯನ್ನು ಎಸೆದಾಗ ಅಲ್ಲಿಂದ ಕೈಯೊಂದು ಮೂಡಿ ಬಂದು ಅಂತು ಮೂರು ಸಲ ಗಿರಗಿರನೆ ತಿರುಗಿಸಿ ಕೊಳದಲ್ಲಿ ಅಡಗುತ್ತದೆ. ಆ ಸುದ್ದಿಯನ್ನು ಜಯಸಿಂಹ ಕೇಳಿ ನನ್ನನ್ನು ಕೊಳದ ತಡಿಗೆ ಕರೆದುಕೊಂಡು ಹೋಗು ಎನ್ನುತ್ತಾನೆ. ಅಲ್ಲಿ ತೇಲಿ ಬಂದ ನೌಕೆಯಲ್ಲಿದ್ದ ಸುಂದರಿಯ ತೊಡೆಯ ಮೇಲೆ ಒರಗುತ್ತಾನೆ. ನನಗಾಗಿ ನೀನು ಪ್ರಾರ್ಥನೆಯನ್ನು ಮಾಡು. ನಾನು ಹೋಗಿ ಬರುತ್ತೇನೆ. ನಿಲ್ಲು ರಣವೀರ ಎಂದು ಹೇಳುತ್ತಾನೆ. ನೌಕೆ ಮರೆಯಾಗುತ್ತದೆ. ಜಯಸಿಂಹ ಮತ್ತು ರಣವೀರನ ಪಾತ್ರಗಳು ಒಂದಕ್ಕೊಂದು ಹೊಯ್‌ಕಯ್ಯಾಗಿ ನಿಲ್ಲುತ್ತವೆ. ಜಯಸಿಂಹ ಹೇಳುವ—

"ಮುಳುಗುವುದು ಹಳೆಯುಗವು; ಮೂಡುವುದು ಹೊಸಯುಗವು,
ಧರ್ಮಸಂಸ್ಥಾಪನೆಯ ಕಟ್ಟಳೆಯದಿಂತು !
ಜಗದೊಡೆಯನಾವಾವ ರೀತಿಯಲಿ ಧರ್ಮವನು
ನೆಲೆಗೊಳಿಪನೆಂಬುದಕೆ ಮಿತಿಯೆಂಬುದಿಲ್ಲ !

ಎನ್ನುವ ಮಾತು ಭಾರತೀಯಸಂಸ್ಕೃತಿಯ ಸಾರಸರ್ವಸ್ವವಾಗಿದೆ. ಭಗವದ್ಗೀತೆಯ "ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎನ್ನುವ ಮಾತಿನಲ್ಲಿ ಮೇಲ್ಕಂಡ ವಾಕ್ಯಗಳ ಮೂಲವನ್ನು ಗುರುತಿಸಬಹುದು. "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ"—ಎನ್ನುವ ಮಾತು "ನಿಷ್ಕಾಮ ಬುದ್ಧಿಯಲಿ ಕರ್ಮಗಳ ನೆಸಗಿಹೆನು; ಭಕ್ತಿಯಲಿ ಜಗದೊಡೆಯಗರ್ಪಿಸಿಹೆನೆಲ್ಲ!" ಎನ್ನುವ ಭಾವದಲ್ಲಿ ಮರುದನಿಯಾಗಿದೆ. ಅದೇ ರೀತಿ ಜಯಸಿಂಹನ ಬಾಯಿಯಲ್ಲಿ ಬರುವ ಪ್ರಾರ್ಥನೆಯ ಬಗೆಗಿನ ಮಾತುಗಳು ಕುವೆಂಪು ಅವರ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಓದುಗರಿಗೆ ಸಾರ್ಥಕ ಜೀವನದ ದಾರಿದೀಪವಾಗಿದೆ. "ಪ್ರಾರ್ಥನೆಯು ಸಾಧಿಸದ ಕಾರ್ಯವೊಂದಿಲ್ಲ!" ಎನ್ನುವ ಮಾತಿಗೆ ಗಾಂಧೀಜಿ ಮತ್ತು ವಿನೋಬಾಜಿಯವರ ಆಶ್ರಮಗಳ ಪ್ರಾರ್ಥನೆ ಒಂದು ಒಳ್ಳೆಯ ನಿದರ್ಶನ.

'ಕುಮುದಿನಿ' ಪತಿಯ ವಿರಹದಿಂದ ಬೆಂದು ಬಳಲುವ, ತನ್ನ ಇನಿಯನ ನಿರೀಕ್ಷೆಯಲ್ಲಿರುವ ಹೆಣ್ಣಿನ ಚಿತ್ರಣವಾಗಿದೆ. ಆಕೆಯ ನಲ್ಲ ಎರಡು ವರುಷಗಳ ಹಿಂದೆ ಯುದ್ಧಕ್ಕೆ ಹೋದವನು, ಇನ್ನೂ ಬಂದಿಲ್ಲ. ಆತ ಏನಾದ—

ಇನಿಯನಿಹನೋ ? ಕದನದಲಿ ಮಡಿ
ದಿಹನೊ ? ಕೈದುಗಳಾಟದಲಿ ನೊಂ
ದಿಹನೊ ? ಅರಿಗಳ ಸೆರೆಮನೆಯಲುರು
ಳುವನೊ ? ದೇಸಿಗನಂತೆ ಚರಿಪನೊ ?
ಎಂದು ಹಂಬಲದಿ ಬೆಂದಳು
ಸಂದೆಯದಿ ನೊಂದು !

ಬೆಳಗುವ ಚಂದ್ರ, ಮಿರುಗುವ ತಾರೆಗಳು, ಚಿತ್ತರದ ಗಗನ ಎಲ್ಲವನ್ನೂ ಇನಿಯನ ಇರವನ್ನು ತಿಳಿಸುವಂತೆ ಕೇಳಿದಳು. ತಂಬೆಲರನ್ನು, ಗಾಳಿಬಟ್ಟೆಯಲ್ಲಿ ಅಲೆಯುವ ದಿವಿಜರನ್ನು ಪ್ರಾರ್ಥಿಸಿದಳು. ಇವಳ ಪ್ರಾರ್ಥನೆಯನ್ನು ಕೇಳಿದ ವಿಷ್ಣು ತನ್ನ ದೂತರನ್ನು ಸ್ವರ್ಗಕ್ಕೆ ಕಳಿಸಿ, ಅವಳ ಇನಿಯನನ್ನು ಭೂಮಿಗೆ ಕಳಿಸುವಂತೆ ತಿಳಿಸಿದನು. ಅಲ್ಲಿಯ ದೊರೆ ಭೂಮಿಗೆ ದೇವದೂತನೊಡನೆ ಹೋಗಿ ಮೂರುಗಳಿಗೆಯ ಕಾಲ ಸತಿಯೊಡನೆ ಇದ್ದು ಬರುವಂತೆ ತಿಳಿಸಿದನು. ಕಾಮಿನಿಯ ಕಾಮಕ್ಕೆ ಸಿಕ್ಕಬೇಡ, ಸುರರ ಧರ್ಮವ ಮೀರಿ ನಡೆಯಬೇಡ ಹೋಗಿ ಬಾ ಬೇಗ ಎಂದನು.

ಅದರಂತೆ ದೇವದೂತ ಮತ್ತು ಇನಿಯರು ಬಂದಾಗ ಅವಳು ವಿರಹದಗ್ನಿಯನ್ನು ಆರಿಸಲು ಆತನನ್ನು ಕೇಳಿದಳು. ಮುದ್ದು ಮಾತಿನಿಂದ ಸಂತೈಸು ಇನಿಯ ಎಂದಳು. ದಿನವು ಮಲಗುವ ಶಯನಕ್ಕೆ ಆಹ್ವಾನಿಸಿದಳು. ಆಗ ಆತನು ತಾನು ಯುದ್ಧದಲ್ಲಿ ಸತ್ತು ವೀರನಾಕವನ್ನು ಪಡೆದುದನ್ನು ತಿಳಿಸಿದನು. ಕಾಯಸುಖಗಳನ್ನು ಬಯಸಬೇಡ—

"......ದೇವನೋಡುವನೊಲವಿನಂಬುಧಿ
ಯಾಳವನು ; ಆರ್ಭಟವೆನೆಣಿಸನು.
ಉಕ್ಕುತಿಹ ಕಾಮವನು ಭಕ್ತಿಯ
ಕಣ್ಣೆಯಲಿ ಬಿಗಿ, ಕಟ್ಟು ; ಮಂಗಳ
ವಾಗುವುದು ನಿನಗೆ !"

ಎಂದು ಸಂತೈಸಿದನು. ಹಾಗೂ ಆಕೆ ಆತನನ್ನು ಸೇರಲು ಬಯಸಿದಳು. ಆಗ ಆಕೆಯ ಇನಿಯನು ಶಾಂತಳಾಗು, ನನ್ನನ್ನು ಮುಟ್ಟಿದರೆ ಸೀದು ಹೋಗುತ್ತೀಯೆ, ಆತ್ಮಹತ್ಯೆಯ ದೋಷ ನನಗೆ ತಟ್ಟುತ್ತದೆ. ಜೀವಮಾನವನ್ನು ಕಳೆ. ಕರ್ಮವನ್ನು ಸವೆ. ಸಾವಿನಲ್ಲಿ ನನ್ನನ್ನು ಸೇರು ಎಂದನು.

ಇನಿಯ ಮತ್ತು ದೇವದೂತರು ಮಾಯವಾದರು—

ತಿಂಗಳಿನ ಬೆಳಕಿನಲಿ ತರಳೆಯ
ಕಾಯವೊರಗಿತು ಗುಡಿಯ ಜಗಲಿಯ
ಮೇಲೆ. ಜೀವವು ಪತಿಯ ಹಿಂಬಾ
ಲಿಸಿತು, ಕೂಡಿತು ಮರಣವಿಲ್ಲದ,

ನಿಚ್ಚಸೊಗದಾವಾಸವಾಗಿಹ,
ಮುಪ್ಪನರಿಯದ, ಯೌವನದ ನೆಲೆ—
ವೀಡದಾಗಿಹ, ವಿರಹವಿಲ್ಲದ
ಪರಮಧಾಮದಲಿ !

ಇಲ್ಲಿನ ಕುಮುದಿನ ಮಹಾಶ್ವೇತೆಯನ್ನು ನೆನಪಿಗೆ ತರುತ್ತಾಳೆ. ಪತಿವಿರಹ ಇಬ್ಬರಲ್ಲಿಯೂ ಸಾಮಾನ್ಯವಾಗಿದೆ. ಅದಕ್ಕಾಗಿ ಮಹಾಶ್ವೇತೆ ತಪಸ್ಸನಾಡುತ್ತಾಳೆ. ಇಲ್ಲಿ ಕುಮುದಿನಿ ಕೊರಗುತ್ತಾಳೆ. ಸಚರಾಚರಗಳಲ್ಲಿ ಮೊರೆಯಿಡುತ್ತಾಳೆ. ಆಕೆಯ ಪರಿಸ್ಥಿತಿಯಾದರೋ ಪತಿ ಎದುರಿಗೆ ಬಂದರೂ ಆತನನ್ನು ಮುಟ್ಟುವಂತಿಲ್ಲ. ಕೂಡುವಂತಿಲ್ಲ. ಇಲ್ಲಿ ದೈಹಿಕ ಕಾಮ ದೈವಿಕ ಪ್ರೇಮವಾಗಿದೆ. ಆಕೆ ವಿರಹವಿಲ್ಲದ ಪರಮಧಾಮದಲ್ಲಿ ನಲ್ಲನನ್ನು ಕೂಡುತ್ತಾಳೆ. ಮರ್ತ್ಯದ ಪ್ರೇಮ ದಿವದಲ್ಲಿ ತನ್ನ ಸಾರ್ಥಕ್ಯವನ್ನು ಕಂಡು ಕೊಂಡಿದೆ.

ಒಟ್ಟನಲ್ಲಿ ಹೇಳುವುದಾದರೆ ಕುವೆಂಪು ಅವರ ಕಥನಕವನಗಳಲ್ಲಿ ಗ್ರಾಮೀಣ ಜೀವನದ ಚಿತ್ರಣವಿದೆ. ನಾಟಕೀಯಗುಣ, ವರ್ಣನೆಗಳಂತೂ ಅದ್ಭುತವಾಗಿವೆ. ಕತೆಗಳು ಈ ಎಲ್ಲವನ್ನೂ ಅರಗಿಸಿಕೊಂಡು ಓದುಗನ ಕುತೂಹಲವನ್ನು, ಆಸಕ್ತಿಯನ್ನು ಉಳಿಸಿಕೊಳ್ಳುತ್ತವೆ. ವಸ್ತು, ಭಾಷೆ, ಕಾವ್ಯಗುಣ, ಛಂದಸ್ಸು ಮುಂತಾದ ಹಲವು ಹನ್ನೊಂದು ದೃಷ್ಟಿಕೋನಗಳಿಂದ ಅಭ್ಯಾಸ ಮಾಡಿದಂತೆಲ್ಲ ಈ ಕಥನಕವನಗಳ ರಂಗು ರಂಗಿನ ಪ್ರಪಂಚ ಅನಾವರಣವಾಗುತ್ತ ಹೋಗುತ್ತದೆ. ಈ ಸಂಕಲನದ ಸಾಮಾಜಿಕ ಐತಿಹಾಸಿಕ, ಪೌರಾಣಿಕ ಯಾವುದೇ ಬಗೆಯ ಕಥನಕವನವೂ ಕುವೆಂಪು ಅವರ ಶ್ರೀಸಾಮಾನ್ಯನೆ ಭಗವನ್ ಮಾನ್ಯಂ, ಸರ್ವರಿಗು ಸಮಬಾಳು, ಸರ್ವರಿಗು ಸಮಪಾಲು ಎನ್ನುವ ಸರ್ವೋದಯನಿಷ್ಠೆಯನ್ನು ಪ್ರತಿಪಾದಿಸುತ್ತದೆ. ಹಾಗಾಗಿ ಇವರ ಕಥನಕವನ ಗಳು ಎಲ್ಲ ಕಾಲಕ್ಕೂ ಉಳಿಯುತ್ತವೆ.

ದೇಶಭಕ್ತಿ ಮೋಕ್ಷ ಮಾರ್ಗಗಳಲ್ಲಿ ಒಂದು ಮೆಟ್ಟಲು.

ಗಾಂಧೀಜಿ

ಕುವೆಂಪು ಕಥೆಗಳು : ಒಂದು ವಿವೇಚನೆ

ಡಾ. ತಿಪ್ಪೇಸ್ವಾಮಿ

ತಮ್ಮ ಅಸಾಧಾರಣ ಸೃಜನಾತ್ಮಕ ಪ್ರತಿಭೆಯಿಂದ ಈ ಶತಮಾನದ ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿ, ಆ ಪ್ರಕಾರಗಳನ್ನು ಸಮೃದ್ಧಗೊಳಿಸಿದ ಮಹಾಕವಿ ಕುವೆಂಪು ಕನ್ನಡದ ಹಿಮಗಿರಿ. ಕನ್ನಡದಲ್ಲಿ ಹೇಗೆ ಕುವೆಂಪು ಅವರೋ ಹಾಗೆ ಭಾರತದ ಇತರೆ ಭಾಷೆಗಳಲ್ಲಿ ಮಹಾಕವಿಗಳಿರಬಹುದು, ಕಾದಂಬರಿಕಾರರಿರಬಹುದು, ಕತೆಗಾರರಿರಬಹುದು, ಆದರೆ ಸಾಹಿತ್ಯ ದಲ್ಲೆಷ್ಟು ಪ್ರಕಾರಗಳುಂಟೋ ಅಷ್ಟೆಲ್ಲ ಪ್ರಕಾರಗಳಲ್ಲಿ ಉಲ್ಲೇಖನೀಯ ವಾದ ಕೃಷಿಮಾಡಿ, ಬರೆದು ಐವತ್ತು ವರ್ಷಗಳ ನಂತರವೂ ಲೋಕಮಾನಸದಿಂದ ಮರೆಯಾಗದ, ಮಾಸಲಾಗದ ಛಾಪು ಮೂಡಿಸಿರುವಂಥ ಸೃಜನಾತ್ಮಕ ಪ್ರತಿಭೆಯನ್ನು ಮೆರೆದಿರುವ ಲೇಖಕರು ಇಡೀ ಭಾರತೀಯ ಸಾಹಿತ್ಯದಲ್ಲಿ ಕುವೆಂಪು ಒಬ್ಬರೇ. ಹಾಗೂ ಅವರಿಗೆ ಸರಿದೊರೆಯಾಗಿ ನಿಲ್ಲುವ ಲೇಖಕ ಇನ್ನೊಬ್ಬನಿಲ್ಲ ಎಂದರೆ ವಸ್ತುಸ್ಥಿತಿಯಾದೀತೆ ಹೊರತಾಗಿ ಅತಿಶಯೋಕ್ತಿಯಾಗು ವುದಿಲ್ಲ. ಈ ದೃಷ್ಟಿಯಿಂದ ಕುವೆಂಪು ಕನ್ನಡದ ಅತ್ಯಮೂಲ್ಯ ಆಸ್ತಿ. ಕನ್ನಡ ಸಾಹಿತ್ಯವನ್ನು ಭಾರತೀಯ ಸಾಹಿತ್ಯಕ್ಕಷ್ಟೆ ಅಲ್ಲ. ವಿಶ್ವಸಾಹಿತ್ಯದ ಮಟ್ಟಕ್ಕೂ ಕೊಂಡೊಯ್ದ ಮಹಾನ್ ಲೇಖಕ. ಮಹಾಕವಿ ಕುವೆಂಪು ಅವರು ಸಣ್ಣ ಕತೆಗಳನ್ನು ಬರೆದದ್ದು ತುಂಬಾ ಕಡಿಮೆ; ಅವರ ಪ್ರತಿಭೆಯ ಅವಜ್ಞೆಗೆ ಒಳಗಾದ ಪ್ರಕಾರ ಇದು. ಕುವೆಂಪು ಅವರ ದೃಷ್ಟಿ ಮಹತ್ತಿನತ್ತ ಹಾಗೂ ಬೃಹತ್ತಿನತ್ತಲೇ ಮೊದಲಿನಿಂದಲೂ ಕೇಂದ್ರವಾಗಿತ್ತು ಎಂದು ಹೇಳಿಕೊಂಡರೂ ಅವರು ವಿಪುಲವಾದ ಭಾವಗೀತೆಗಳನ್ನು, ಖಂಡ ಕಾವ್ಯಗಳನ್ನು ಬರೆದಿದ್ದಾರೆ. ಹಾಗಾದರೆ ಇವು 'ಶ್ರೀ ರಾಮಾಯಣದರ್ಶನಂ'ಗೆ ನಡೆಸಿದ ಪೂರ್ವಸಿದ್ಧತೆಯೆ? ಅಂತೆಯೇ ಬೃಹತ್ ಕಾದಂಬರಿ ಗಳನ್ನು ಬರೆದಿರುವ ಕುವೆಂಪು ಅವರು ಅವಕ್ಕೆ ಪೂರ್ವ ಸಿದ್ಧತೆ ಯಾಗಿ ಕತೆಗಳನ್ನು ಬರೆಯಬಹುದಿತ್ತು. ಆದರೆ ಈ ಕಥಾ

ಸೃಷ್ಟಿಯತ್ತ ಕುವೆಂಪು ಅವರ ಗಮನ ಹರಿಯದಿರುವುದು ಕನ್ನಡ ಕಥಾಲೋಕಕ್ಕೆ ಆದ ಮಹತ್ತರ ನಷ್ಟ ಎಂದು ಭಾವಿಸಿದ್ದೇನೆ.

ಕುವೆಂಪು ಅವರ ಕಥೆಗಳ ಸಂಖ್ಯೆ ಹದಿನೇಳು. ಅವರು ಪ್ರಕಟಿಸಿರುವ ಎರಡು ಕಥಾ ಸಂಗ್ರಹಗಳಾದ 'ಸಂನ್ಯಾಸಿ ಮತ್ತು ಇತರ ಕಥೆಗಳು' ಮತ್ತು 'ನನ್ನ ದೇವರು ಮತ್ತು ಇತರ ಕಥೆಗಳು'ಗಳಲ್ಲಿ ಈ ಕತೆಗಳು ಸಂಕಲನಗೊಂಡಿದ್ದು ಈ ಎಲ್ಲ ಕತೆಗಳ ಮೂಲಕ ಕುವೆಂಪು ಅವರು ಅದಮ್ಯ ಜೀವನ ಪ್ರೀತಿಯನ್ನು, ಉಲ್ಲಾಸವನ್ನು ಮೆರೆದಿರುವಂತೆ, ನಾವು ಬದುಕುತ್ತಿರುವ ಸಮಾಜದ ಅಂತರ್‌ದರ್ಶನ ಮಾಡಿಸುತ್ತ ಸಾಗುವ ರೀತಿ ಬೆರಗುಗೊಳಿಸುತ್ತದೆ. ನವೋದಯ ಕಾಲದ ಶ್ರೇಷ್ಠ ಕವಿಯಾದ ಈ ಕಥೆಗಾರರ ಕಥೆಗಳಲ್ಲಿ ಆ ಯುಗದ ಸಹಜ ಪ್ರವೃತ್ತಿಗಳಾದ ಭಾವುಕತೆ, ಆದರ್ಶೀಕರಣ, ಪ್ರಕೃತಿಯ ಸಹಜ ವ್ಯಾಪಾರಗಳಲ್ಲಿ ತಾನೇ ತಾನಾಗಿ ಮೈಮರೆತು ಹೋಗುವ ಪರಿ, ಮೋಹಕ ಶೈಲಿಯ ಮೋಡಿ, ಭಾಷೆಯ ಸ್ವಚ್ಛಂದತೆ ವಿಪುಲವಾಗಿದ್ದರೂ ಸಮಾಜದ ಹಾಗೂ ತನ್ನ ಸುತ್ತಲ ಪರಿಸರವನ್ನು ತಮ್ಮ ಒಳನೋಟದಿಂದ ಗುರುತಿಸುವಲ್ಲಿ ಕುವೆಂಪು ಅವರ ಕವಿ ಹೃದಯ ಸಫಲವಾಗಿರುವುದನ್ನು ಈ ಎಲ್ಲ ಕತೆಗಳಲ್ಲಿ ಗುರುತಿಸಬಹುದು. ಸರಿ ಸುಮಾರು ಐವತ್ತು ವರ್ಷಗಳ ಹಿಂದೆ ಪ್ರಕಟವಾದ ಈ ಕತೆಗಳಲ್ಲಿ ಪ್ರತಿಪಾದಿತವಾಗಿರುವ ಜೀವನ ಮೌಲ್ಯಗಳು, ಪ್ರಗತಿಪರವಾದ ಆಲೋಚನೆಗಳು ಇಂದಿಗೂ ಅಷ್ಟೆ ಪ್ರಸ್ತುತ ವಾಗಿವೆ. ಕುವೆಂಪು ಅವರು ಅಂದು ಕಂಡ, ಚಿತ್ರಿಸಿದ ಸಮಾಜ ಇಂದಿಗೂ ಬದಲಾಗಿಲ್ಲ. ಹೀಗಾಗಿ ಕುವೆಂಪು ಅವರು ಇಂದಿಗೂ ನಮ್ಮ ಸಮಾಜಕ್ಕೆ ಹಾಗೂ ನಮ್ಮ ಕತೆಗಾರರಿಗೆ ಪ್ರಸ್ತುತರೇ ಆಗಿದ್ದಾರೆ.

* * *

ಕುವೆಂಪು ಅವರ ಕಥೆಗಳ ಪ್ರಮುಖ ಪ್ರವೃತ್ತಿಗಳನ್ನು ಹೀಗೆ ಪಟ್ಟಿ ಮಾಡಬಹುದು: ಕುವೆಂಪು ಅವರು ಬದುಕನ್ನು ಸತ್ಯವೆಂದು ಭಾವಿಸುತ್ತಾರೆಯೇ ವಿನಹ ಸಂನ್ಯಾಸವನ್ನಲ್ಲ. ಸಂನ್ಯಾಸವನ್ನು ಪಲಾಯನವೆಂದು ಹೇಳದಿದ್ದರೂ ಲೌಕಿಕ ಜೀವನದಿಂದ ಭ್ರಮನಿರಸನ ಗೊಂಡಾಗ ವ್ಯಕ್ತಿಗೆ ಸಂನ್ಯಾಸತ್ವ ಆಸರೆಯಾಗುವುದು ಎಂಬ ನಿಲುವನ್ನು ತಾಳಿದ್ದಾರೆ.

ಕುವೆಂಪು ಅವರ ಕಥೆಗಳಲ್ಲಿ ನಿಯತಿವಾದ ಅಂದರೆ ವಿಧಿವಿಲಾಸದ ಬಗೆಗೆ ಅಪಾರ ಆಸ್ಥೆಯನ್ನು ಕಾಣಬಹುದು. ಬದುಕಿನಲ್ಲಿ ಪಕ್ಕಾ ಆಸ್ಥಾವಾದಿಯಾಗಿದ್ದು, ತನ್ನ ನಂಬಿಕೆ ಹಾಗೂ ಸಿದ್ಧಾಂತಗಳ ಬಗೆಗೆ ಅವಿಚಲರಾಗಿರುವ ವ್ಯಕ್ತಿಗಳು ಸಹ ಬದುಕಿನಲ್ಲಿ ವಿಚಲಿತ ರಾಗಿ, ದಿಕ್ಕೆಟ್ಟು ತಾವು ಬಯಸದೇ ಇರುವ ಬಿಂದುವಿನತ್ತ ಸಾಗುತ್ತಾರೆ.

ಕುವೆಂಪು ಅವರ ಕಥೆಗಳಲ್ಲಿ ಮಾನವೀಯ ಅಂತಃಕರಣ ತನ್ನೆಲ್ಲ ತುಡಿತದೊಂದಿಗೆ ಸಕ್ರಿಯವಾಗಿರುವುದನ್ನು ಕಾಣಬಹುದು. ಪರಸ್ಪರ ನಂಬಿಕೆ, ವಿಶ್ವಾಸ ಒಂದು ಮೌಲ್ಯ ವಾಗಿ ಇವರ ಕಥೆಗಳಲ್ಲಿ ಪ್ರತಿಪಾದಿತವಾಗಿದೆ. ಇವಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳು ವವರು ತಾವಾಗಿಯೇ ಪತನಗೊಳ್ಳುತ್ತಾರೆ ಎಂಬುದು ಸಹಜ ಸತ್ಯವಾಗಿದೆ.

ಕುವೆಂಪು ಅವರ ಕಥೆಗಳಲ್ಲಿನ ಒತ್ತು ಧರ್ಮ ಪ್ರಜ್ಞೆಯ ಮೇಲೆ ನಿರಂತರವಾಗಿದೆ. ಇವರ ಪಾತ್ರಗಳು ಈ ಧರ್ಮ ಪ್ರಜ್ಞೆಯಿಂದ ಸಂಚಾಲಿತಗೊಂಡು ಒಳಿತನ್ನು ಗುರುತಿಸುವ ಕಡೆ ಸಾಗುತ್ತವೆ.

ಕುವೆಂಪು ಅವರ ಕಥೆಗಳಲ್ಲಿ ಜ್ಯೋತಿಷ್ಯ ಮತ್ತು ಜ್ಯೋತಿಷಿಗಳು, ದೈವ್ವದ ಕಾಟಗಳು ಹಾಸುಹೊಕ್ಕಾಗಿವೆ. ಒಂದೆಡೆ ಇವುಗಳನ್ನು ಆಚರಿಸುವವರಿಗೆ ಇವುಗಳ ಬಗೆಗೆ ಅಪಾರ ನಂಬಿಕೆ, ಅಂತೆಯೇ ಇವರಿಗೆ ಒಂದು ಬಗೆಯ ಮನೋಬಲವನ್ನು ಕೊಡುತ್ತವೆ. ಆದರೆ ಕುವೆಂಪು ಕಥೆಗಾರರಾಗಿ ಈ ನಂಬಿಕೆಯನ್ನೇ ಗೇಲಿ ಮಾಡಿ ವ್ಯಂಗ್ಯ ಮಾಡಿದ್ದಾರೆ. ಹಳ್ಳಿಯ ಮುಗ್ಧರನ್ನು ಜ್ಯೋತಿಷ್ಯ ಹೇಗೆ ದಾರಿ ತಪ್ಪಿಸುತ್ತಿದೆ ಎಂಬುದನ್ನು ಉದ್ದಕ್ಕೂ ಅನಾವರಣಗೊಳಿಸುತ್ತ ಹೋಗುತ್ತಾರೆ.

ಕುವೆಂಪು ಅವರ ಕಥೆಗಳು ಬರಿ ಕಥೆಗಳಷ್ಟೇ ಅಲ್ಲ. ಇವು ಆ ಸಮಾಜದ ಸಾಮಾಜಿಕ, ಆರ್ಥಿಕ–ಧಾರ್ಮಿಕ ಬದುಕಿನ ದಾಖಲೆಗಳೂ ಆಗಿವೆ. ಸಮಾಜ ವಿಶ್ಲೇಷಣೆಯ ಸಂದರ್ಭ ಬಂದಾಗ ಕಥೆಗಾರರು ಕೊಂಚ ವಿರಾಮಪಡೆದು ವಸ್ತುಸ್ಥಿತಿಯ ಗಂಭೀರ ವಿವೇಚನೆಗೇ ತೊಡಗುತ್ತಾರೆ.

ಈ ಎಲ್ಲಕ್ಕೂ ಮಿಗಿಲಾಗಿ ಕುವೆಂಪು ಅವರ ಕಥೆಗಳಲ್ಲಿ ವ್ಯಂಗ್ಯ ಸ್ಥಾಯಿ ಸ್ವರವಾಗಿ ಮಿಡಿದಿದ್ದು ಈ ವ್ಯಂಗ್ಯದ ಮೂಲಕ ತಮ್ಮ ಸಮಕಾಲೀನ ಸಮಾಜದ ಎಲ್ಲ ವಿಸಂಗತಿಗಳನ್ನು ಎತ್ತಿ ತೋರಿಸುತ್ತ ಸಾಗುತ್ತಾರೆ. ಈ ವ್ಯಂಗ್ಯದ ಹಿಂದೆ ಕವಿಯ ಮನಸ್ಸು, ಸುಧಾರಕನ ದೃಷ್ಟಿ, ಪರಿವರ್ತನೆಗೆ ಚಡಪಡಿಸುವ ಕ್ರಾಂತಿಕಾರಿಯೊಬ್ಬನ ಅಂತರ್ಯವನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

* * *

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ 'ಸಂನ್ಯಾಸಿ ಮತ್ತು ಇತರ ಕಥೆಗಳು (೧೯೩೭) ಸಂಕಲನದ ಕಥೆಗಳನ್ನು ವಿವೇಚಿಸಬಹುದಾಗಿದೆ.

ಒಲ್ಲದ ಮದುವೆ ಮಾಡಿಕೊಂಡು ಸಂನ್ಯಾಸವನ್ನು ಸ್ವೀಕರಿಸಿ ಬದುಕಿನಿಂದ ಪಲಾಯನ ಮಾಡಿದ ಯುವಕನನ್ನು ಪುನಃ ಸಂಸಾರಕ್ಕೆ ಸೆಳೆದು ತರುವ ಓರ್ವ ಯುವತಿಯ ಪ್ರೇಮದ ಶಕ್ತಿಯನ್ನು ನಿರೂಪಿಸುವ 'ಸಂನ್ಯಾಸಿ' ಕಥೆ ಬದುಕನ್ನು ಅತ್ಯಂತ ಗಾಢವಾಗಿ ಪ್ರೀತಿಸುವ, ಅಂತೆಯೇ ಸಂನ್ಯಾಸತ್ವಕ್ಕೊಂದು ಗರಿಮೆಯನ್ನು ತಂದು ಕೊಡುವ ಕಥೆ. 'ನಿನ್ನ ಜೀವಮಾನದ ಮಧುರ ಸ್ವಪ್ನವನ್ನು ನಾನೇಕೆ ಒಡೆದುಹಾಕಲಿ ? ಅದು ತನಗೆ ತಾನೆ ಒಡೆದ ಮೇಲೆಯೇ ನೀವಿಬ್ಬರೂ ನನ್ನೆಡೆಗೆ ಬನ್ನಿ. ಸ್ವಪ್ನವಾದರೂ ಮಾಧುರ್ಯ ಎಂದಿಗೂ ಮಾಧುರ್ಯವೇ. ಎಂದು ನೀವು ಸ್ವಪ್ನದಿಂದ ಎಚ್ಚೆತ್ತಾಗ ಮಾಧುರ್ಯವು ಬಿಸಿಲ್ಗುದುರೆಯಾಗಿ ಕಹಿಯಾಗುವುದೋ ಅಂದು ಇಲ್ಲಿಗೆ ಬನ್ನಿ. ಆಗ ನಿಮ್ಮ ಹೃದಯ ಮಂದಿರಗಳಲ್ಲಿ ಶಾಂತಿಯನ್ನು ನೆಲೆಗೊಳಿಸುವುದೂ ಸುಲಭ' (ಪುಟ ೧೦). ಈ ಮಾತುಗಳಲ್ಲಿ ಕತೆಯ ಆಶಯವೂ ಅಡಗಿದ್ದು, ಸಂನ್ಯಾಸ ಯಾವ ಹಂತದಲ್ಲಿ ಪ್ರೇಯವೆಂದು ಲೇಖಕರು ಭಾವಿಸುತ್ತಾರೆ ಎಂಬುದಕ್ಕೂ ಸಾಕ್ಷಿಯಾಗಿದೆ. ಮುಕಂದ—ಇಂದಿರೆ, ಚೈತನ್ಯ—ರಮೇಶರ ಮುಖಾಮುಖಿಯಾಗುವವರೆಗೂ ಹೆಣ್ಣಿನ ವೇಷದಲ್ಲಿದ್ದ ಮುಕುಂದನ ವಾಸ್ತವಿಕ ರೂಪ ತೆರೆದುಕೊಳ್ಳಲಿಲ್ಲ ಅಥವಾ ಅದನ್ನು ಗುರುತಿಸಲು ಪ್ರಯತ್ನಿಸಲಿಲ್ಲ ಅಥವಾ ಗುರುತಾಗಲೇ ಇಲ್ಲ ಎಂಬ ಅಂಶ ಕೊಂಚ ಕೃತ್ರಿಮವೆಂದೆನಿಸಿದರೂ ಕತೆಗಾರರು ಈ ಅಂಶವನ್ನು ಕಡೆಗಣಿಸಿದ್ದಾರೆ. ಚೈತನ್ಯ ಮತ್ತು ಮುಕುಂದ—ಈ ಇಬ್ಬರೂ ತಮ್ಮ

ತಮ್ಮ ದೃಷ್ಟಿಯಿಂದ ಬದುಕಿನ ಅರ್ಥದ ಶೋಧನಲ್ಲಿದ್ದಾರೆ. ಮುಕುಂದ (ಇಂದಿರೆ)ನ ಈ ಮಾತುಗಳು 'ತತ್ವದಿಂದ ಶಾಂತಿ ಲಭಿಸುತ್ತದೆ ಎಂದು ತಿಳಿದಿದ್ದೆ, ಆದರೆ ಅದು ಹುಸಿಯಾಯ್ತು. ಶಾಂತಿ ನನ್ನಿಂದ ದಿನದಿನವೂ ದೂರಾಗುತ್ತಿದೆ' (ಪುಟ ೪) ಕಾಷಾಯ ವಸ್ತ್ರಧಾರಣೆಯಿಂದ ಶಾಂತಿ ಪ್ರಾಪ್ತಿ ದೂರದ ಮಾತೆಂಬುದನ್ನು ದೃಢೀಕರಿಸುತ್ತವೆ. ಮುಕುಂದ ಅಂದರೆ ಇಂದಿರಾ ಸಹ ರಮೇಶನ ಹುಡುಕುವಿಕೆಗಾಗಿ ಕಾಷಾಯಧಾರಣೆ ಮಾಡಿದ್ದರೂ ಈ ಕಾಷಾಯದಲ್ಲಿ ಆಕೆಗೆ ಶಾಂತಿ ಸಿಕ್ಕಿದ್ದಿದ್ದರೆ ಬಹುಶಃ ಲೌಕಿಕವನ್ನು ದೂರಮಾಡಿ ಬಂದು ಬಿಡುತ್ತಿದ್ದಳೇನೋ! ಅಂತೆಯೇ ಚೈತನ್ಯ ನಿಜಕ್ಕೂ ಕಾಮನೆಗಳನ್ನು ಗೆದ್ದಿದ್ದರೆ ಇಂದಿರೆಯ ರೂಪ ಸೌಂದರ್ಯಕ್ಕೆ ಎಂಥ ಸಂದರ್ಭಗಳಲ್ಲೂ ಒಳಗಾಗುತ್ತಿರಲಿಲ್ಲ. ಆದರೆ ಇಲ್ಲಿನ ಇಬ್ಬರೂ ಒಂದೊಂದು ಹಂತದಲ್ಲಿ ಲೌಕಿಕಕ್ಕಾಗಿ ತುಡಿಯುತ್ತಿರುವವರೇ ಆಗಿದ್ದಾರೆ. ಹೀಗಾಗಿ ಗುರು ಪ್ರೇಮಾನಂದರ ಅನುಮತಿ ಲೌಕಿಕ ಜೀವನ ಪ್ರವೇಶಕ್ಕೆ ಒಂದು ನೆಪವಷ್ಟೇ ಆಗುತ್ತದೆ. ಸಂನ್ಯಾಸ ಮತ್ತು ಸಂಸಾರದಲ್ಲಿ ಸಂನ್ಯಾಸಕ್ಕೆ ಹೆಚ್ಚು ಒತ್ತುಕೊಟ್ಟು 'ಸಂನ್ಯಾಸಿಯಾದವನು ಪುನಃ ಸಂಸಾರಿಯಾಗುವುದು ಮಹಾಪಾಪ' ಎಂಬ ಪರಿಕಲ್ಪನೆಗಿಂತ ಕೈಹಿಡಿದವಳನ್ನು ದುಃಖ ಸಾಗರಕ್ಕೆ ಕಲ್ಲುಕಟ್ಟಿ ಎಸೆಯುವುದಕ್ಕಿಂತ ಮಹಾಪಾಪವೆ? ಅದಕ್ಕಿನ ಹೆಚ್ಚಿನ ಅನಿಷ್ಟವಾಗುವುದೆ?' ಎಂದು ಕತೆಗಾರ ವಾಸ್ತವ ಬದುಕನ್ನು ಹೆಚ್ಚು ಅರ್ಥವತ್ತಾಗಿಸುವ ಕಡೆ ಒತ್ತು ಕೊಡುತ್ತಾರೆ. (ನಮ್ಮ ದೇಶದಲ್ಲಿ ಸನ್ಯಾಸಿಯಾಗಿ ಗೃಹಸ್ಥಾಶ್ರಮ ಪ್ರವೇಶಿಸಿದ ಅನೇಕ ಉದಾಹರಣೆಗಳುಂಟು). ಬದುಕು ಕುವೆಂಪು ಅವರಿಗೆ ಅತ್ಯಂತ ಪ್ರಿಯವಾದ ಸಂಗತಿಯಾಗಿದೆ. ಕತೆಯ ಕೊನೆಯಲ್ಲಿ ಬರುವ 'ನೀನೀಗ ನಿಜವಾದ ಸನ್ಯಾಸಿ' (ಪುಟ ೧೪) ಎಂಬ ವಾಕ್ಯದ ವ್ಯಂಗ್ಯ ರಮೇಶನ ಈವರೆಗಿನ ವೈರಾಗ್ಯದ ಬದುಕನ್ನು ಅರ್ಥಪೂರ್ಣವಾಗಿ ವಿಡಂಬಿಸುತ್ತದೆ. 'ಸಂನ್ಯಾಸಿ'-ಕತೆ ಬದುಕಿನ ಅರ್ಥ ಶೋಧಿಸುವಲ್ಲಿ ಯಶಸ್ವಿಯಾಗಿದೆ.

ಆದರ್ಶ ಮತ್ತು ಯಥಾರ್ಥಗಳನ್ನು ಎದುರು-ಬದುರು ನಿಲ್ಲಿಸಿ ಘೋರ ಯಥಾರ್ಥಗಳ ಮುಂದೆ ಆದರ್ಶದ ಮಹಲು ಕುಸಿಯಲು ತಡವಾಗುವುದಿಲ್ಲ ಎಂಬ ಸತ್ಯವನ್ನು 'ಕ್ರಿಸ್ತನಲ್ಲ, ಪಾದ್ರಿಯ ಮಗಳು' ಎಂಬ ಕಥೆಯಲ್ಲಿ ಕತೆಗಾರ ತನ್ನ ಆತ್ಮೀಯ ಮಿತ್ರನೊಬ್ಬನ ಬದುಕಿನಲ್ಲಿ ನಡೆದ ಘಟನೆಯ ಮೂಲಕ ನಿರೂಪಿಸುತ್ತಾರೆ. ಇಲ್ಲಿನ ಕಥಾನಾಯಕ ಅರ್ಥಾತ್ ಯೋಗಿನ್ ಮೂಲತಃ ದುರ್ಬಲ ಮನಸ್ಸಿನವನು. ಯೌವನದ ಬಿಸಿಯ ಆವೇಶದಲ್ಲಿ ಆದರ್ಶವನ್ನು ಪ್ರತಿಪಾದಿಸುವುದರ ಜೊತೆ ಜೊತೆಗೆ ಕ್ರೈಸ್ತರ ಪ್ರಚಾರದಿಂದಾಗಿ ತಲೆಕೆಡಿಸಿಕೊಂಡಿದ್ದವನು. ಅವನ ಸ್ವಭಾವವನ್ನು ಚಿತ್ರಿಸುತ್ತ ಕತೆಗಾರರು ಹೇಳುತ್ತಾರೆ 'ಕ್ರೈಸ್ತ ಪಾದ್ರಿಗಳನ್ನೂ ಕ್ರೈಸ್ತಮತ ಪ್ರಚಾರಕರನ್ನೂ ಕಂಡರೆ ಅವನಿಗೆ ಸ್ವಲ್ಪವೂ ಆಗುತ್ತಿರಲಿಲ್ಲ. ಅವರು ಮೋಸಗಾರರೆಂದು ನಿಂದಿಸುತ್ತಿದ್ದನು. ಇದು ಅವನಲ್ಲಿ ಬೇರೂರಿಬಿಟ್ಟಿತ್ತು. ಹಿಂದೂ ಸಮಾಜವನ್ನು ಸುಧಾರಿಸಬೇಕೆಂದೂ ಅದರ ಕುಂದುಕೊರತೆ ನ್ಯೂನತೆಗಳನ್ನು ಬೇರುಸಹಿತ ಕೀಳಬೇಕೆಂದೂ ಕ್ರೈಸ್ತರಾದ ಹಿಂದೂಗಳನ್ನು ಶುದ್ಧಿಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಕ್ರೈಸ್ತ ಪಾದ್ರಿಗಳ ಹಾವಳಿಯನ್ನು ನಿಲ್ಲಿಸಬೇಕೆಂದೂ ಅವನ ಧ್ಯೇಯ' (ಪುಟ ೧೬). ಇಂಥ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಯೋಗಿನ್ ಅಂಥ ಒಬ್ಬ ಪಾದ್ರಿಯ ಹದಿಹರೆಯದ ಮಗಳ

ಚೆಲುವಿಗೆ ಮಾರು ಹೋದದ್ದು, ಅಲ್ಲ, ಮೋಹಿತನಾದದ್ದು, ಆತನ ಬದುಕಿನ ವಿಡಂಬನೆ ಯಾಗಿದೆ. ಹೆಣ್ಣು ಮತ್ತು ವೇದಾಂತ, ತತ್ವಶಾಸ್ತ್ರವನ್ನು ಮುಖಾಮುಖಿಯಾಗಿಟ್ಟು ಇವೆರಡರ ಪ್ರಖರತೆಯನ್ನು ಅನಾವರಣಗೊಳಿಸುತ್ತಲೇ ದುರ್ಬಲ ವ್ಯಕ್ತಿ ಸೋಲುವ ಕ್ಷಣವನ್ನೂ ಅತ್ಯಂತ ಮಾರ್ಮಿಕವಾಗಿ ಕುವೆಂಪು ವರ್ಣಿಸುತ್ತಾರೆ. ಹೆಣ್ಣಿನ ಚೆಲುವಿನ ಮುಂದೆ ಆದರ್ಶಗಳು ನಲುಗುತ್ತವೆ. ವೇದಾಂತ ಮತ್ತು ಹೆಣ್ಣು–ಇವೆರಡರಲ್ಲಿ ಹೆಣ್ಣು ಯಥಾರ್ಥವಾದರೆ, ಹೆಣ್ಣು ಮತ್ತು ಪ್ರೇಮದ ಮುಂದೆ ಹಣ ಯಥಾರ್ಥವಾಗುತ್ತದೆ. ಹೀಗಾಗಿ ಯೋಗಿನ್ ಪಾದ್ರಿಯ ಮಗಳಿಗಾಗಿ ತೆತ್ತ ಬೆಲೆ ಎಂದರೆ—ಧರ್ಮಭ್ರಷ್ಟ ನಾದದ್ದು ಮತ್ತು ದರಿದ್ರನಾದದ್ದು. ಇಷ್ಟಾದರೂ ಪಾದ್ರಿಯ ಮಗಳನ್ನಾದರೂ ಪಡೆದು ಕೊಂಡನೇ ಎಂದರೆ ಅದೂ ಆಗಲಿಲ್ಲ. ಆ ಮಗಳೂ ತಿರಸ್ಕರಿಸಿದಳು. ಯೋಗಿನ್‌ನ ಮನೆಯ ವರು ಸುಂದರ ಹೆಣ್ಣುಗಳನ್ನು ತೋರಿದಾಗ ಮದುವೆಗೆ ಒಪ್ಪದ, ಬ್ರಹ್ಮಚಾರಿಯಾಗಿಯೇ ಇರಬೇಕೆಂದು ತೀರ್ಮಾನಿಸಿದ ಈ ಯೋಗಿನ್ ಪಾದ್ರಿಯ ಮಗಳಿಗೆ ಒಲಿದದ್ದು ನೋಡಿ ದರೆ ಪ್ರೇಮದ ಕುರುಡು ಸ್ವಭಾವವನ್ನು ತೋರುತ್ತದೆ ಎಂಬುದಕ್ಕಿಂತ ಕಥಾನಾಯಕನ ಮನೋದೌರ್ಬಲ್ಯವನ್ನೇ ಎತ್ತಿ ತೋರಿಸುತ್ತದೆ. ಆದರ್ಶದ ಮರೀಚಿಕೆಯ ಬೆನ್ನಹತ್ತಿ ನಲುಗಿ ಹೋಗುವ ಯೋಗಿನ್‌ನ ದುರಂತ ಕಥೆ 'ಕ್ರಿಸ್ತನಲ್ಲ, ಪಾದ್ರಿಯ ಮಗಳು'.

'ಈಶ್ವರನೂ ನಕ್ಕಿರಬೇಕು' ಕುವೆಂಪು ಅವರ ಮನೋಜ್ಞ ಕಥೆಗಳಲ್ಲಿ ಒಂದಾಗಿದೆ. ತಮ್ಮ ತಮ್ಮ ದೇಹದಲ್ಲಿ ಒಂದೊಂದು ಊನವನ್ನು ಇಟ್ಟುಕೊಂಡೇ ಇಲ್ಲಿನ ನಾಯಕ–ನಾಯಕಿ ಒಬ್ಬರಿಗೊಬ್ಬರು ಪ್ರಿಯವಾಗುತ್ತಾರೆ. 'ನಾಗರಾಜನು ಲಲಿತಮ್ಮನ ಚಿತ್ರವನ್ನು ನೋಡಿ ಮೈ ಮರೆತು ಬಿಟ್ಟನು. ಅವನು ಕೆಲವು ಕನ್ನಡ ಗ್ರಂಥಗಳಲ್ಲಿ ಸ್ತ್ರೀ ವರ್ಣನೆಯನ್ನು ಓದಿದ್ದನು. ಆದರೆ ಯಾವ ವರ್ಣನೆಯೂ ಅವನಿಗೆ ಸಮರ್ಪಕವಾಗಿ ಕಾಣಲಿಲ್ಲ. ಅವನ ಕಣ್ಣಿಗೆ ಲಲಿತಮ್ಮನು ಸಾಕ್ಷಾತ್ ರತಿಯಂತೆ ರಂಜಿಸಿದಳು. ಅವನು ಆ ಚಿತ್ರವನ್ನು ಮುದ್ದಿಸಿ ರವಿಯೂ ಕಾಣದ ಎಷ್ಟೋ ವಿಧವಾದ ಸರಸ–ರಸಿಕತೆಯನ್ನು ಪ್ರದರ್ಶಿಸಿ ತನ್ನ ಭಾಗ್ಯವನ್ನು ಕೊಂಡಾಡಿದನು. ಲಲಿತಮ್ಮನೂ ನಾಗರಾಜನ ಚಿತ್ರವನ್ನು ಕಂಡು ಮೋಹದಿಂದ ಮೈಮರೆತಳು. ಅವನ ಜರಿಯ ಪೇಟ, ಬೂಟ್ಸ್, ಷರಾಯಿ, ನೆಕ್‌ಟೈ ಮೊದಲಾದುವುಗಳನ್ನು ನೋಡಿ, ಮನ್ಮಥನೆಂದೇ ಭಾವಿಸಿ, ತನ್ನನ್ನು ಕೈ ಹಿಡಿಯಲೊಪ್ಪಿದ ಮಹಾತ್ಮನಿಗೆ ಭಕ್ತಿಯಿಂದ ನಮಸ್ಕರಿಸಿದಳು' (ಪುಟ ೩೩–೩೪). ಹೀಗೆ ಫೋಟೊ ನೋಡಿ ಮೆಚ್ಚಿಕೊಂಡ ಈ ಇಬ್ಬರ ಮದುವೆಯೂ ಆಗುತ್ತದೆ. ಮುಂದೆ ಕುವೆಂಪು ಅವರು ಲಲಿತಮ್ಮನ ಮಾನಸಿಕ ತಾಕಲಾಟವನ್ನು ಸುಂದರವಾಗಿ ಚಿತ್ರಿಸಿ ದ್ದಾರೆ. ಓರ್ವ ಹೆಣ್ಣಾಗಿ ಲಲಿತಾಳ ಮನಸ್ಸಿನಲ್ಲಿ ತಾನು ಮೋಸಮಾಡಿದ್ದೇನೆ ಎಂಬ ಅಂಶ ಕೊರೆಯುತ್ತಿದೆ, ಲಲಿತಾಳ ಮನಸ್ಸಿನಲ್ಲಿ ನೋವಿದೆ, ತಪ್ಪುಮಾಡಿದ ಪ್ರಜ್ಞೆ ಇದೆ. ಆದರೆ ನಾಗರಾಜನಲ್ಲಿ ಹೆಣ್ಣಿನ ಕಡೆಯವರನ್ನು ಮೋಸಗೊಳಿಸಿದ ದರ್ಪ ಇದೆ. ಆದರೆ ಈ ಎರಡೂ ಕರಗುವುದು ಈ ಇಬ್ಬರೂ ತಮಗರಿವಿಲ್ಲದಂತೆಯೇ ತಮ್ಮ ತಮ್ಮ ದೋಷ ಗಳನ್ನು ಅನಾವರಣ ಮಾಡಿಕೊಂಡಾಗ. ಒಬ್ಬರು ಇನ್ನೊಬ್ಬರ ದೋಷವನ್ನು ಎತ್ತಿ ಆಡಲು ಯಾರಿಗೂ ಅವಕಾಶಕೊಡದ ಕುವೆಂಪು ಅವರು ಈ ಪ್ರಸಂಗಕ್ಕೆ ನಾಟಕೀಯ

ತಿರುವನ್ನು ಕೊಡುತ್ತ ನಗುವಿನಲ್ಲಿ ಅಂತ್ಯಗೊಳಿಸುತ್ತಾರೆ ಹಾಗೂ ಬದುಕಿನ ಯಥಾರ್ಥವನ್ನು ಸ್ವೀಕರಿಸಬೇಕಾದ ರೀತಿಯ ಕಡೆ ಸಂಕೇತಿಸುತ್ತಾರೆ.

'ಆರಾಣೆ ಮೂರು ಕಾಸು' ಕಥೆ ವಿಧಿವಿಲಾಸವನ್ನು ಮೆರೆಯುತ್ತದೆ. ಕಥಾ ನಿರೂಪಕರಾದ ಮಾಧವರಾಯರ ಮಾತಿನಲ್ಲಿ, ಅವರ ಜೀವಮಾನದಲ್ಲಿ ಜರುಗಿದ ಅತ್ಯಾಶ್ಚರ್ಯಕರವಾದ ಈ ಕಥಾ ಪ್ರಸಂಗ ನೆಡದ ಮೇಲೆ ಅವರಿಗೆ ತಮ್ಮ ಅಧೀನದಲ್ಲಿಲ್ಲದ ದೈವೇಚ್ಛೆಯಲ್ಲಿ ಬಹಳ ನಂಬಿಕೆಯುಂಟಾಯಿತು. ಈ ಕಥೆಯಲ್ಲಿ ಬದುಕಿನ ಚಕ್ರ ಸಾಗುವ ರೀತಿ,ಅದು ಪಡೆದುಕೊಳ್ಳುವ ತಿರುವುಗಳು ಓದುಗರನ್ನು ವಿಧಿಯ ಅಧೀನಕ್ಕೊಳ ಪಡಿಸುವುದರಲ್ಲಿ ಯಶಸ್ವಿಯಾಗಿವೆ. ದಿವಾನನಾಗಿದ್ದವನು ಭಿಕ್ಷುಕನಾದದ್ದು, ಕಾಸು–ಕಾಸಿಗೂ, ತಿನ್ನುವ ಒಂದೊಂದು ಅಗುಳಿಗೂ ಪರದಾಡುವಂಥ ಸ್ಥಿತಿಗೆ ಬಂದದ್ದು, ನಂತರ ಒಮ್ಮೆಗೇ ಪರಿಸ್ಥಿತಿ ಸುಧಾರಣೆಯಾಗಿ ಆರಾಣೆ ಮೂರು ಕಾಸನ್ನೂ ಹಿಂತಿರುಗಿಸಿದ್ದಷ್ಟೆ ಅಲ್ಲ, ಸಾಲದ ದೊಡ್ಡ ಮೊತ್ತವನ್ನು ಪುನಃ ಕೊಡಲು ಒಪ್ಪಿಗೆ ನೀಡಿದ್ದು—ಹೀಗೆ ಇಲ್ಲಿನ ಅನಿರೀಕ್ಷಿತ ಘಟನೆಗಳು ಬದುಕಿನ ನಿಗೂಢತೆಯ ಬಗೆಗೆ ವಿಸ್ಮಯ ಮೂಡಿಸುತ್ತವೆ. ಕುವೆಂಪು ಪ್ರಸ್ತುತ ಕಥೆಯಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನು ಬಾಳಿನ ಒಂದು ಅಭಿನ್ನ ಮೌಲ್ಯವನ್ನಾಗಿ ಪ್ರತಿಪಾದಿಸಿದ್ದಾರೆ ಹಾಗೂ ಇವುಗಳಿಗಾಗಿ ಉದ್ದಕ್ಕೂ ಸಂಘರ್ಷಿಸುವ ನವಾಬ್‌ನ ಪಾತ್ರದ ಮೂಲಕ ಉದಾತ್ತ ಮೌಲ್ಯವನ್ನು ಸ್ಥಾಪಿಸಿದ್ದಾರೆ. ತನಗೆ ಎಂಥ ಕಷ್ಟ ಬಂದರೂ ಭಿಕ್ಷೆ ಬೇಡಿದರೂ ತನಗೆ ನೆರವಾದವರನ್ನು ಮರೆಯದೆ, ನೆರವಿನ ಋಣವನ್ನು ಪೂರ್ಣ ಕೃತಜ್ಞತೆಯೊಂದಿಗೆ ತೀರಿಸುವ ಧರ್ಮಪ್ರಜ್ಞೆಯನ್ನು ತೋರುವ ನವಾಬ ಸಿಂಹ ಉದಾತ್ತ ಚೇತನ. ಮೊದಲಿನಿಂದ ಕೊನೆಯವರೆಗೂ ಆಶ್ಚರ್ಯಕರ ರೀತಿಯಲ್ಲಿ ನಾಟಕೀಯ ತಿರುವುಗಳನ್ನು ಪಡೆದುಕೊಳ್ಳುತ್ತ ಸಾಗುವ ಈ ಕಥೆ ಬದುಕಿನ ಮೌಲ್ಯಗಳನ್ನು ಶೋಧಿಸುವ ಕಥೆಯಾಗಿದೆ.

'ಯಾರೂ ಅರಿಯದ ವೀರ'—ಈ ಸಂಕಲನದ ವಿಶಿಷ್ಟ ಹಾಗೂ ಪ್ರಭಾವಕಾರಿಯಾದ ಕಥೆ. ಲಿಂಗ ಈ ಕಥೆಯ ನಾಯಕನಾದರೂ ಸುಬ್ಬಣ್ಣಗೌಡರ ಮನೆಯ ಆಳು. ಬದುಕಿನ ಸುಖದಿಂದ ವಂಚಿತನಾದ ಈತ ಹಿಂದೆ ರಂಗೇನಾಯ್ಕರ ಮನೆಯ ಜೀತದಾಳಾಗಿ ದುಡಿದು, ಸಹವಾಸದಿಂದ ಕುಡಿಯುವುದನ್ನು ಕಲಿತು ಆ ಅಮಲಿನಲ್ಲಿ ತನ್ನ ಒಡೆಯರ ಮಗನೊಂದಿಗೆ ಮಾಡಿದ ಮಾರಾಮಾರಿಯಿಂದಾಗಿ ಜೈಲು ಸುಖವನ್ನೂ ಅನುಭವಿಸಿ ಬಂದ ಈತನಿಗೆ ಬದುಕು ಅಸಹನೀಯವಾಗಿದೆ, ಬಡತನ ಒಂದು ಶಾಪವಾಗಿದೆ, ಈ ಬಡತನದಿಂದಾಗಿಯೇ ಮಗನೂ ಪರದೇಶಿಯಾಗಿದ್ದಾನೆ, ಈತ ಬಂಧು-ಬಾಂಧವರಿಂದ ದೂರಾಗಿದ್ದಾನೆ. ಬದುಕಿನ ಅಸಹನೀಯ ನೋವಿನಿಂದಾಗಿ ಯಾರೋ ಹೇಳಿದ್ದರ ಮೇರೆಗೆ ಸುಬ್ಬಣ್ಣಗೌಡರ ಮನೆ ಸೇರಿದ್ದೊಂದು ಆಕಸ್ಮಿಕವೇ ಆಗಿದೆ.

'ಯಾರೂ ಅರಿಯದ ವೀರ' ಕಥೆ ಆಳುಗಳ ಬದುಕಿನ ವಿವಶತೆ, ನೋವು ಹಾಗೂ ಅಸಹಾಯಕತೆಯನ್ನು ಅತ್ಯಂತ ಸಾಂದ್ರವಾಗಿ, ಸಹಾನುಭೂತಿಯಿಂದ ಚಿತ್ರಿಸುವಂತೆಯೇ ಆಳು ವರ್ಗದಲ್ಲಿರುವ ಮಾನವ ಮೌಲ್ಯಗಳನ್ನು ತೆರೆದು ತೋರಿಸುತ್ತದೆ. ಹೊಟ್ಟೆಪಾಡಿಗಾಗಿ ಸುಬ್ಬಣ್ಣಗೌಡರ ಮನೆ ಸೇರಿದ ಲಿಂಗನಿಗೆ ಈ ಮನೆ ಆತನ ಹೊಟ್ಟೆ

ಹೊರೆಯುವ ಸಾಧನ ಮಾತ್ರವಾಗಷ್ಟೇ ಉಳಿದಿಲ್ಲ, ಆದರೆ ಎಲ್ಲರೂ ಕೈಬಿಟ್ಟಾಗ ಕೈಹಿಡಿದವರ ಬಗೆಗೆ ಅನಿರ್ವಚನೀಯವಾದ ಕೃತಜ್ಞತೆ ಇವನಲ್ಲಿದ್ದು, ಈ ಕೃತಜ್ಞತೆಯ ಋಣವನ್ನು ತೀರಿಸಿದ ಲಿಂಗನ ಅನುಪಮ ಬಲಿದಾನವೇ ಈ ಕಥೆಯ ವಸ್ತು.

ಸಂಭಾಷಣಾ ಶೈಲಿಯಲ್ಲಿ ಆರಂಭವಾಗುವ ಈ ಕಥೆ ಮೊದಲಿನಿಂದ ಕೊನೆಯವರೆಗೂ ಓದುಗರ ಉತ್ಸಾಹ, ಕುತೂಹಲವನ್ನು ಕೆರೆಯ ನೀರಿನಂತೆಯೇ ಹೆಜ್ಜೆ ಹೆಜ್ಜೆಗೂ ಇಮ್ಮಡಿ ಗೊಳಿಸುತ್ತ ಸಾಗುತ್ತದೆ. ಕುವೆಂಪು ಅವರ ಅದ್ಭುತ ಚಿತ್ರಾತ್ಮಕ ಶಕ್ತಿಯಿಂದಾಗಿ ಕೆರೆ ತುಂಬಿ ಬಂದಾಗಿನ ಆತಂಕ. ಕೆರೆ ಒಡೆದು ತಮ್ಮ ಹಿತ್ತಲ ಗೋಡೆ ಬಿದ್ದು ನೀರು ಮನೆಯ ಅಂಗಳಕ್ಕೆ ನುಗ್ಗುತ್ತಿದ್ದಾಗ ಸುಬ್ಬಣ್ಣಗೌಡರ ಮನಸ್ಥಿತಿ, ಮನೆ–ಮಂದಿಯನ್ನೆಲ್ಲ ನೀರಿನಿಂದ ಪಾರು ಮಾಡಬೇಕೆಂಬ ತವಕ, ಸೋಮಕ್ಕ ಪುಟ್ಟ ಗಂಟೆಗಾಗಿ ಹೋಗಿ ಹಾಗೆಯೇ ಹೋದದ್ದು, ಸೀತೆ ಮತ್ತು ತಿಮ್ಮ ಎಂಬ ಮುದ್ದುಮಕ್ಕಳ ಮುಗ್ಧತೆ, ಅಂತೆಯೇ ಅವರು ತೋರುವ ಪ್ರೀತಿ ಮತ್ತು ಹೃದಯವಂತಿಕೆಯನ್ನು ಪದರ–ಪದರವಾಗಿ ಚಿತ್ರಾತ್ಮಕ ಶೈಲಿಯಲ್ಲಿ ಚಿತ್ರಿಸಲಾಗಿದ್ದು, ಈ ಎಲ್ಲ ಸಂದರ್ಭಗಳಲ್ಲಿ ಅವೆಲ್ಲ ಜೀವಂತತೆ ಯಿಂದ ಪುಟಿಯುತ್ತಿರುವಂಥ ಅನುಭವವಾಗುತ್ತದೆ.

ಕುವೆಂಪು ಅವರ ಯಾರೂ ಅರಿಯದ ಈ ವೀರನಿಗೆ ಹೇಗಾದರೂ ಮಾಡಿ ಒಡೆಯನ ಮನೆಯವರನ್ನು ದೋಣಿಯಲ್ಲಿ ದಡ ಸೇರಿಸುವ ತವಕ. ತನ್ನ ಪ್ರಾಣಕ್ಕಿಂತ ಅನ್ನ ಇಟ್ಟವರ ಬಗೆಗೆ ಅಪಾರ ಕಾಳಜಿ. ದೋಣಿ ಸಣ್ಣದು, ಇಬ್ಬರು ಕೂಡುವ ಜಾಗದಲ್ಲಿ ಏಳು ಜನ, ಜೊತೆಗೆ ಎರಡು ಪೆಟ್ಟಿಗೆಗಳು ಈ ಎಲ್ಲವನ್ನು ಹೇಗೆ ದಡ ಸಾಗಿಸು ವುದು ಎಂದು ಯೋಚಿಸುತ್ತಿದ್ದಾಗ, ಗೌಡರು ಅವನಿಗೂ ಏರಿ ಕುಳಿತುಕೊಳ್ಳುವಂತೆ ಆಜ್ಞಾಪಿಸುತ್ತಾರೆ. ಅನಿವಾರ್ಯವಾಗಿ ದೋಣಿ ಏರಿ ಕುಳಿತ ಲಿಂಗ ಹುಟ್ಟುಹಾಕ ಲಾರಂಭಿಸಿದ. ನೀರು ಏರುತ್ತಲೇ ಇತ್ತು...ದೋಣಿ ಕ್ಷಣ ಕ್ಷಣವೂ ಮುಳುಗಿಹೋಗುವ ಸೂಚನೆಯನ್ನು ಕೊಡುತ್ತಿತ್ತು. ಕುವೆಂಪು ಆ ಸನ್ನಿವೇಶದ ಚಿತ್ರಣವನ್ನು ಜೀವಂತವಾಗಿ ಮಾಡಿದ್ದಾರೆ. 'ಗೌಡರು ದೋಣಿಯಲ್ಲಿದ್ದ ಎರಡು ಬೆಲೆಯುಳ್ಳ ಪೆಟ್ಟಿಗೆಗಳನ್ನೂ ತೆಗೆದು ಹೊಳೆಗೆ ಎಸೆದರು. ಆದರೂ ಭಾರ ಕಡಿಮೆಯಾಗಲಿಲ್ಲ. ಎಷ್ಟು ಹೇಳಿದರೂ ಕೇಳದೆ ಹೆಂಗಸರು–ಮಕ್ಕಳು 'ರಾಮಾ ರಾಮಾ' ಎಂದು ಕೂಗಿ ಗೋಳಾಡುವುದನ್ನು ಬಿಡಲೇ ಇಲ್ಲ. ದಿಕ್ಕು ಕೆಟ್ಟ ಹುಚ್ಚನಂತೆ ದೋಣಿ ಅಲೆಯ ತೊಡಗಿತು. ಒಂದು ಸಾರಿ ಅದು ಮುಳುಗುವಂತಾಗಿ ಸ್ವಲ್ಪ ನೀರೂ ಒಳಗೆ ನುಗ್ಗಿತು. ಮತ್ತೆ 'ರಾಮಾ ರಾಮಾ' ಎಂದು ಬೊಬ್ಬೆ ಹಾಕಿದರು (ಪುಟ ೫೯). ಕ್ಷಣ ಕ್ಷಣಕ್ಕೂ ಜೀವಭಯದಿಂದ ತಲ್ಲಣಗೊಳ್ಳುತ್ತ ಹೋಗುತ್ತಿರುವವರ ಈ ವರ್ಣನೆ ಉಸಿರು ಕಟ್ಟಿಸುತ್ತದೆ.

ಕುವೆಂಪು ಇಂಥ ಕ್ಲಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ಮಾನವೀಯತೆ, ಕೃತಜ್ಞತೆ ಮತ್ತು ಧರ್ಮ ಪ್ರಜ್ಞೆಯ ಮಹತ್ವ ತಾನಾಗಿ ಪ್ರಜ್ವಲಗೊಳ್ಳುವಂತೆ ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಯಾರೇ ಆದರೂ ತಮ್ಮ ಪ್ರಾಣದ ಚಿಂತೆ ಮಾಡುತ್ತಾರೆ. ಆದರೆ ಲಿಂಗನ ಹೃದಯದಲ್ಲಿ ಆ ಕ್ಷಣ ಧರ್ಮಪ್ರಜ್ಞೆ ಜಾಗೃತಗೊಂಡು ಕೃತಜ್ಞತೆಯ ಪೂರವೇ ಹರಿದುಬಂತು. ತನ್ನ ಪ್ರಾಣಕ್ಕಿಂತ ದಣಿಯ ಪ್ರಾಣವೇ ಮಹತ್ವದ್ದೆನಿಸಿತು. ಕೂಡಲೇ ತನ್ನೊಬ್ಬನ ಭಾರ ಕಡಿಮೆಯಾಗುವುದರಿಂದ ದೋಣಿ

ಸರಾಗವಾಗಿ ದಡ ಸೇರಬಹುದೆಂದೆಣಿಸಿ ಹೊಳೆಗೆ ಹಾರಿದ ಮಗನ ನೆನಪಾದರೂ ಸಹ 'ರಾಮಾ ರಾಮಾ' ಎಂಬ ಆಕ್ರಂಧನ ಅವನನ್ನು ಹೊಳೆಗೆ ಹಾರಿಸಿಯೇ ಬಿಟ್ಟಿತು. ಒಬ್ಬನ ಭಾರ ಕೊಂಚ ಕಡಿಮೆಯಾಗಿ ದೋಣಿ ಸರಾಗವಾಗಿ ಮುಂದೆ ಸಾಗಲಾರಂಭಿಸಿದಾಗ ಗೌಡರು ಅದನ್ನು 'ಭಗವಂತನ ದಯೆ' ಅನ್ನುತ್ತಾರೆ. ಅದು ಲಿಂಗನ ದಯೆಯಾಗಿತ್ತೆಂದು ಕುವೆಂಪು ಬರೆಯುತ್ತಾರೆ. ಅಂತೂ ಲಿಂಗ ಬದುಕಿ ಬಂದಾಗ ಮನೆಯವರೆಲ್ಲ ಖುಷಿ ಪಡುತ್ತಾರೆ.

ಅಂತಸ್ತುಗಳ ಗಡಿದಾಟಿ ಮೆರೆಯುವ ಮಾನವ ಸಂಬಂಧಗಳ ಶ್ರೀಮಂತಿಕೆಯನ್ನು 'ಯಾರೂ ಅರಿಯದ ವೀರ' ಕಥೆ ಅತ್ಯಂತ ಚೇತೋಹಾರಿಯಾಗಿ ನಿರೂಪಿಸುತ್ತದೆ. ಲಿಂಗ ಕಾಣದಾದಾಗ 'ನಮ್ಮ ಮನೆಯ ಒಂದು ಬೆಳಕೇ ಹೋಯಿತು' ಎಂದು ಮರುಗುವ ಸುಬ್ಬಣ್ಣಗೌಡರ ಉದ್ಗಾರದಲ್ಲಿ ನಿರ್ಮಲ ಅಂತಃಕರಣವೊಂದರ ಮಿಡಿತವಿದೆ. ಇದೇ ಸಂಸ್ಕಾರ ಅವರ ಕುಟುಂಬದಲ್ಲೂ ಅನುರಣಿತವಾಗುವುದನ್ನು ನಾವು ಕಾಣುತ್ತೇವೆ. ಸುಬ್ಬಣ್ಣಗೌಡ, ನಾಗಮ್ಮ–ಸೀತೆ–ತಿಮ್ಮ ಇವರೆಲ್ಲ ತನುಗರಿವಿಲ್ಲದಂತೆಯೇ ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿದ್ದಾರೆ. ತನ್ನ ಸಹಜ ಸರಳ ನಡಿಗೆಯಿಂದ 'ಯಾರು ಅರಿಯದ ವೀರ' ಓದುಗರ ಮನಸ್ಸನ್ನು ಸೂರೆಗೊಳ್ಳುತ್ತದೆ. ಒಟ್ಟಿನಲ್ಲಿ, ಈ ಕಥೆ ಕನ್ನಡದ ಮಹತ್ವದ ಕಥೆಗಳಲ್ಲೊಂದಾಗಿದೆ.

'ಮಾಯದ ಮನೆ' ಡಾಖಾ ನಗರದ ಹಿನ್ನೆಲೆಯಲ್ಲಿ ರಚಿತವಾಗಿರುವ ರೋಮಾಂಚಕ ಅನುಭವವನ್ನು ನೀಡುವ ಕಥೆ. ಪಾಪಪ್ರಜ್ಞೆಯ ಭೀತಿಯಿಂದ ಭೀತನಾದ ವ್ಯಕ್ತಿಯೊಬ್ಬನ ಮಾನಸಿಕ ತೊಳಲಾಟವನ್ನು ಆದಿಯಿಂದ ಅಂತ್ಯದವರೆಗೂ ಒಂದೇ ಬಗೆಯ ಕೌತುಕವನ್ನುಳಿಸಿಕೊಂಡು ಸಾಗುವ ಈ ಕಥೆ ಕುವೆಂಪು ಅವರು ಪತ್ತೇದಾರಿ ಕತೆಗಳನ್ನು ಬರೆದಿದ್ದರೂ ಸಫಲತೆಯ ಶಿಖರವನ್ನು ಮುಟ್ಟುತ್ತಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ. 'ದೆವ್ವದ ಕಾಟ'ವನ್ನೂ ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

'ಮಾಯದಮನೆ'ಯ ಕಥಾನಾಯಕ ಸುರೇಂದ್ರಬಾಬು ವೈದ್ಯ. ವೈದ್ಯ ಧರ್ಮಕ್ಕನುಗುಣವಾಗಿ ಆತ ಬಡ ವಿಧವೆಯ ಮಗನೊಬ್ಬ ಸಾಯುತ್ತ ಬಿದ್ದಿರಲು, ಆಕೆ ಅಂಗಲಾಚಿ ಬೇಡಿದರೂ ಹೋಗದೆ ಕರ್ತವ್ಯ ಚ್ಯುತಿ ಎಸಗಿದ ಅಪರಾಧ ಈತನನ್ನು ಕಾಡುತ್ತಿದೆ–'ತಾನು ಮಾತ್ರ ಫೀಜು ಕೊಟ್ಟರೆ ಬರುವೆನೆಂದು ಹೇಳಿ ಆಕೆಯನ್ನು ತಿರಸ್ಕರಿಸಿದ್ದು ಅವನಿಗೆ ಪಶ್ಚಾತ್ತಾಪವನ್ನುಂಟು ಮಾಡುತ್ತಿತ್ತು. ಸಂಜೆಯಲ್ಲಿ ತಾನು ಮನೆಗೆ ಬರುತ್ತಿದ್ದಾಗ ಆ ವಿಧವೆ ತನ್ನ ಮಗನ ಹೆಣದೊಡನೆ ಗೋಳಾಡುತ್ತ ಸ್ಮಶಾನಾಭಿಮುಖವಾಗಿ ಬಂಧುಗಳೊಡನೆ ಹೋಗುತ್ತಿದ್ದುದನ್ನು ನೋಡಿ ತಾನು ಮಾಡಿದ್ದು ಧರ್ಮದೃಷ್ಟಿಯಿಂದ ಅನ್ಯಾಯವಾದುದೆಂದು ಚಿಂತಿಸುತ್ತಿದ್ದನು (ಪುಟ ೭೧). ಇಷ್ಟಾದರೂ ಈ ವೈದ್ಯನ ಮನಃ ಪರಿವರ್ತನೆಯಾಗದಿರುವುದಕ್ಕೆ ಆತನ ಹಣದ ಲೋಭವೇ ಕಾರಣವಾಗಿದ್ದು ಈ ಲೋಭ ಎಷ್ಟರಮಟ್ಟಿಗೆ ಮಾನವೀಯತೆಯನ್ನು ತುಳಿದು ಬಿಡುತ್ತದೆಯೆಂದರೆ ಇನ್ನೊಮ್ಮೆ ಪ್ರಸವವೇದನೆಯ ಕೇಸು ಬಂದಾಗಲೂ ನಿಷ್ಕರುಣೆಯಿಂದಲೇ ವರ್ತಿಸುತ್ತಾನೆ. ರೋಗಿಯ ಯಾತನೆಗಿಂತಲೂ ಹೆಚ್ಚಾಗಿ, 'ನೀವು ಕೇಳಿದ ಫೀಜು ಕೊಡುತ್ತೇನೆ' ಎಂಬ ಮಾತೇ ಅವನಿಗೆ ರೋಗಿಯನ್ನು ನೋಡಲು ಪ್ರೇರೇಪಿಸುತ್ತದೆ.

ರೋಗಿಗೆ ಚಿಕಿತ್ಸೆನೀಡಲು ಬಂದಾಗ ಆಶ್ಚರ್ಯವೆಂಬಂತೆ ಒಬ್ಬೊಬ್ಬರಾಗಿ ಎಲ್ಲರೂ ಮಾಯುವಾಗುತ್ತ 'ವೈದ್ಯರೇ ಫೀಜು....ವೈದ್ಯರೇ ಫೀಜು' ಎಂದು ಲಕ್ಷಾಂತರ ಜನರು ಕೂಗಿದಂತೆ ಕೇಳಿಸುತ್ತದೆ. ವೈದ್ಯರ ಅಮಾನವೀಯ ವ್ಯವಹಾರವನ್ನು 'ಮಾಯದ ಮನೆ' ಬಹು ಸುಂದರವಾಗಿ ವಿಡಂಬಿಸುತ್ತದೆ.

ಕುವೆಂಪು ಅವರು ಮನುಷ್ಯನ ದೊಡ್ಡತನವನ್ನು ಅಂತೆಯೇ ಸಣ್ಣತನವನ್ನೂ ಅತ್ಯಂತ ಹೃದ್ಯವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. 'ಯಾರೂ ಅರಿಯದ ವೀರ' ಕಥೆಯಲ್ಲಿ 'ಲಿಂಗನ ಬಲಿದಾನ, ಧರ್ಮನಿಷ್ಠೆಯನ್ನು ಲೋಕದ ಮುಂದಿರಿಸಿದ ಕುವೆಂಪು 'ದೆವ್ವದ ಕಾಟ'ದಲ್ಲಿ ಮುತ್ತಣ್ಣನ ಮೂಲಕ ಮನುಷ್ಯನ ಲೋಭ ಹಾಗೂ ಕೃತಘ್ನತೆಯನ್ನು ಅನಾವರಣಗೊಳಿಸಿದ್ದಾರೆ. ಈ ಎರಡೂ ಕಥೆಗಳ ನಾಯಕ ರಾದ ಲಿಂಗ ಮತ್ತು ಮುತ್ತಣ್ಣನ ಅಂತಸ್ತಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇಬ್ಬರೂ ಆಳುಗಳೇ! ಈ ಇಬ್ಬರ ದಣಿಗಳೂ ಉದಾರಿಗಳೇ. ಲಿಂಗ 'ಮನೆಯ ಮಗ'ನಂತಿದ್ದರೆ ಮುತ್ತಣ್ಣ 'ಸಾರಥಿತನದಿಂದ ಅಮಾತ್ಯ ಪದವಿ'ಗೇರಿದ್ದಾನೆ. ಲೇಖಕರು ಹೇಳುವಂತೆ ಮುತ್ತಣ್ಣ ಒಂದು ದೃಷ್ಟಿಯಿಂದ ನವಿಲೂರಿನ ಜಮೀನುದಾರನೇ ಆಗಿಬಿಟ್ಟ. ಆದರೆ ಇವರಿಬ್ಬರ ನಿಯತ್ತು. ಮೌಲ್ಯಗಳು ಹೇಗೆ ಭಿನ್ನವಾಗಿವೆ ಎಂಬುದನ್ನು ಈ ಎರಡು ಕಥೆಗಳಲ್ಲಿ ನೋಡಬಹುದು. ಲಿಂಗ ತನ್ನ ಯಜಮಾನನಿಗಾಗಿ ತನ್ನ ಪ್ರಾಣವನ್ನೇ ಕೊಡಲು ಹಿಂಜರಿಯುವುದಿಲ್ಲ. ಆದರೆ ಮುತ್ತಣ್ಣ ತನ್ನ ಯಜಮಾನರು ನವಿಲೂರಿನ ತಮ್ಮ ಮನೆಗೆ ಬರುತ್ತೇವೆಂದು ಹೇಳಿದಾಗ, ದೆವ್ವದ ಭೀತಿಯನ್ನು ಹಬ್ಬಿಸಿ, ತಾನೇ ಅದರ ಸೂತ್ರಧಾರನಾಗಿ ಕಾರ್ಯ ನಿರ್ವಹಿಸುವುದು, ಅಮಾನವೀಯವಷ್ಟೇ ಅಲ್ಲ, ಆಳಿನಿಂದ ನಿರೀಕ್ಷಿಸುವ ವ್ಯವಹಾರವೂ ಇದಲ್ಲ. 'ದೆವ್ವದ ಕಾಟ' ಕಥೆ ಆರಂಭದಿಂದ ಮೊದಲಾಗಿ ಕೊನೆಯವರೆಗೂ ಉಸಿರು ಕಟ್ಟಿಸುವಂಥ ಕುತೂಹಲವನ್ನು ಕಾಪಾಡಿಕೊಳ್ಳುತ್ತಲೇ 'ದೆವ್ವದ ಕಾಟದ' ರಹಸ್ಯವನ್ನು ಹೊರಗಡೆ ಹಾಕುವಂತೆ ಉದ್ದಕ್ಕೂ ವ್ಯಂಗ್ಯದ ಮೂಲಕ ನಮ್ಮ ಸಮಾಜದ ಮೂಢನಂಬಿಕೆ—ಅಂಧ ವಿಶ್ವಾಸಗಳನ್ನು ತೆರೆಯುತ್ತ ಹೋಗುತ್ತದೆ. ಉದಾಹರಣೆಗೆ ಮನೆಯಮೇಲೆ ಕಲ್ಲುಗಳು ಬೀಳಲಾರಂಭಿಸಿದ ಮೇಲೆ ಪೋಲಿಸರು ಇದರ ತಪಾಸಣೆಗಾಗಿ ಬಂದರು. ಆದರೂ ಕಲ್ಲುಗಳು ಬೀಳುವುದು ನಿಲ್ಲಲಿಲ್ಲ. ಪೋಲಿಸರು ಕಲ್ಲು ಎಸೆಯುತ್ತಿರುವವರು ದೆವ್ವಗಳೇ ಎಂಬ ತೀರ್ಮಾನಕ್ಕೆ ಬಂದರು. ಇದನ್ನು ವ್ಯಂಗ್ಯ ಮಾಡುತ್ತ ಕುವೆಂಪು ಹೇಳುತ್ತಾರೆ—'ಎಲ್ಲರೂ ಅಪಾರ್ಥಿವ ಕಾರಣಗಳನ್ನೇ ಕೊಡಲಾ ರಂಭಿಸಿದರು. ನವಿಲೂರಿಗೆ ಬಂದು ಪೋಲಿಸಿನವರಂತೂ ಕಲ್ಲೆಸೆಯುವವರು ದೆವ್ವ ಗಳಲ್ಲದೆ ಮನುಷ್ಯರಲ್ಲವೇ ಅಲ್ಲವೆಂದು ಸಾರಿ ಸಾರಿ ಹೇಳಿದರು. ಮನುಷ್ಯರಾಗಿದ್ದರೆ ಸರ್ವಾಂತರ್ಯಾಮಿಗಳಾದ ಪೋಲಿಸಿನವರಿಂದ ತಪ್ಪಿಸಿಕೊಳ್ಳುವರೆ? ಏನು ಮಾತು!' (ಪುಟ ೮೯) ಈ ವ್ಯಂಗ್ಯ ಪ್ರಖರವಾಗಿದೆ. ಇನ್ನೊಂದು ಪ್ರಸಂಗದಲ್ಲಿ ಜೋಯಿಸರು ಕಳ್ಳನನ್ನು ಒಂದು ಹೆಜ್ಜೆಯೂ ಅತ್ತಿತ್ತ ಹೋಗದಂತೆ ನಿಲ್ಲಿಸಿ ಬಿಟ್ಟಿದ್ದೇನೆಂದು ಬಡಾಯಿ ಕೊಚ್ಚಿದ. ಆದರೆ ಕಳ್ಳ ಮಾತ್ರ ಸಿಗಲಿಲ್ಲ. ಜೋಯಿಸರನ್ನು ವ್ಯಂಗ್ಯ ಮಾಡುವ ಈ ಪ್ರಸಂಗ ಸುಂದರವಾಗಿದೆ—'ಕೆಲವರು ಬೈದರು, ಕೆಲವರು ನಕ್ಕರು, ಕೆಲವರು ಕೈಚಪ್ಪಾಳೆ ಹೊಡೆದರು, ಮತ್ತೆ ಕೆಲವರು ತಮ್ಮ ತಮ್ಮಲ್ಲಿಯೇ ಜೋಯಿಸರು ಮೋಸ

ಗಾರನೆಂದು ಗುಸುಗುಸು ಮಾತನಾಡಿಕೊಂಡರು. ಮನುಷ್ಯರಂತೆಯೇ ಬೇಟೆಯನ್ನು ಹುಡುಕಿ ಹುಡುಕಿ ಬಳಲಿದ ಬೇಟೆನಾಯಿಗಳೂ ಜೋಯಿಸರನ್ನು ಬೈಯುವಂತೆ ಬೊಗಳಿದವು (ಪುಟ ೯೧)—ಹೀಗೆ 'ದೆವ್ವದ ಕಾಟ' ಕಥೆ ಮನುಷ್ಯನ ಹಣದಾಸೆ, ಅಧಿಕಾರದಾಸೆ ಮತ್ತು ಕುತಂತ್ರವನ್ನು, ನಮ್ಮ ಸಾಮಾಜಿಕ ಬದುಕಿನ ನಂಬಿಕೆ-ವಿಶ್ವಾಸಗಳನ್ನು ಪದರ-ಪದರವಾಗಿ ವಿಡಂಬಿಸುತ್ತ ಹೋಗುತ್ತದೆ.

'ಶ್ರೀಮಾನ್ಯೂಕವಾಗಿತ್ತು!' ಪ್ರಸ್ತುತ ಕಥಾ ಸಂಕಲನದ ಗಮನಾರ್ಹಕಥೆ, ಕರುಣ ರಸವನ್ನೇ ಘನಿಭೂತವಾಗಿರಿಸಿಕೊಂಡಿರುವ ಈ ಕಥೆ ಮಾನವೀಯ ಅಂತಃಕರಣವನ್ನು ಹೆಜ್ಜೆ ಹೆಜ್ಜೆಗೂ ಕಲಕುತ್ತ ಓದುಗರನ್ನು ತನ್ಮಯಗೊಳಿಸಿ ಕೊಳ್ಳುವ ಕಥೆ. ಈ ಕಥೆಯಲ್ಲಿ ಜಾನುವಾರುಗಳೊಡನೆ ರೈತನ ಆತ್ಮೀಯ ಒಡನಾಟ ಮತ್ತು ಪ್ರೀತಿಯನ್ನು ಮನಸಕರಗುವಂತೆ ಕುವೆಂಪು ಅವರು ಚಿತ್ರಿಸಿದ್ದಾರೆ. ರೈತನ ಬದುಕಿನಲ್ಲಿ ತಮ್ಮ ಮಕ್ಕಳು ಬೇರೆಯಲ್ಲ, ತಾವು ಸಾಕಿದ ಜಾನುವಾರುಗಳು ಬೇರೆಯಲ್ಲ. ಇವರೀರ್ವರ ಬದುಕಿನ ಈ ಅವಿನಾ ಸಂಬಂಧವನ್ನು ಕುರಿತು ಹೇಳುತ್ತಾರೆ—'ಅವನು ಅವುಗಳ ಸುಖವನ್ನು ತನ್ನ ಸುಖಕ್ಕಿಂತಲೂ ಹೆಚ್ಚಾಗಿ ಬಯಸುತ್ತಾನೆ. ಅವುಗಳಿಗಾಗಿ ಅನ್ನ ನೀರನ್ನಾದರೂ ತೊರೆದು ಕೆಲಸ ಮಾಡುತ್ತಾನೆ.' (ಪುಟ ೯೫) ಹೀಗೆ ಭಾರತೀಯ ಕೃಷಿಕ ತನ್ನ ಜೀವನ ದ್ರವ್ಯವಾದ ದನಕರುಗಳ ಬಗೆಗಿನ ಯಾವ ಮಟ್ಟದ ವ್ಯಾಮೋಹವನ್ನು ಬೆಳೆಸಿಕೊಂಡಿರುತ್ತಾನೆ ಎಂಬುದನ್ನು ಪ್ರಸ್ತುತ ಕಥೆಯಲ್ಲಿ ಕುವೆಂಪು ಚಿತ್ರಿಸಿದ್ದಾರೆ.

ಇಲ್ಲಿನ ಕಥಾನಾಯಕ ರಂಗ ಬೆಳಗಿನಿಂದ ಸಂಜೆಯವರೆಗೂ ದುಡಿದು ಬಂದು ಸಾಕಾಗಿ ಊಟಕ್ಕೆ ಕುಳಿತಿದ್ದಾನೆ, ತುತ್ತನ್ನು ಮೇಲಕ್ಕೆ ಎತ್ತಬೇಕು, ಅಷ್ಟರಲ್ಲಿ ಎಮ್ಮೆ ಕರು ತನ್ನ ಹಸಿವನ್ನು ಕೂಗಿ ಹೇಳುತ್ತದೆ. ರಂಗ ಕೂಡಲೇ ಎದ್ದು ಕೊಟ್ಟಿಗೆಗೆ ಬಂದು ನೋಡಿದರೆ ಆ ಎಮ್ಮೆಕರು ಕರುಣರಸವೇ ಮೈವೆತ್ತಂತೆ ನಿಂತಿದೆ. ಕುವೆಂಪು ಈ ಪ್ರಸಂಗವನ್ನು ಚಿತ್ರಿಸಿರುವ ರೀತಿ ಎಷ್ಟು ಪ್ರಭಾವಕಾರಿಯಾಗಿದೆಯೆಂದರೆ ಕರುವಿನ ಜೊತೆಗೆ ಈ ರೈತ ಕುಟುಂಬವೂ ತನ್ನ ಅಸಹಾಯಕತೆಯಿಂದ ವಿಲವಿಲನೆ ಒದ್ದಾಡುವುದನ್ನು ನೋಡಬಹುದು—'ಎಳೆಗರುವಿನ ಮಾತೃ ವಿಯೋಗ ದುಃಖ ಎದೆಯ ಮೇಲೆ ಭಾರವಾದ ಕಲ್ಲಿನಂತೆ ಕೂತುಬಿಟ್ಟಿತು.... ಹಿಂತಿರುಗಿ ಹೆಂಡತಿಗೆ ಸ್ವಲ್ಪ ಹಾಲು ತರುವಂತೆ ಹೇಳಿದ.' ಆಕೆ ಹಾಗೆಯೇ ಮಾಡಿದಳು. ನೊಳಗದಲ್ಲಿ ಹಾಲು ಹಾಕಿ ಕರುವಿಗೆ ಕುಡಿಸಲು ಯತ್ನಿಸಿದ. ಆದರೆ ಅವನ ಪ್ರಯತ್ನವೆಲ್ಲ ನೀರಿನಲ್ಲಿ ಹೋಮ ಮಾಡಿದಹಾಗಾಯಿತು. ಕರು ಒಂದು ತೊಟ್ಟು ಹಾಲನ್ನೂ ಕುಡಿಯಲಿಲ್ಲ. ಮುಂದೇನುಮಾಡಬೇಕೆಂದು ಸ್ವಲ್ಪ ಯೋಚಿಸಿ, ಎಮ್ಮೆಯನ್ನು ಅಗಲೇ ಹುಡುಕಬೇಕೆಂದು ಮನಸ್ಸು ಮಾಡಿದ.... ಅವನು ಹೊರಟುಹೋದ ಮೇಲೆ ನಾಗಿ ಆ ಹಳ್ಳಿಯ ಭೂತನಿಗೆ ಮೂರು ಕಾಟು ಸುಳಿದಿಟ್ಟು ಎಮ್ಮೆ ಸಿಕ್ಕಿದರೆ ಒಂದು ಕೋಳಿ ಕೊಡುವುದಾಗಿ ಹರಕೆ ಹೊತ್ತುಕೊಂಡಳು (ಪುಟ ೯೬-೯೭). ಈ ಕಥೆಯಲ್ಲಿ ತನ್ನ ಸಾಕು ಪ್ರಾಣಿಗಾಗಿ ಭಾರತೀಯ ರೈತ ತುಡಿಯುವುದನ್ನು ಗುರುತಿಸಬಹುದು—ರಂಗ ಎಮ್ಮೆಗಾಗಿ ಏನೆಲ್ಲ ಕಷ್ಟ ಪಡುತ್ತಾನೆ, ಕತ್ತಲಲ್ಲಿ ತನ್ನ ಜೀವದ ಹಂಗನ್ನೂ ತೊರೆದು, ಕಾಡುಬೆಟ್ಟಗಳಲ್ಲಿ ಸುತ್ತುತ್ತಾನೆ, ಜಿಗಣೆಗಳ ಕಾಟವನ್ನು ಸಹಿಸಿಕೊಳುತ್ತಾನೆ. ನಾಯಿಗಳ ಹಾವಳಿಯನ್ನು ಎದುರಿಸುತ್ತಾನೆ.

ರೈತ ನಮ್ಮ ಗ್ರಾಮಗಳ ಅಭಿನ್ನ ಅಂಗವಾಗಿರುವಂತೆ, ಜೋಯಿಸರು–ಪುರೋಹಿತರು ಅಲ್ಲಿನ ಅವಿಭಾಜ್ಯರೇ ಆಗಿದ್ದು, ಇವರು ಎಷ್ಟು ಸ್ವಕೇಂದ್ರಿತರಾಗಿ, ರೈತರನ್ನು ಶೋಷಿಸುತ್ತಾರೆ ಎಂಬುದನ್ನು ಕುವೆಂಪು ಚಿತ್ರಿಸುವುದನ್ನು ಮರೆಯುವುದಿಲ್ಲ. ರಂಗನ ದುಃಖವನ್ನು ಕೊಂಚವೂ ಅರ್ಥಮಾಡಿಕೊಳ್ಳದೆ ಈ ಜೋಯಿಸ ತನಗೆ ಬರಬೇಕಾಗಿರುವ ದಕ್ಷಿಣೆಯ ಚಿಂತೆಯಲ್ಲಿಯೇ ಮೈ ಮರೆತಿರುತ್ತಾನೆ. ಕುವೆಂಪು ಜೋಯಿಸರ ಈ ಅಮಾನವೀಯ ಸ್ವಭಾವವನ್ನು ಅವನ ಮಾತುಗಳಲ್ಲೇ ಬಹಿರಂಗಪಡಿಸುತ್ತಾರೆ—'ನಿಮಗೇನು ಈಗಿನ ಕಾಲದವರಿಗೆ ಭಯ ಭಕ್ತಿ ನಯ ನಡತೆ ಒಂದೂ ಇಲ್ಲ. ಸರದಾರರಂತೆ ಕೈಬೀಸಿಕೊಂಡು ಬಂದುಬಿಡುತ್ತೀರಿ. ಹಿಂದೆ ನಮ್ಮ ಮನೆಯ ಮೆಟ್ಟಿಲು ಹತ್ತಬೇಕಾದರೆ ಕೈಕಾಣಿಕೆ ತಂದೇ ತರುತ್ತಿದ್ದರು' (ಪುಟ ೧೦೦). ಅಂತೂ ರಂಗ ಜೋಯಿಸರ ಕೈ ತಪ್ಪಿಸಿಕೊಂಡು ಎಮ್ಮೆ ಇದ್ದ ಮನೆಗೆ ಬಂದ. ಇಲ್ಲಿ ಬಂದು ನೋಡಿದರೆ ನಾಗಣ್ಣಗೌಡರ ಮನೆಯಲ್ಲಿ ಆತಂಕದ ವಾತಾವರಣವಿದೆ. ಅವರ ಮಗ ವಾಸು ಖಾಯಿಲೆಯಿಂದ ಕಂಗಾಲಾಗಿದ್ದಾನೆ. ಬಾಯಿಗೆ ಬಂದಂತೆ ಬಡಬಡಿಸುತ್ತಿದ್ದಾನೆ. ಸತ್ತ ತಾಯಿಯನ್ನು ನೆನಪು ಮಾಡಿಕೊಳ್ಳುತ್ತಿದ್ದಾನೆ.

ರಂಗನ ಕಣ್ಣು ಈಗ ಬಾಲಕ ವಾಸುವನ್ನು ನೋಡುತ್ತಿದ್ದರೂ, ಅವನ ಕಣ್ಣುಗಳು ಎಳೆಗರುವಿನ ದೈನ್ಯವನ್ನು ನೋಡಿ ಬಂದಿದ್ದುವು. ಹೀಗಾಗಿ ರಂಗನ ಎರಡು ಕಣ್ಣುಗಳಲ್ಲಿ ಎರಡು ಚಿತ್ರಗಳು! ಈ ಎರಡೂ ಚಿತ್ರಗಳು ಒಂದೇ ಬಗೆಯವು, ಬೇರೆ ಬೇರೆಯಲ್ಲ. ಕುವೆಂಪು ಅವರು ರಂಗನ ಕಣ್ಣುಗಳ ಮೂಲಕ ಕರು ಮತ್ತು ವಾಸುವಿನ ದೈನ್ಯದ ಚಿತ್ರವನ್ನು ಕರುಳು ಕಿತ್ತುಬರುವಂತೆ ಚಿತ್ರಿಸಿದ್ದು ಇಂಥ ಚಿತ್ರಗಳನ್ನು ಇವರಂಥ ಮಾನವತಾವಾದಿಗಳು ಮಾತ್ರ ಚಿತ್ರಿಸಬಲ್ಲರು. ವಾಸುವಿನ ಜೀವ ಉಳಿಸಲು ನಾಗಣ್ಣಗೌಡರು, ಎಮ್ಮೆ ಕರುವಿನ ಜೀವ ಉಳಿಸಲು ರಂಗ—ಈ ಇಬ್ಬರ ಜೀವವೂ ಒಂದೊಂದು ಜೀವಿಯ ಬದುಕಿಗಾಗಿ ತಲ್ಲಣಿಸುತ್ತಿದೆ. ಈ ಇಬ್ಬರೂ ಸಂಕಟ ಭೋಗಿಗಳು. ಹೀಗಾಗಿಯೇ ಓಬಯ್ಯಗೌಡ ರಂಗನನ್ನು ತರಾಟೆಗೆ ತೆಗೆದುಕೊಂಡರೂ ನಾಗಣ್ಣಗೌಡರು ಎಳೆಗರುವಿನ ಮತ್ತು ತಮ್ಮ ಮಗನ ಸ್ಥಿತಿ ಬೇರೆಲ್ಲವೆಂದೇ ಭಾವಿಸಿದರು. ವಾಸು ಕೂಡ 'ಪಾಪ ಎಳೆಗರು! ಎಮ್ಮೆ ಹೊಡಕೊಂಡು ಹೋಗೋ ನೀನು, ರಂಗಾ' ಅಂದ (ಪುಟ ೧೦೨). ರಂಗ ಈ ಮಾತು ಕೇಳಿ ಗದ್ಗದಿತನಾಗಿ ಅನಾಯಾಸವಾಗಿ 'ದೇವರೇ, ಇವರನ್ನು ಉಳಿಸು' ಎಂದು ದೇವರಲ್ಲಿ ಮೊರೆಯಿಟ್ಟ. ಎಮ್ಮೆಯನ್ನು ಹೊಡೆದುಕೊಂಡು ಹೋಗಿ ಕರುವಿನ ಮುಂದೆ ಬಿಟ್ಟಾಗ ಎಮ್ಮೆ ಕರುವನ್ನು ಮೂಸಿ ನೆಕ್ಕಿತು. ತನ್ನ ಕಂದನನ್ನು ಪುನಃ ಸಂಧಿಸಿದ ಆನಂದಾನುಭೂತಿಯಿಂದ ಆಶೀರ್ವದಿಸಿತ್ತು. ಅತ್ತ, ವಾಸುವಿನ ಜ್ವರ ಇಳಿದಿತ್ತು. ಅಲ್ಲಿದ್ದವರು ಇದನ್ನು ವಿಭೂತಿಯ ಮಹಿಮೆ ಎಂದು ಭಾವಿಸಿದರು. ಆದರೆ ವಾಸುವಿನ ಚೇತರಿಕೆಗೆ ವಿಭೂತಿ ಕಾರಣವೋ ಅಥವಾ ಆ ಮೂಕಪ್ರಾಣಿಯ ದಿವ್ಯಾನಂದದ ಆಶೀರ್ವಾದ ಕಾರಣವೋ ಎಂದು ಯಾರು ಹೇಳಬೇಕು? ಆದರೆ ಮೂಗುಪ್ರಾಣಿಯ ಆನಂದವಂತೂ ಶ್ರೀಮನ್ನಾರಕವಾಗಿತ್ತು!

'ಹೋಳಿಗೆ ಪ್ರತಿಜ್ಞೆ' ಕಥೆಯು ಹೆಸರಿನಲ್ಲಿ ಈ ಸಂಕಲನದಲ್ಲಿ ಸೇರಿದ್ದರೂ ಕಥೆಯ ಲಕ್ಷಣಗಳಿಗಿಂತಲೂ ಲಲಿತ ಪ್ರಬಂಧದ ಲಕ್ಷಣಗಳು ಈ ಕಥೆಗಿವೆ. ಹೀಗಾಗಿ 'ಹೋಳಿಗೆ ಪ್ರತಿಜ್ಞೆ' ಒಂದು ಸುಂದರ ಲಲಿತ ಪ್ರಬಂಧ.

* * *

'ನನ್ನ ದೇವರು ಮತ್ತು ಇತರ ಕಥೆಗಳು' ಕಥಾ ಸಂಕಲನ (೧೯೪೦) 'ಸಂನ್ಯಾಸಿ ಮತ್ತು ಇತರ ಕಥೆಗಳು ಪ್ರಕಟವಾದ ನಾಲ್ಕು ವರ್ಷಗಳ ನಂತರ ಪ್ರಕಟವಾಗಿದ್ದು ಈ ಕಥಾ ಸಂಕಲನದಲ್ಲಿ ಕುವೆಂಪು ಅವರ ಕಥನ ಕಲೆಯು ವಿಕಾಸದ ಹೆಜ್ಜೆಯನ್ನು ಗುರುತಿಸಬಹುದಾಗಿದೆ. ಮೊದಲ ಸಂಗ್ರಹದ ಕಥೆಗಳಲ್ಲಿ ಬಿಡಿ ಬಿಡಿ ಜೀವನ ಚಿತ್ರಗಳ ಮೂಲಕ ಮಾನವೀಯ ಮೌಲ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಎತ್ತಿ ತೋರಿಸುವ ಪ್ರಯತ್ನವಿದ್ದರೆ 'ನನ್ನ ದೇವರು ...' ಕಥಾ ಸಂಕಲನದ ಕಥೆಗಳಲ್ಲಿ ಮಾನವ ಮನಸ್ಸಿನ ಒಳತೋಟಿಗಳನ್ನು, ದ್ವಂದ್ವ, ಸಂಘರ್ಷಗಳನ್ನು, ಒಟ್ಟಾರೆ ಮಾನವ ಮನಸ್ಸನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನವಿದೆ. 'ನನ್ನ ದೇವರು....'ಕಥಾ ಸಂಕಲನದ ಇನ್ನೊಂದು ವಿಶೇಷತೆಯೆಂದರೆ ಕುವೆಂಪು ಅವರ ದೃಷ್ಟಿ ಯಥಾರ್ಥತೆಯತ್ತ ತಿರುಗಿರುವುದು. ಶೋಷಣೆ, ಪರಿವರ್ತನೆ, ಅಮಾನವೀಯತೆಯೇ ಮುಂತಾದ ಸಾಮಾಜಿಕ ಅಭಿಶಾಪಗಳ ಮೇಲೆ ಇಲ್ಲಿನ ಕಥೆಗಳಲ್ಲಿ ಕುವೆಂಪು ಕ್ಷ-ಕಿರಣ ಬೀರಿದ್ದಾರೆ.

ಹದಿನೈದರ ಹರೆಯದಲ್ಲಿಯೇ ಗಂಡನನ್ನು ಕಳೆದುಕೊಂಡ ಹೆಣ್ಣೊಬ್ಬಳ ಮಾನಸಿಕ ಸಂಘರ್ಷವನ್ನು, ಅವಳು ಅನುಭವಿಸುವ ತುಮುಲ-ದ್ವಂದ್ವಗಳನ್ನು ಹಂತ ಹಂತವಾಗಿ 'ನನ್ನ ದೇವರು' ಕಥೆ ಚಿತ್ರಿಸುತ್ತದೆ. ವಿಧವೆ ನಾದಿನಿ ಹಾಗೂ ಆಕೆಯ ಭಾವ ಈ ಕಥೆಯ ಎರಡುಪ್ರಧಾನ ಪಾತ್ರಗಳು. ವಿಧವೆಯಾದ ಈಕೆಯ ಹೃದಯದಲ್ಲಿ ಕಾಮನೆಗಳು ಸುಪ್ತ ಪ್ರಜ್ಞೆಯಲ್ಲಿ ಅತ್ಯಂತ ಕ್ರಿಯಾಶೀಲವಾಗಿದ್ದು ಅವು ಹೊರಬರಲು ತವಕಿಸುತ್ತಿದ್ದರೂ, ಭಾವನಲ್ಲಿ ಪತಿಯ ಸುಖವನ್ನು ಕಾಣುವ ಹೆಬ್ಬಯಕೆಯಿಂದ ತುಡಿದರೂ ಆತನ ಸ್ಥಿತಪ್ರಜ್ಞತ್ವ ಹಾಗೂ ರಾಗ ರಹಿತ ವ್ಯಕ್ತಿತ್ವದ ಎದುರಿನಲ್ಲಿ ಅವು ಎಷ್ಟರ ಮಟ್ಟಿಗೆ ಕಮರಿ ಹೋಗುತ್ತವೆಯೆಂದರೆ ಭಾವ ದೇವರಾಗಿ ಬಿಡುತ್ತಾನೆ. ಸಹಜ ಕಾಮನೆಗಳು ಅಸಹಜವಾಗಿ ಕುಂಠಿತಗೊಳ್ಳುತ್ತವೆ.

ಆತ್ಮಕಥಾತ್ಮಕ ಶೈಲಿಯಲ್ಲಿ ನಾದಿನಿಯ ಬಾಯಿಂದ ನಿರೂಪಿತವಾಗಿರುವ ಈ ಕಥೆಯ ಪ್ರಮುಖ ಪಾತ್ರವಾದ ಭಾವ ತೀರಾ ಆದರ್ಶದ ಸ್ಥಿತ ಪ್ರಜ್ಞತೆಯ ಸಾಕಾರ ಮೂರ್ತಿ, ಲೌಕಿಕ ಬದುಕಿನ ಬಗೆಗೆ ನಿರ್ಮೋಹಿ, ವೇದ-ಭಗವದ್ಗೀತೆ ಮುಂತಾದ ಧಾರ್ಮಿಕ ಗ್ರಂಥಗಳ ಅಧ್ಯಯನದಿಂದ ಮನಸ್ಸನ್ನು ಮಾಗಿಸಿಕೊಂಡವ, ಬಾಹ್ಯ ಆಚಾರ-ವಿಚಾರ, ಮಡಿ-ಗಿಡಿ ನೆಡಸದ, ದೇವರ ಪೂಜೆ ಸಹ ಮಾಡದ, ದೇವರನ್ನು ಹೀಯಾಳಿಸುವಷ್ಟರ ಮಟ್ಟಿಗೆ ನಾಸ್ತಿಕತೆಯನ್ನು ರೂಢಿಸಿಕೊಂಡಿರುವ ನಾಸ್ತಿಕ. ಕಾವ್ಯ-ತತ್ವ-ರಾಜಕೀಯದಲ್ಲೂ ಆಸಕ್ತಿ ಬೆಳೆಸಿಕೊಂಡಿರುವವ. ಹುಟ್ಟು ಸಾವುಗಳ ಗುಟ್ಟನ್ನು ಅರಿತು ತಮ್ಮ ಸತ್ತಾಗಲೂ ಕಣ್ಣೀರು ಹಾಕದವ. ತುಂಬು ಯೌವನವನ್ನು ಹೊಂದಿದ್ದ ನಾದಿನಿ ತಾನಾಗಿ ಬಂದಾಗಲೂ ಆಕೆಯ ಕಡೆ ಕಣ್ಣೆತ್ತಿ ಸಹ ಕಾಮುಕತೆಯಿಂದ

ನೋಡದೆ ನಿರ್ವಿಕಾರ ಭಾವದಿಂದ ನಡೆದುಕೊಂಡವ ..ಹೀಗೆ 'ನನ್ನ ದೇವರು' ಕಥೆಯ ಉದ್ದಕ್ಕೂ ಭಾವ ಪರಮಪೂಜ್ಯ ವ್ಯಕ್ತಿತ್ವ ಹೊಂದಿದ ಉದಾತ್ತ ಪುರುಷನ ರೂಪದಲ್ಲೇ ಚಿತ್ರಿತನಾಗಿದ್ದಾನೆ.

ಆದರೆ ಭಾವನ ಪಾತ್ರಕ್ಕೆ ತದ್ವಿರುದ್ಧವಾದದ್ದು ನಾದಿನಿಯ ಪಾತ್ರ. ಅತ್ಯಂತ ಕಿರಿ ವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡ ಈಕೆ ವಯಸ್ಸಿಗೆ ಸಹಜವಾದ ಕಾಮನೆಗಳನ್ನು ಹೊಂದಿರುವ ಹೆಣ್ಣು. ತನ್ನ ಭಾವನ ವ್ಯಕ್ತಿತ್ವದ ಸೆಳತಕ್ಕೆ ಆಕರ್ಷಿತಗೊಂಡು. ಆತನಲ್ಲೇ ತನ್ನ 'ಪತಿ'ಯನ್ನು ಕಾಣಲು ಪ್ರಯತ್ನಿಸಿ ಹಿಮ್ಮೆಟ್ಟಿದವಳು. ನಾದಿನಿ ಮದುವೆಗೆ ಮುಂಚಿನಿಂದಲೂ ಭಾವನ ವಿಚಾರವಾಗಿ ತಿಳಿದುಕೊಂಡಿದ್ದಳು, ಗಂಡ ಸತ್ತಮೇಲೆ ಆತನ ಬಗೆಗೆ ಮತ್ತಷ್ಟು ಕುತೂಹಲಿಯಾಗಿ ಆತನ ಒಳ ಹೊರಗನ್ನು ಅರ್ಥಮಾಡಿ ಕೊಳ್ಳಲು ಪ್ರಯತ್ನಪೂರ್ವಕವಾಗಿ ಕ್ರಿಯಾಶೀಲಳಾಗುತ್ತಾಳೆ. ಓದಿನಲ್ಲಿ ತನ್ನನ್ನು ತಾನು ತಲ್ಲೀನಗೊಳಿಸಿಕೊಂಡಂತೆ ನಾಟಕವಾಡಿದರೂ, ಸೀತೆ–ಸಾವಿತ್ರಿಯರ ಕಥೆಗಳನ್ನು ಓದುವುದರ ಮೂಲಕ ಒಳಗಿನ ಭಾವನೆಗಳನ್ನು ಹತ್ತಿಕ್ಕದಂತೆ ಅಭಿನಯಿಸಿದರೂ ಅಂತರಂಗದ ಕಾಮನೆಗಳನ್ನು ಹತ್ತಿಕ್ಕುವುದು ಅಷ್ಟು ಸುಲಭವಲ್ಲವೆಂಬುದನ್ನು ಕುವೆಂಪು ಅವರು ಪ್ರಸ್ತುತ ಕಥೆಯಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಈ ಕಥೆಯ ಎರಡು ಪಾತ್ರಗಳು ಮಾನವ ಸ್ವಭಾವದ ಎರಡು ಮುಖಗಳನ್ನು ಪ್ರತಿನಿಧಿಸುತ್ತವೆ. ನಾದಿನಿಯ ಮನಸ್ಸಿನ ದ್ವಂದ್ವ-ವಿಪ್ಲವಗಳಿಗೆ ಆಕೆ ವಿಧವೆಯಾಗಿರುವುದು ಕಾರಣವಾಗಿದೆ. ಆದರೆ ಭಾವನ ವಯಸ್ಸಿಗೆ ಮೀರಿದ ಸ್ಥಿತಪ್ರಜ್ಞತೆಗೆ ಕಥೆಯಲ್ಲಿ ಯಾವುದೇ ಕಾರಣವಿಲ್ಲದಿರುವುದರಿಂದ ಆತನ ನಡವಳಿಕೆ ವಿಚಿತ್ರ ಹಾಗೂ ಅಸ್ವಾಭಾವಿಕವೆಂತಲೂ ಅನ್ನಿಸುತ್ತದೆ. ಭಾವನ ತಥಾಕಥಿತ ಉದಾತ್ತ ಗುಣಗಳು ಆರೋಪಿತವೆಂದೂ ಅನ್ನಿಸುತ್ತದೆ. ಕುವೆಂಪು ಅವರು ಭಾವನ ವ್ಯಕ್ತಿತ್ವದ ಮೇಲೆ ಸಂತನ ಗುಣಗಳನ್ನು ಆರೋಪಿಸಿದ್ದಾರೆ ಹಾಗೂ ಅವನನ್ನು ಅಲೌಕಿಕ ವ್ಯಕ್ತಿತ್ವದವನಂತೆ ಚಿತ್ರಿಸಿರುವುದರಿಂದ ಸಹಜತೆಯ ಅಭಾವ ಎದ್ದು ಕಾಣುತ್ತದೆ. ಈ ದೃಷ್ಟಿಯಿಂದ ಇಲ್ಲಿಯ ನಾದಿನಿ ಸಹಜ ಸತ್ಯ, ಯಥಾರ್ಥಳಾಗಿ ಕಾಣುತ್ತಾಳೆಯೇ ಹೊರತಾಗಿ ಭಾವ ಕಾಣುವುದಿಲ್ಲ. ಸಂತನಂತಿರುವ ಭಾವ ತನ್ನ ಮನೆಯಲ್ಲೇ ಇದ್ದ ಅಸಹಾಯಕ ಬಾಲ ವಿಧವೆಯನ್ನು ಮಾನವೀಯ ಕಳಕಳಿಯಿಂದ ನೋಡಿದ್ದಿದ್ದರೆ ಈ ಪಾತ್ರ ಇನ್ನಷ್ಟು ಭವ್ಯವಾಗುತ್ತಿತ್ತು ಎಂದು ಅನ್ನಿಸುತ್ತದೆ. ಆರಾಧನಾ ಭಾವನೆಯಿಂದ 'ನನ್ನ ದೇವರು' ಎಂದು ಕರೆಸಿಕೊಂಡ ಈತ ನಿಜವಾಗಿಯೂ ದೇವತಾ ಪುರುಷನಾಗಬಹುದಿತ್ತು. ಕುವೆಂಪು ಅವರು ತಮ್ಮ ಆದರ್ಶವನ್ನು ಯಥಾರ್ಥದೊಂದಿಗೆ ಮುಖಾಮುಖಿ ಮಾಡಿಸುವ ಪ್ರಯತ್ನ ಮಾಡದಿರುವುದು ಈ ಕಥೆಯ ಸೋಲು ಅನ್ನಬಹುದು.

'ನನ್ನ ದೇವರು' ಕಥೆಯಲ್ಲಿ ಗಂಡಿನ ಸ್ಥಿತಪ್ರಜ್ಞತೆ, ನಿರ್ವಿಕಾರ ಮನಸ್ಸನ್ನು, ಚಾಂಚಲ್ಯರಹಿತ ಮನೋದಾರ್ಢ್ಯವನ್ನು ನೋಡಿದರೆ, 'ಮೀನಾಕ್ಷಿ ಮನೇ ಮೇಷ್ಟ್ರು' ಕಥೆಯಲ್ಲಿ ಅದೇ ಗಂಡಿನ ಪ್ರೇಮ ಹಾಗೂ ಹೆಣ್ಣಿನ ಬಗೆಗಿರುವ ಆತನ ಆಕರ್ಷಣೆಯನ್ನು, ತಾನು ಮನಸಾರೆ ಒಲಿದ ಹೆಣ್ಣನ್ನು ಪಡೆದುಕೊಳ್ಳಲು ಮೇಷ್ಟ್ರು ಅನುಭವಿಸುವ ಮಾನಸಿಕ ಸಂಘರ್ಷವನ್ನು ನೋಡಬಹುದಾಗಿದೆ. 'ನನ್ನ ದೇವರು' ಕಥೆಯಲ್ಲಿ ನಾದಿನಿ ಭಾವನತ್ತ

ಆಕರ್ಷಿತಗೊಳ್ಳುವಂತೆ 'ಮೀನಾಕ್ಷಿ....' ಕಥೆಯಲ್ಲಿ ಮೇಷ್ಟ್ರು ಮೀನಾಕ್ಷಿಯ ಸಾನ್ನಿಧ್ಯಕ್ಕೆ ಬರಲು ತೊಳಲಾಡುತ್ತಾರೆ. 'ನನ್ನ ದೇವರು' ಕಥೆಯಲ್ಲಿ ಗಂಡಿನ ಪ್ರೇಮದ ಸೆಳತಕ್ಕೆ ಸಿಕ್ಕಿದ ಹೆಣ್ಣಿನ ಮನಸ್ಸಿನ ಒಳತೋಟೆಗಳ ಚಿತ್ರಣವಿದ್ದರೆ 'ಮೀನಾಕ್ಷಿ....' ಕಥೆಯಲ್ಲಿ ಹೆಣ್ಣಿನ ಪ್ರೇಮದ ಸೆಳತಕ್ಕೆ ಸಿಕ್ಕಿದ ಗಂಡಿನ ಮನಸ್ಸಿನ ಒಳತೋಟೆಗಳ ಚಿತ್ರಣವಿದೆ. ಅಲ್ಲಿ ಭಾವ, ಇಲ್ಲಿ ಮೀನಾಕ್ಷಿ. ಅಲ್ಲಿನ ಭಾವ ಓದಿದ, ಮಾನಸಿಕವಾಗಿ ಬೆಳೆದ, ಆದರೆ ಹೆಣ್ಣಿನ ಭಾವಗಳಿಗೆ ಸ್ಪಂದಿಸದ ವ್ಯಕ್ತಿಯಾಗಿದ್ದರೆ, ಇಲ್ಲಿನ ಮೀನಾಕ್ಷಿ ತನ್ನ ಭವಿಷ್ಯವನ್ನು ತಂದೆಯ ಕೈಗೆ ಕೊಟ್ಟಿರುವ, ಅವರು ತನಗೆ ಒಳಿತನ್ನೇ ಮಾಡುವರು ಎಂದು ನಂಬಿರುವ ಮುಗ್ಧೆ. ಅಲ್ಲಿನ ಭಾವ ನಾದಿನಿಯ ವಾಸ್ತವ ಬದುಕಿನ ಬಗೆಗೆ ಕಿಂಚಿತ್ತೂ ಯೋಚಿಸದ ಅಮಾನವೀಯ, ಇಲ್ಲಿನ ಮೇಷ್ಟ್ರು ತನ್ನ ಪ್ರೀತಿಯ ಮೀನಾಕ್ಷಿ ಸುಶಿಕ್ಷಿತ, ಸುಸಂಸ್ಕೃತ ವ್ಯಕ್ತಿಗೆ ದಕ್ಕಿರುವುದನ್ನು ಕಂಡು ಸುಖಿಸುವ, ತಾನು ಹೆಣ್ಣಾಗಿದ್ದರೆ, ಇಂಥ ಗಂಡನನ್ನೇ ಪಡೆದುಕೊಳ್ಳಲು ಹಂಬಲಿಸುವಷ್ಟರ ಮಟ್ಟಿಗೆ ಆ ಗಂಡನ್ನು ಮೆಚ್ಚಿಕೊಂಡ ಸಹೃದಯಿ. ತಾನು ಪಡೆಯಬೇಕಾಗಿದ್ದ ಸ್ಥಾನವನ್ನು ಪಡೆದುಕೊಂಡ ಗಂಡಿನ ಕೊಲೆಗೆಂದು ತಂದಿದ್ದ ಚಾಕುವನ್ನು ತಾನು ಪ್ರೀತಿಸುವ ಹೆಣ್ಣಿನ ರಕ್ಷಣೆಗೆಂದು ನೀಡುವ ಮತ್ತು ಆಕೆಯನ್ನು 'ತಾಯಿ' ಎಂದು ಸಂಬೋಧಿಸುವುದರ ಮೂಲಕ ನಿರ್ಮಲ ಅಂತಃಕರಣವನ್ನು ಮೆರೆಯುವ ಮೇಷ್ಟ್ರು ಓರ್ವ ಉದಾತ್ತನಾಯಕ. ಹೀಗೆ ಒಂದು ಭೀಕರ ದುರಂತ ಕಥೆಯಾಗಬೇಕಾಗಿದ್ದ 'ಮೀನಾಕ್ಷಿ....' ಕಥಾನಾಯಕನ ಆರೋಗ್ಯಪೂರ್ಣ ದೃಷ್ಟಿಯಿಂದಾಗಿ ಸುಖಾಂತವಷ್ಟೇ ಅಲ್ಲ, ಬದುಕಿನ ನಾನಾ ಸಂದರ್ಭಗಳಲ್ಲಿ ನಾವು ಬೆಳಸಿಕೊಳ್ಳಬೇಕಾದ ಮನೋಭಾವವನ್ನು ನಿಚ್ಚಳಗೊಳಿಸುತ್ತದೆ. ಹೀಗಾಗಿಯೇ ಈ ಕಥೆ ಕುವೆಂಪು ಅವರ ಕಥೆಗಳಲ್ಲೇ ವಿಶಿಷ್ಟವೆನಿಸಿದೆ.

ಕಥನಕಲೆಯ ದೃಷ್ಟಿಯಿಂದಲೂ ಸಣ್ಣ ಕಥೆಗೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಒಳಗೊಂಡಿರುವ 'ಮೀನಾಕ್ಷಿ....' ಅಪೂರ್ವ ಅನುಭವಕೊಡುವ ಕಥೆ. ಕುವೆಂಪು ಅವರ ಕಲೆಗಾರಿಕೆಯ ಒಂದು ಉತ್ತಮ ಮಾದರಿಯನ್ನಾಗಿ ಈ ಕಥೆಯನ್ನು ಉದಹರಿಸಬಹುದು. ಈ ಕತೆಯನ್ನು ಓದುವುದೇ ಒಂದು ವಿಶಿಷ್ಟ ಅನುಭವ. ಪಾತ್ರಗಳ ಭಾವನೆಗಳಿಗನುಗುಣವಾಗಿ ಭಾಷೆ ತನ್ನ ಲಯಾತ್ಮಕತೆ ಹಾಗೂ ಚಿತ್ರಾತ್ಮಕತೆಯನ್ನು ಮೆರೆಯುವುದು ನಿಜಕ್ಕೂ ಪ್ರಭಾವಕಾರಿಯಾಗಿದೆ. ಹೆಜ್ಜೆ ಹೆಜ್ಜೆಗೂ ಕುತೂಹಲವನ್ನು ಹುಟ್ಟಿಸುತ್ತ, ತಿರುವುಗಳನ್ನು ಪಡೆದುಕೊಳ್ಳುತ್ತ ಸಾಗುತ್ತದೆ. ಹಾಗೂ ಅನಿರೀಕ್ಷಿತ ಆನಂದವನ್ನು ನೀಡುತ್ತದೆ. ಈ ದೃಷ್ಟಿಯಿಂದ ನವ ಯುವಕ-ಯುವತಿಯರ ಪ್ರೇಮಾನುಭೂತಿಯನ್ನು ಅತ್ಯಂತ ಸರಸವಾಗಿ ನಿರೂಪಿಸುವ 'ಮೀನಾಕ್ಷಿ ..' ಕನ್ನಡದ ಮಹತ್ವದ ಕತೆಗಳಲ್ಲೊಂದಾಗಿದೆ.

'ಧನ್ವಂತರಿಯ ಚಿಕಿತ್ಸೆ'-ಒಂದು ಫ್ಯಾಂಟಸಿ. ಈ ಫ್ಯಾಂಟಸಿಯ ಮೂಲಕ ಕುವೆಂಪು ಅವರು ಆಧುನಿಕ ಸಮಾಜದ ಶ್ರೀಮಂತ ವರ್ಗದ ಸುಖ ಭೋಗ-ವಿಲಾಸಕ್ಕಾಗಿ ರೈತನ ಶೋಷಣೆಯಾಗುತ್ತಿರುವುದನ್ನು ತುಂಬಾ ಕಾಳಜಿಯಿಂದ ವಿರೋಧಿಸಿ ರೈತನ ಹೆಗಲಿಗೆ ರಾಜ್ಯಭಾರದ ಹೊರೆಯನ್ನು ತಲುಪಿಸಿದಾಗ ಮಾತ್ರ ಸುಖೀರಾಜ್ಯ ಸ್ಥಾಪಿತವಾಗಬಲ್ಲದು ಎಂದು ಅಭಿಪ್ರಾಯ ಪಡುತ್ತಾರೆ. ಕಥೆಯ ಕೊನೆಯಲ್ಲಿ

ವಿಶ್ವಾಮಿತ್ರ ಗೂಳಿಯಂತೆ ಹೂಂಕರಿಸಿದಾಗ ಕ್ರಾಂತಿಭೂತಗಳು ರೈತನ ಎದೆಯ ಮೇಲಿರುವ ಭಾರವನ್ನೆಲ್ಲ ನೆಲಕ್ಕುರುಳಿಸಿದಾಗ ರೈತನ ನರಳಾಟ ಇಲ್ಲದಾಗುತ್ತದೆ. ಉಸಿರಾಟ ನಿರಾಳವಾಗುತ್ತದೆ. ಹೀಗೆ 'ಧನ್ವಂತರಿ ಚಿಕಿತ್ಸೆ' ರೈತನ ಕೈಲಿ ಅಧಿಕಾರ ಬರುವ ದಿನಗಳನ್ನು ಕಲ್ಪಿಸುತ್ತದೆ.

ರೈತನ ನರಳುವಿಕೆಯ ಹಿನ್ನೆಲೆಯಲ್ಲಿ ಅನಾವರಣಗೊಳ್ಳುತ್ತ ಹೋಗುವ ಭಾರತದ ಬಡತನ, ಇಲ್ಲಿನ ನರಳುವಿಕೆ, ಬದುಕಿನ ವಿರೋಧಾಭಾಸಗಳು, ವಿಸಂಗತಿಗಳು, ವಿದ್ರೂಪಗಳು ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಇಡಿಯಾಗಿ ವ್ಯಂಗ್ಯಮಾಡುತ್ತವೆ. ಈ ವ್ಯಂಗ್ಯ ಪರಿವರ್ತನೆಯನ್ನು ಅನಿವಾರ್ಯವೆಂದು ಸಾರಿ ಹೇಳುತ್ತದೆ.

'ನರಳಾಟ'ದ ಅನ್ವೇಷಣೆಯೇ ಈ ಕತೆಯ ಕೇಂದ್ರವಸ್ತು. ಈ ನರಳಾಟದ ಸ್ವರೂಪವನ್ನು ಕುವೆಂಪು ಹೀಗೆ ವರ್ಣಿಸುತ್ತಾರೆ—'ಅವರು ಮಾತನಾಡುತ್ತಿದ್ದಾಗಲೇ ಮತ್ತೆ ದೇವಾಪ್ಸರೆಯರ ಆನಂದ ನಿನಾದಗಳನ್ನೆಲ್ಲ ನುಂಗಿ ಮೀರಿ ಆ ನರಳು ನೆತ್ತರು ಹೆಪ್ಪುಗಟ್ಟುವಂತೆ ಕೇಳಿಸಿತು. ಋಷಿಗಳಿಬ್ಬರೂ ದಿಗ್ಭ್ರಾಂತರಾಗಿ ಗದಗದನೆ ನಡುಗುತ್ತಾ ನಿಂತರು! ಯಾವನಾದರೊಬ್ಬನನ್ನ ಮುಳ್ಳಿನ ಹಾಸಿಗೆಯ ಮೇಲೆ ಅಂಗಾತನೆ ಮಲಗಿಸಿ, ಎದೆಯ ಮೇಲೆ ಹೆಬ್ಬಂಡೆಯನ್ನು ಬಹುಕಾಲದವರೆಗೂ ಹೇರಿ, ಮಣಭಾರದ ಸುತ್ತಿಗೆಯಿಂದ ಬೀಸಿ ಬೀಸಿ ಹೊಡೆದರೆ, ಅವನು ಹೇಗೆ ನರಳಬಹುದೋ ಹಾಗಿದ್ದಿತು ಆ ಬೀಭತ್ಸಕರವಾದ ನರಳು' (ಪುಟ ೬೩). ಎದೆ ಒಡೆದುಹೋಗುವಂಥ ಈ ನರಳನ್ನು ಹುಡುಕಿಕೊಂಡು ಭೂಲೋಕಕ್ಕೆ ಬಂದ ವಿಶ್ವಾಮಿತ್ರ ಮತ್ತು ಪರಶುರಾಮರು ತಮ್ಮ ಕಾಲದಲ್ಲಿ ಕಂಡ ಭೂಮಿಗೂ, ಈಗ ಕಾಣುತ್ತಿರುವ ಭೂಮಿಗೂ ಸಾಕಷ್ಟು ಅಂತರವನ್ನು ಕಾಣುತ್ತಾರೆ. ಭೂಮಿಯ ಈಗಿನ ಬದುಕು ಅಸಹನೀಯವಾಗಿರುವುದಕ್ಕೆ, ಕೃತ್ರಿಮವಾಗಿರುವುದಕ್ಕೆ ಮಾತು ಮತ್ತು ಕೃತಿಗಳ ನಡುವಿರುವ ಅಂತರವೇ ಕಾರಣವಾಗಿರುವುದನ್ನು ಕಾಣುತ್ತಾರೆ. ನಾಗರೀಕತೆ, ವಿದ್ಯೆ ಮತ್ತು ಪ್ರಗತಿಯ ಹೆಸರಿನಲ್ಲಿ ಕಟ್ಟಿರುವ ಸೌಧಗಳು, ಐಶಾರಾಮುವಾದ ಬದುಕು ಇವರನ್ನು ದಂಗುಬಡಿಸುತ್ತದೆ. 'ಮಧ್ಯಪಾನ ನಿರೋಧದ ಆಫೀಸಿನ ಹಿಂದುಗಡೆ ಸೇಂದಿಯಂಗಡಿ, ಪೋಲಿಸು ಠಾಣೆಯ ಹಿಂಭಾಗದ ಮನೆಯ ಉಪ್ಪರಿಗೆಯಲ್ಲಿ ಜೂಜಿನ ಮನೆ, ಗಲ್ಲಿಯಲ್ಲಿ ಯಾರೂ ಅಸಹ್ಯ ಮಾಡಬಾರದು ಎಂದು ಬರೆದಿದ್ದ ಬೋರ್ಡಿನ ಕೆಳಗೇ ಸಹಿಸಲಸಾಧ್ಯವಾದ ದುರ್ಗಂಧ, ಸಿನಿಮಾ, ನಾಟಕಶಾಲೆ, ಕಾರಖಾನೆ, ಸ್ಕೂಲು, ಕಲಾಶಾಲೆ ಇತ್ಯಾದಿ ಇತ್ಯಾದಿಗಳನ್ನೆಲ್ಲ ಆಶ್ಚರ್ಯ, ಕುತೂಹಲ, ಜುಗುಪ್ಸೆ ಮತ್ತು ಹರ್ಷಗಳಿಂದ ಸಮೀಕ್ಷಿಸುತ್ತಾ ನರಳು ದನಿಗೆ ಮೂಲವಾದ ಕಾರಣವನ್ನರಸಿದರು.' ಇದು ಕುವೆಂಪು ಚಿತ್ರಿಸಿರುವ ನಮ್ಮ ಆಧುನಿಕರ ಬದುಕು.

ಕುವೆಂಪು 'ಧನ್ವಂತರಿ ಚಿಕಿತ್ಸೆ' ಕಥೆಯಲ್ಲಿ ಶೋಷಣೆ ನಮ್ಮ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗವಾಗಿರುವುದನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಈ ಶೋಷಣೆ ಎಷ್ಟು ವಿಧಿವತ್ತಾಗಿದೆ ಅಂದರೆ ಹಿಂದಿನ ಪುರೋಹಿತಶಾಹಿ ಸಂಸ್ಕೃತಿ ಸ್ವಲ್ಪವೂ ಊನಗೊಳ್ಳದೆ ಅನೂಚಾನವಾಗಿ ಸಾಗಿ ಬಂದಿದೆ. ಪೂಜಾರಿ ಗುಡಿಯಲ್ಲಿ ದೇವರಿಲ್ಲವೆಂಬ ದೃಢ ನಂಬುಗೆಯಿಂದ ಪೂಜೆಗೆ ಬಂದಿದ್ದವರ ಹಣ ಸುಲಿಯುತ್ತಿದ್ದಾನೆ; ಹರಿಕಥೆಯ ದಾಸ ಭಗವಂತನ ಕರುಣೆಯ ಕಥೆಯನ್ನು ಕಣ್ಣೀರು ಬರುವಂತೆ ವರ್ಣಿಸುತ್ತ ಜನರನ್ನು

ಮೌಢ್ಯಕ್ಕೆ ತಳ್ಳುತ್ತಿದ್ದಾನೆ; ರೋಗ ವಾಸಿ ಮಾಡಬೇಕಾದ ಡಾಕ್ಟರ್ ದರ್ಪದ ಜೀವನ ಸಾಗಿಸುತ್ತ ಚಿನ್ನದ ನಾಣ್ಯಗಳಿಗೆ ಜೊಲ್ಲು ಸುರಿಸುತ್ತ ಕರೆದಲ್ಲಿಗೆ ಹೋಗು ತ್ತಿದ್ದಾನೆ; ಭಟ್ಟರು ರೋಗ ನಿವಾರಣೆಗೆ ಪಿಶಾಚಿಯ ಹೆಸರಿನಲ್ಲಿ ಮಾಯ, ಮಂತ್ರ ಮಾಡಿ ಚಿನ್ನದ ನಾಣ್ಯಗಳನ್ನು ಸೂರೆಮಾಡುತ್ತಿದ್ದಾರೆ; ವಿಚಿತ್ರವೆಂದರೆ ಡಾಕ್ಟರು, ಅಧಿಕಾರಿಗಳು, ಪುರೋಹಿತರು ಹತ್ತಿರ ಬಂದರೆ ರೋಗಿಯ ಎದೆ ಭಾರವಾಗುತ್ತದೆ. ನರಳುವುದು, ನೆತ್ತರು ಕಾರುವುದು ಹೆಚ್ಚಾಗುತ್ತದೆ. ದೂರ ಹೋದರೆ ಕಡಿಮೆಯಾಗು ತ್ತದೆ. ಅಂದರೆ ಈ ವರ್ಗಗಳು ಶೋಷಿಸುವುದರಲ್ಲಿ ಯಾವುದೇ ಮಾನವೀಯ ಅನುಕಂಪಕ್ಕೂ ಒಳಗಾಗುವುದಿಲ್ಲ. ಈ ಎಲ್ಲ ಶೋಷಣೆಗೆ ಕಳಸವಿಟ್ಟಂತೆ ಧನ್ವಂತರಿ ತನ್ನ ದಿವ್ಯಮಂತ್ರದ ಮೂಲಕ ರೋಗದ ಕಾರಣ ಹುಡುಕಿದಾಗ ಸ್ಪಷ್ಟವಾಗುವ ಕರಾಳಸತ್ಯ ಮತ್ತು ಯಥಾರ್ಥತೆ ಈ ದೇಶದ ರೈತನ ಕರುಣಾಜನಕ ಸ್ಥಿತಿಯ ಮಹಾ ದರ್ಶನ ಮಾಡಿಸುತ್ತದೆ. ರೈತರ ಬೆವರು ಶ್ರೀಮಂತ ವರ್ಗದ ಹಾಗೂ ನಾಗರೀಕ ಬದುಕಿನ ಸುಗಂಧ ಜಲವಾಗಿರುವುದನ್ನೂ, ರೈತನ ನರಳುವಿಕೆಗೆ ನಾಗರೀಕ ಬದುಕಿನ ಭೋಗವಿಲಾಸಗಳು ಕಾರಣವಾಗಿರುವುದನ್ನು ಕಥೆಗಾರರಾದ ಕುವೆಂಪು ಅತ್ಯಂತ ಕಳಕಳಿ ಯಿಂದ ಗುರುತಿಸುತ್ತಾರೆ—'ಅಲ್ಲಿನ ದೇವಾಲಯಗಳೂ ವಿದ್ಯಾನಿಲಯಗಳೂ, ಕ್ರೀಡಾ ಮಂದಿರಗಳೂ, ಪ್ರಮೋದವನಗಳೂ, ಕರ್ಮಸೌಧಗಳೂ ತಮ್ಮ ಭಾರವನ್ನೆಲ್ಲಾ ರೈತನ ಎದೆಯ ಮೇಲೆ ಹಾಕಿ, ಸಂಸ್ಕೃತಿ ಮತ್ತು ನಾಗರೀಕತೆ ಎಂಬ ಕೀರ್ತಿಯಿಂದ ಮೆರೆಯು ತ್ತವೆ' (ಪುಟ ೮೧).

'ಧನ್ವಂತರಿಯ ಚಿಕಿತ್ಸೆ' ಕಥೆಯಲ್ಲಿ ಕುವೆಂಪು ನರಳುವಿಕೆಯನ್ನು ಹುಡುಕುವುದರ ಮೂಲಕ ಈ ದೇಶದ ಯಥಾರ್ಥ ದರ್ಶನ ಮಾಡಿಸಿದ್ದಾರೆ. ಮೂಲತಃ ಭಾವಜೀವಿ ಯಾದ ಕುವೆಂಪು ಅವರು ಈ ಕಥೆ ಬರೆದಾಗ ಈ ದೇಶದಲ್ಲಿ ತೀವ್ರವಾಗುತ್ತಿದ್ದ ಪ್ರಗತಿಶೀಲ ಚಳುವಳಿ ಜನಪದ ಧೋರಣೆಯುಳ್ಳ ಸಾಹಿತ್ಯಾಂದೋಲನದಿಂದ ಪ್ರಭಾವಿತ ರಾಗಿರುವುದನ್ನು ಈ ಕಥೆ ಮತ್ತು 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಕವಿತೆ ಗಳ ಸಂದರ್ಭದಲ್ಲಿ ಗುರುತಿಸಬಹುದು. ಹಸಿವು, ನೋವು, ಬಡತನ, ದುಷ್ಟ ದಾರಿದ್ರ್ಯ ವನ್ನು ಹಾಸಿ ಹೊದ್ದುಕೊಂಡಿರುವ ಭಾರತೀಯ ರೈತನ ಚಿತ್ರವನ್ನು ಕುವೆಂಪು ಮನ ಮಿಡಿಯುವಂತೆ ಚಿತ್ರಿಸಿದ್ದು ಈ ಬಗೆಯ ವರ್ಣನೆಯನ್ನು ಬೇರೆಡೆ ನೋಡುವುದು ಸಾಧ್ಯವಿಲ್ಲ. (ನೋಡಿ—ಪುಟ ೭೬–೭೭ರ ಗುಡಿಸಿಲಿನ ವರ್ಣನೆ) ಈ ರೈತ ಭಾರತದ ನೈಜ ಚಿತ್ರವನ್ನು ಪ್ರತಿನಿಧಿಸುತ್ತಾನೆ.

'ಧನ್ವಂತರಿಯ ಚಿಕಿತ್ಸೆ'ಯಲ್ಲಿ ಮಾನವೀಯ ಅಂತಃಕರಣವೊಂದು ಸುಂದರ ಸುಖೀ ಸಮಾಜದ ನಿರ್ಮಾಣಕ್ಕಾಗಿ ತುಡಿಯುತ್ತಿರುವುದನ್ನು ಮೊದಲಿನಿಂದ ಕೊನೆಯ ವರೆಗೂ ಗುರುತಿಸಬಹುದಾಗಿದೆ. ತಮ್ಮ ಕಾಲದ ಶಾಸನ ವ್ಯವಸ್ಥೆಯ ಎಲ್ಲ ಅಸಾಂಗತ್ಯ ಗಳನ್ನು, ಕುರೂಪಗಳನ್ನು ಅತ್ಯಂತ ವಾಸ್ತವವಾದಿ ನೆಲಗಟ್ಟಿನ ಮೇಲೆ ವ್ಯಂಗಕ್ಕೆ ಗುರಿ ಮಾಡಿರುವ 'ಧನ್ವಂತರಿಯ ಚಿಕಿತ್ಸೆ' ಕನ್ನಡ ಕಥಾಲೋಕದ ಮೇರುಶೃಂಗ.

ಗ್ರಾಮೀಣ ಬದುಕನ್ನು ನಿರೂಪಿಸುವ ಕುವೆಂಪು ಅವರ ಕಥೆಗಳಲ್ಲಿ ಗೌಡ ಯಜಮಾನರು—'ಯಾರಿಗೂ ಆರಿಯದ ವೀರ'ದ ಸುಬ್ಬಣ್ಣಗೌಡರು 'ದೆವ್ವದ ಕಾಟ'ದ

ರಂಗರಾಯರು—ಮಾನವೀಯ ಅನುಕಂಪವನ್ನು ಸಮೃದ್ಧವಾಗಿ ಹೊಂದಿದವರಾಗಿದ್ದು ಇವರ ಔದಾರ್ಯವನ್ನು ಮೇಲಿನ ಕಥೆಗಳಲ್ಲಿ ಚಿತ್ರಿಸಿದ ಕುವೆಂಪು 'ಸಾಲದ ಮಗು' ಕಥೆಯಲ್ಲಿ ಗೌಡ-ಯಜಮಾನರ ಭಯಂಕರ ಕ್ರೌರ್ಯ ಮತ್ತು ಅಮಾನವೀಯತೆಯನ್ನು ಚಿತ್ರಿಸುವುದರ ಮೂಲಕ ಗೌಡ-ಯಜಮಾನರ ಬದುಕಿನ ಇನ್ನೊಂದು ಮುಖದ ದರ್ಶನ ಮಾಡಿಸಿದ್ದಾರೆ. ಅಂತೆಯೇ ಅವರ ಮನೆಗಳಲ್ಲಿ ಕೆಲಸ ಮಾಡುವ ಕೆಳವರ್ಗದ ನೌಕರರ ವಿವಶತೆ, ಅಸಹಾಯಕತೆ ಮತ್ತು ಅವರ ದುರಂತ ಬದುಕಿನ ಬಗೆಗೆ ಮನಕರಗುವಂತೆ ಚಿತ್ರಿಸಿದ್ದಾರೆ. 'ಸಾಲದ ಮಗು'ವಿನ ಕ್ರೌರ್ಯ ಬೆಚ್ಚಿ ಬೀಳಿಸುವಂಥಾದ್ದು, ಎದೆ ನಡುಗಿಸುವಂಥಾದ್ದು. ಈ ದೃಷ್ಟಿಯಿಂದ 'ಸಾಲದ ಮಗು' ಯಶಸ್ವೀ ಕತೆ ಎನ್ನಬಹುದು.

ಈ ಸಂಗ್ರಹದ ಉಳಿದ ಕಥೆಗಳಾದ 'ಆದರ್ಶಸಾಧನೆ' ಆದರ್ಶಗಳ ಹಿಂದೆ ಬಿದ್ದ ಪೊಳ್ಳು ಯುವಕನೊಬ್ಬ ಬದುಕಿನ ಯಥಾರ್ಥಗಳೊಂದಿಗೆ ಮುಖಾಮುಖಿಯಾದಾಗ ತನ್ನ ಸಿದ್ಧಾಂತ ಹಾಗೂ ಆದರ್ಶಗಳನ್ನು ಕೈಬಿಡಲು ನೆಪಗಳನ್ನು ಹುಡುಕುತ್ತ, ಆ ಮೂಲಕ ತನಗೆ ತಾನೇ ಮೋಸಮಾಡಿಕೊಳ್ಳುತ್ತ ವ್ಯಕ್ತಿತ್ವ ಹೀನವಾಗುವ ವಸ್ತುವನ್ನು ಹೊಂದಿದ್ದು ಲಹರಿಯಂತೆ ಹರಿದಿದೆ, 'ಔದಾರ್ಯ' ಕಥೆ ಅತಿ ಅನ್ನುವಷ್ಟು ಔದಾರ್ಯಮೂರ್ತಿಯಾಗಿ ತನ್ನ ದುಃಖವನ್ನು ನುಂಗಿದ ಡೇವಿಡ್ ಮಾಸ್ಟರರ ನೋವಿನ ಕಥೆಯನ್ನು ಆತ್ಮಕಥಾತ್ಮಕ ಶೈಲಿಯಲ್ಲಿ ಹೇಳಿಸಿರುವುದರಿಂದ ವರದಿಯಂತೆ ತೋರುತ್ತದೆ, ಇನ್ನು 'ಗಂಟು ಅಥವಾ ಗುಪ್ತಧನ' ಗಂಟಿಗಾಗಿ ಆಸೆಪಟ್ಟ ಕೃಪಣ ಮಂಜಣ್ಣನಿಗೆ ಕೈಕೊಟ್ಟು ಆತನ ಒಡವೆ–ವಸ್ತ್ರಗಳನ್ನು ದೋಚಿದ ಬೈರಾಗಿಯ ಕಥೆ ಕುತೂಹಲಕಾರಿಯಾಗಿಯೂ ಮನೋರಂಜವಾಗಿಯೂ ಇದೆ. 'ವೈರಾಗ್ಯದ ಮಹಿಮೆ' ಕಪಟ ವೈರಾಗ್ಯವನ್ನು ಸ್ವೀಕರಿಸಿದ ಅತ್ಯಂತ ಸಾಮಾನ್ಯ ವ್ಯಕ್ತಿಯೊಬ್ಬನ ಮಾನಸಿಕ ಹಾಗೂ ಶಾರೀರಿಕ ದೌರ್ಬಲ್ಯಗಳನ್ನು ಎಳೆಎಳೆಯಾಗಿ ಚಿತ್ರಿಸುತ್ತದೆ.

'ನನ್ನ ದೇವರು' ಸಂಗ್ರಹದ ಕಥೆಗಳು ವ್ಯಕ್ತಿಯ ಅಂತರಂಗ ಮತ್ತು ಬಹಿರಂಗದ ದರ್ಶನ ಮಾಡಿಸುವಂತೆ, ನಮ್ಮ ಸಮಾಜದ ಯಥಾರ್ಥ ಮತ್ತು ಆದರ್ಶಗಳ ದರ್ಶನವನ್ನೂ ಮಾಡಿಸುತ್ತವೆ. ಅದರಲ್ಲೂ ಈ ಸಂಕಲನದ 'ಮೀನಾಕ್ಷಿ....' ಮತ್ತು 'ಧನ್ವಂತರಿಯ ಚಿಕಿತ್ಸೆ' ಕುವೆಂಪು ಅವರ ಭಾವುಕತೆ ಮತ್ತು ಯಥಾರ್ಥ ದೃಷ್ಟಿಗೆ ಸುಂದರ ಉದಾಹರಣೆಗಳಾಗಿವೆ.

ಕುವೆಂಪು ಅವರ ವ್ಯಕ್ತಿತ್ವ ಮತ್ತು ಸಾಹಿತ್ಯ ಸೌಂದರ್ಯೋಪಾಸನೆ, ಆದರ್ಶ ಮತ್ತು ಯಥಾರ್ಥಗಳ ಅದ್ಭುತ ಸಂಗಮವಾಗಿದೆ. ಸಾಹಿತ್ಯ ಮತ್ತು ಕಲೆಯನ್ನು ಬದುಕಿಗಾಗಿ ಎಂದು ಪರಿಭಾವಿಸುವ ಕುವೆಂಪು ಅವರು ಬದುಕನ್ನು ಉತ್ತಮಗೊಳಿಸುವುದಕ್ಕಾಗಿ ಲೇಖನ ಕಾರ್ಯಮಾಡಿದ್ದಾರೆ. ಕುವೆಂಪು ಕಾದಂಬರಿಗಳನ್ನು ಕುರಿತಂತೆ ಶ್ರೀ ಭಗವಾನ್ ಬರೆದಿರುವ ಈ ಮಾತುಗಳು—'ಸಾಹಿತ್ಯವನ್ನು ಸಾಮಾಜಿಕಾಸ್ತ್ರವಾಗಿ ಪ್ರಯೋಗಿಸಬೇಕೆಂಬ ಸಾಹಿತಿಯ ಹೊಣೆಗಾರಿಕೆ ಬಹಳ ದೊಡ್ಡದು. ಮೊದಲನೆಯದಾಗಿ ಆತ ಬರೆಯುವ ವಸ್ತು ಸದುದ್ದೇಶ ಹೊಂದಿರಬೇಕು, ಎರಡನೆಯದಾಗಿ ಶಾಶ್ವತಮೌಲ್ಯವುಳ್ಳದ್ದಾಗಿರಬೇಕು, ಮೂರನೆಯದಾಗಿ ಶುದ್ಧ ಕಲೆಯಾಗಬೇಕು. ಇಲ್ಲವಾದರೆ ನಿರ್ದಿಷ್ಟ ಸಮಸ್ಯೆ ಪರಿಹಾರವಾದ ಕೂಡಲೇ ಕೃತಿಯು ಪರಿಣಾಮ ಕಳೆದುಕೊಳ್ಳುತ್ತದೆ, ವಾಚಕ

ಲೋಕದಿಂದ ದೂರವಾಗುತ್ತದೆ, ಕಾಲಾಂತರದಲ್ಲಿ ಮರೆತುಹೋಗುತ್ತದೆ. ಆದ್ದರಿಂದ ಚಿರಮೌಲ್ಯ ಮತ್ತು ಕಲೆಗಾರಿಕೆ, ಇವೇ ಅಂತಿಮವಾಗಿ ಕೃತಿಯನ್ನು ಉಳಿಸುವ ಗುಣಗಳು.' (ಬದಲಾವಣೆ–ಪುಟ ೧೦೩) ಕುವೆಂಪು ಅವರ ಕಥೆಗಳ ಸಂದರ್ಭದಲ್ಲಿಯೂ ಔಚಿತ್ಯಪೂರ್ಣವಾಗಿವೆ. ಕುವೆಂಪು ಅವರ ಕಥೆಗಳು ಸೋದ್ದೇಶವೂ ಮೌಲ್ಯಯುಕ್ತವೂ ಬೆರಗುಗೊಳಿಸುವ ಕಲೆಗಾರಿಕೆಯಿಂದಲೂ ಕೂಡಿದ್ದು ಓದುಗರನ್ನು ತನ್ಮಯಗೊಳಿಸುತ್ತವೆ.

ಕುವೆಂಪು ಅವರು ಮೂಲತಃ ಕವಿ. ಕವಿ ಹೃದಯದ ಸ್ಪಂದನವನ್ನು ಯಾವುದೇ ಅಪವಾದವಿಲ್ಲದಂತೆ ಅವರ ಎಲ್ಲ ಕಥೆಗಳಲ್ಲೂ ಕಾಣಬಹುದು. ಕವಿಯ ಭಾವ ಸ್ರೋತಸ್ವಿನಿಯಾದ ಪ್ರಕೃತಿ ಅವರ ಕಾವ್ಯದಲ್ಲೆಂತೋ ಅಂತೆಯೇ ಅವರ ಈ ಕಥೆಗಳ ಅವಿಭಾಜ್ಯ ಅಂಗವಾಗಿ ಅತ್ಯಂತ ಉಲ್ಲಾಸದಾಯಕವಾಗಿ, ಚೇತೋಹಾರಿಯಾಗಿ ನರ್ತಿಸಿರುವುದನ್ನು ನೋಡಬಹುದು. ಈ ದೃಷ್ಟಿಯಿಂದ ಕುವೆಂಪು ಅವರ ಕಥೆಗಳನ್ನು ಓದುವುದೇ ಒಂದು ವಿಶಿಷ್ಟ ಅನುಭವ. ಇಲ್ಲಿನ ಭಾಷೆ, ನುಡಿಗಟ್ಟುಗಳು, ಗಾದೆಗಳಾಗುವ ಸಮೃದ್ಧ ಜೀವನಾನುಭವಗಳು, ಹಾಸ್ಯ–ವ್ಯಂಗ್ಯಗಳು ಓದುಗರಿಗೆ ಮುದಕೊಡುವಂತೆ, ಬದುಕಿನ ಮೌಲ್ಯಗಳ ಅನ್ವೇಷಣೆಗೂ ಪ್ರೇರಣೆ ನೀಡುತ್ತವೆ. ಈ ಎಲ್ಲ ಅಂಶಗಳನ್ನು ಕುರಿತಂತೆ ಪ್ರತ್ಯೇಕವಾಗಿ ಚಿಂತನೆಮಾಡುವಷ್ಟು ವಿಪುಲಸಾಮಗ್ರಿ ಕುವೆಂಪು ಅವರ ಈ ಕಥೆಗಳಲ್ಲಿದೆ.

ಅಹಿಂಸೆ ಹೇಡಿತನವಲ್ಲ, ಆತ್ಮಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿಮುಟ್ಟಬೇಕಾದರೆ ತಾಳ್ಮೆ ಅಗತ್ಯ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

ರ್‍ಯಾಬಿನಿನ್‌ನ ಮಂದಹಾಸ ಒಡನೆಯೇ ಮಾಯವಾಯಿತು. ಕ್ರೂರವೂ ಶ್ಯೇನ ಸದೃಶವೂ ಉಪದ್ರವಕಾರಿಯೂ ಆದ ಭಾವ ಅದರ ಜಾಗವನ್ನಾಕ್ರಮಿಸಿಕೊಂಡಿತು. ಎಮಕೆ ಬೆರಳುಗಳಿಂದ ಬೇಗಬೇಗ ತನ್ನ ಮೇಲಂಗಿಯ ಗುಂಡಿ ಬಿಚ್ಚಿದನು ; ಅವನ ಷರಾಯಿಗಳ ಮೇಲಿದ್ದ ಶರಟು, ಹಿತ್ತಾಳೆಯ ಬುಗುಟುಗಳಿದ್ದ ಸೊಂಟಕೋಟು ಮತ್ತು ಗಡಿಯಾರದ ಸರಪಳಿ ಗೋಚರಿಸಿದುವು ; ಮರುಕ್ಷಣದಲ್ಲಿಯೇ ಉಬ್ಬಿಕೊಂಡಿದ್ದ ಹಳೆಯ ಇಮ್ಮಣಿ ಚೀಲವೊಂದನ್ನು ಹೊರಗೆಳೆದನು.

'ಇಗೋ ನಿಮ್ಮ ಹಣ ಇಲ್ಲಿದೆ. ಸಾಗುವಾನಿ ಈಗ ನನ್ನದು' ಎಂದವನು ಬೇಗ ಬೇಗ ಕ್ರೂಸಭಂಗಿಯಲ್ಲಿ ಕೈಯಾಡಿಸಿ, ತನ್ನ ಕೈಯನ್ನು ಮುಂದೆ ಚಾಚಿದನು. 'ಹಣ ನಿಮ್ಮದು; ಸಾಗುವಾನಿ ನನ್ನದು. ರ್‍ಯಾಬಿನಿನ್‌ನ ವ್ಯಾಪಾರದ ಮರ್ಜಿಯೇ ಹೀಗೆ. ಅವನು ಸಣ್ಣಪುಟ್ಟ ಕಾಸುಗಳ ಬಗ್ಗೆ ಚೌಕಾಸಿ ಮಾಡುವುದಿಲ್ಲ' ಎಂದವನು [illegible]ಕುತ್ತ, ಇಮ್ಮಣಿ ಚೀಲವನ್ನಲ್ಲಾಡಿಸಿದನು

'ನಾನೇ ನಿನ್ನ ಜಾಗದಲ್ಲಿದ್ದಿದ್ದರೆ, ಇಷ್ಟು ಅವಸರಿಸುತ್ತಿರಲಿಲ್ಲ' ಎಂದು ಲೆವಿನ್ ಆಬ್ಲಾನ್‌ಸ್ಕಿಗೆ ಹೇಳಿದನು.

'ಅದು ಹೇಗೆ ಸಾಧ್ಯ ? ನಾನು ಮಾತು ಕೊಟ್ಟಿದ್ದೇನೆ' ಎಂದು ಆಬ್ಲಾನ್‌ಸ್ಕಿ ಪ್ರತಿಭಟಿಸಿದನು.

ದಡಾರನೆ ಬಾಗಿಲೆಳೆದುಕೊಂಡು ಲೆವಿನ್ ಕೋಣೆಯಿಂದ ಹೊರಗೆ ಹೋದನು. ರ್‍ಯಾಬಿನಿನ್ ಬಾಗಿಲ ಕಡೆಗೆ ನೋಡುತ್ತ, ಮಂದಹಾಸದಿಂದ ತಲೆದೂಗಿದನು.

'ನಿಮ್ಮದಿನ್ನೂ ಹುಡುಗುತನ ; ಮಕ್ಕಳಂತೆ ವರ್ತಿಸುತ್ತಿದ್ದೀರಿ, ಕೇವಲ ಪ್ರತಿಷ್ಠೆಗಾಗಿ ಈ ಕಾಡನ್ನು ಕೊಳ್ಳುತ್ತಿದ್ದೇನೆ. ರ್‍ಯಾಬಿನಿನ್ ಅಲ್ಲದೆ, ಬೇರೆ ಯಾರೂ ಆಬ್ಲಾನ್‌ಸ್ಕಿಯ ಕಾಡನ್ನು ಕೊಳ್ಳುತ್ತಿರಲಿಲ್ಲವೆಂದು ತೋರಿಸುವುದಕ್ಕಾಗಿ ಮಾತ್ರ ಕೊಳ್ಳುತ್ತಿದ್ದೇನೆ. ಇದರಲ್ಲಿ ನನಗೇನು ಲಾಭ ಸಿಗುತ್ತದೆಂಬುದನ್ನು ದೇವರೇ ಬಲ್ಲ. ನನ್ನ ವ್ಯವಹಾರಗಳಲ್ಲಿ ಭಗವಂತನೇ ಸಾಕ್ಷಿಯಾಗಿದ್ದಾನೆ. ಇಗೋ, ದಯೆಯಿಟ್ಟು ಈ ಒಪ್ಪಂದಕ್ಕೆ ನಿಮ್ಮ ಸಹಿ ಹಾಕಿ ಸ್ವಾಮಿ.'

ಒಂದು ಗಂಟೆಯ ನಂತರ ವರ್ತಕ ಜೇಬಿನಲ್ಲಿ ಕರಾರುಪತ್ರವಿದ್ದ ಮೇಲಂಗಿಯ ಗುಂಡಿಗಳನ್ನು ಎಚ್ಚರಿಕೆಯಿಂದ ಹಾಕಿ, ತನ್ನ ಮುಂಡದ ಸುತ್ತ ಕೋಟನ್ನು ಧರಿಸಿಕೊಂಡು, ಲೋಹ ಚರ್ಮಗಳಿಂದ ಭದ್ರಗೊಳಿಸಿದ್ದ ಬಂಡಿಯಲ್ಲಿ ಕುಳಿತುಕೊಂಡು, ಮನೆಗೆ ಮರಳಿದನು.

'ಅಬ್ಬ, ಆ ದೊಡ್ಡಮನುಷ್ಯರಿದ್ದಾರಲ್ಲ ! ಒಬ್ಬ ಮತ್ತೊಬ್ಬನನ್ನು ವಿಚಾರಿಸುತ್ತಾನೆ' ಎಂದವನು ತನ್ನ ಗುಮಾಸ್ತೆಯೊಡನೆ ಹೇಳಿದನು.

'ಅಂದರೆ, ಒಬ್ಬನಿಗಿಂತ ಮತ್ತೊಬ್ಬ ಹೆಚ್ಚು ಅನ್ನಿ' ಎಂದು ಗುಮಾಸ್ತೆ ಅವನ ಕೈಗೆ ಲಗಾಮು ನೀಡಿ, ತನ್ನ ತೊಗಲ ಮುಂಗವಚದ ಗುಂಡಿ ಹಾಕಿಕೊಂಡನು. 'ಅಭಿನಂದನೆ ಹೇಳಬಹುದೆ, ಮಿಖಾಯಿಲ್ ಇಗ್ನಾತಿಚ್ ?'

'ಹ್ಞಂ, ಹ್ಞಂ.'

೧೭

ವರ್ತಕ ನೀಡಿದ ಮೂರು ತಿಂಗಳ ಮುಂಗಡದ ಹಣದಿಂದ ಅಬ್ಲಾನ್‌ಸ್ಕಿಯ ಜೇಬು ಉಬ್ಬರಿಸಿಕೊಂಡಿತ್ತು. ಆ ಹಣದೊಡನೆ ಅವನು ಮಹಡಿಯ ಮೇಲೆ ಹೋದನು. ಸಾಗುವಾನಿಯ ಮಾರಾಟ ಮುಗಿದಿತ್ತು; ಹಣ ಅವನ ಜೇಬಿನಲ್ಲಿತ್ತು. ಬೇಟೆ ಸೊಗಸಾಗಿತ್ತು. ಅಬ್ಲಾನ್‌ಸ್ಕಿ ತುಂಬ ಉಲ್ಲಾಸದಿಂದಿದ್ದನು; ಅದೇ ಕಾರಣದಿಂದಾಗಿ ಲೆವಿನ್‌ನನ್ನು ಖಿನ್ನತೆಯ ಸೆರೆಯಿಂದ ಮುಕ್ತಗೊಳಿಸಲು ಅವನು ಆತುರದಿಂದಿದ್ದನು. ದಿನವೆಂತು ಹಿತಕರವಾಗಿ ಪ್ರಾರಂಭವಾಗಿತ್ತೊ ಸಂಜೆಯೂಟದ ಸಮಯದಲ್ಲಿ ಅದೇ ರೀತಿಯಲ್ಲದನ್ನು ಮುಕ್ತಾಯಗೊಳಿತಕ್ಕದ್ದೆಂದು ಅವನು ಅಪೇಕ್ಷಿಸಿದ್ದನು.

ವಾಸ್ತವವಾಗಿ ಲೆವಿನ್‌ನ ಮನಸ್ಸು ಸಮಾಧಾನ ಸ್ಥಿತಿಯಲ್ಲಿರಲಿಲ್ಲ; ತನ್ನ ಹತ್ತಿರದ ಗೆಳೆಯನೊಂದಿಗೆ ಅತ್ಯಂತ ಸ್ನೇಹದಿಂದ ಹಾಗೂ ಸೌಹಾರ್ದದಿಂದ ವರ್ತಿಸಬೇಕೆಂದು ಅವನ ಮನಸ್ಸು ಹೊಯ್ದಾಡುತ್ತಿದ್ದರೂ, ಚಿತ್ತಸಂಯಮ ಅವನಿಗೆ ಸಾಧ್ಯವಾಗಲಿಲ್ಲ. ಕಿಟ್ಟಿಗೆ ಮದುವೆಯಾಗಲಿಲ್ಲವೆಂಬ ಸುದ್ದಿ ನಿದಾನದ ವಿಷದಂತೆ ಅವನ ಮನಸ್ಸನ್ನು ಕೆಡಿಸುತ್ತಿತ್ತು.

ಕಿಟ್ಟಿಗೆ ಮದುವೆಯಾಗಿರಲಿಲ್ಲಿ. ತಾನು ಪ್ರೇಮಿಸಿದ್ದ ವ್ಯಕ್ತಿಯ ತಿರಸ್ಕಾರದಿಂದಾಗಿ ಅವಳು ವ್ಯಥೆಗೀಡಾಗಿದ್ದಳು. ತನಗೆಯೆ ಆಘಾತವಾದಂತೆ ಲೆವಿನ್ ಭಾವಿಸಿಕೊಂಡನು. ವ್ರಾನ್ಸ್ಕಿ ಅವಳನ್ನು ತಿರಸ್ಕರಿಸಿದ್ದನು; ಅವಳು ಲೆವಿನ್‌ನನ್ನು ತಿರಸ್ಕರಿಸಿದ್ದಳು. ಆ ದೆಸೆಯಿಂದಾಗಿ ವ್ರಾನ್ಸ್ಕಿ ಲೆವಿನ್‌ನನ್ನು ದ್ವೇಷಿಸುತ್ತಿದ್ದುದಲ್ಲದೆ, ಹಗೆಯುತ್ತಿದ್ದನು. ಆದರೆ ಲೆವಿನ್ ಇದನ್ನೆಲ್ಲ ಕುರಿತು ಆಲೋಚಿಸುತ್ತಿರಲಿಲ್ಲ. ಅದರೊಳಗಿನ ಯಾವುದೋ ಸಂಗತಿ ತನ್ನನ್ನು ಅವಮಾನಕ್ಕೀಡುಮಾಡಿದ್ದುದಾಗ ಅವನು ಅಸ್ಪಷ್ಟವಾಗಿ ಭಾವಿಸಿದ್ದನು. ತನ್ನ ಮನಸ್ಸನ್ನು ಕಲಕಿದ್ದ ಸಂಗತಿಯ ಬಗ್ಗೆ ಅವನಿಗೀಗ ಕೋಪವಿರಲಿಲ್ಲ. ತನ್ನ ಅಸಮಾಧಾನಕ್ಕೆ ನಿಜವಾದ ಬೇಗುದಿ ಕಾರಣವಾಗಿರಲಿಲ್ಲವೆಂದೂ, ಆಕ್ಷಣದಲ್ಲಿ ತಲೆದೋರಿದ ಸಣ್ಣಪುಟ್ಟ ಕಿರುಕುಳಗಳು ಹೇತುವಾಗಿದ್ದುವೆಂದೂ ಅವನು ತಿಳಿದಿದ್ದನು. ಸಾಗುವಾನಿಯ ಬೆಪ್ಪುತನದ ಮಾರಾಟದಿಂದ, ಅಬ್ಲಾನ್‌ಸ್ಕಿ ವಂಚಿತನಾದ ಬಗೆಯಿಂದ, ಮತ್ತು ತನ್ನ ಮನೆಯಲ್ಲಿಯೇ ಮುಕ್ತಾಯಗೊಂಡ ವ್ಯವಹಾರದಿಂದಾಗಿ ಅವನು ಕೆರಳಿದ್ದನು.

'ಸರಿ, ಸರಿ, ಎಲ್ಲ ಮುಗಿಯಿತಲ್ಲವೆ?' ಎಂದವನು ಮಹಡಿಯ ಮೇಲಕ್ಕೆ ತನ್ನ ಬಳಿಗೆ ಬಂದ ಅಬ್ಲಾನ್‌ಸ್ಕಿಯನ್ನು ಪ್ರಶ್ನಿಸಿದನು. 'ಸಂಜೆಯೂಟ ಮುಗಿಸೋಣವೆ?'

'ನನ್ನದೇನೂ ಅಭ್ಯಂತರವಿಲ್ಲ. ಹಳ್ಳಿಯಲ್ಲಿ ಅದೆಷ್ಟು ಹಸಿವಾಗುತ್ತದೆಂದು ಯೋಚಿಸಿದರೆ ಆಶ್ಚರ್ಯವಾಗುತ್ತದೆ. ರ್‍ಯಾಬಿನ್‌ನನ್ನು ಸಂಜೆಯೂಟಕ್ಕೆ ಕರೆಯಲಿಲ್ಲವಲ್ಲ, ಏಕೆ?'

'ಅವನು ಹಾಳಾಗಲಿ!'

'ನೀನು ಅವನನ್ನೆಂತು ಛೀಮಾರಿಮಾಡಿದೆ! ಕುಲುಕಲಿಕ್ಕೆ ಕೈ ಸಹ ಕೊಡಲಿಲ್ಲ. ಕೈ ಏಕೆ ಕೊಡಲಿಲ್ಲ?'

'ಏಕೆಂದೆಯಾ? ನಾಯಿ ಚಾಲಿನ ಮನುಷ್ಯರಿಗೆ ನಾನು ಕೈ ಕೊಡುವುದಿಲ್ಲ. ಹಲ್ಲುಗಿಂಜುವ ಜನರಿಗಿಂತ ನೂರುಪಾಲು ಕಡೆ.'

'ನೀನೆಂಥ ಪ್ರಗತಿ ವಿರೋಧಿಯಯ್ಯ! ವರ್ಗಗಳ ವಿಲೀನದ ಬಗ್ಗೆ ನಿನ್ನ ಅಭಿಪ್ರಾಯವೇನು ?'

'ವಿಲೀನಗೊಳ್ಳಲು ಆಸಕ್ತಿಯಿರುವ ಜನ ಹಾಗೆ ಮಾಡಬಹುದು. ಆದರೆ ನನಗದು ಹಿಡಿಸದು.'

'ನೀನು ನಿಜಕ್ಕೂ ಉಗ್ರ ಪ್ರಗತಿ ವಿರೋಧಿ.'

'ನನ್ನನ್ನು ನಾನು ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿಲ್ಲ; ತೊಂದರೆ ತೆಗೆದು ಕೊಂಡಿಲ್ಲ. ನಾನು ಕಾನ್‌ಸ್ಟೆಂಟಿನ್ ಲೆವಿನ್‌ನೇ ಹೊರತು ಬೇರೇನೂ ಅಲ್ಲ.'

'ಚಿತ್ತಸಮತೆಯನ್ನು ಕಳೆದುಕೊಂಡಿರುವ ಕಾನ್‌ಸ್ಟೆಂಟಿನ್ ಲೆವಿನ್' ಎಂದು ಆಬ್ಲಾನ್‌ಸ್ಕಿ ನುಡಿದನು.

'ಹೌದು, ನಾನು ಚಿತ್ತಸಮತೆಯನ್ನು ಕಳೆದುಕೊಂಡಿದ್ದೇನೆ. ಏಕೆ ಗೊತ್ತೆ? ನಿನ್ನ ತಿಳಿಗೇಡಿತನದ ವ್ಯವಹಾರದಿಂದಾಗಿ ಹೀಗೆ ಹೇಳಿದ್ದಕ್ಕೆ ಕ್ಷಮಿಸು.'

ನಿಷ್ಕಾರಣವಾಗಿ ಮುಖಭಂಗವಾದವನಂತೆ, ಹಾಗೂ ತೇಜೋವಧೆಗೊಳಗಾದವ ನಂತೆ ಆಬ್ಲಾನ್‌ಸ್ಕಿ ಸಾತ್ವಿಕ ಕ್ರೋಧವನ್ನು ವ್ಯಕ್ತಪಡಿಸಿದನು. 'ಓ, ಬಾರಯ್ಯ, ಮಿತ್ರ. ಒಂದು ವಸ್ತು ಮಾರಾಟವಾದ ನಂತರ, "ಅದು ಇನ್ನೂ ಹೆಚ್ಚು ಬೆಲೆ ಬಾಳುತ್ತಿತ್ತು" ಎಂಬುದಾಗಿ ಹೇಳುವುದೇ ರೂಢಿಯಾಗಿದೆಯಲ್ಲವೆ? ಆದರೆ ಮಾರಾಟಕ್ಕೆ ಮುಂಚೆ ಯಾರೂ ಹೆಚ್ಚು ಬೆಲೆ ಕೊಡುವುದಾಗಿ ಮುಂದೆ ಬರುವುದಿಲ್ಲ. ಆ ಬಡಪಾಯಿ ರ್‍ಯಾಬಿನಿನ್‌ನ ಬಗ್ಗೆ ನಿನಗೆ ಅಸಮಾಧಾನವಿದೆಯೆಂದು ನನಗೆ ತೋರುತ್ತಿದೆ' ಎಂದವನು ನುಡಿದನು.

'ಇರಬಹುದು. ಏಕೆ ಗೊತ್ತೆ? ನಿಜ ಹೇಳಿದರೆ, ಮತ್ತೆ ನನ್ನನ್ನು ನೀನು ಪ್ರತಿಗಾಮಿಯೆಂದು ಕರೆಯುತ್ತೀಯೆ. ಅಥವಾ ಅಂಥದೇ ಭಯಂಕರ ಪದವನ್ನು ಬಳಸುತ್ತೀಯೆ. ಆದರೆ ಶ್ರೀಮಂತ ವರ್ಗದ ದಾರಿದ್ರ್ಯಾವನತಿಯಿಂದಾಗಿ ದುಃಖ ಕ್ರೋಧಗಳು ಏಕಕಾಲದಲ್ಲಿ ಕೆರಳುವಂತಾಗಿದೆ. ನಾನು ಅದೇ ವರ್ಗಕ್ಕೆ ಸೇರಿದವನು. ವರ್ಗವಿಲೀನಾವಸರದಲ್ಲಿಯೂ ಆ ವರ್ಗಕ್ಕೆ ಸೇರಿದವನೆಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ. ಅವರ ದಾರಿದ್ರ್ಯಾವಸ್ಥೆಗೆ ಅವರ ಭೋಗಜೀವನ ಕಾರಣವಲ್ಲ; ಅದು ಕೆಟ್ಟದ್ದೂ ಅಲ್ಲ; ಅವರಿರುವುದೇ ಅದಕ್ಕಾಗಿ, ರಾಜಯೋಗ್ಯ ಜೀವನವನ್ನು ನಡಸಲಿಕ್ಕಾಗಿ; ಅಂಥ ಜೀವನವನ್ನು ನಡಸಬಲ್ಲ ಚಮತ್ಕಾರ ಅವರಿಗೆ ಮಾತ್ರ ಗೊತ್ತು. ಸಾಂಪ್ರತ ಪರಿಸ್ಥಿತಿಯಲ್ಲಿ ರೈತರು ನಮ್ಮ ಜಮೀನನ್ನು ಕೊಳ್ಳುತ್ತಿದ್ದಾರೆ; ಆ ಬಗ್ಗೆ ನನ್ನ ಆಕ್ಷೇಪವಿಲ್ಲ. ದಣಿ ಸೋಮಾರಿಯಾದಾಗ, ರೈತ ದುಡಿದು, ಅವನನ್ನು ಹೊರ ಹಾಕುತ್ತಾನೆ. ಅದು ಹಾಗೆ ನಡೆಯಬೇಕಾದದ್ದೇ ಸರಿ. ರೈತರ ಏಳ್ಗೆಗಾಗಿ ನಾನು ಖುಷಿಪಡುತ್ತೇನೆ. ಒಂದು ತೆರನ ಮುಗ್ಧತೆಯ ಪರಿಣಾಮವಾಗಿ ಶ್ರೀಮಂತವರ್ಗ ಅವನತಿ ಮುಖವಾಗಿರುವುದೊಂದೇ ನನ್ನ ಆಕ್ಷೇಪ. ಇಲ್ಲೊಬ್ಬ ಪೋಲಿಷ್ ರೈತ ನೈಸ್ ಗ್ರಾಮದ ಶ್ರೀಮಂತ ಮಹಿಳೆಯಿಂದ ಸೊಗಸಾದ ಆಸ್ತಿಯೊಂದನ್ನು ಅರ್ಧ ಬೆಲೆಗೆ ಕಬಳಾಯಿಸಿಕೊಂಡಿದ್ದಾನೆ. ಅಲ್ಲೊಬ್ಬ ವರ್ತಕ ಎಕರೆಗೆ ಹತ್ತು ರೂಬಲ್ ಬಾಡಿಗೆ ಬಾಳುವ ಜಮೀನನ್ನು ಒಂದು ರೂಬಲ್‌ಗೆ ಹೊಡೆದುಕೊಂಡಿದ್ದಾನೆ. ಇದೀಗ ನೀನು

ನಿಷ್ಕಾರಣವಾಗಿ ಮೂವತ್ತು ಸಾವಿರ ರೂಬಲ್ಲುಗಳನ್ನು ಆ ವಂಚಕನಿಗೆ ದಾನ ಮಾಡಿದ್ದೀಯೆ.'

'ನಾನೇನು ಮಾಡಬೇಕಿತ್ತು ? ಪ್ರತಿಯೊಂದು ಮರವನ್ನೂ ಎಣಿಸಬೇಕಾಗಿತ್ತೇನು ?'

'ಹೌದು, ಎಣಿಸಬೇಕಾಗಿತ್ತು. ರ್‍ಯಾಬಿನಿನ್ ಎಣಿಸಿದನೆ ಹೊರತು, ನೀನು ಎಣಿಸಲಿಲ್ಲ. ಸುಖಜೀವನ ನಡಸಲು, ಒಳ್ಳೆಯ ಶಿಕ್ಷಣ ಪಡೆಯಲು ರ್‍ಯಾಬಿನಿನ್‌ನ ಮಕ್ಕಳಿಗೆ ಸಾಕಷ್ಟು ಹಣವಿದೆ; ನಿನ್ನ ಮಕ್ಕಳಿಗೆ ಆ ಸೌಕರ್ಯಗಳಿಲ್ಲ.'

'ಅಂಥ ಎಣಿಕೆಯಿಂದ ಅಲ್ಪತನ ತೋರಿಸಿಕೊಂಡಂತಾಗುತ್ತದೆಂದೇ ನಾನು ಹೇಳಬೇಕಾಗಿದೆ. ನಮಗೆ ನಮ್ಮ ದಂಧೆಗಳೇ ಸಾಕಾಗಿವೆ; ಅವರಿಗೆ ಅವರ ದಂಧೆಗಳಿವೆ. ಅವರು ಸಹ ಹಣಗಳಿಸಬೇಕಾಗಿದೆ. ಆದರದು ಈಗ ಮುಗಿದ ಕತೆಯಾಗಿದೆ. ಆ ಬಗ್ಗೆ ಮಾತಾಡಿ ಲಾಭವೇನು ? ಇಗೋ, ಇಲ್ಲಿ ಬೇಯಿಸಿದ ಮೊಟ್ಟೆ ಬಂದಿವೆ. ಅವು ನನ್ನ ರಸನೆಗೆ ತಕ್ಕಂತಿವೆ ! ಅಗಫಿಯಾ ಮಿಖಾಯ್‌ಲೊವ್ನ ನಿಜಕ್ಕೂ ಸೊಗಸಾದ ಪರಿಮಳಯುಕ್ತ ವೋದ್ಕ ನೀಡಲಿದ್ದಾಳೆ.'

ಆಬ್ಲಾನ್‌ಸ್ಕಿ ಮೇಜಿನ ಮುಂದೆ ಕುಳಿತುಕೊಂಡನು ; ಅಗಫಿಯಾಳೊಡನೆ ಸರಸ ಸಂಭಾಷಣೆಯಲ್ಲಿ ತೊಡಗಿದನು. ಅಂಥ ಸಂಜೆಯೂಟದ ಅಥವಾ ರಾತ್ರಿ ಭೋಜನದ ಸವಿಯನ್ನನುಭವಿಸಿ ಬಹುದಿನಗಳಾಗಿದ್ದುವೆಂದು ಅವನು ಸಸಂಭ್ರಮನಾಗಿ ಕೊಂಡಾಡಿದನು.

'ನೀವೀಗ ನನ್ನನ್ನು ಹೊಗಳುತ್ತಿದ್ದೀರಿ. ಆದರೆ ಕಾನ್‌ಸ್ಟೆಂಟಿನ್ ದಿಮಿತ್ರಿಚ್ ಇದ್ದಾರಲ್ಲ, ಅವರಿಗೇನು ಕೊಟ್ಟರೂ ಸರಿಯೆ, ತಾರತಮ್ಯ ಮಾಡುವವರಲ್ಲ ; ರೊಟ್ಟಿಯ ಕರಿಚಿಕ್ಕಾದರೂ ತಿಂದು, ತೇಗಿ, ಮೇಲೇಳುತ್ತಾರೆ' ಎಂದು ಅಗಫಿಯಾ ಮಿಖಾಯ್‌ಲೋವ್ನ ನುಡಿದಳು.

ತನ್ನನ್ನು ತಾನು ಸಂಯಮಿಸಿಕೊಳ್ಳಲು ಲೆವಿನ್ ಪ್ರಯತ್ನಿಸಿದನು. ಆದರೂ ಅವನು ವಿಷಣ್ಣ ಚಿತ್ತನಾಗಿ, ಮಾತುಳಿದನು. ಆಬ್ಲಾನ್‌ಸ್ಕಿಯನ್ನು ಪ್ರಶ್ನಿಸಬೇಕೆಂಬ ಹಂಬಲ ಅವನಲ್ಲಿ ತೀವ್ರವಾಗಿತ್ತು. ಆದರೆ ಅದನ್ನು ಮಾತಿನಲ್ಲಿ ಅಭಿವ್ಯಕ್ತಪಡಿಸುವ ಸಾಮರ್ಥ್ಯವನ್ನವನು ಪ್ರದರ್ಶಿಸಲಿಲ್ಲ ; ಹೇಗೆ, ಎಲ್ಲಿ, ಯಾವಾಗ ಅದನ್ನು ಬಹಿರಂಗಗೊಳಿಸಬೇಕೆಂಬ ಸೂಕ್ಷ್ಮ ಪ್ರಜ್ಞೆಯೂ ಆ ಸಮಯದಲ್ಲಿ ಗೈರುಹಾಜರಾಗಿತ್ತು. ಆಬ್ಲಾನ್‌ಸ್ಕಿ ತನ್ನ ಕೋಣೆಯೊಳಗೆ ಹೋಗಿ, ಬಟ್ಟೆ ಕಳಚಿದನು ; ಕುಚ್ಚುಪಟ್ಟಿಯ ಸಿರಿಗೆಯಂಚಿನ ರಾತ್ರಿಪರಟನ್ನು ಧರಿಸಿಕೊಂಡು, ಹಾಸುಗೆಯ ಮೇಲುರುಳಿಕೊಂಡನು. ಆದರೆ ಯಾವುಯಾವುದೋ ಕ್ಷುಲ್ಲಕ ಸಂಗತಿಗಳನ್ನು ಪ್ರಸ್ತಾಪಿಸುತ್ತ, ಕೇಳಬೇಕೆನಿಸಿದ ಪ್ರಶ್ನೆಗಳನ್ನು ಕೇಳುವ ಧೈರ್ಯವಿಲ್ಲದೆ ಲೆವಿನ್ ಕೋಣೆಯಲ್ಲಿಯೇ ಬಳಸಾಡುತ್ತಿದ್ದನು.

'ಸೋಪನ್ನು ಹೇಗೆ ಮಾಡುತ್ತಾರೆಂಬುದೇ ಸೋಜಿಗದ ಸಂಗತಿ' ಎಂದವನು ಅತಿಥಿಗೆಂದು ಅಗಫಿಯಾ ಇರಿಸಿದ್ದ, ಆದರೆ ಆಬ್ಲಾನ್‌ಸ್ಕಿ ಬಳಸದ ಸುವಾಸನೆಯ ಗಟ್ಟಿಯನ್ನು ಬೆರಳಲ್ಲಿ ತಿರುಗಿಸುತ್ತ ನುಡಿದನು. 'ಇಗೋ ನೋಡು, ಇದೊಂದು ಸುಂದರ ಕಲಾವಸ್ತು.'

'ಓ, ಹೌದು, ಈ ಕಾಲದಲ್ಲಿ ಉತ್ಪತ್ತಿಕಾರರು ಪರಿಪೂರ್ಣತೆಯ ಮಟ್ಟವನ್ನು ಮುಟ್ಟುತ್ತಿದ್ದಾರೆ' ಎಂದು ಅಬ್ಲಾನ್‌ಸ್ಕಿ ಆಕಳಿಸುವಾಗ ಆನಂದವೂ ಆವಿಯೂ ಹೊರ ಹೊಮ್ಮಿದುವು. ಉದಾಹರಣೆಗೆ ರಂಗಮಂದಿರ, ಗಾನ ವಿನೋದ, ಹಾಗೂ ಅರೆಬೆತ್ತಲೆಯ ಕುಣಿತ....ಅಹ, ಅಹಹ, ಅಹಹ!' ಎನ್ನುತ್ತ ಅವನು ಮತ್ತೆ ಆಕಳಿಸಿದನು. 'ಎಲ್ಲೆಲ್ಲಿಯೂ ವಿದ್ಯುದ್ದೀಪಗಳು....ಅಹ, ಅಹಹ!'

'ವಿದ್ಯುದ್ದೀಪಗಳು ಹೌದು' ಎಂದು ಲೆವಿನ್ ನುಡಿದನು. 'ಹೌದು.' ಅನಂತರ ಹಠಾತ್ತನೆ ಸೋಪನ್ನು ಕೆಳಗಿರಿಸಿ, 'ಈಗ ವ್ರಾಂಸ್ಕಿ ಎಲ್ಲಿದ್ದಾನೆ?' ಎಂದು ಪ್ರಶ್ನಿಸಿದನು.

'ವ್ರಾಂಸ್ಕಿಯೆ?' ಎಂದು ಅವನ ಸ್ನೇಹಿತ ಮತ್ತೊಂದು ಆಕಳಿಕೆಯನ್ನದುಮಿಕೊಂಡು ಪುನರುಚ್ಚರಿಸಿದನು. 'ಅವನು ಪೀಟರ್ಸ್‌ಬರ್ಗ್ ನಗರದಲ್ಲಿದ್ದಾನೆ. ನೀನು ಮಾಸ್ಕೊ ಬಿಟ್ಟಕೂಡಲೇ ಅವನಲ್ಲಿಗೆ ಹೋದ. ಅವನು ಮತ್ತೆ ಅಲ್ಲಿಗೆ ಬರಲಿಲ್ಲ. ನೀನು ನಿಜ ತಿಳಿಯಬೇಕೆನ್ನುವುದಾದರೆ, ಕೋಸ್ತ್ಯ, ಪ್ರಾಮಾಣಿಕವಾಗಿ ಹೇಳುತ್ತೇನೆ' ಎಂದವನು ಮಾತು ಮುಂದುವರಿಸಿ, ಮಂಚದ ಬಳಿಯ ಮೇಜಿನ ಮೇಲೆ ಮೊಳಕೈಯೂರಿ, ತನ್ನ ಅಂಗೈ ಬಟ್ಟಲಲ್ಲಿ ಸುಂದರ ವರ್ಣೋಜ್ವಲ ಮುಖವನ್ನೂರಿ, ನಕ್ಷತ್ರಗಳಂತೆ ಹೊಳೆಯುತ್ತಿದ್ದ ಕರುಣಾಪೂರಿತ ನಿದ್ದೆಗಣ್ಣುಗಳನ್ನರಳಿಸಿ 'ಅದೆಲ್ಲ ನಿನ್ನ ತಪ್ಪು. ನಿನ್ನ ಪ್ರತಿಸ್ಪರ್ಧಿಗೆ ನೀನು ಹೆದರಿದೆ. ಆವಾಗಲೇ ನಾನು ಹೇಳಿದಂತೆ ಯಾರಿಗೆ ಸದವಕಾಶವಿತ್ತೆಂಬುದರ ಬಗ್ಗೆ ನನಗೆ ಭರವಸೆಯಿಲ್ಲ. ನೀನೇಕೆ ಆಗ ಹೋರಾಟ ನಡಸಲಿಲ್ಲ? ನಿನಗಾಗ ಹೇಳಿದೆ....' ಬಾಯಿ ತೆರೆಯದೆಯೆ ಅವನು ತನ್ನ ದವಡೆಗಳಿಂದ ಮಾತ್ರ ಆಕಳಿಸಿದನು.

'ಮದುವೆಯಾಗುವುದಾಗಿ ಅವನಿಗೆ ತಿಳಿಸಿದ ವಿಷಯ ಇವನಿಗೆ ಗೊತ್ತಿದೆಯೋ ಇಲ್ಲವೋ ಕಾಣೆ' ಎಂದು ಲೆವಿನ್ ಅವನ ಕಡೆಗೆ ನಿಟ್ಟಿಸಿದನು. 'ಇವನ ಮುಖದಲ್ಲಿ ಕಾಪಟ್ಯ ತಟವಟಗಳು ತಾಂಡವವಾಡುತ್ತಿವೆ.' ಅವನ ಮುಖ ಕೆಂಪೇರಿದ್ದನ್ನು ಕಂಡ ಅವನು ನೇರವಾಗಿ ಅಬ್ಲಾನ್‌ಸ್ಕಿಯನ್ನು ನೋಡಿದನು.

'ಆ ಸಮಯದಲ್ಲವಳು ಆತನ ಬಾಹ್ಯ ಸೌಂದರ್ಯಕ್ಕೆ ಮರುಳಾದಳು' ಎಂಬುದಾಗಿ ಅಬ್ಲಾನ್‌ಸ್ಕಿ ಮಾತು ಮುಂದುವರಿಸಿದನು. 'ಅವನ ಶ್ರೀಮಂತಿಕೆಯಿಂದ ಹಾಗೂ ಸಮಾಜದಲ್ಲಿ ಅವನು ಪಡೆದಿದ್ದ ಉನ್ನತ ಸ್ಥಾನ ಮಾನಗಳಿಂದ ಆಕರ್ಷಿತಳಾದವಳು ಅವಳ ತಾಯಿಯೇ ಹೊರತು, ಅವಳಲ್ಲ.'

ಲೆವಿನ್ ಹುಬ್ಬುಗಂಟಿಕ್ಕಿಕೊಂಡನು. ಅದೆ ತಾನೆ ಸಂಭವಿಸಿದ ಹೊಸ ಗಾಯದಂತೆ, ಅವಳ ತಿರಸ್ಕಾರದಿಂದಾದ ಅವಮಾನ ಅವನ ಹೃದಯವನ್ನು ಗಾಸಿಗೊಳಿಸಿತು. ಅವನು ಮನೆಯಲ್ಲಿದ್ದುದರಿಂದ ಗೋಡೆಗಳು ಸಹ ಅವನಿಗೆ ಊರೆಯಾಗಿದ್ದುವು.

'ತಡಿ, ತಡಿ. ಅವನು ಶ್ರೀಮಂತನೆಂದು ಹೇಳುತ್ತಿದ್ದೀಯೆ' ಎಂದವನು ಅಬ್ಲಾನ್‌ಸ್ಕಿಯ ಮಾತಿನ ನಡುವೆ ಬಾಯಿಹಾಕಿದನು. 'ವ್ರಾಂಸ್ಕಿಯ ಶ್ರೀಮಂತಿಕೆಯಲ್ಲಿ ಮಾತ್ರವಲ್ಲ, ಬೇರೆ ಯಾವ ಶ್ರೀಮಂತಿಕೆಯಲ್ಲಿಯೇ ಆಗಲಿ ನನಗಿಂತ ಉತ್ತಮವಾದುದೇನಿದೆ ಎಂದು ಕೇಳಬಹುದೇನು? ವ್ರಾಂಸ್ಕಿಯೊಬ್ಬ ಶ್ರೀಮಂತನೆಂದು ನೀನು ಗಣಿಸಿದ್ದೀಯೆ; ನಾನು ಗಣಿಸುವುದಿಲ್ಲ. ಅವನ ತಂದೆ ಸಮಾಜದಲ್ಲಿ ಶೂನ್ಯನಾಗಿದ್ದ,

ರಿಕ್ತನಾಗಿದ್ದ ; ಸಂಚು ಹೊಂಚುಗಳಿಂದ ಅವನು ಮೇಲೆ ಬಂದ. ಅವನ ತಾಯಿಯೋ, ಯಾರ್‍ಯಾರ ಸಂಗಮಾಡಿದ್ದಳೋ, ದೇವರಿಗೇ ಗೊತ್ತು....ನನ್ನ ರೀತಿಯೇ ಬೇರೆ, ಕ್ಷಮಿಸು. ನಾನು ಮತ್ತು ನನ್ನಂಥವರು ಮಾತ್ರ ಶ್ರೀಮಂತರೆಂಬುದು ನನ್ನ ಎಣಿಕೆ. ಹಿಂದಿನ ಮೂರ್‍ನಾಲ್ಕು ಪೀಳಿಗೆಗಳಿಂದ ಗೌರವಯುತವಾಗಿ ಹಾಗೂ ಸಾಂಸ್ಕೃತಿಕ ವೈಭವದಿಂದ ಬಾಳು ನಡಸಿದ ಜನರನ್ನು (ಪ್ರತಿಭೆ ಸ್ವೋಪಜ್ಞತೆಗಳ ವಿಷಯವೇ ಬೇರೆ), ಇತರರ ಸಹಾಯಕ್ಕಾಗಿ ಹಲ್ಲು ಗಿಂಜದಿದ್ದ ಅಥವಾ ಅದನ್ನಪೇಕ್ಷಿಸದ ಜನರನ್ನು, ನನ್ನ ತಂದೆ ಮತ್ತು ಅಜ್ಜ ಬದುಕಿದ ರೀತಿಯಲ್ಲಿ ಬಾಳು ನಡಸಿದ ಜನರನ್ನು ಮಾತ್ರ ನಾನು ಶ್ರೀಮಂತರೆಂದು ಕರೆಯುತ್ತೇನೆ. ಅಂಥ ಹಲವು ಜನರನ್ನು ನಾನು ಬಲ್ಲೆ. ನನ್ನ ಕಾಡಿನಲ್ಲಿ ಮರಗಳನ್ನೆಣಿಸುವ ಕೆಲಸ ನೈಚ್ಯವೆಂದು ನೀನು ಬಗೆದಿದ್ದೀಯೆ ; ಆ ರ್‍ಯಾಬಿನಿನ್‌ನಿಗೆ ಮೂವತ್ತು ಸಾವಿರ ರೂಬಲ್‌ಗಳನ್ನು ಕಾಣಿಕೆಯಾಗಿ ನೀಡಿದ್ದೀಯೆ, ನಿನ್ನ ಜಮೀನು ಗಳಿಂದ ನಿನಗೆ ಗುತ್ತಿಗೆ ಬರುತ್ತದೆ, ಬೇರೇನು ಬರುತ್ತದೆಯೋ ನನಗೆ ಗೊತ್ತಿಲ್ಲ ; ನನಗಂತು ಅಂಥದೇನೂ ಬರುವುದಿಲ್ಲ ; ಆದ್ದರಿಂದಲೇ ನನ್ನ ಹಿರಿಯರಿಂದ ನಾನು ಪಡೆದದ್ದು ಹಾಗೂ ದುಡಿಮೆಯಿಂದ ಸಂಪಾದಿಸಿದ್ದು ಅತ್ಯಂತ ಅಮೂಲ್ಯವಾದದ್ದೆಂದು ನಾನು ಭಾವಿಸಿದ್ದೇನೆ. ನಿಜವಾದ ಶ್ರೀಮಂತರೆಂದರೆ ನಾವೇ ಹೊರತು, ಈ ಜಗತ್ತಿನ ದೊಡ್ಡವರು ಕೊಟ್ಟಿದ್ದನ್ನುಂಡು ಬದುಕುವವರಲ್ಲ ; ಅಥವಾ ಹತ್ತು ಕೊಪೆಕ್‌ಗಳಿಗೆ ಕೊಂಡುಕೊಳ್ಳಬಹುದಾದಂಥವರಲ್ಲ.'

'ನೀನು ಯಾರೊಡನೆ ಜಗಳವಾಡುತ್ತಿದ್ದೀಯೆ ? ನೀನು ಹೇಳಿದ್ದೆಲ್ಲ ನಿಜ' ಎಂದು ಆಬ್ಲಾನ್‌ಸ್ಕಿ ಪ್ರಾಮಾಣಿಕವಾಗಿ ಹಾಗೂ ಉಲ್ಲಾಸಯುಕ್ತವಾಗಿ ನುಡಿದನು. ಹತ್ತು ಕೊಪೆಕ್‌ಗಳಿಗೆ ಕೊಂಡುಕೊಳ್ಳಬಹುದಾದವರಲ್ಲಿ ತನ್ನನ್ನೂ ಆ ಗೆಳೆಯ ಸೇರಿಸಿದ್ದನೆಂಬ ಸಂಗತಿಯು ವಾಸನೆಯನ್ನವನು ಹಿಡಿದಿದ್ದನು. ಆದರೆ ಲೆವಿನ್‌ನ ಉತ್ಕಟಾವೇಶದಿಂದ ಅವನಿಗೆ ತೃಪ್ತಿಯಾಗಿತ್ತು. 'ನೀನು ಯಾರ ಜತೆಯಲ್ಲಿ ಜಗಳವಾಡುತ್ತಿದ್ದೀಯೆ ? ವ್ರಾಂಸ್ಕಿಯ ಬಗ್ಗೆ ನೀನು ಹೇಳಿದ್ದೆಲ್ಲ ನಿಜವಲ್ಲ ; ಆದರೆ ಅವನನ್ನು ಕುರಿತ ವಿಷಯದಲ್ಲಿ ನನಗೆ ಆಸಕ್ತಿಯಿಲ್ಲ. ನಾನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದೇನೆ, ಕೇಳು ; ನಾನೇ ನೀನಾಗಿದ್ದರೆ, ನಾನು ನನ್ನೊಡನೆ ಮಾಸ್ಕೋಗೆ ಹಿಂದಿರುಗುತ್ತಿದ್ದೆ ; ಮತ್ತು....'

'ಇಲ್ಲ, ನಾನು ಬರುವುದಿಲ್ಲ. ನಿನಗದು ಗೊತ್ತಿದೆಯೋ ಇಲ್ಲವೋ ನಾ ಕಾಣೆ ; ನನಗೆಲ್ಲವೂ ಒಂದೇ. ನಾನೀಗ ಹೇಳುತ್ತೇನೆ, ಕೇಳು : ನಾನವಳೊಡನೆ ಮದುವೆಯ ಪ್ರಸ್ತಾಪವೆತ್ತಿದೆ ; ಅದನ್ನವಳು ನಿರಾಕರಿಸಿದಳು ; ರಾಜಕುಮಾರಿ ಕಿಟ್ಟಿ ಶರ್‌ಬತ್‌ಸ್ಕಾಯ ನನ್ನ ಪಾಲಿಗೀಗ ಯಾತನಾಮಯ, ಅವಮಾನಕರ ಸ್ಮೃತಿಯಾಗುಳಿದಿದ್ದಾಳೆ.'

'ಏಕೆ ? ಅದೆಲ್ಲ ಶುದ್ಧ ಅವಿವೇಕ !'

'ಆ ಬಗ್ಗೆ ಮಾತಾಡುವುದೆ ಬೇಡ. ನಾನು ನಿನ್ನೊಡನೆ ಒರಟಾಗಿ ವರ್ತಿಸಿದ್ದರೆ ಕ್ಷಮಿಸು' ಎಂದು ಲೆವಿನ್ ನುಡಿದನು. ಅವನೀಗ ತನ್ನ ಹೃದಯವನ್ನು ಹಗುರಗೊಳಿಸಿ ಕೊಂಡಿದ್ದುದರಿಂದ ಪ್ರಾತಃಕಾಲದಲ್ಲಿ ಹೇಗಿದ್ದನೋ ಹಾಗೆಯೇ ಇದ್ದನು. 'ನನ್ನ ಮೇಲೆ ಕೋಪಿಸಿಕೊಂಡಿಲ್ಲ ತಾನೆ, ಸ್ಟೀವ್ ? ದಯೆಯಿಟ್ಟು ಕೋಪಿಸಿಕೊಳ್ಳಬೇಡ' ಎಂದವನು ತನ್ನ ಗೆಳೆಯನ ಕೈಹಿಡಿದುಕೊಂಡು, ಮಂದಹಾಸದಿಂದ ಅಂಗಲಾಚಿದನು.

'ಖಂಡಿತ ಇಲ್ಲ. ಕೋಪಗೊಳ್ಳುವಂಥ ವಿಷಯವೇನೂ ಇಲ್ಲವಲ್ಲ. ನಾವು ಹೃದಯ ತೆರೆದು ಮಾತಾಡಿದ್ದರಿಂದ, ನನಗೆ ಸಂತೋಷವಾಗಿದೆ. ಓ, ಕೆಲವೊಮ್ಮೆ ಬೆಳಗಿನ ಬೇಟೆ ಸೊಗಸಾಗಿರುತ್ತದೆ. ಪ್ರಯತ್ನಿಸಬಾರದೇಕೆ? ಹೇಗೂ ರಾತ್ರಿ ನನಗೆ ನಿದ್ದೆ ಹತ್ತಲಿಲ್ಲ. ಹಿಂದಕ್ಕೂ ಬರುವುದಿಲ್ಲ. ನೇರವಾಗಿ ನಿಲ್ದಾಣಕ್ಕೆ ಹೋಗುತ್ತೇನೆ.'

'ಖಂಡಿತವಾಗಿ ಹೋಗೋಣ.'

೧೮

ವ್ರಾಂಸ್ಕಿಯ ಆಂತರಂಗಿಕ ಜೀವನ ಕಾಮಮೋಹಾದಿ ವ್ಯಸನಗಳಿಂದ ಲಿಪ್ತವಾಗಿದ್ದರೂ, ಅವನ ಬಾಹ್ಯ ಜೀವನವಂತು ಸಾಮಾಜಿಕ ಮತ್ತು ಸೈನಿಕ ಸಂಬಂಧಾಸಕ್ತಿಗಳ ಹಳೆಯ ಸುಪರಿಚಿತ ಕಂಬಿಗಳ ಮೇಲೆ ಚ್ಯುತಿಯಿಲ್ಲದೆ ನಿರಂತರವಾಗಿ ಉರುಳುತ್ತಿತ್ತು. ವ್ರಾಂಸ್ಕಿಯ ಜೀವನದಲ್ಲಿ ಸೈನಿಕಾಸಕ್ತಿಗಳಿಗೆ ಮಹತ್ತರವಾದ ಸ್ಥಾನವಿತ್ತು; ತನ್ನ ದಳವನ್ನವನು ವಿಶೇಷವಾಗಿ ಪ್ರೀತಿಸುತ್ತಿದ್ದುದೊಂದೇ ಕಾರಣವಾಗಿರಲಿಲ್ಲ; ದಳ ಅವನನ್ನು ಬಹುವಾಗಿ ಪ್ರೀತಿಸುತ್ತಿತ್ತು. ಸೈನಿಕರು ಅವನಿಗೆ ನಿಷ್ಠರಾಗಿದ್ದುದು ಮಾತ್ರವಲ್ಲ, ಅವರವನನ್ನು ಗೌರವಿಸುತ್ತಿದ್ದರು; ಅಷ್ಟೇ ಅಲ್ಲ, ಅವನ ಬಗ್ಗೆ ಅವರು ಹೆಮ್ಮೆಯುಳ್ಳವರಾಗಿದ್ದರು. ವಿಪುಲೈಶ್ವರ್ಯದ ಒಡೆಯನಾಗಿದ್ದೂ, ಅಸಾಧಾರಣವಾದ ಶಿಕ್ಷಣವನ್ನು ಪಡೆದ ಸಮರ್ಥನಾಗಿದ್ದರೂ, ಅವನ ಅಹಂಕಾರ ಮಹತ್ವಾಕಾಂಕ್ಷೆಗಳನ್ನು ತಣಿಸುವ, ಸಕಲ ವಿಜಯಗಳಿಗೆ ಸಾಧನವಾಗುವ ಮಾರ್ಗ ಅವನೆದುರು ಅಗಲವಾಗಿ ತೆರೆದಿದ್ದರೂ ಅದನ್ನವನು ಆರಿಸಿಕೊಳ್ಳದೆ, ಬದುಕು ಒದಗಿಸಲಿದ್ದ ಎಲ್ಲ ಆಸಕ್ತಿಗಳನ್ನು ತೊರೆದು, ತನ್ನ ದಳದ ಮತ್ತು ಸಹೋದ್ಯೋಗಿಗಳ ಆಸಕ್ತಿಗಳನ್ನು ಮಾತ್ರ ಆಲಿಂಗಿಸಿಕೊಂಡಿದ್ದನು. ತನ್ನ ಮೇಲೆ ತನ್ನ ಸಹೋದ್ಯೋಗಿಗಳಿರಿಸಿದ್ದ ವಿಶ್ವಾಸಾದರಗಳನ್ನವನು ಬಲ್ಲವನಾಗಿದ್ದನು; ಇಂಥ ಜೀವನ ವಿಧಾನವನ್ನನುಭವಿಸುವುದರ ಜತೆಗೆ, ಅವರ ವಿಶ್ವಾಸಾದರಗಳಿಗೆ ತಕ್ಕ ಕೃತಜ್ಞತೆಯನ್ನರ್ಪಿಸಬೇಕೆಂಬುದು ಅವನ ಆಕಾಂಕ್ಷೆಯಾಗಿತ್ತು.

ತನ್ನ ಪ್ರಣಯ ಸಾಹಸದ ಕಥೆಯನ್ನವನು ಎಂಥ ಸಂದರ್ಭದಲ್ಲಿಯೂ ತನ್ನ ಸಹೋದ್ಯೋಗಿಗಳೊಡನೆ ಪ್ರಸ್ತಾಪಿಸುತ್ತಿರಲಿಲ್ಲ; ಕುಡಿತದ ಅಮಲೇರಿದಾಗಲೂ (ಆದರೆ ಸಂಯಮವನ್ನು ಕಳೆದುಕೊಳ್ಳುವಷ್ಟರಮಟ್ಟಿಗೆ ಅವನು ಕುಡಿಯುತ್ತಿರಲಿಲ್ಲ) ಅವನು ತನ್ನ ಗುಟ್ಟನ್ನು ಇತರರಿಗೆ ಬಿಟ್ಟುಕೊಡುತ್ತಿರಲಿಲ್ಲ. ತನ್ನ ಸಂಪರ್ಕ ಸಂಸರ್ಗಗಳ ಪ್ರಸ್ತಾಪವೆತ್ತುತ್ತಿದ್ದ ಬೇಜವಾಬ್ದಾರೀ ಸಹೋದ್ಯೋಗಿಯ ಬಾಯನ್ನು ಯಾವಾಗಲೂ ಮುಚ್ಚಿಸುತ್ತಿದ್ದನು. ಇಷ್ಟಾದರೂ ಅವನ ಪ್ರೇಮ ಇಡೀ ನಗರಕ್ಕೆ ಗೊತ್ತಿತ್ತು; ಮದಾಂ ಕರೆನೀನಳ ಬಗೆಗಿನ ಅವನ ಸಂಬಂಧಗಳ ಬಗ್ಗೆ ಪ್ರತಿಯೊಬ್ಬರೂ ಹೆಚ್ಚು ಕಡಮೆ ಸರಿಯಾದ ಊಹೆಗಳನ್ನೇ ರೂಪಿಸಿಕೊಂಡಿದ್ದರು. ಪ್ರತಿಯೊಬ್ಬರೂ ಅವನ ಪ್ರೇಮ ಸಂಬಂಧದ ದೊಡ್ಡಸ್ತಿಕೆಯನ್ನು ಕಂಡು ಮತ್ಸರಿಸುತ್ತಿದ್ದರು; ಕರೆನಿನ್‌ರ ಉನ್ನತ ಸಾರ್ವಜನಿಕ ಸ್ಥಾನಮಾನಗಳು ಹಾಗೂ ಅವುಗಳಿಂದಾಗಿ ಸಮಾಜದಲ್ಲಿ ಆ ಪ್ರಣಯ ವ್ಯವಹಾರಕ್ಕೊದಗಿದ ಪ್ರಾಮುಖ್ಯತೆ ಆ ಮಾತ್ಸರ್ಯಕ್ಕೆ ಕಾರಣಗಳಾಗಿದ್ದುವು.

ಅನ್ನಾಳ ಬಗ್ಗೆ ಮಾತ್ಸರ್ಯವನ್ನು ಹೊಂದಿದ್ದ, ಅವಳು ಸುಶೀಲಳೆಂಬ ಜನರ ಪ್ರಚಾರವನ್ನು ಕೇಳಿಕೇಳಿ ಸಾಕಾಗಿದ್ದ ತರುಣಿಯರಲ್ಲಿ ಹಲವರು ಹಲವು ತೆರನ ಊಹಾಪೋಹಗಳಿಂದ ಖುಷಿಪಡುತ್ತಿದ್ದರು; ತಮ್ಮ ತಿರಸ್ಕಾರದ ಭಾರವನ್ನೆಲ್ಲ ಅವಳ ಮೇಲೆ ಹೊರಿಸುವ ಸಲುವಾಗಿ ಸಾರ್ವಜನಿಕಾಭಿಪ್ರಾಯದ ಬದಲಾವಣೆ ಸ್ಥಿರಗೊಳ್ಳಲೆಂದು ಕಾಯುತ್ತಿದ್ದರು. ಸಮಯ ಕೂಡಿ ಬಂದಾಗ ಅವಳ ಮೇಲೆ ರಾಡಿಯನ್ನೆರಚಲು ಸಿದ್ಧವಾಗುತ್ತಿದ್ದರು. ಆದರೆ ಸಮಾಜದಲ್ಲಿ ಮೊಳೆದೋರಲಿದ್ದ ಅಪನಿಂದೆಯ ಬಗ್ಗೆ ಹಲವು ಮಧ್ಯಮವರ್ಗದ ಜನ ಮತ್ತು ಕೆಲವು ಪ್ರಭಾವೀ ವ್ಯಕ್ತಿಗಳು ವ್ಯಾಕುಲಗೊಂಡಿದ್ದರು.

ವ್ರಾಂಸ್ಕಿಯ ವ್ಯವಹಾರ ತಿಳಿದಾಗ ಅವನ ತಾಯಿಗೆ ಮೊದಮೊದಲು ತೃಪ್ತಿಯಾಯಿತು; ಏಕೆಂದರೆ ಅವಳ ಪ್ರಕಾರ, ಉನ್ನತ ಸಮಾಜದಲ್ಲಿ ಅಂಥದೊಂದು ವ್ಯವಹಾರ ತರುಣನೊಬ್ಬನ ತೇಜಸ್ಸಿಗೆ ಸಾಣೆ ಹಿಡಿದಂತಾಗುತ್ತದೆಂದು ಅವಳು ನಂಬಿಕೊಂಡಿದ್ದಳು. ತಾನು ಬಹುವಾಗಿ ಮೆಚ್ಚಿಕೊಂಡಿದ್ದ, ತನ್ನ ಪುಟ್ಟಮಗನ ಬಗ್ಗೆ ಅಪಾರ ಮಮತೆ ಹೊಂದಿದ್ದ, ಮದಾಂ ಕರೆನಿನ ಗೌರವಾನ್ವಿತರಾದ ಸುರಸುಂದರಿಯರಂತೆ ವರ್ತಿಸುತ್ತಿದ್ದುದನ್ನು ಗಮನಿಸಿದ ಕೌಂಟೆಸ್ ವ್ರಾಂಸ್ಕಾಯ ತುಂಬ ಸಂತೃಪ್ತಿಯಿಂದಿದ್ದಳು. ಆದರೆ ತನ್ನ ದಳದಲ್ಲಿದ್ದುಕೊಂಡು, ಮದಾಂ ಕರೆನಿನಳ ಸನಿಹದಲ್ಲಿರುವ ಸಲುವಾಗಿ, ತನ್ನ ಭವಿಷ್ಯ ಜೀವನದ ವಿಕಾಸಕ್ಕೆ ಅತಿಮುಖ್ಯವೆನಿಸಿದ ಹುದ್ದೆಯನ್ನು ತನ್ನ ಮಗ ನಿರಾಕರಿಸಿದ್ದನೆಂಬುದನ್ನವಳು ಇತ್ತೀಚೆಗೆ ಅರಿತುಕೊಂಡಿದ್ದಳು; ಈ ನಿರಾಕರಣೆಯಿಂದಾಗಿ ಉನ್ನತ ಸ್ಥಾನದಲ್ಲಿದ್ದ ಕೆಲವು ವ್ಯಕ್ತಿಗಳಿಗೆ ಅತೃಪ್ತಿಯಾಗಿತ್ತೆಂಬ ವಿಷಯವನ್ನೂ ಅವಳು ತಿಳಿದುಕೊಂಡಿದ್ದಳು; ಆದ್ದರಿಂದವಳು ತನ್ನ ನಿಲವನ್ನು ಬದಲಾಯಿಸಿದ್ದಳು. ತಾನು ಕೇಳಿ ತಿಳಿದುಕೊಂಡಿದ್ದ ಕತೆಗಳಿಂದ, ಅವನ ಸಂಬಂಧಗಳು ಸುಸಂಸ್ಕೃತ ಯಶಸ್ವೀ ಸಮಾಜಕ್ಕೆ ತಕ್ಕುದಾಗಿರಲಿಲ್ಲವೆಂದೂ, ಅವುಗಳಿಗೆ ತನ್ನ ಅಂಗೀಕಾರ ಮುದ್ರೆ ಸಾಧ್ಯವಿಲ್ಲವೆಂದೂ, ಹತಾಶೆಯ ಕಾಮುಲಾಲಸೆಯಿಂದಾಗಿ ತನ್ನ ಮಗ ನಾಚಿಕೆಗೇಡಿನ ವ್ಯವಹಾರಗಳಿಗೆ ಕೈಹಾಕಬಹುದೆಂದೂ ತಿಳಿದು ಅವಳು ಆ ವ್ಯವಹಾರವನ್ನು ವಿರೋಧಿಸಿದಳು. ಅನಿರೀಕ್ಷಿತವಾಗಿ ಮಾಸ್ಕೊ ನಗರ ಬಿಟ್ಟಂದಿನಿಂದ ಅವನನ್ನವಳು ನೋಡಿರಲಿಲ್ಲ. ತನ್ನನ್ನು ಬಂದು ನೋಡುವಂತೆ ಅವಳು ತನ್ನ ಹಿರಿಯ ಮಗನ ಮೂಲಕ ಹೇಳಿಕಳಿಸಿದ್ದಳು.

ಹಿರಿಯ ಮಗ ಸಹ ತನ್ನ ತಮ್ಮನ ಬಗ್ಗೆ ಅತೃಪ್ತಿಯಿಂದಿದ್ದನು. ಅದು ಎಂಥ ಪ್ರೇಮವಿದ್ದಿರಬಹುದು. ಮಹತ್ವಪೂರ್ಣವಾದದ್ದೇ ಕ್ಷುಲ್ಲಕವಾದದ್ದೇ, ಭಾವಾವೇಶದ್ದೇ ಭಾವರಹಿತವಾದದ್ದೇ, ಪಾಪಾತ್ಮಕವಾದದ್ದೇ ಪಾಪರಹಿತವಾದದ್ದೇ (ಹಲವು ಮಕ್ಕಳ ತಂದೆಯಾದ ಅವನು ಬ್ಯಾಲೇ ನರ್ತಕಿಯೊಬ್ಬಳ ಬೆಂಬಲಿಗನಾಗಿದ್ದು, ಅಂಥ ಸಂಗತಿಗಳ ಬಗ್ಗೆ ಉದಾರವಾಗಿದ್ದನು.) ಎಂಬ ವಿವರಗಳ ಕಡೆಗವನು ಗಮನ ಹರಿಸುತ್ತಿರಲಿಲ್ಲ; ಆದರೆ ಯಾವ ವ್ಯಕ್ತಿಗಳನ್ನು ತೃಪ್ತಿಪಡಿಸಬೇಕಾಗಿತ್ತೋ ಅಂಥ ವ್ಯಕ್ತಿಗಳು ಈ ಪ್ರಣಯ ವ್ಯವಹಾರದಿಂದ ಅತೃಪ್ತರಾಗಿದ್ದರೆಂಬುದನ್ನವನು ಬಲ್ಲವನಾದ್ದರಿಂದ, ಅವನದಕ್ಕೆ ತನ್ನ ಸಮ್ಮತಿ ನೀಡಲಿಲ್ಲ.

ಸೈನ್ಯೋದ್ಯೋಗ ಮತ್ತು ಸಮಾಜಗಳ ಜತೆಗೆ ವ್ರಾಂಸ್ಕಿಗೆ ಬೇರೊಂದು ಹವ್ಯಾಸವೂ ಇತ್ತು: ಕುದುರೆಗಳೆಂದರೆ ಅವನಿಗೆ ಪಂಚಪ್ರಾಣ.

ಈ ವರ್ಷ ಅಧಿಕಾರಿಗಳಿಗಾಗಿ ಕುದುರೆ ಪಂದ್ಯವೊಂದನ್ನು ವ್ಯವಸ್ಥೆಗೊಳಿಸ ಲಾಗಿತ್ತು. ವ್ರಾಂಸ್ಕಿ ತನ್ನ ಹೆಸರು ಸಹ ಕೊಟ್ಟಿದ್ದ; ಶುದ್ಧ ತಳಿಯ ಇಂಗ್ಲಿಷ್ ಕುದುರೆಯನ್ನು ಕೊಂಡು ತಂದಿದ್ದ. ತನ್ನ ಪ್ರಣಯ ವ್ಯವಹಾರದ ಮಧ್ಯೆಯೂ, ಬರಲಿದ್ದ ಜೂಜುಗಳಲ್ಲಿ ಭಾವಪೂರ್ಣವಾಗಿ, ಆದರೆ ಸಂಯಮವನ್ನು ಬಿಡದೆ ತಲ್ಲೀನ ನಾಗಿದ್ದನು.

ಈ ಎರಡು ಬಗೆಯ ಉತ್ಸಾಹಗಳ ನಡುವೆ ಸಂಘರ್ಷ ತಲೆದೋರಲಿಲ್ಲ. ಅದಕ್ಕೆ ಪ್ರತಿಯಾಗಿ, ಅವನ ಮನಸ್ಸಿಗೆ ವಿಶ್ರಾಂತಿ ಬೇಕಾಗಿತ್ತು; ತನ್ನ ಪ್ರೇಮಪ್ರಕರಣದ ಜತೆಗೆ, ಆಯಾಸಕರ ಉದ್ವೇಗಗಳಿಗೆ ಪರಿಹಾರವನ್ನೂ ಚೇತರಿಕೆಯನ್ನೂ ನೀಡುವ, ಬಾಹ್ಯ ಪ್ರಪಂಚವನ್ನು ಮರೆಸುವ ಆಸಕ್ತಿ ಅತ್ಯಾವಶ್ಯವಾಗಿತ್ತು.

೧೯

ಕ್ರಸ್ನೋ ಸೆಲೋದಲ್ಲಿ ನಡೆದ ಪಂದ್ಯಾಟದ ದಿನ ಸೈನಿಕ ಭೋಜನಾಲಯದಲ್ಲಿ ಮಾಂಸದ ತುಂಡುಗಳನ್ನು ಸವಿಯುವ ಸಲುವಾಗಿ ವ್ರಾಂಸ್ಕಿ ಎಂದಿಗಿಂತ ಮೊದಲೇ ಬಂದನು. ತನ್ನ ದೇಹವನ್ನು ಎಷ್ಟು ತೂಕವಿರಬೇಕಾಗಿತ್ತೋ ಅಷ್ಟು ತೂಕಕ್ಕಿಳಿಸಿ ಕೊಂಡಿದ್ದುದರಿಂದ ಅವನು ಪಥ್ಯಮಾಡಬೇಕಾಗಿರಲಿಲ್ಲ. ಅವನು ಹೆಚ್ಚು ತೂಕ ತೂಗಬೇಕಾಗಿರಲಿಲ್ಲ. ಆ ಕಾರಣಕ್ಕಾಗಿ ಅವನು ರೊಟ್ಟಿ ಮತ್ತು ಸಿಹಿ ತಿಂಡಿಗಳನ್ನು ತ್ಯಜಿಸಿದನು. ಎರಡು ಮೊಳಕೈಗಳನ್ನು ಮೇಜಿನ ಮೇಲೂರಿಕೊಂಡು ಅವನು ಕುಳಿತನು; ಬಿಳಿಯ ಸೊಂಟಕೋಟಿನ ಮೇಲಿದ್ದ ಜಾಕೀಟಿಗೆ ಗುಂಡಿ ಹಾಕಿರಲಿಲ್ಲ; ಮಾಂಸದ ತುಂಡಿಗಾಗಿ ಕಾಯುತ್ತಿದ್ದಾಗ, ತನ್ನ ಮುಂದೆ ತೆರೆದಿದ್ದ ಫ್ರೆಂಚ್ ಕಾದಂಬರಿಯ ನ್ನೋದುತ್ತಿದ್ದನು. ಬರುತ್ತಿದ್ದ ಮತ್ತು ಹೋಗುತ್ತಿದ್ದ ಅಧಿಕಾರಿಗಳೊಂದಿಗೆ ಮಾತಾಡುವುದನವಶ್ಯವೆಂದು ತಿಳಿದು, ಅವನು ಪುಸ್ತಕವನ್ನು ದಿಟ್ಟಿಸುತ್ತಿದ್ದನು. ಅವನು ತನ್ನ ಚಿಂತೆಗಳಲ್ಲಿ ಮಗ್ನನಾಗಿದ್ದನು.

ಆ ದಿನ ಪಂದ್ಯಾಟ ಮುಗಿದನಂತರ ತನ್ನನ್ನು ಸಂಧಿಸುವುದಾಗಿ ವಾಗ್ದಾನ ಮಾಡಿದ್ದ ಅನ್ನಾಳ ಯೋಚನೆಯಲ್ಲಿ ಅವನು ಮಗ್ನನಾಗಿದ್ದನು. ಮೂರು ದಿನ ಗಳಿಂದ ಅವನವಳನ್ನು ನೋಡಿರಲಿಲ್ಲ. ಅಂದೇ ಅವಳ ಗಂಡ ವಿದೇಶಯಾತ್ರೆಯಿಂದ ಹಿಂದಿರುಗಿದ್ದುದರಿಂದ, ಅವಳು ತನ್ನ ವಾಗ್ದಾನವನ್ನೀಡೇರಿಸುವಳೋ ಇಲ್ಲವೋ ಎಂಬ ವಿಷಯದ ಬಗ್ಗೆ ಅವನಿಗೆ ಸಂದೇಹವಿತ್ತು. ಆ ಸಂದೇಹವನ್ನು ನಿವಾರಿಸಿಕೊಳ್ಳುವ ಬಗೆ ಹೇಗೆಂದು ಅವನು ಯೋಚಿಸುತ್ತಿದ್ದನು. ಕೊನೆಯ ಸಲ ಅವನವಳನ್ನು ಭೇಟಿ ಮಾಡಿದ್ದು ತನ್ನ ಸೋದರ ಸಂಬಂಧಿ ಬೆಟ್ಸಿಯ ಹಳ್ಳಿಮನೆಯಲ್ಲಿ. ಕರೆನಿನ್‌ರ ಹಳ್ಳಿಮನೆಗೂ ಅವನು ಒಮ್ಮೊಮ್ಮೆ ಹೋಗಿಬಂದಿದ್ದನು. ಅವನೀಗ ಅಲ್ಲಿಗೆ ಹೋಗಬೇಕೆಂದಿದ್ದನು; ಅದರ ಸಾಧ್ಯಾಸಾಧ್ಯತೆಯ ಬಗ್ಗೆ ಅವನು ಆಲೋಚಿಸುತ್ತಿದ್ದನು.

'ನಾನವಳಲ್ಲಿಗೆ ಹೋಗುತ್ತೇನೆ. ಅವಳು ಪಂದ್ಯಾಟಕ್ಕೆ ಬರುವುದುಂಟೋ ಇಲ್ಲವೋ ಎಂಬುದನ್ನು ತಿಳಿಯಲಪೇಕ್ಷಿಸಿ ಬೆಟ್ಸಿ ಹೇಳಿಕಳಿಸಿದ್ದಾಳೆ. ನಾನು ಖಂಡಿತ ವಾಗಿ ಹೋಗಿಯೇ ಹೋಗುತ್ತೇನೆ' ಎಂದವನು ಪುಸ್ತಕದ ಕಡೆಯಿಂದ ತನ್ನ ತಲೆಯನ್ನು

ನೆಗಹಿ, ನಿರ್ಧರಿಸಿದನು. ಅವಳನ್ನು ನೋಡುವ ಆನಂದದ ಕಲ್ಪನೆಯಿಂದ ಅವನ ಮುಖ ಪ್ರಕಾಶಮಾನವಾಯಿತು.

'ನನ್ನ ಮನೆಗೊಬ್ಬ ಮನುಷ್ಯನನ್ನು ಕಳಿಸಿ, ಆದಷ್ಟು ಬೇಗ ಮುಕ್ಕಾದರೆ ಗಾಡಿ ತರಿಸು' ಎಂದವನು ಬಿಸಿ ಬಿಸಿಯಾದ ಬೆಳ್ಳಿಯ ತಟ್ಟೆಯ ಮೇಲೆ ಮಾಂಸದ ತುಂಡನ್ನು ತಂದ ಪರಿಚಾರಕನಿಗೆ ತಿಳಿಸಿದನು. ಅವನು ತಟ್ಟೆಯನ್ನು ತನ್ನ ಬಳಿಗೆಳೆದುಕೊಂಡು, ತಿನ್ನಲನುವಾದನು.

ಪಕ್ಕದ ಮೇಜುಗೋಲಿಯ ಕೋಣೆಯಿಂದ ಮಾತುಗಳ, ನಗುವಿನ ಮತ್ತು ಗೋಲಿತಾಡನದ ಶಬ್ದ ಕೇಳಿಸುತ್ತಿತ್ತು. ಪ್ರಮುಖದ್ವಾರದ ಮೂಲಕ ಇಬ್ಬರು ಅಧಿಕಾರಿಗಳು ಅಂಗಳವನ್ನು ಪ್ರವೇಶಿಸಿದರು. ಅವರಲ್ಲೊಬ್ಬ ಕಾಂತಿಹೀನ ತೆಳ್ಳನೆಯ ಮುಖದ ಯುವಕ; ಯುವ ಪರಿಚರರ ದಳದಲ್ಲಿದ್ದ ಅವನು ಇತ್ತೀಚೆಗೆ ಸೈನ್ಯಕ್ಕೆ ಸೇರಿಕೊಂಡಿದ್ದನು; ಮತ್ತೊಬ್ಬ ಬೊಜ್ಜುಮೆಯ್ಯ ಹಿರಿಯ ಅಧಿಕಾರಿ; ಅವನ ಮುಂಗೈಯಲ್ಲೊಂದು ಕಂಕಣವಿತ್ತು; ಕೊಬ್ಬಿನಿಂದ ಊದಿಕೊಂಡಿದ್ದ ಅವನ ಮುಖದಲ್ಲಿ ಅವನ ಕಿರುಗಣ್ಣುಗಳು ಹೂತುಕೊಂಡಿದ್ದುವು.

ವ್ರಾಂಸ್ಕಿ ಅವರ ಕಡೆಗೆ ಕಣ್ಣು ಮಿಟುಕಿಸಿ, ಹುಬ್ಬುಗಂಟಿಕ್ಕಿ, ಪುಸ್ತಕದ ಕಡೆಗೆ ದಿಟ್ಟಿ ಹರಿಸಿ, ಅವರನ್ನು ನೋಡಲಿಲ್ಲವೆಂಬಂತೆ, ವಾಚಿಸಲು, ಅಂತೆಯೇ ತಿನ್ನಲು ಪ್ರಾರಂಭಿಸಿದನು.

'ಏನಿದು? ಮುಂದಿನ ಕೆಲಸಕ್ಕೆ ಸಿದ್ಧವಾಗುತ್ತಿರುವಿರಾ?' ಎಂದು ಬೊಜ್ಜು ಮೆಯ್ಯ ಅಧಿಕಾರಿ ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತ ಕೇಳಿದನು.

'ನಿಮಗೆ ಹೇಗೆ ಕಾಣಿಸುತ್ತಿದೆಯೊ ಹಾಗೆ' ಎಂದು ವ್ರಾಂಸ್ಕಿ ಹುಬ್ಬು ಗಂಟಿಕ್ಕಿ ಕೊಂಡು, ಕಣ್ಣೆತ್ತದೆಯೆ ಬಾಯನ್ನೊರಸಿಕೊಳ್ಳುತ್ತ, ಉತ್ತರಿಸಿದನು.

'ದಪ್ಪಗಾಗುತ್ತಿರುವುದರಿಂದ ನಿಮಗೆ ಹೆದರಿಕೆ ಇಲ್ಲವೆ?' ಎಂಬುದಾಗಿ ಹಿರಿಯವ ಕಿರಿಯ ಅಧಿಕಾರಿಗಾಗಿ ಕುರ್ಚಿಯೊಂದನ್ನೆಳೆಯುತ್ತ ನುಡಿದನು.

'ಏನು?' ಎಂದು ವ್ರಾಂಸ್ಕಿ ಕುಪಿತಗೊಂಡನು; ಸಮಸಮನಾದ ಬಿಳಿಯ ಹಲ್ಲುಗಳ ಪಂಕ್ತಿಯನ್ನು ಪ್ರದರ್ಶಿಸುವಂತೆ ಅವನು ಮುಖಮಾಡಿದನು.

'ದಪ್ಪಗಾಗುತ್ತಿರುವುದರಿಂದ ನಿಮಗೆ ಹೆದರಿಕೆಯಾಗುವುದಿಲ್ಲವೆ?'

'ಮಾಣಿ, ಒಂದು ಶೀಷೆ ಷೆರಿ ತಾ!' ಎಂದು ವ್ರಾಂಸ್ಕಿ ಪ್ರಶ್ನೆಯ ಕಡೆಗೆ ಗಮನ ಹರಿಸದೆ ಆಣತಿಯಿತ್ತನು. ಪುಸ್ತಕವನ್ನು ಮತ್ತೊಂದು ಕಡೆಗೆ ಸರಿಸಿ, ಓದು ಮುಂದು ವರಿಸಿದನು.

ಬೊಜ್ಜುಮೆಯ್ಯ ಅಧಿಕಾರಿ ವೈನುಗಳ ಪಟ್ಟಿ ಹಿಡಿದುಕೊಂಡು, ಚಿಕ್ಕವನ ಕಡೆಗೆ ತಿರುಗಿದನು.

'ನೀವೇ ಪಾನೀಯಗಳನ್ನಾರಿಸಿ' ಎಂದವನು ಚಿಕ್ಕವನ ಕಡೆಗೆ ನೋಡುತ್ತ, ಪಟ್ಟಿಯನ್ನವನಿಗೆ ಕೊಟ್ಟನು.

'ನನಗೆ ಹಾಕ್ ಮದ್ಯ' ಎಂದು ಕಿರಿಯ ಅಧಿಕಾರಿ ವ್ರಾಂಸ್ಕಿಯ ಕಡೆಗೆ ಸಂಕೋಚದಿಂದ ಕಣ್ಣು ಮಿಟುಕಿಸುತ್ತ ತನ್ನ ವಿರಳ ಮೀಸೆಯ ಕೂದಲುಗಳನ್ನೆಳೆಯುತ್ತ

ನುಡಿದನು. ವ್ರಾನ್ಸ್ಕಿಯ ಉಪೇಕ್ಷೆಯನ್ನು ಗಮನಿಸಿದ ಕಿರಿಯ ಅಧಿಕಾರಿ ಮೇಲೆದ್ದನು. 'ಮೇಜು ಗೋಲಿಯಾಡೋಣ, ಬಾ' ಎಂದವನು ಕರೆದನು.

ಬೊಜ್ಜುಮೆಯ್ಯ ಅಧಿಕಾರಿ ವಿಧೇಯತೆಯಿಂದ ಮೇಲೆದ್ದನು; ಅವರಿಬ್ಬರೂ ಬಾಗಿಲ ಕಡೆಗೆ ನಡೆದರು.

ಅದೇ ಸಮಯಕ್ಕೆ ಸರಿಯಾಗಿ, ಒಳ್ಳೆಯ ಮೈಕಟ್ಟಿನ ಎತ್ತರದ ಕಪ್ತಾನ್ ಯಶ್ವಿನ್ ಒಳಗೆ ಬಂದು, ದರ್ಪದಿಂದ ಇಬ್ಬರು ಅಧಿಕಾರಿಗಳ ಕಡೆಗೆ ತಲೆದೂಗಿ, ವ್ರಾನ್ಸ್ಕಿ ಕುಳಿತಿದ್ದ ಮೇಜಿನ ಕಡೆಗೆ ನಡೆದನು.

'ಹಾ! ಇಲ್ಲೀ ಇದ್ದೀಯೆ!' ಎಂದವನು ತನ್ನ ದೊಡ್ಡ ಕೈಯನ್ನವನ ಭುಜದ ಮೇಲಿರಿಸುತ್ತ ಅಲ್ಲದನು. ವ್ರಾನ್ಸ್ಕಿ ಕೋಪದಿಂದ ದಿಟ್ಟಿಯನ್ನು ಮೇಲೆತ್ತಿದನು; ಆದರೆ ಒಡನೆಯೇ ಸ್ವಾಭಾವಿಕವಾದ ಸ್ಥಿರ ಭಂಗಿಯಿಂದ ಹಾಗೂ ಗಂಭೀರ ಭಾವದಿಂದ ಅವನ ಮುಖ ಪ್ರಜ್ವಲಿಸಿತು.

'ನಿನಗೆ ಶುಭವಾಗಲಿ, ಅಲೆಕ್ಸಿ' ಎಂದು ಕಪ್ತಾನ ಹೊಳಲುಗೊಡುವ ಮಧ್ಯಮ ಸ್ಥಾಯಿಯಲ್ಲಿ ಮಾತು ತೆಗೆದನು. 'ಊಟ ಮುಗಿದ ಕೂಡಲೇ ನನ್ನೊಡನೆ ಸಣ್ಣ ಗಳಾಸಿನಷ್ಟು ಪಾನೀಯ ಕುಡಿಯಬೇಕು.'

'ಊಟ ಮುಗಿದಿದೆ.'

'ಆ ಇಬ್ಬರನ್ನು ಬೇರ್ಪಡಿಸಲಾಗದು' ಎಂದು ಯಶ್ವಿನ್ ಅಂಗಳದಿಂದ ಹೊರಗೆ ಹೋಗುತ್ತಿದ್ದ ಇಬ್ಬರು ಅಧಿಕಾರಿಗಳ ಕಡೆಗೆ ವ್ಯಂಗ್ಯದೃಷ್ಟಿ ಬೀರುತ್ತ ನುಡಿದನು. ಬಿಗಿಯಾಗಿ ಕೊರೆಯುತ್ತಿದ್ದ ಇಜಾರವುಳ್ಳ ಉದ್ದನೆಯ ಕಾಲುಗಳನ್ನು ಮಡಿಚಿಕೊಂಡು, ಅವನು ವ್ರಾನ್ಸ್ಕಿಯ ಪಕ್ಕದ ಕುರ್ಚಿಯಲ್ಲಿ ಕುಳಿತುಕೊಂಡನು. ಅವನ ಮಟ್ಟಿಗೆ ಮೇಜು ಕುಳ್ಳಾಗಿದ್ದುದರಿಂದ, ಮೊಳಕಾಲುಗಳನ್ನಿರುಕಿಕೊಂಡು ಕಷ್ಟದಿಂದ ಕೂರಬೇಕಾಯಿತು. 'ನಿನ್ನೆ ರಾತ್ರಿ ನಾಟಕ ಮಂದಿರದಲ್ಲಿ ನಿನ್ನನ್ನು ಕಾಣಲಿಲ್ಲವಲ್ಲ? ನ್ಯುಮರೋವಳ ಅಭಿನಯ ಕನಿಷ್ಠವೆನ್ನುವಂತಿರಲಿಲ್ಲ. ನೀನೆಲ್ಲಿದ್ದೆ?'

'ರಾಜಕುಮಾರಿ ಬೆಟ್ಸಿಯ ಕಡೆಗೆ ಹೋಗಿದ್ದೆ' ಎಂದು ವ್ರಾನ್ಸ್ಕಿ ನುಡಿದನು.

'ಅಹ, ಹೌದೆ?' ಎಂದು ಯಶ್ವಿನ್ ಪ್ರತಿಕ್ರಿಯೆ ವ್ಯಕ್ತಪಡಿಸಿದನು.

ಯಶ್ವಿನ್ ಪುಂಡ, ಜೂಜುಕೋರ; ತತ್ತ್ವಹೀನ ಮಾತ್ರವಲ್ಲ, ಅನೈತಿಕ ವ್ಯಕ್ತಿ–ಇದೇ ಯಶ್ವಿನ್ ಸೈನ್ಯದಲ್ಲಿ ವ್ರಾನ್ಸ್ಕಿಯ ಉತ್ತಮ ಮಿತ್ರ. ಅಸಾಧಾರಣವಾದ ಶಾರೀರಕ ಸಾಮರ್ಥ್ಯಕ್ಕಾಗಿ ವ್ರಾನ್ಸ್ಕಿ ಅವನನ್ನು ಮೆಚ್ಚಿಕೊಂಡಿದ್ದನು. ದ್ರಾಕ್ಷಾಮದ್ಯದ ಸಾಗರಗಳನ್ನು ಹೀರುವುದರಲ್ಲಿ, ನಿಪ್ರೆಯಲ್ಲಿದ್ದರೂ ಸಾಮರ್ಥ್ಯ ಅರೆಕೊರೆಯಾಗದಿರುವಲ್ಲಿ ಯಶ್ವಿನ್ ತನ್ನ ಶಕ್ತಿಯನ್ನು ಪ್ರದರ್ಶಿಸಿದ್ದನು. ತನ್ನನ್ನು ಕಂಡು ಹೆದರುತ್ತಿದ್ದ ಮತ್ತು ಗೌರವಿಸುತ್ತಿದ್ದ ಸಹೋದ್ಯೋಗಿಗಳ ಮತ್ತು ಉನ್ನತಾಧಿಕಾರಿಗಳ ಸಂಬಂಧವಾಗಿ ಅವನು ಅಸಾಧಾರಣ ನೈತಿಕ ಬಲವನ್ನು ಪ್ರದರ್ಶಿಸಿದ್ದನು. ಎಷ್ಟು ಕುಡಿದಿದ್ದರೂ, ಸಾವಿರಗಳ ಲೆಕ್ಕದಲ್ಲಿ ಪಣವೊಡ್ಡಿ ಇಸ್ಪೀಟಾಟ ಆಡುತ್ತ, ಇಂಗ್ಲಿಷ್ ಕ್ಲಬ್ಬಿನಲ್ಲೆಲ್ಲ ಅತ್ಯಂತ ಶ್ರೇಷ್ಠ ಆಟಗಾರನೆಂಬ ಹೆಸರನ್ನು ಗಳಿಸಿದ್ದನು. ಯಶ್ವಿನ್ ತನ್ನಲ್ಲಿಟ್ಟಿದ್ದ ವಿಶ್ವಾಸಕ್ಕೆ ಹಣ ಹೆಸರು ಆಧಾರವಾಗದೆ, ತನ್ನ ವ್ಯಕ್ತಿತ್ವವೊಂದೇ ಕಾರಣ

ವಾಗಿದ್ದುದರಿಂದ ವ್ರಾಂಸ್ಕಿ ಅವನಲ್ಲಿ ನಿಷ್ಠೆಯಿಂದಿದ್ದನು. ತನಗೆ ಪರಿಚಿತರಾಗಿದ್ದ ವ್ಯಕ್ತಿಗಳ ಪೈಕಿ ತನ್ನ ಪ್ರಣಯಪ್ರಕರಣವನ್ನು ಪ್ರಸ್ತಾಪಿಸುತ್ತಿದ್ದ ಏಕೈಕ ವ್ಯಕ್ತಿಯೆಂದರೆ ಯಶ್ವಿನ್. ಭಾವಾತಿರೇಕದ ವಿಷಯದಲ್ಲಿ ಯಶ್ವಿನ್‌ಗೆ ಅಪಾರ ತಾತ್ಸಾರವಿತ್ತು. ಆದರೂ ವ್ರಾಂಸ್ಕಿಯ ಸಮಸ್ತ ವ್ಯಕ್ತಿತ್ವವನ್ನು ಮುಕ್ಕುತ್ತಿದ್ದ ಭಾವೋದ್ರೇಕವನ್ನು ಅರ್ಥಮಾಡಿಕೊಳ್ಳುತ್ತಿದ್ದವನೆಂದರೆ ಅವನೊಬ್ಬನೇ. ಅದೆಲ್ಲ ಗೊಡ್ಡುಹರಟೆಯೆಂದೋ ನಾಚಿಕೆಗೇಡಿನ ಪ್ರಸಂಗವೆಂದೋ ಯಶ್ವಿನ್ ಖುಷಿಪಡುತ್ತಿರಲಿಲ್ಲವೆಂಬ ತನ್ನ ಭಾವನೆಗಳನ್ನು ಯಾವ ಅರ್ಥದಲ್ಲಿ ತಿಳಿಯಬೇಕಾಗಿತ್ತೋ ಅದೇ ಅರ್ಥದಲ್ಲಿ ಅವನು ಗ್ರಹಿಸಿಕೊಂಡಿದ್ದನೆಂಬ, ತನ್ನ ಪ್ರೇಮ ಕೇವಲ ಭ್ರಮೆಯೋ, ನಶ್ವರ ಕಲ್ಪನೆಯೋ ಆಗಿರದೆ, ಗಂಭೀರವೂ ಪ್ರಮುಖವೂ ಆದ ವಿಷಯವಾಗಿತ್ತೆಂಬ ಸಂಗತಿ ವ್ರಾಂಸ್ಕಿಗೆ ಮನವರಿಕೆಯಾಗಿತ್ತು.

ವ್ರಾಂಸ್ಕಿ ಅವನೊಡನೆ ತನ್ನ ಪ್ರೇಮಪ್ರಕರಣದ ಪ್ರಸ್ತಾಪವೆತ್ತಿರಲಿಲ್ಲ; ಆದರೆ ಆ ವಿಷಯ ಅವನಿಗೆ ಗೊತ್ತಿತ್ತೆಂಬ, ಹಾಗೂ ಅದನ್ನವನು ಸರಿಯಾಗಿ ಅರ್ಥಮಾಡಿಕೊಂಡಿದ್ದನೆಂಬ ಸಂಗತಿ ಅವನ ಗಮನಕ್ಕೆ ಬಂದಿತ್ತು; ತನ್ನ ಗೆಳೆಯನ ಕಣ್ಣುಗಳಲ್ಲಿ ಇದೆಲ್ಲ ಗೋಚರಿಸಲಾಗಿ ವ್ರಾಂಸ್ಕಿ ಸುಪ್ರೀತನಾದನು.

ರಾಜಕುಮಾರಿ ಬೆಟ್ಸಿಯ ಮನೆಗೆ ವ್ರಾಂಸ್ಕಿ ಹೋಗಿದ್ದ ಸಮಾಚಾರ ತಿಳಿದ ಕೂಡಲೇ 'ಅಹ, ಸರಿ, ಸರಿ' ಎಂದು ಯಶ್ವಿನ್ ಉದ್ಗರಿಸಿದನು. ತನ್ನ ಕಪ್ಪು ಕಣ್ಣು ಹೊಳೆಯುತ್ತಿದ್ದಂತೆ, ಅವನು ಎಡಗಡೆಯ ಮೀಸೆಯನ್ನು ಹುರಿಮಾಡಿ ಬಾಯೊಳಗೆ ತುರುಕಿ ಕಡಿಯುತ್ತಿದ್ದನು. ಅದೊಂದು ಅವನ ದುರಭ್ಯಾಸವಾಗಿತ್ತು.

'ರಾತ್ರಿ ಏನಾಯಿತು? ಏನಾದರೂ ಗೆದ್ದೆಯೇನು?' ಎಂದು ವ್ರಾಂಸ್ಕಿ ಕೇಳಿದನು.

'ಎಂಟು ಸಾವಿರ. ಆದರೆ ಮೂರನ್ನು ಎಣಿಕೆಗೆ ತೆಗೆದುಕೊಂಡಿಲ್ಲ. ಅವನು ಕೊಡಲಾರ.'

'ಹಾಗಾದರೆ ಈ ದಿನ ನನ್ನ ಮೇಲೆ ಪಣ ಕಟ್ಟಿ ಸೋತರೂ ತೊಂದರೆಯಾಗದು' ಎಂದು ವ್ರಾಂಸ್ಕಿ ನಕ್ಕನು. (ಯಶ್ವಿನ್ ವ್ರಾಂಸ್ಕಿಯ ಮೇಲೆ ಭಾರಿ ಪಣವೊಡ್ಡಿದ್ದನು.)

'ಕಳೆದುಕೊಳ್ಳುವ ಉದ್ದೇಶವಿಲ್ಲ. ನಿನ್ನ ಏಕೈಕ ಪ್ರತಿಸ್ಪರ್ಧಿಯೆಂದರೆ ಮಖೋತಿನ್.'

ಆ ದಿನ ನಡೆಯಲಿದ್ದ ಜೂಜಿನ ಕಡೆಗೆ ಸಂಭಾಷಣೆ ತಿರುಗಿತು; ಈಗ ವ್ರಾಂಸ್ಕಿ ಯೋಚಿಸಬಹುದಾದ ಸಂಗತಿ ಅದೊಂದೇ.

'ಈಗ ಬಾ. ನಾನು ಮುಗಿಸಿದ್ದೇನೆ' ಎಂದು ವ್ರಾಂಸ್ಕಿ ಮೇಲೆದ್ದು, ಬಾಗಿಲ ಕಡೆಗೆ ನಡೆದನು. ತನ್ನ ಉದ್ದನೆಯ ಕಾಲುಗಳನ್ನೂ ಬೆನ್ನನ್ನೂ ನಿಗುರಿಸುತ್ತ ಯಶ್ವಿನ್ ಸಹ ಮೇಲೆದ್ದನು.

'ನನಗೆ ಊಟಕ್ಕಿನ್ನೂ ಸಮಯವಾಗಿಲ್ಲ. ಪಾನೀಯ ಸಿಕ್ಕಿದರೆ ಸಾಕು. ಒಂದೇ ಒಂದು ನಿಮಿಷದಲ್ಲಿ ನಿನ್ನೆಡೆಗೆ ಬಂದುಬಿಡುತ್ತೇನೆ. ಮಾಣಿ, ಒಂದಿಷ್ಟು ದ್ರಾಕ್ಷಾಮದ್ಯ!' ಎಂದವನು ಕೋಣೆ ಅನುರಣಿಸುವಂತೆ ಕೂಗಿದನು. ಅವನ ಕೂಗು ದಳದಲ್ಲಿ ಎಲ್ಲರ ಬಾಯಿಮಾತಾಗಿತ್ತು; ಅವನ ಕೂಗಿಗೆ ಕಿಟಕಿಗಳು ಸಹ ರಟರಟಿಸುತ್ತಿದ್ದುವು. 'ಬೇಡ, ತೊಂದರೆ ತೆಗೆದುಕೊಳ್ಳಬೇಡ' ಎಂದವನು ಮತ್ತೆ ಕೂಗಿ ಹೇಳಿದನು. 'ನೀನು ಮನೆಗೆ

ಹೋಗುವುದಾದರೆ ನಾನೂ ಬರುತ್ತೇನೆ' ಎಂದವನು ಅನಂತರ ವ್ರಾಂಸ್ಕಿಯ ಸಂಗಡ ನುಡಿದನು.

ಅವನೂ ವ್ರಾಂಸ್ಕಿಯೂ ಹೊರಗೆ ಹೋದರು.

೨೦

ದೊಡ್ಡದಾದ, ಚೊಕ್ಕಟವಾದ ರೈತನ ಮನೆಯೊಂದರಲ್ಲಿ ವ್ರಾಂಸ್ಕಿ ತಂಗಿದ್ದನು. ತೆಳುಗೋಡೆಯಿಂದ ಆ ಮನೆಯನ್ನು ಎರಡು ಭಾಗ ಮಾಡಲಾಗಿತ್ತು. ಆ ಬಿಡದಿಯಲ್ಲಿ ಪೆತ್ರೀತ್ಸ್ಕಿ ಸಹ ವಾಸಿಸುತ್ತಿದ್ದನು. ವ್ರಾಂಸ್ಕಿ ಮತ್ತು ಯಶ್ವಿನ್ ಒಳಗೆ ಬಂದಾಗ ಪೆತ್ರೀತ್ಸ್ಕಿ ನಿದ್ರಿಸುತ್ತಿದ್ದನು.

'ನೀನು ಸಾಕಷ್ಟು ನಿದ್ದೆ ಮಾಡಿದ್ದೀಯೆ. ಮೇಲೇಳು' ಎಂದು ಯಶ್ವಿನ್ ಗೋಡೆಯ ಮತ್ತೊಂದು ಪಕ್ಕಕ್ಕೆ ನಡೆದು, ತಲೆಕೆದರಿಕೊಂಡು, ತಲೆದಿಂಬಿನಲ್ಲಿ ಮುಖವನ್ನು ಹುದುಗಿಸಿಕೊಂಡು ಬಿದ್ದಿದ್ದ ಪೆತ್ರೀತ್ಸ್ಕಿಯನ್ನು ಜಗ್ಗಿದನು.

ಪೆತ್ರೀತ್ಸ್ಕಿ ಚಂಗನೆ ಹಾರಿ, ಅವನನ್ನು ಆಪಾದಮಸ್ತಕವಾಗಿ ನೋಡಿದನು.

'ನಿಮ್ಮಣ್ಣ ಬಂದಿದ್ದ' ಎಂದವನು ವ್ರಾಂಸ್ಕಿಗೆ ಹೇಳಿದನು. 'ಅವನ ಮನೆ ಹಾಳಾಗ, ನನ್ನನ್ನೆಬ್ಬಿಸಿದ. ಮತ್ತೆ ಬರುವುದಾಗಿ ಹೇಳಿದ.' ಅವನು ಮತ್ತೆ ಕಂಬಳಿ ಎಳೆದುಕೊಂಡು, ತಲೆದಿಂಬಿನ ಮೇಲೆ ಬಿದ್ದುಕೊಂಡನು. 'ಓ, ತೆಪ್ಪಗಿರು ಯಶ್ವಿನ್' ಎಂದವನು ಹೊದ್ದುಕೊಂಡಿದ್ದ ಕಂಬಳಿಯನ್ನೆಳೆಯುತ್ತಿದ್ದ ಯಶ್ವಿನ್‌ನ ಮೇಲೆ ಕೆರಳಿದನು. 'ಸುಮ್ಮನಿರು!' ಅವನು ಮತ್ತೊಂದು ಮಗ್ಗುಲಿಗೆ ಹೊರಳಿ, ಕಣ್ಣು ತೆರೆದನು. 'ನನ್ನ ಬಾಯಿಂದ ಕೆಟ್ಟ ವಾಸನೆ ಬರುತ್ತಿದೆ. ಅದು ಹೋಗಬೇಕಾದರೆ ಏನು ಕುಡಿಯಬೇಕು, ಹೇಳು?'

'ವೋದ್ಕವೊಂದೇ ಸರಿ' ಎಂದು ಯಶ್ವಿನ್ ಗರ್ಜಿಸಿದನು. 'ತೆರೆಶೆಂಕೊ, ನಿನ್ನ ದಣಿಗೆ ವೋದ್ಕ ಮತ್ತು ಸೌತೆಕಾಯಿ ತಂದುಕೊಡು' ಎಂದವನು ತನ್ನ ಗಂಟಲಿನ ನಾದಕ್ಕೆ ತಾನೆ ಬೆರಗಾಗಿ ಕರೆದನು.

'ವೋದ್ಕ ಹೇಳಿದೆಯಾ? ಏ?' ಎಂದು ಪೆತ್ರೀತ್ಸ್ಕಿ ಮುಖ ಸೊಟ್ಟಗೆ ಮಾಡಿಕೊಂಡು, ಕಣ್ಣುಗಳನ್ನೊರಸಿಕೊಳ್ಳುತ್ತ ಕೇಳಿದನು. 'ನೀನೂ ಸ್ವಲ್ಪ ತೆಗೆದುಕೊಳ್ಳುತ್ತೀಯೆ ತಾನೆ? ಭೇಷ್, ಎಲ್ಲರೂ ಒಟ್ಟಿಗೆ ಸವಿಯೋಣ. ನೀನು ಸಹ ವ್ರಾಂಸ್ಕಿ?' ಎಂದು ಪೆತ್ರೀತ್ಸ್ಕಿ ಮೇಲೇಳುತ್ತ, ಮೈಗೆ ಕಂಬಳಿಯನ್ನು ಸುತ್ತಿಕೊಳ್ಳುತ್ತ ಪ್ರಶ್ನಿಸಿದನು.

ಅವನು ಅಡ್ಡ ಗೋಡೆಯ ಬಾಗಿಲಲ್ಲಿ ನಿಂತನು; ತೋಳು ಮೇಲೆತ್ತಿ "ತೂ–ಊ–ಊ–ಲೆಯ ಶಕ್ತಿಶಾಲಿ ದೊರೆ" ಎಂದು ಫ್ರೆಂಚ್ ಭಾಷೆಯಲ್ಲಿ ಹಾಡುತ್ತ, 'ನಿನಗೂ ಪಾನೀಯ ಬೇಕೆ, ವ್ರಾಂಸ್ಕಿ?' ಎಂದು ಪ್ರಶ್ನಿಸಿದನು.

'ನೀವೇ ನಡಸಿ' ಎಂದು ವ್ರಾಂಸ್ಕಿ ಸೇವಕ ತಂದುಕೊಟ್ಟ ಕೋಟನ್ನು ಧರಿಸಿಕೊಂಡನು.

'ಎಲ್ಲಿಗೆ ಹೋಗುತ್ತಿದ್ದೀಯೆ ?' ಎಂದು ಯಶ್ವಿನ್ ಅವನನ್ನು ಕೇಳಿದನು. 'ಇಗೋ, ಮುಕ್ಕುದುರೆಗಾಡಿ ಇತ್ತ ಬರುತ್ತಿದೆ' ಎಂದವನು ಮನೆಯ ಕಡೆಗೆ ಬರುತ್ತಿದ್ದ ಗಾಡಿಯನ್ನು ಕಂಡು ನುಡಿದನು.

'ನಾನು ಲಾಯಕ್ಕೆ ಹೋಗಬೇಕಾಗಿದೆ. ಆಮೇಲೆ ಬ್ರಿಯಾನ್‌ಸ್ಕಿಯಲ್ಲಿಗೆ ಹೋಗಿ, ಕುದುರೆಗಳ ಬಗ್ಗೆ ವಿಚಾರಿಸಬೇಕಾಗಿದೆ' ಎಂದು ವ್ರಾಂಸ್ಕಿ ಹೇಳಿದನು.

ಪೀಟರ್ ಹಾಫ್‌ನಿಂದ ಎಂಟು ಮೈಲಿ ದೂರದಲ್ಲಿ ವಾಸಿಸುತ್ತಿದ್ದ ಬ್ರಿಯಾನ್‌ಸ್ಕಿಗೆ ಹಣ ತಂದುಕೊಡುವುದಾಗಿ ನಿಜಕ್ಕೂ ವ್ರಾಂಸ್ಕಿ ವಚನ ನೀಡಿದ್ದ; ಆ ಕೆಲಸ ಮುಗಿಸಲು ಅವನಿಗೀಗ ಸಮಯ ಸಿಕ್ಕಿತ್ತು. ಆದರೆ ಬ್ರಿಯಾನ್‌ಸ್ಕಿಗಾಗಿ ಮಾತ್ರವೇ ಅವನು ಹೋಗುತ್ತಿರಲಿಲ್ಲವೆಂಬ ಸಂಗತಿಯನ್ನವನ ಗೆಳೆಯರು ಅರ್ಥಮಾಡಿಕೊಂಡಿದ್ದರು. 'ನಿನ್ನ ಬ್ರಿಯಾನ್‌ಸ್ಕಿ ಯಾರೆಂಬುದು ತಿಳಿದಿದೆ' ಎಂದು ಹೇಳುವವನಂತೆ ಪೆತ್ರೀತ್ಸ್ಕಿ ಹಾಡು ನಿಲ್ಲಿಸದೆಯೆ, ಕಣ್ಣು ಮಿಟುಕಿಸಿ, ತುಟಿಯನ್ನು ಚೂಪಿಸಿದನು.

'ತಡವಾಗದಂತೆ ನೋಡಿಕೊ' ಎಂಬುದೊಂದೆ ಯಶ್ವಿನ್ ನುಡಿದ ಮಾತು. ಆಮೇಲೆ ವಿಷಯಾಂತರಕ್ಕಾಗಿ 'ನನ್ನ ಕೇಗಂದು ಬಣ್ಣದ ಕುದುರೆ ಹೇಗಿದೆ ?' ಎಂದವನು ಕಿಟಕಿಯ ಮೂಲಕ ವ್ರಾಂಸ್ಕಿಗೆ ಮಾರಿದ್ದ ಮೂಕಿ ಮಧ್ಯದ ಕುದುರೆಯ ಕಡೆಗೆ ನೋಡುತ್ತ ಪ್ರಶ್ನಿಸಿದನು.

'ತುಸು ತಡೆ' ಎಂದು ಪೆತ್ರೀತ್ಸ್ಕಿ ಹೊರಗೆ ಹೋಗುತ್ತಿದ್ದ ವ್ರಾಂಸ್ಕಿಯನ್ನು ಕೂಗಿದನು. 'ನಿಮ್ಮಣ್ಣ ಒಂದು ಪತ್ರವನ್ನೂ, ಒಂದು ಚೀಟಿಯನ್ನೂ ಇಲ್ಲಿ ಬಿಟ್ಟಿದ್ದ. ಅವೀಗ ಎಲ್ಲಿವೆ ?'

ವ್ರಾಂಸ್ಕಿ ನಿಂತನು. 'ಅವು ಎಲ್ಲಿವೆ ?'

'ಅವು ಎಲ್ಲಿವೆ ? ಅದೇ ನನ್ನ ಪ್ರಶ್ನೆ' ಎಂದು ಪೆತ್ರೀತ್ಸ್ಕಿ ಗಂಭೀರವಾಗಿ ಮೂಗಿನ ಮೇಲೆ ಬೆರಳಿಟ್ಟುಕೊಂಡು, ನುಡಿದನು.

'ತಮಾಷೆ ಮಾಡಬೇಡ' ಎಂದು ವ್ರಾಂಸ್ಕಿ ಮಂದಹಾಸ ಬೀರಿದನು.

'ನಾನೇನೂ ಬೆಂಕಿ ಹಚ್ಚಲಿಲ್ಲ....ಅವು ಇಲ್ಲೆಲ್ಲಿಯೋ ಇರಬೇಕು.'

'ಆಣಕಕ್ಕೀಗ ಸಮಯವಲ್ಲ. ಕಾಗದ ಎಲ್ಲಿದೆ, ಹೇಳು ?'

'ನಿಜಕ್ಕೂ ನಾನು ಮರೆತು ಬಿಟ್ಟಿದ್ದೇನೆ ಅಥವಾ ಅದೊಂದು ಕನಸೊ ? ತಡಿ, ತಡಿ....ಈಗ ಕೋಪಗೊಳ್ಳುವುದರಿಂದ ಪ್ರಯೋಜನವಿಲ್ಲ. ಹಿಂದಿನ ರಾತ್ರಿ ನನ್ನಂತೆ ನೀನೂ ನಾಲ್ಕು ಶೀಷೆ ಕುಡಿದಿದ್ದರೆ, ನಿನ್ನ ಹೆಸರೇ ನಿನಗೆ ಮರೆತು ಹೋಗುತ್ತಿತ್ತು. ತಡಿ, ನಾನು ಜ್ಞಾಪಿಸಿಕೊಳ್ಳುತ್ತೇನೆ'

ಪೆತ್ರೀತ್ಸ್ಕಿ ಅಡ್ಡಗೋಡೆಯ ಹಿಂದೆ ಸರಿದು, ತನ್ನ ಹಾಸುಗೆಯ ಮೇಲೆ ಉರುಳಿಕೊಂಡನು.

'ನಾನಿಲ್ಲಿ ಮಲಗಿದ್ದೆ. ಅವನಲ್ಲಿ ನಿಂತಿದ್ದ. ಅಹ, ಹೌದು, ಹೌದು, ಹೌದು ! ಪ್ರೆಸ್ಟೊ! ಇಗೋ ಇಲ್ಲಿ!' ಎಂದವನು ತಾನು ಮುಚ್ಚಿಟ್ಟಿದ್ದ ಚಾಪೆಯ ಕೆಳಗಿಂದ ಅದನ್ನು ಹೊರಗೆಳೆದನು.

ವ್ರಾಂಸ್ಕಿ ತನ್ನಣ್ಣನ ಕಾಗದವನ್ನೂ ಚೀಟಿಯನ್ನೂ ತೆಗೆದುಕೊಂಡನು. ಅವು ಅವನಿಗೆ ಅನಿರೀಕ್ಷಿತವಾಗಿರಲಿಲ್ಲ. ತನ್ನನ್ನು ನೋಡಲು ಬರದಿದ್ದುದಕ್ಕಾಗಿ ತಾಯಿ ಆತನನ್ನು

ಬಯ್ದು ಕಾಗದ ಬರೆದಿದ್ದಳು ; ತಾನವನೊಡನೆ ಮಾತಾಡಬೇಕೆಂಬುದಾಗಿ ಅಣ್ಣನ ಚೀಟಿ ಉಸುರುತ್ತಿತ್ತು. ಆ ಇಬ್ಬರ ಮನಸ್ಸಿನಲ್ಲಿಯೂ ಒಂದೇ ಒಂದು ವಿಷಯ ವಿದ್ದಿರಬೇಕೆಂದು ವ್ರಾಂಸ್ಕಿಗೆ ತಿಳಿದಿತ್ತು. 'ನನ್ನ ವ್ಯವಹಾರವನ್ನು ಕಟ್ಟಿಕೊಂಡು ಅವರಿಗೇನಾಗಬೇಕಾಗಿದೆ?' ಎಂದವನು ಆಲೋಚಿಸಿದನು. ರಸ್ತೆಯಲ್ಲಿ ಮತ್ತಷ್ಟು ಎಚ್ಚರಿಕೆಯಿಂದ ಓದುವ ಸಲುವಾಗಿ ಅವನು ಕಾಗದವನ್ನು ಮಡಿಸಿ, ತನ್ನ ಕೋಟಿನ ಗುಂಡಿಗಳ ನಡುವೆ ತೂರಿಸಿದನು. ಅವನು ಹೊರಗೆ ಹೋಗುತ್ತಿದ್ದಂತೆ ಇಬ್ಬರು ಅಧಿಕಾರಿಗಳನ್ನು ಸಂಧಿಸಿದನು; ಅವರಲ್ಲೊಬ್ಬ ತನ್ನ ದಳದವನು, ಮತ್ತೊಬ್ಬ ಬೇರೆ ದಳದವನು.

ವ್ರಾಂಸ್ಕಿಯ ವಸತಿಗೃಹ ಎಲ್ಲ ಅಧಿಕಾರಿಗಳಿಗೆ ಕೂಡುದಾಣವಾಗಿತ್ತು.

'ಎಲ್ಲಿಗೆ ಹೋಗುತ್ತಿದ್ದೀರಿ ?'

'ಪೀಟರ್ ಹಾಫ್‌ಗೆ ಕೆಲಸವಿದೆ.'

'ತ್ಸಾರ್‌ಸ್ಕಾಯ್‌ನಿಂದ ನಿಮ್ಮ ಕುದುರೆ ಬಂದಿದೆಯೆ ?'

'ಬಂದಿದೆ. ಆದರದನ್ನು ನಾನಿನ್ನೂ ನೋಡಿಲ್ಲ.'

'ಮಖೊತಿನ್‌ನ ಮಲ್ಲಗುದುರೆ ಕುಂಟಾಗಿದೆಯಂತೆ'

'ಇದೆಲ್ಲ ಶುದ್ಧ ಅವಿವೇಕ! ಆದರೆ ಈ ಕೆಸರಿನಲ್ಲಿ ಪಂದ್ಯಾಟ ಹೇಗೆ ಸಾಧ್ಯ ?' ಎಂದು ಬೇರೊಬ್ಬ ಅಧಿಕಾರಿ ನುಡಿದನು.

'ಇಗೋ, ನನ್ನ ವಿನೋದಕರಿಲ್ಲಿದ್ದಾರೆ' ಎಂದು ಪೆತ್ರೀತ್ಸ್ಕಿ ಹೊಸಬರನ್ನು ಕಂಡು ಕೂಗಿಕೊಂಡನು. ತಟ್ಟೆಯಲ್ಲಿ ವೋದ್ಕ ಮತ್ತು ಸೌತೆಕಾಯಿಗಳನ್ನಿಟ್ಟುಕೊಂಡಿದ್ದ ಸೇವಕ ಅವನ ಮುಂದೆ ನಿಂತನು. 'ನಾನು ಸಮಾಧಾನದಿಂದಿರಬೇಕಾದರೆ ಕುಡಿಯಬೇಕೆಂದು ಯಷ್ವಿನ್ ಹೇಳುತ್ತಾನೆ.'

'ಕಳೆದ ರಾತ್ರಿ ನೀವದನ್ನು ನಮಗೊದಗಿಸಿದಿರಿ' ಎಂದು ಹೊಸಬರಲ್ಲೊಬ್ಬ ನುಡಿದನು. 'ನಾವು ರೆಪ್ಪೆಯನ್ನೆ ಮುಚ್ಚಲಿಲ್ಲ.'

'ನಿನ್ನೆಯ ಪಾನಗೋಷ್ಠಿ ವಿಜೃಂಭಣೆಯಿಂದ ಮುಗಿಯಿತಲ್ಲವೆ?' ಎಂದು ಪೆತ್ರೀತ್ಸ್ಕಿ ಪ್ರಶ್ನಿಸಿದನು. ವೊಲ್ಕೋವ್ ಚಾವಣಿಯ ಮೇಲೇರಿದ. ತಾನು ಸಂಕಟದಲ್ಲಿರುವುದಾಗಿ ಹೇಳುತ್ತಿದ್ದ. "ಈಗ ಸಂಗೀತ ನಡೆಯಲಿ—ಸ್ಮಶಾನಯಾತ್ರೆಗೆ ಸಂಬಂಧಿಸಿದ್ದು ಎಂದು ನಾನು ಹೇಳಿದೆ." ಸ್ಮಶಾನಯಾತ್ರೆಯ ಹಾಡನ್ನು ಕೇಳುತ್ತ ಕೇಳುತ್ತ ಅವನು ಚಾವಣಿಯ ಮೇಲೆಯೆ ಗಾಢನಿದ್ರೆಗೊಳಗಾದನು.'

'ಇಗೋ, ಇದನ್ನು ಕುಡಿ. ಖಂಡಿತವಾಗಿ ಒಂದು ಗಳಾಸು ವೋದ್ಕವನ್ನೂ ಅನಂತರ ಖನಿಜ ಜಲವನ್ನೂ, ಸಾಕಷ್ಟು ನಿಂಬೆಹುಳಿಯನ್ನೂ ಕುಡಿ' ಎಂದು ಮದ್ದು ತೆಗೆದುಕೊಳ್ಳಲು ಮಗುವನ್ನು ಪುಸಲಾಯಿಸುವ ತಾಯಿಯಂತೆ ಯಷ್ವಿನ್ ಪೆತ್ರೀತ್ಸ್ಕಿಯ ಬಳಿ ನಿಂತುಕೊಂಡು ಪ್ರೇರಿಸುತ್ತಿದ್ದನು. 'ಅದರ ತರುವಾಯ ಸ್ವಲ್ಪವೇ ಸ್ವಲ್ಪ ಶಾಂಪೇನ್; ಒಂದು ಶೀಷೆಗಿಂತ ಹೆಚ್ಚಾಗಿರಕೂಡದು.'

'ಒಳ್ಳೆಯ ಸಲಹೆ ಎಂದರೆ ಅದೇಯೆ. ತಡಿ, ವ್ರಾಂಸ್ಕಿ, ನೀನೂ ಸಹ ನಮ್ಮೊಂದಿಗೆ ಕುಡಿಯುವೆಯಂತೆ.'

'ಬೇಡ. ಎಲ್ಲರಿಗೂ ನಮಸ್ಕಾರ. ಈ ದಿನ ನಾನು ಕುಡಿಯುವುದಿಲ್ಲ.'

'ಏಕೆ? ತೂಕ ಹೆಚ್ಚುತ್ತದೆಂದೇ? ಸರಿ ಹಾಗಾದರೆ, ನಿನ್ನನ್ನು ಬಿಟ್ಟೇ ನಾವು ಕುಡಿಯುತ್ತೇವೆ. ಖನಿಜ ಜಲವನ್ನೂ ನಿಂಬೆ ಹಣ್ಣುಗಳನ್ನೂ ತಾ.'

'ವ್ರಾಂಸ್ಕಿ!' ಎಂದು ಅವನು ದ್ವಾರ ಪ್ರದೇಶವನ್ನು ತಲುಪಿದಾಗ ಯಾರೋ ಕೂಗಿದರು.

'ಏನು?'

'ನೀನು ಕೂದಲು ಕತ್ತರಿಸಿಕೊಂಡರೆ ವಾಸಿ. ಅದು ಒಂದು ಟನ್‌ನಷ್ಟು ಭಾರವಾಗಿದೆ. ಬೋಳು ನೆತ್ತಿಯನ್ನದು ಕೆಳಗೆ ಜಗ್ಗುತ್ತದೆ.'

ವ್ರಾಂಸ್ಕಿಯ ಕೂದಲು ನಿಜಕ್ಕೂ ಹರೆಯದಲ್ಲಿಯೇ ತೆಳ್ಳಗಾಗುತ್ತಿತ್ತು. ತನ್ನ ಓರಣದ ಹಲ್ಲುಗಳನ್ನು ಪ್ರದರ್ಶಿಸುತ್ತ ಉಲ್ಲಾಸದಿಂದ ನಕ್ಕನು; ಬೋಳುನೆತ್ತಿಯ ಮೇಲೆ ಟೋಪಿಯನ್ನೆಳೆದುಕೊಂಡನು; ಹೊರಗೆ ನಡೆದು, ಗಾಡಿಯೊಳಗೆ ಕುಳಿತನು.

'ಲಾಯದ ಕಡೆಗೆ' ಎಂದವನು ಗೊಣಗುಟ್ಟಿದನು. ಕಾಗದವನ್ನು ಮತ್ತೆ ಓದುವುದೆಂದು ಆಲೋಚಿಸಿದನು. ಕುದುರೆಯನ್ನು ಪರೀಕ್ಷಿಸುವ ತನಕ ಮನಸ್ಸನ್ನು ಅತ್ತಿತ್ತ ಹಾಯಗೊಡಬಾರದೆಂದು ಬಗೆದು, ಅದರ ಚಿಂತೆಯನ್ನುಳಿದನು. 'ಅಮೇಲೆ.'

೨೧


ಮರದಿಂದ ನಿರ್ಮಿಸಿದ ಗುಡಿಸಿಲೇ ಹಂಗಾಮಿ ಲಾಯವಾಗಿತ್ತು. ಅದು ಪಂದ್ಯ ಕ್ಷೇತ್ರದ ಸನಿಹದಲ್ಲಿತ್ತು. ಹಿಂದಿನ ದಿನವೇ ಅವನ ಕುದುರೆಯನ್ನಲ್ಲಿಗೆ ತರಬೇಕಾಗಿತ್ತು. ಅದನ್ನಿನ್ನೂ ಅವನು ನೋಡಿರಲಿಲ್ಲ. ಕಳೆದ ಕೆಲವು ದಿನಗಳಿಂದ ಅವನು ಸ್ವತಃ ಅದಕ್ಕೆ ತರಬೇತಿ ನೀಡಿರಲಿಲ್ಲ. ಆ ಕೆಲಸವನ್ನವನು ತರಬೇತುಗಾರನಿಗೆ ವಹಿಸಿದ್ದ. ನಿನ್ನೆ ಯಾವ ಸ್ಥಿತಿಯಲ್ಲಿ ಅದು ಹಿಂದಕ್ಕೆ ಬಂದಿತ್ತು, ಈಗ ಯಾವ ಸ್ಥಿತಿಯಲ್ಲಿದೆ ಎಂಬ ಬಗ್ಗೆ ಯಾವ ಸಮಾಚಾರವೂ ಅವನ ಗಮನಕ್ಕೆ ಬಂದಿರಲಿಲ್ಲ. ಅವನು ಗಾಡಿಯಿಂದ ಕೆಳಗಿಳಿದ ಕೂಡಲೇ, ಗಾಡಿಯನ್ನು ಗುರುತಿಸಿದ ಅವನ ಕಾಸ್ತಾರ ತರಬೇತುಗಾರನನ್ನು ಕೂಗಿದನು. ಎತ್ತರವಾದ ಬೂಟುಗಳನ್ನೂ, ತುಂಡು ಜಾಕೀಟನ್ನೂ ಧರಿಸಿದ್ದ, ಗಲ್ಲದ ಕೆಳಗಿನ ಗಡ್ಡ ಹೊರತಾಗಿ ನುಣ್ಣಗೆ ಬೋಳಿಸಿಕೊಂಡಿದ್ದ, ಶುಷ್ಕದೃಷ್ಟಿಯ ಆಂಗ್ಲನೊಬ್ಬ ಜೂಜು ಕುದುರೆ ಸವಾರನ ವಿಕೃತ ಭಂಗಿಯಲ್ಲಿ ನಡೆಯುತ್ತ, ಮೊಳಕೈಗಳನ್ನು ಹಿಂದಕ್ಕೂ ಮುಂದಕ್ಕೂ ತಿರುಗಿಸುತ್ತ, ಪಕ್ಕದಿಂದ ಪಕ್ಕಕ್ಕೆ ತೂಗಾಡುತ್ತ, ಅವನನ್ನು ಸಂಧಿಸುವ ಸಲುವಾಗಿ ಬಂದನು.

'ಫ್ರೂ-ಫ್ರೂ ಹೇಗಿದೆ?' ಎಂದು ವ್ರಾಂಸ್ಕಿ ಇಂಗ್ಲಿಷಿನಲ್ಲಿ ಪ್ರಶ್ನಿಸಿದನು.

'ಚೆನ್ನಾಗಿದೆ, ಸ್ವಾಮಿ' ಎಂದು ಆಂಗ್ಲ ಗಂಟಲಿಂದ ಹೊರಗೆ ಬಾರದ ದನಿಯಲ್ಲಿ ಉತ್ತರಿಸಿದನು. 'ಅದರ ಬಳಿ ಹೋಗದಿರುವುದೆ ವಾಸಿ' ಎಂದವನು ಟೋಪಿಯನ್ನು ಮೇಲೆತ್ತಿ ಹಿಡಿದುಕೊಂಡು ನುಡಿದನು. 'ಅದರ ಬಾಯಿಗೆ ಕಡಿವಾಣ ಹಾಕಿದ್ದೇನೆ. ಅದು ಸುಲಭವಾಗಿ ಉದ್ರೇಕಗೊಳ್ಳುತ್ತದೆ. ಒಳಗೆ ಹೋಗದಿರುವುದೇ ವಾಸಿ. ನೀವು ಹೋದದ್ದೇ ಆದರೆ ಅದು ಉದ್ರೇಕಗೊಳ್ಳುತ್ತದೆ.'

'ಪರವಾ ಇಲ್ಲ; ನಾನು ಒಳಗೆ ಹೋಗಿ, ಅದನ್ನು ನೋಡಿ ಬರುತ್ತೇನೆ.'

(ಮುಂದುವರಿಯುವುದು)



ರಾಷ್ಟ್ರಕವಿ ಕುವೆಂಪು